Text Light

UNIVERSAL
LIBRARY

OU_200893

UNIVERSAL
LIBRARY

-28-4-81—10,000.

)SMANIA UNIVERSITY LIBRARY

Accession No.

should be returned on or before the date last marked below

ಧಾರವಾಡ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯ
ಸಾಹಿತ್ಯ ಸಮಿತಿ ಪ್ರಕಟನೆಗಳು : ಸಂ : ೮
ಪ್ರಧಾನ ಸಂಪಾದಕರು :
ಶ್ರೀ ಹು. ಸ. ಕಟ್ಟೀಮನಿ ಬಿ. ಎ.; ಎಂ. ಎಲ್. ಸಿ.

—ಶ್ರೀ—

ಬಸವಣ್ಣನವರ ವಚನಗಳು

ಪ್ರಕಾಶಕರು :
ಬಸವಪ್ಪ ಮಲ್ಲಿಪ್ಪ ಶಿಂತ್ರಿ ಬಿ. ಎ., ಬಿ. ಟಿ.
ಗೌರವ ಕಾರ್ಯದರ್ಶಿ ಹಾಗೂ ಲೈಬ್ರೇರಿಯನ್.
ಸಾಹಿತ್ಯ ಸಮಿತಿ,
ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ,
ಮನೆ ನಂ: ೬೨೭೦
ಧಾರವಾಡ

ಪ್ರಥಮ ಮುದ್ರಣ ೨೨-೧೦-೧೯೫೧
ದ್ವಿತೀಯ ಮುದ್ರಣ ೨೨-೧೨-೧೯೫೪

ಎಲ್ಲ ಹಕ್ಕುಗಳನ್ನೂ ಕಾಯ್ದಿರಿಸಿದೆ
All Rights Reserved

ಮುದ್ರಕರು :
ಶ್ರೀ. ಡಿ. ಟಿ. ಕಾಯಸ್ಥ,
ರವೀಂದ್ರ ಮುದ್ರಣಾಲಯ,
ಮನೆ ನಂ: ೬೬೪೭
ಉಳವಿ ಬಸವೇಶ್ವರ ಗುಡ್ಡ,
ಧಾರವಾಡ

ಬೆಲೆ:
ಸಾಮಾನ್ಯ ಸಂಸ್ಕರಣ
ಸಾಮಾನ್ಯ ಪ್ರತಿ ೨-೮-೦
ಸುಂದರ ಪ್ರತಿ ೪-೦-೦



ಪ್ರೊಫೆಸರ ಬಸವನಾಳ ಶಿವಲಿಂಗಪ್ಪನವರು ಎಂ. ಎ.

ಜನನ ಕ್ರಿ. ಶ. ೬೧೧೯೭೩ ಲಿಂಗೈಕ್ಯ ಕ್ರಿ. ಶ. ೨೩-೨೧೯೫೧

ಶ್ರೀ

ಬಸವಣ್ಣನವರ
ಪರಿಷ್ಕೃತ ವಚನಗಳು

ಸಂಪಾದಕರು :

ಶ್ರೀ ಬಸವನಾಳ ಶಿವಲಿಂಗಪ್ಪನವರು ಎಂ. ಎ.

ಶ್ರೀಸ್ವಾನನೆ, ವಚನಗಳ ಏಕಾರಾದಿ, ಶಬ್ದಕೋಶ
ಇನ್ನಿತರಗಳನ್ನು ಒಳಗೊಂಡುದು

——ಚಿತ್ರಗಳೊಡನೆ——

ಸಾಹಿತ್ಯ ಸಮಿತಿ,
ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ
—೧೯೫೪—

ಧಾರವಾಡ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯ

ಸಾಹಿತ್ಯ ಸಮಿತಿ ಸದಸ್ಯರು

೧. **ಶ್ರೀ ಹುಬ್ಬಳ್ಳಿಯ ಸ್ವಾಮಿ ಫಕ್ಕೀರಯ್ಯಾ ಸ್ವಾಮಿ ಕಟ್ಟೀಮನಿ**
ಬಿ. ಎ., ಎಲ್. ಎಲ್. ಬಿ. ಕಾರ್ಯಾಧ್ಯಕ್ಷರು
ಕರ್ನಾಟಕ ವಿಶ್ವವಿದ್ಯಾಲಯದ ಸಿಂಡಿಕೇಟ ಸಭಾಸದರು.

೨. **ಶ್ರೀ. ಬಸವಪ್ಪಾ ಮಲ್ಲಪ್ಪಾ ಶೀಂತ್ರಿ** ಬಿ. ಎ., ಬಿ. ಟಿ.
ಪ್ಯಾಟಿ ಚನ್ನಬಸವಪ್ಪನವರ ಪುಸ್ತಕಾಲಯದ ವ್ಯವಸ್ಥಾಪಕರು.
ಗೌರವ ಕಾರ್ಯದರ್ಶಿಗಳು ಹಾಗೂ ಲೈಬ್ರೇರಿಯನ್

೩. **ಶ್ರೀ. ಮಲ್ಲನಗೌಡ ಸೋಮನಗೌಡ ಪಾಟೀಲ** ಬಿ.ಎ.ಎಲ್.ಲ್.ಬಿ.
ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯ ಗೌರವ **ಕಾರ್ಯದರ್ಶಿಗಳು**
(ಎಕ್ಸ್ ಆಫಿಷಿಯೋ) ಕೋಶಾಧ್ಯಕ್ಷರು

೪. **ಶ್ರೀ. ಗುರುಸಿದ್ಧಯ್ಯಸ್ವಾಮಿ ಅಡಿವಯ್ಯಸ್ವಾಮಿ ಹಿರೇಮಠ**
ನಿವೃತ್ತ ಡಿಸ್ಟ್ರಿಕ್ಟ ಡಿಪ್ಯೂಟಿ ಕಲೆಕ್ಟರ, ಧಾರಾಮಹಾಲ ಧಾರವಾಡ

೫. **ಶ್ರೀ. ವಿರುಪಾಕ್ಷಪ್ಪ ಶಿವಯೋಗಪ್ಪ ಬಸವನಾಳ** ಬಿ.ಎ.ಎಲ್ಎಲ್.ಬಿ.
ಚೀಫ ಆಫಿಸರ, ಕರ್ನಾಟಕ ಸೆಂಟ್ರಲ್ ಕೋಆಪರೇಟಿವ್ ಬ್ಯಾಂಕ ಲಿಮಿಟೆಡ್
ಹಾಗೂ ಕರ್ನಾಟಕ ಕೋಆಪರೇಟಿವ್ ಲಿಟರರಿ ಕಮಿಟಿ, ಧಾರವಾಡ

೬. **ಶ್ರೀ. ಗುರುಸಿದ್ದಪ್ಪಾ ಮಹಾಲಿಂಗಪ್ಪ ಮಿರ್ಜಿ** ಬಿ.ಎ.ಎಲ್ಎಲ್.ಬಿ.
ಆಪ್ಟೊಕೇಟ, ಪ್ರಕಾಶಕರು: ಶ್ರೀ ಮಹಾಲಿಂಗ ಗ್ರಂಥ ಮಾಲಾ ಹುಬ್ಬಳ್ಳಿ

೭. **ಶ್ರೀ. ವೀರಭದ್ರಪ್ಪ ರುದ್ರಪ್ಪ ಕೊಪ್ಪಳ** ಎಂ. ಎ. ಬಿ. ಟಿ.
ಮುಖ್ಯೋಧ್ಯಾಪಕರು, ರಾಜಾ ಲಖಮಗೌಡ ಸರದೇಸಾಯಿ ಹಾಯಸ್ಕೂಲ

೮. **ಶ್ರೀ. ಪುರಾಣಿಕ ಬುದ್ಧಯ್ಯಸ್ವಾಮಿಗಳು** ಶೀರದಾಳ
ಸಂಪಾದಕರು: ಶ್ರೀಮನ್ನಿರಂಜನ ಜಗದ್ಗುರು ಗ್ರಂಥ ಮಾಲಾ.

೯. **ಪ್ರೊಫೆಸರ ಆರ್. ಸಿ. ಹಿರೇಮಠ** ಎಂ. ಎ
ರೀಡರ್, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.

೧೦. **ಶ್ರೀ. ಬಸವರಾಜ ಚನ್ನಬಸವಾರ್ಯ ಹಿರೇಮಠ ಪಾಟೀಲ**
ಬಿ. ಎ. (ಆನರ್ಸ) ಫಾರೆಷ್ಟ ಕಂಟ್ರಾಕ್ಟರ, ಹುಬ್ಬಳ್ಳಿ

ಶ್ರೀ ವೀರಭದ್ರಪ್ಪಾ ಮಹಾಲಿಂಗಪ್ಪಾ ಮಲ್ಲಾಬಾದಿ ದಾವಣಗೆರೆ

—ಪ್ರಚಾರಾಧಿಕಾರಿ—

ಮೊದಲನೆಯ ಮುದ್ರಣದ ಮುನ್ನುಡಿ

ಬಸವಣ್ಣನವರ ವಚನಗಳ ಶುದ್ಧ ಮತ್ತು ಅಧಿಕೃತ ಸಂಸ್ಕರಣವನ್ನು ಪ್ರಕಟಿಸುವ ಕಾರ್ಯವನ್ನು ನಮ್ಮ ಸಾಹಿತ್ಯ ಸಮಿತಿಯ ಪರವಾಗಿ ಕೈಕೊಂಡು ಅನೇಕ ವರ್ಷಗಳಾದುವು. ತಾಡವಾಲೆಯ, ಕೈಬರೆಹದ, ಮತ್ತು ಮುದ್ರಿತ ಪ್ರತಿಗಳನ್ನು ಸಿಕ್ಕಷ್ಟು ಕಲೆಹಾಕಿ ಅವುಗಳನ್ನೆಲ್ಲಾ ವರ್ಗೀಕರಿಸಿ, ಪ್ರತಿಯೊಂದು ಮಾತೃಕೆಯನ್ನೂ ಲಕ್ಷಪೂರ್ವಕವಾಗಿ ಪರಾಮರ್ಶಿಸಿ, ಪಾಠಾಂತರಗಳನ್ನು ಗುರುತಿಸಿ, ಅಚ್ಚಿಗಾಗಿ ಕರಡನ್ನು ಸಿದ್ಧಪಡಿಸಲು ದೀರ್ಘಕಾಲಾವಧಿ ಅನಿವಾರ್ಯವಾಗಿಯೇ ಬೇಕಾಯಿತು. ಓದುಗರ ಆತುರ-ಹಾರೈಕೆಗಳನ್ನು ಸಕಾಲದಲ್ಲಿ ಮನ್ನಿಸಲಾಗಲಿಲ್ಲವೆಂದು ವಿಷಾದವೆನಿಸಿದರೂ ಈಗಲಾದರೂ ಪ್ರಕಟನೆಗೆ ತಕ್ಕ ಸಮಯ ಒದಗಿತೆಂದು ನಮಗೆ ಸಂತೋಷವೆನಿಸುತ್ತಿದೆ.

ಈ ವಚನಗಳ ಎರಡು ಬೇರೆ ಬೇರೆ ಸಂಸ್ಕರಣಗಳನ್ನು ಪ್ರಕಟಿಸುವ ಉದ್ದೇಶವಿದೆ. ಒಂದು ಸಾಮಾನ್ಯ ಸಂಸ್ಕರಣ; ಇನ್ನೊಂದು ಗ್ರಂಥಾಲಯ ಸಂಸ್ಕರಣ. ಇದು ಸಾಮಾನ್ಯ ಸಂಸ್ಕರಣ. ಇದರಲ್ಲಿರುವ ವಿಷಯಗಳೆಲ್ಲ ಗ್ರಂಥಾಲಯ ಸಂಸ್ಕರಣದಲ್ಲಿ ಅಡಕವಾಗಿರುವುವಲ್ಲದೆ ಬೇರೆ ಬೇರೆ ಕಡೆಗಳಿಂದ ಆಯ್ದ (ಸುಮಾರು ೪೦೦) ಇನ್ನೂ ಹೆಚ್ಚಿನ ಬಸವಣ್ಣನವರ ವಚನಗಳೂ, ಮೂಲ ವಚನಗಳ ಪಾಠಾಂತರಗಳೂ, ಮತ್ತೆ ಕೆಲವು ಚಿತ್ರಗಳೂ ಸೇರ್ಪಡೆಯಾಗುವುವು.

ಗ್ರಂಥವನ್ನು ಅಚ್ಚುಕಟ್ಟಾಗಿ ಮುದ್ರಿಸಿ ಕೊಟ್ಟುದಕ್ಕಾಗಿ ಧಾರವಾಡದ ರವೀಂದ್ರ ಮುದ್ರಣಾಲಯದ ಅಧಿಕಾರಿಗಳಿಗೆ ಋಣಿಯಾಗಿದ್ದೇವೆ. ಮುದ್ರಣದ ಪ್ರತಿಯೊಂದು ಉಪಕರಣದ ಬೆಲೆಯೂ ಮಿತಿಮೀರಿ ಏರಿರುವುದರಿಂದ ಈ ಪುಸ್ತಕದ ಕ್ರಯವನ್ನು ನಮ್ಮ ನಿರೀಕ್ಷಣೆಗಿಂತಲೂ ಹೆಚ್ಚಾಗಿ ಇಡಬೇಕಾದ ಪ್ರಸಂಗವುಂಟಾದುದಕ್ಕೆ ವಿಷಾದಿಸಬೇಕಾದಿದೆ. ಸಹೃದಯರಾದ ವಾಚಕರು

ನಮ್ಮೀ ಸಾಹಾಸಕ್ಕೆ ತಕ್ಕ ಪ್ರೋತ್ಸಾಹನವನ್ನಿತ್ತಲ್ಲಿ ಮುಂದಿನ ಸಂಸ್ಮರಣವನ್ನು ಇನ್ನೂ ಸುಧಾರಿಸಿ ಇನ್ನೂ ಸುಲಭ ಬೆಲೆಗೆ ಒದಗಿಸಲು ಸಿದ್ಧರಾಗಿರುವೆವು.

ಪ್ರಕಟನೆಯ ಕಾರ್ಯದಲ್ಲಿ ನೆರವಾದ ಎಲ್ಲ ಮಹನೀಯರಿಗೂ ಈ ಮೂಲಕ ನಮ್ಮ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ.

ಕೊಪ್ಪಳ ವೀರಭದ್ರಪ್ಪ
ಪ್ರಕಾಶಕರು.

೨೨-೧೦-೧೯೫೧

ಎರಡನೆಯ ಮುದ್ರಣದ ಮುನ್ನುಡಿ

ಮೂರು ವರ್ಷಗಳ ಹಿಂದೆ ತ್ರಿವಿಧ ದಾಸೋಹಮೂರ್ತಿಗಳಾದ ಪೂಜ್ಯ ಶ್ರೀಮನ್ನಿರಂಜನ ಪ್ರಣವಸ್ವರೂಪ ಮೃತ್ಯುಂಜಯ ಮಹಾಸ್ವಾಮಿಗಳವರ ಅಮೃತ ಹಸ್ತದಿಂದ ಈ ಗ್ರಂಥವು ಪ್ರಕಟವಾಯಿತು. ಆ ಚಿರಸ್ಮರಣೀಯ ಸನ್ನಿವೇಶವು ಇತಿಹಾಸ ಪ್ರಸಿದ್ಧವಾದದು. ಸಾಹಿತ್ಯಪ್ರೇಮಿಗಳೂ ಸಮಾಜಾಭಿಮಾನಿಗಳೂ, ವಚನ ವಾಙ್ಮಯ ಅಭ್ಯಾಸಿಗಳೂ ತತ್ತ್ವಾನ್ವೇಷಣಪರರೂ ಇದನ್ನು ಆದರದಿಂದ ಸ್ವಾಗತಿಸಿದರು. ಮೊದಲನೆಯದಾಗಿ ಕನ್ನಡನಾಡಿನ ಸುಪ್ರಸಿದ್ಧ ವಿದ್ವಾಂಸರಾದ ಪ್ರೊಫೆಸರ್ ಬಸವನಾಳ ಶಿವಲಿಂಗಪ್ಪನವರ ಹೃದಯದಿಂದ ಸಂಸ್ಕಾರಹೊಂದಿ ಅವರ ಬುದ್ಧಿಶಕ್ತಿಯಿಂದ ಪರಿಷ್ಕೃತವಾಗಿರುವುದೆಂದೂ, ಎರಡನೆಯದಾಗಿ ಪ್ರಾಚೀನ ಗ್ರಂಥಗಳನ್ನೂ ಶಾಸ್ತ್ರೀಯ ಪದ್ಧತಿಯಂತೆ ಪ್ರಕಟಿಸುವುದರಲ್ಲಿ ನೇಲ್ಕೈಯನ್ನು ಪಡೆದ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯ ಸಾಹಿತ್ಯಸಮಿತಿಯವರ ಅಧಿಕೃತ ಸಂಸ್ಮರಣವೆಂದೂ, ವಿಸ್ತಾರವಾದ ಪ್ರಸ್ತಾವನೆ-ವಚನಗಳ ಅಕಾರಾದಿ-ಶಬ್ದಕೋಶವುಳ್ಳದ್ದೆಂದೂ-ಬಹುಬೇಗ ಜನಪ್ರಿಯವಾದುದರಿಂದ ಎರಡನೆಯ ಮುದ್ರಣಕ್ಕೆ ಅವಕಾಶ ಉಂಟಾಯಿತು. ಮುಖ್ಯವಾಗಿ ಶುದ್ಧಪಾಠಗಳುಳ್ಳದ್ದರಿಂದ ವಿದ್ಯಾರ್ಥಿಗಳಿಗೂ ಜಿಜ್ಞಾಸುಗಳಿಗೂ ಹೆಚ್ಚು ಉಪಯುಕ್ತವಾಗಿರುವುದು ಆನಂದದ ಹಾಗೂ ಅಭಿಮಾನದ ಸಂಗತಿಯಾಗಿದೆ.

ಈ ವಚನ ಗ್ರಂಥವನ್ನು ಕರ್ನಾಟಕ, ಮುಂಬೈ ಮೈಸೂರು ಪುಣೆ ಉಸ್ಮಾನಿಯಾ (ಹೈದರಾಬಾದ್) ವಿಶ್ವವಿದ್ಯಾಲಯದವರು, ಇಡಿಯಾಗಿಯೂ ಭಾಗ ಭಾಗವಾಗಿಯೂ- ಬಿ. ಎ,. ಎಮ್. ಎ. ತರಗತಿಗಳ ಪರೀಕ್ಷೆಗೆ ಪಠ್ಯ ಪುಸ್ತಕವೆಂದು ನೇಮಿಸಿದುದಕ್ಕಾಗಿ–ಆಯಾ–ಕನ್ನಡ ಪಠ್ಯಪುಸ್ತಕ ಸಮಿತಿಯವರ ಉಪಕಾರ ಸ್ಮರಿಸದಿರಲಾರೆವು. ಈ ಗ್ರಂಥದ ಸಂಪಾದಕರಾದ ಲಿಂಗೈಕ್ಯ ಪ್ರೊಫೆಸರ್ ಬಸವನಾಳ ಶಿವಲಿಂಗಪ್ಪನವರು ತೋರಿದ ಮಾರ್ಗದಲ್ಲಿಯೇ ಎರಡನೆಯ ಮುದ್ರಣದ ಕಾರ್ಯವನ್ನು ನಿರ್ವಹಿಸಿದ್ದೇವೆ. ಶಬ್ದಕೋಶದಲ್ಲಿ ಕೆಲವು ಮಹತ್ವದ ಪದಗಳಿಗೆ ಅವರೇ ಬರೆದಿಟ್ಟಿದ್ದ ಹೆಚ್ಚಿನ ಅರ್ಥವನ್ನು ಈ ಮುದ್ರಣದಲ್ಲಿ ಸಮಾವೇಶ ಗೊಳಿಸಲಾಗಿದೆ.

ದಿನಾಂಕ ೨೨–೧೨–೧೯೫೪ ಬುಧವಾರ, ಪ್ರೊಫೆಸರ್ ಬಸವನಾಳ ಶಿವಲಿಂಗಪ್ಪನವರ ಲಿಂಗೈಕ್ಯ ದಿನಾಚರಣೆಯ ಮೂರನೆಯ ವಾರ್ಷಿಕ ಸಮಾರಂಭದ ಮುಖ್ಯ ಅತಿಥಿಗಳೂ ಹಾಗೂ ಶ್ರೀ ಬಸವಾದಿ ಪ್ರಮಥರ ಮಾರ್ಗಾನುವರ್ತಿಗಳೂ, ಕರ್ನಾಟಕ ವಿಶ್ವವಿದ್ಯಾನಿಲಯದ ಉಪಕುಲಪತಿಗಳೂ (ವೈಸ್ ಚಾನ್ಸಲರ್) ಆದ ರ್ಯಾಂಗ್ಲರ್ ಡಿ. ಸಿ. ಪಾವಟೆ ಎಂ. ಎ. (ಕ್ಯಾಂಟಬ್) ಅವರು ಈ ಎರಡನೆಯ ಮುದ್ರಣವನ್ನು ತಮ್ಮ ಅಮೃತ ಹಸ್ತದಿಂದ ಪ್ರಕಟಿಸಿದುದಕ್ಕಾಗಿ ಅವರಿಗೆ ಸಾಹಿತ್ಯ ಸಮಿತಿಯವರು ಕೃತಜ್ಞತೆಗಳನ್ನು ಸಮರ್ಪಿಸುತ್ತೇವೆ. ಎರಡನೆಯ ಮುದ್ರಣವನ್ನು ಸಕಾಲದಲ್ಲಿ ಅಂದವಾಗಿ ಮುದ್ರಿಸಿಕೊಟ್ಟಿದ್ದಕ್ಕಾಗಿ ಧಾರವಾಡ ರವೀಂದ್ರ ಮುದ್ರಣಾಲಯದ ವ್ಯವಸ್ಥಾಪಕರಿಗೆ ಆಭಾರ ಸಲ್ಲಿಸುತ್ತೇವೆ.

ಸಾಹಿತ್ಯ ಸಮಿತಿ
ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ
ಧಾರವಾಡ
೨೨–೧೨–೧೯೫೪

ಶಂ. ಬಸವಪ್ಪ
ಪ್ರಕಾಶಕರು.

ಪರಿವಿಡಿ

ಪ್ರಸ್ತಾವನೆ ೧—೫೬

ಬಸವಣ್ಣನವರ ಷಟ್‌ಸ್ಥಲದ ವಚನಗಳು ೧—೨೫೬

೧. ಭಕ್ತಸ್ಥಳ ೧—೧೩೩

೨. ಮಾಹೇಶ್ವರಸ್ಥಳ ೧೩೪—೨೦೦

೩. ಪ್ರಸಾದಿಸ್ಥಳ ೨೧೧—೨೧೯

೪. ಪ್ರಾಣಲಿಂಗಿಸ್ಥಳ ೨೧೯—೨೨೪

೫. ಶರಣಸ್ಥಳ ೨೨೫—೨೪೪

೬. ಐಕ್ಯಸ್ಥಳ ೨೪೫—೨೫೩

೭. ಕೆಲವು ಬೆಟ್ಟನ ವಚನಗಳು ೨೫೪—೨೫೬

ವಚನಗಳ ಅಕಾರಾದಿ ೨೫೭—೨೭೨

ಶಬ್ದಕೋಶ ೧—೪೮

ತಪ್ಪು ಒಪ್ಪುಗಳು ೪೯—೫೦

ಚಿತ್ರಗಳು

ಪ್ರೊಫೆಸರ ಬಸವನಾಳ ಶಿವಲಿಂಗಪ್ಪನವರು

ಕೂಡಲ ಸಂಗಮ ಕ್ಷೇತ್ರದ ಮಂಟಪ ೧

ನಟೇಶನ ಕಂಚಿನ ಪ್ರತಿಮೆಯ ಛಾಯಾ ಚಿತ್ರ ೧೪೭

ಪ್ರಸ್ತಾವನೆ*

೧

ಕನ್ನಡ ಸಾಹಿತ್ಯದ ಒಂದು ವಿಶಿಷ್ಟವಾದ, ಬಹು ಅಮೌಲ್ಯವಾದ ಭಾಗವೆಂದರೆ ವಚನಸಾಹಿತ್ಯ. ಈ ಬಗೆಯ ಸಾಹಿತ್ಯದಂತಹ ಉದಾಹರಣೆಗಳು ವಿರಳವಾಗಿ, ಕ್ವಚಿತ್ತಾಗಿ, ಬಿಡಿಬಿಡಿಯಾಗಿ, ಒಂದೆರಡು ಇತರ ಭಾಷೆಗಳ ಸಾಹಿತ್ಯಗಳಲ್ಲಿ ಸಿಕ್ಕಬಹುದಾದರೂ, ವಚನಗಳು ಸಾಹಿತ್ಯದ ಒಂದು ಪ್ರಕಾರವಾಗಿ ನೇರ್ಪಟ್ಟಿದು ಕನ್ನಡದಲ್ಲಿಯೆ ಎಂದು ನಿಸ್ಸಂದೇಹವಾಗಿ ಹೇಳಬಹುದು. ಅಂತೆಯೆ, ವಚನಸಾಹಿತ್ಯವು ಕನ್ನಡ ನುಡಿ ವಿಶ್ವಸಾಹಿತ್ಯಕ್ಕೆ ಕೊಟ್ಟ ಅಪೂರ್ವ ಕಾಣಿಕೆಯೆಂದು ಕನ್ನಡಿಗರ ಹೆಮ್ಮೆ ಪಡಬಹುದಾಗಿದೆ.

ಸಂಸ್ಕೃತದ ಒರಿಮೆ ನಡಿಲಿ ಕನ್ನಡದ ಪೆಜ್ಜಳ ಬೆಳೆದುದು ಈ ವಚನಸಾಹಿತ್ಯದಿಂದ. ಪಣ್ಯವ ವ್ಯಾಮೋಹ ಸರಿದು ಗದ್ಯಕ್ಕೆ ಪುರಸ್ಕಾರ ದೊರೆತುದು ಈ ವಚನಸಾಹಿತ್ಯದಿಂದ. ಬಹು ಕಾಲದಿಂದಲೂ ಪಂಡಿತರ ತುತ್ತಾಗಿದ್ದ, ವಿಶಿಷ್ಟವರ್ಗದವರ ಸೊತ್ತಾಗಿದ್ದ, ರಾಜ್ಯಲಕ್ಷ್ಮಿಯ ತೊತ್ತಾ

* ಈ ಪ್ರಸ್ತಾವನೆಯನ್ನು ಬರೆಯುವುದರಲ್ಲಿ ನಾವು ಜಯಕರ್ನಾಟಕ ಮಾಸಪತ್ರಿಕೆಯಲ್ಲಿ (ಸಪ್ಟೆಂಬರ ೧೯೪೨, ಜುಲೈ ೧೯೪೪ ಈ ಸಂಚಿಕೆಯಲ್ಲಿ) ಬರೆದ ಲೇಖನಗಳ ಮತ್ತು ಶ್ರೀ ಹಳಕಟ್ಟಿ ಚಿಂತಾಮಣಿಯವರ "ಯುಗಪ್ರವರ್ತಕ ಬಸವಣ್ಣ" ಎಂಬ ಗ್ರಂಥಕ್ಕೆ ನಾವು ಬರೆದ ಮುನ್ನುಡಿಯ ಉಪಯೋಗವನ್ನು ಕೆಲವು ಮಾರ್ಪಾಡುಗಳೊಡನೆ ಮಾಡಿಕೊಂಡಿದ್ದೇವೆ.

೧ ಇಲ್ಲಿಂದ ಮುಂದೆ ಒರುವ ಕ್ರಮಾಂಕಗಳಿಗೆಲ್ಲ ಸರಿಹೊಂದುವ ಅಡಿಟಿಪ್ಪಣಿಗಳನ್ನು ಈ ಪ್ರಸ್ತಾವನೆಯ ಕೊನೆಗೆ ಮುದ್ರಿಸಲಾಗಿದೆ.

ಗಿದ್ದ ಸರಸ್ವತಿಯ ಸಂಸ್ಕೃತ ಭಂಡಾರವನ್ನು ಕಡೆಗಣಿಸಿ, ತಮ್ಮ ಅನುಭವದ ಕಮ್ಮಟದಲ್ಲಿಯೆ ಅಚ್ಚೊತ್ತಿದ ವಚನನಾಣ್ಯಗಳನ್ನು ಜನ ಸಾಮಾನ್ಯರೆಲ್ಲರಲ್ಲಿ ಸಲುವಂತೆ ಹರಡಿಸಿದವರು ವಚನಕಾರರು. (ದೇವ ವಾಣಿಗೆ ಜನವಾಣಿಯಾಗುವುದು ಅನಾಥ್ಯವಾದಾಗ, ಜನವಾಣಿಯನ್ನೆ ದೇವವಾಣಿಯ ಪುಟ್ಟಕ್ಕೇರಿಸಿದ ಪವಾಡ ವೀರಶೈವ ವಚನಕಾರರದು.

ವಚನಸಾಹಿತ್ಯ ಕಾಲಮಾನದಿಂದ ಬಹು ವಿಸ್ತಾರವಾಗಿದ್ದಂತೆ ಸ್ಥೂಲವಾನದಿಂದ ವಿಪುಲವೂ ಆಗಿದೆ. ವಚನಕಾರರ ವೈಯಕ್ತಿಕ ಸ್ವಭಾವ ಅನುಭಾವ ದೃಷ್ಟಿಗಳಿಗನುರೂಪವಾಗಿ ಈ ಸಾಹಿತ್ಯದಲ್ಲಿ ವೈವಿಧ್ಯವೂ ಬೇಕಾನೆಷ್ಟಿದೆ. ಈ ವಚನ ಸಾಹಿತ್ಯದ ಮೂಲವನ್ನು ಸಂಶೋಧಿಸಲು ಹೊರಟ ಪಂಡಿತರಲ್ಲಿ ಕೆಲವರಿಗೆ ಅವರ ಊಹೆಯ ಬಸವಣ್ಣನವರಿಗಿಂತಲೂ ಕಿಂಚಿತ್ ಪೂರ್ವವಾಗಿರಬಹುದೆಂಬ ಸಂದೇಹವುಂಟಾಗಿದ್ದರೂ, ಆ ವಾಹಿನಿ ಕಣ್ಣಿಗೆ ಕಾಣುವಷ್ಟು, ಹೆಸರು ಕೊಂಡುವಷ್ಟು ವಿಶಾಲವಾದುದು ಬಸವಣ್ಣನವರ ಕಾಲದಲ್ಲಿಯೆ, ಅವರ ಕೈವಾಡದ ಫಲವಾಗಿಯೆ, ಎಂದೆನ್ನುವಲ್ಲಿ ಆವ ಸಂದೇಹವೂ ಇಲ್ಲ. ವಚನಸಾಹಿತ್ಯದಲ್ಲಿ ಒಟ್ಟಾರೆ ಕಂಡುಬರುವ ಮುಖ್ಯ ಅಥವಾ ವಿಶೇಷ ಲಕ್ಷಣಗಳನ್ನೆಲ್ಲ ಒಂದೆಡೆ ಕಾಣಬೇಕೆಂದರೆ, ಅವೆಲ್ಲ ಸಮಗ್ರವಾಗಿ ಗೋಚರವಾಗುವುದು ಬಸವಣ್ಣನವರ ವಚನಗಳಲ್ಲಿಯೆ. (ಬಸವಣ್ಣನವರ ವಚನಗಳಲ್ಲಿ ಮಿಡಿಯುವ ಅವರ ವಾಣಿ ಅಮೃತವಾಣಿ: ಆಧರಕ್ಕೂ ಸಿಹಿ ಉದರಕ್ಕೂ ಸಿಹಿ; ರಸಪರಿಪಾಕವೆಂದು ಅಮೃತ, ರಾಷ್ಟ್ರತಸಾಹಿತ್ಯವೆಂದೂ ಅಮೃತ!) ಅಂತೆಯೆ ವಚನ ವಾಙ್ಮಯದಲ್ಲಿ ಬಸವಣ್ಣನವರ ವಚನಗಳಿಗೆ ಮೊದಲೆಡೆ ನೀಡಲಾಗಿದ್ದರೆ ಅದೇನೂ ಅರಿದಲ್ಲ!

ಇತ್ತೀಚೆಗೆ ವಚನಸಾಹಿತ್ಯ ಕನ್ನಡ ನಾಡಿನಲ್ಲಿ ಎಲ್ಲ ಕಡೆಗೂ ಭರದಿಂದ ಪ್ರಸಾರವಾಗತೊಡಗಿದೆ. ಕೆಲವರು ಬಸವಣ್ಣನವರು, ಪ್ರಭುದೇವರು, ಅಕ್ಕಮಹಾದೇವಿ ಮೊದಲಾದವರ ವಚನಗಳನ್ನು ನಿಷ್ಪತ್ತಿ ವಾರಾಯಣ ಮಾಡುವ ಪರಿಪಾಠವನ್ನಿಟ್ಟುಕೊಂಡಿದ್ದಾರೆ. ಹಲವರು

ಮಹತ್ತ್ವವನ್ನಿಸಿದ ವಚನಗಳನ್ನು ಕಂಠಪಾಠಮಾಡಿ ಪ್ರಸಂಗವಿಶೇಷಗಳಲ್ಲಿ ಗಾದಿಯ ಮಾತುಗಳಂತೆ ಬಳಸುತ್ತಾರೆ. ಸಭೆ-ಸಮ್ಮೇಳನ ಸಮಾರಂಭಗಳಲ್ಲಿ, ಆರಂಭದಲ್ಲಿಯೊ ಮುಗಿತಾಯದಲ್ಲಿಯೊ, ವಚನಗಳನ್ನು ಸರಾಗವಾಗಿ ಹಾಡುವುದು ಕಾರ್ಯಕ್ರಮದ ಅವಶ್ಯವಾದ ಮಂಗಳಾಂಗವೆಂದು ಎಣಿಸಲಾಗಿದೆ. ಆಗಾಗ ಮುಕ್ತಳಿಗಾಗಿ ''ವಚನಸ್ಪರ್ಧೆ'' ಎಲ್ಲೆಲ್ಲಿಯೂ ನಡೆಯುತ್ತಿದೆ. ನಡುನಡುವೆ ರಸಿಕರಿಗಾಗಿ ಸುಪ್ರಸಿದ್ಧ ಗಾಯಕರ ವಚನ ಸಂಗೀತದ ಸವಿಸೇಳಿಕೆಗಳನ್ನು ಜಾನ್‌ದನಿ ಚಿತ್ತರಿಸುತ್ತಿದೆ. ಬಾಲಕರ ಕ್ರಮಿಕ ಪುಸ್ತಕಗಳಲ್ಲಿ, ವೈದ್ಯವಿದ್ಯಾರ್ಥಿಗಳ ಪಠ್ಯಪುಸ್ತಕಗಳಲ್ಲಿ ವಚನ ಸಂಕಲನಗಳು ಸೇರ್ಪಡಿಯಾಗುತ್ತಿವೆ. ಸಾಮಾನ್ಯ ವಾಚಕರ ಸೌಕರ್ಯಕ್ಕಾಗಿ ವಚನಗಳ-ಚಿಕ್ಕಪುಟ್ಟ ಸಂಗ್ರಹಗಳು ಹಲವಾರು ಪ್ರಸಿದ್ಧವಾಗುತ್ತಲಿವೆ. ಪಂಡಿತರೂ ವಿಮರ್ಶಕರೂ ಸಹೃದಯರೂ ವಚನ ಸಾಹಿತ್ಯವನ್ನು ಅರೆದೊರೆದು ತಿರುಳನ್ನು ತೆಗೆದು ವಿಮರ್ಶನ ಗ್ರಂಥಗಳನ್ನು ಪ್ರಕಟಿಸತೊಡಗಿದ್ದಾರೆ. ಇದೆಲ್ಲ ಆಗಬೇಕಾದ ಕಾರ್ಯ, ಅಭಿಮಾನದ ಮಾತು, ಸಂತೋಷದ ಸಂಗತಿ.

ವಚನ ಸಾಹಿತ್ಯ ಈ ತೆರನಾಗಿ ಭರದಿಂದ ಪ್ರಸಾರವಾಗುತ್ತಿರುವ ಈ ಕಾಲದಲ್ಲಿ ಒಶುದ್ಧವಾದ, ಅಪಾರ್ಥವಾಗುವ ಇಲ್ಲವೆ ಸಂದಿಗ್ಧಾರ್ಥಕ್ಕೆಡೆಗೊಡುವ ವಚನಪಾಠಗಳನೇಕ ಬಳಕೆಯಲ್ಲಿ ಬರುವ ಸಂಭವ ಹೆಚ್ಚಾಗಿದೆ; ಅದೇಕೆ, ಅಂತಹ ಪಾಠಗಳು ಎಷ್ಟೋ ಈಗಾಗಲೆ ಪ್ರಚಾರಗೊಂಡಿವೆ. ಈ ಅನಿಷ್ಟವನ್ನು ಸಕಾಲದಲ್ಲಿ ತಡೆದು, ಪರಿಶೋಧಿತವಾದ ಸಾರ್ಥಕವಾದ ಮೂಲಪಾಠಗಳೆ ಪ್ರಚಾರಗೊಳ್ಳುವಂತೆ ಪ್ರಯತ್ನಮಾಡುವುದು ಸಾಹಿತ್ಯಾಭಿಮಾನಿಗಳ ಆವ್ಯಕರ್ತವ್ಯವಾಗಿದೆ. ವ್ಯಾಕರಣ ದೃಷ್ಟಿಯಿಂದ ತಪ್ಪೆಂದು ತೋರಿದ ಎಡೆಗಳಲ್ಲಿ, ಅರ್ಥಕ್ಕೆ ಬಾಧೆ ಬರುವ ಕಡೆಗಳಲ್ಲಿ ತಿದ್ದು ಪಾಟು ಮಾಡುವ ಪ್ರಯತ್ನ ಈಗಾಗಳೆ ನಡೆದುದು ಅಲ್ಲಲ್ಲಿ ಕಂಡು ಬರುತ್ತಿದೆ. ಇದೊಂದು ಶುಭಲಕ್ಷಣವೇ ಆದರೂ, ಮೂಲ ಮಾತೃಕೆಗಳ ಆಧಾರವಿಲ್ಲದೆ, ಇತರ ವಚನಗಳ ನೆರವಿಲ್ಲದೆ, ಸಂಶೋಧನದ ಅನುಭವ

ವಿಲ್ಲದೆ ಬರಿಯ ಊಹೆಯಿಂದ ತಮಗೆ ಸರಿಗಂಡ ತೆರದಲ್ಲಿ ತಿದ್ದುಪಾಟು ಮಾಡುವುದು ಸಾಹಸದ ಕೆಲಸ, ಪರಿಣಾಮದಲ್ಲಿ ಅಸಮರ್ಪಕ, ಬಹು ದಿವಸ ನಿಲ್ಲಲಾರದೆಂದು ಮತ್ತೆ ಬೇರೆ ಹೇಳಬೇಕಾಗಿಲ್ಲ. ಅಲ್ಲದೆ, ಒಂದೇ ವಚನವನ್ನು ಬೇರೆ ಬೇರೆಯವರು ತಮತಮಗೆ ಉಚಿತಕಂಡ ರೀತಿಯಲ್ಲಿ ತಿದ್ದುವುದರಿಂದ 'ಅನವಸ್ಥೆ'ಯುಂಟಾಗುವುದೆಂಬುದನ್ನೂ ನೆನಪಿಡಬೇಕಾ ದುದು. ಇದೂ ಅಲ್ಲದೆ, ವಚನಕಾರರ ಮನದಾಶಯವು ಸರಿಯಾಗಿ ಅಸಂ ದಿಗ್ಧವಾಗಿ ಹೊರಹೊಮ್ಮುವಂತೆ ವಚನಗಳು ಸ್ಫುಟವಾಗಿ ತಕ್ಕ ವಿರಾಮ ಚಿಹ್ನಗಳೊಡನೆ ಅಂದವಾಗಿ ಮುದ್ರಿತವಾಗಿ ಪ್ರಚಾರವಾಗುವುದೂ ಅಗತ್ಯದ ಮಾತಾಗಿದೆ. ಈ ದೃಷ್ಟಿಯಿಂದ ವಿಚಾರಿಸಿದಾಗ ವಚನಸಾಹಿತ್ಯ ಪ್ರಕಟ ವಾಗತೊಡಗಿ ಬಹುಕಾಲ ಸಂದಿದ್ದರೂ, ಪ್ರಸಿದ್ಧ ವಚನಕಾರರ ವಚನ ಗಳು ಹಲವು ಸಂಸ್ಕರಣಗಳನ್ನು ಕಂಡಿದ್ದರೂ, ಅವುಗಳಲ್ಲಿ ಅಸಂಖ್ಯ ಪಾಠದೋಷಗಳೂ ಅನೇಕ ಅರ್ಥಸಂದೇಹಗಳೂ ಇನ್ನೂ ಗೋಚರ ವಾಗುತ್ತಿರುವುದು ಬಹು ವಿಷಾದಕರವಾದ ಸಂಗಯಾಗಿದೆ.

ಪ್ರಾಚೀನಸಾಹಿತ್ಯವನ್ನು ಪ್ರಕಟಮಾಡುವ ಹೊಸತರಲ್ಲಿ ಈಗ ದೊರೆಯುವ ಹಲವು ಸೌಲಭ್ಯ ಸೌಕರ್ಯಗಳು ಉಪಲಬ್ಧವಿರಲಿಲ್ಲವೆಂಬ ಮಾತು ಒಪ್ಪತಕ್ಕುದೇ. ಆ ಕಾಲದಲ್ಲಿ ಈ ಕಾರ್ಯಕ್ಕೆ ಕೈಹಾಕಿದವರಿಗೆ ಸಾಕಷ್ಟು ಒಳ್ಳೆಯ ಹಸ್ತಲಿಖಿತ ಪ್ರತಿಗಳ ಅಭಾವವೂ ಇದ್ದಿತಲ್ಲದೆ, ಆಯಾ ಕಾಲದ ಸಾಹಿತ್ಯದ ಆಳವಾದ ಪರಿಚಯವುಳ್ಳವರ, ಭಾಷಾಪಾಂಡಿತ್ಯ ವುಳ್ಳವರ, ತುಲನಾತ್ಮಕ ವಿಮರ್ಶನಶಕ್ತಿಯುಳ್ಳವರ, ಪ್ರಾಚೀನ ಸಾಹಿತ್ಯ ಸಂಪಾದನೆಯ ಕಾರ್ಯದಲ್ಲಿ ಸಾಕಷ್ಟು ಕೃಷಿಯುಳ್ಳವರ ಸಾಹಾಯ್ಯದ ಕೊರತೆಯೂ ಇದ್ದಿತು. ಹೇಗಾದರೂ ಆಗಲಿ, ಒಮ್ಮೆ ಮುದ್ರಿತವಾಗಿ ಹೊರಬಿದ್ದರಾಯಿತು; ವಿದ್ವಜ್ಜನರ ಅಭ್ಯಾಸ ವಿಮರ್ಶೆಗಳಿಗೆ ಸಿಕ್ಕಿ, ಯಥಾವಕಾಶವಾಗಿ ಶುದ್ಧ ಸಂಸ್ಕರಣಗಳಿಗೆ ಮಾರ್ಗವಾಗಬಹುದು— ಎಂಬ ಸದಿಚ್ಛೆಯಿಂದಲೆ ಪ್ರಾಚೀನ ಸಾಹಿತ್ಯವನ್ನು ಪ್ರಕಟಿಸುವ ಸಾಹಸಕ್ಕೆ ಕೈಹಾಕಿದರು ಆ ಕಾಲದ ಸಾಹಿತ್ಯಪ್ರೇಮಿಗಳ.. ಅವರ ಕಾರ್ಯ

ಅಪೂರ್ಣ, ಅತೃಪ್ತಿಕರ ಎಂದು ಮುಂತಾಗಿ ತೆಗಳಿದೆ, ಅವರ ಸಾಹಿತ್ಯ ಸೇವೆಗಾಗಿ ಈ ಕಾಲದವರಾದ ನಾವು ಅವರಿಗೆ ನಮ್ಮ ಹೃತ್ಪೂರ್ವಕ ಕೃತಜ್ಞತೆಯನ್ನು ಸಲ್ಲಿಸುವುದು ನಮ್ಮ ಕರ್ತವ್ಯವಾಗಿದೆ.

ಆದರೆ, ಈಗ ಸಾಹಿತ್ಯಕ್ಷೇತ್ರದಲ್ಲಿ ಸಾಕಷ್ಟು ಪ್ರಗತಿಯಾಗಿದೆ; ಪರಿಸ್ಥಿತಿ ಬಹುಮಟ್ಟಿಗೆ ಸುಧಾರಿಸಿದೆ. ಇದರಿಂದಾಗಿ ಇತ್ತೀಚಿಗೆ ಜನರ ಮೆಚ್ಚುಗೆಯನ್ನು ಪಡೆದ ಪ್ರಾಚೀನ ಸಾಹಿತ್ಯ ಗ್ರಂಥಗಳನ್ನು ಮತ್ತೆ ನೂತನವಾಗಿ ಸಂಪಾದಿಸುವ ಕಾರ್ಯ ಅನೇಕ ಕಡೆಗಳಲ್ಲಿ ಭರದಿಂದ ನಡೆದಿದೆ. ಈ ಮಹತ್ತರವಾದ ಕಾರ್ಯಕ್ಕೆ ವಿಶ್ವವಿದ್ಯಾನಿಲಯಗಳೂ ಸಾಹಿತ್ಯ ಸಂಘಗಳೂ ಎಲ್ಲಂದದ ನೆರವನ್ನು ನೀಡಲನುವಾಗಿವೆ. ಈ ನೂತನ ಪರಿಸ್ಥಿತಿಗನುಸಾರವಾಗಿ ವಚನ ಸಾಹಿತ್ಯವನ್ನೂ ಮತ್ತೆ ಅಧಿಕೃತವಾಗಿ ಪರಿಷ್ಕರಿಸುವ ಕಾರ್ಯವನ್ನು ಕೈಕೊಳ್ಳುವುದು ಆವಶ್ಯಕವೆನಿಸುವದರಲ್ಲಿ ಸಂದೇಹವಿಲ್ಲ.

ಮುದ್ರಣಕಲೆ ಅನೇಕ ಶತಮಾನಗಳಿಂದಲೂ ಬಳಕೆಯಲ್ಲಿದ್ದ ಇಂಗ್ಲಂಡಿನಂತಹ ಪಾಶ್ಚಾತ್ಯ ದೇಶಗಳಲ್ಲಿ ಶೇಕ್‌ಸ್ಪಿಯರನಂತಹ ಮಹಾಕವಿಯ ಕೃತಿಗಳು ಕವಿಯ ಜೀವಿತಕಾಲದಲ್ಲಿಯೇ ಮುದ್ರಿತವಾಗಿ ಪ್ರಸಾರವಾಗಿದ್ದರೂ, ಆ ಮುದ್ರಣಕಾರ್ಯ ಕವಿಯ ಪ್ರತ್ಯಕ್ಷ ನೇತೃತ್ವದಲ್ಲಿ ನಡೆಯಲಿಲ್ಲೆಂಬೊಂದು ಕಾರಣಕ್ಕಾಗಿ—ಸಾಮಾನ್ಯ ಓದುಗರಿಗೆ ಹೇಗಾದರೂ ಆಗಲಿ—ಪಂಡಿತರಿಗೆ ಮತ್ತು ಅಭ್ಯಾಸಿಗಳಿಗೆ ಮಾತ್ರ ಆ ಮೂಲ ಮುದ್ರಣಗಳು ಅಸಮರ್ಪಕವೆಂದೇ ಗೃಹೀತವಾಗಿವೆ. ಕವಿಯು ಕಾಲವಾದಂದಿನಿಂದ ಮೂರು ಶತಮಾನಕಾಲ ಅನೇಕ ಸೂಕ್ಷ್ಮ ವಿಮರ್ಶಕರ ಮತ್ತು ಉದ್ದಾಮ ಪಂಡಿತರ ಒಂದು ದೀರ್ಘ ಪರಂಪರೆಯೇ ಏರ್ಪಟ್ಟಿದ್ದರೂ, ಅವರೆಲ್ಲರೂ ಆಗಾಗ ಅನೇಕ ಬಗೆಯ ತಿದ್ದುಪಡಿಗಳನ್ನು ಸೂಚಿಸುತ್ತಲೂ ಕೈಕೊಳ್ಳುತ್ತಲೂ ಬಂದುದು ಕಂಡು ಬರುತ್ತಿದ್ದರೂ, ಆದಷ್ಟು ಶುದ್ಧಪಾಠಗಳನ್ನು ಒದಗಿಸುವ ದೃಷ್ಟಿಯಿಂದ ನೂತನ ಸಂಸ್ಕರಣಗಳು ಈಗಲೂ ಪ್ರಕಟವಾಗುತ್ತಿರುವುದು ಆಂಗ್ಲಸಾಹಿತ್ಯಾಭ್ಯಾಸಿಗಳಿಗೆ ತಿಳಿದ ಮಾತಾಗಿದೆ.

ಮುದ್ರಣಕಲೆ ಪ್ರಸಾರಗೊಳ್ಳುವ ಎಷ್ಟೋ ಶತಮಾನಗಳ ಮುಂಚೆಯೆ ಸಾಹಿತ್ಯರಚನೆ ನಡೆಯುತ್ತಿದ್ದ ನಮ್ಮ ದೇಶದಲ್ಲಿ ಕೈ ಬರೆಹದ ಪ್ರತಿಗಳನ್ನು ಅನುಸರಿಸಿಯೆ ಪ್ರಾಚೀನ ಸಾಹಿತ್ಯವನ್ನು ಪ್ರಕಟಿಸಬೇಕಾದುದು ಅನಿವಾರ್ಯವಾಗಿರುವುದರಿಂದ ಕಾಲಕಾಲಕ್ಕೆ ನವೀನ ಸಂಸ್ಕರಣಗಳನ್ನು ಕೈಕೊಳ್ಳುವುದು ಅವಶ್ಯಕವೆಂದೆನಿಸುವುದು ಸ್ವಾಭಾವಿಕವೇ ಸರಿ.

ಈ ಎಲ್ಲ ವಿಚಾರಗಳನ್ನು ಮನದಂದು ಸಾಹಿತ್ಯಪ್ರೇಮಿಗಳ ಬಯಕೆಗನುರೂಪವಾಗಿ ವಚನ ಸಾಹಿತ್ಯವನ್ನು ಸಶಾಸ್ತ್ರೀಯವಾಗಿ ಪುನಃ ಸಂಸ್ಕರಿಸುವ ಹೊಣೆಯನ್ನು ಧಾರವಾಡದ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯ ಸಾಹಿತ್ಯ ಸಮಿತಿ ಈಗ ಕೆಲಕಾಲದಿಂದ ಹೊತ್ತುಕೊಂಡು ಈ ದಿಶೆಯಲ್ಲಿ ಕಾರ್ಯಪ್ರವೃತ್ತವಾಗಿದೆ. ಬಸವಣ್ಣನವರ ವಚನಗಳ ಈ ಸಂಸ್ಕರಣ ಸಾಹಿತ್ಯ ಸಮಿತಿಯ ಪರಿಶ್ರಮದ ಪ್ರಥಮ ಫಲವಾಗಿದೆ.

೨

ಪ್ರಾಚೀನ ಸಾಹಿತ್ಯದ ಸಂಪಾದನ ಕಾರ್ಯದಲ್ಲಿ ತೊಡಕುಗಳಿಷ್ಟಿವೆ ಎಂಬುದು ಆ ಕ್ಷೇತ್ರದಲ್ಲಿ ದುಡಿದವರಿಗೆಲ್ಲ ಅನುಭವಕ್ಕೆ ಬಂದ ಸಂಗತಿಯಾಗಿದೆ. ಮುದ್ರಣಯೋಗ್ಯವಾದ ಪರಿಷ್ಕೃತ ಪ್ರತಿಯನ್ನು ಸಿದ್ಧಪಡಿಸುವುದಕ್ಕೆ ಆಯಾ ಕೃತಿಯ ಕೈಬರೆಹದ ಪ್ರತಿಗಳು ಆವಶ್ಯಕ. ಆದರೆ ಅಂತಹ ಕೈಬರೆಹದ ಪ್ರತಿಗಳು ಗ್ರಂಥಕರ್ತರಿಂದಲೆ ಬರೆದುವು ದುರ್ಲಭವಾದುದರಿಂದ ಇತರರು ಬರೆದಿಟ್ಟುವುಗಳನ್ನೆ ಅವಲಂಬಿಸಬೇಕಾಗುವುದು. ಗ್ರಂಥಕರ್ತರ ಕಾಲದಿಂದ ಇವು ದೂರವಾಗಿದ್ದಷ್ಟು ಮೂಲಗ್ರಂಥದಿಂದ ಹೆಚ್ಚು ಹೆಚ್ಚು ಭಿನ್ನವಾಗುತ್ತ ಹೋಗುವುದೆ ಸಂಭವನೀಯ. ಅಲ್ಲದೆ, ಇಂತಹ ಪ್ರತಿಗಳನ್ನು ಮಾಡಿದವರಿಗೆ ಕೇವಲ ವರ್ಣಜ್ಞಾನದ ಹೊರತು ಹೆಚ್ಚಿನ ತಿಳಿವಳಿಕೆಯಿದ್ದುದು ಕಂಡುಬರುವುದಿಲ್ಲ. ಭಾಷಾಜ್ಞಾನ, ವ್ಯಾಕರಣಜ್ಞಾನ, ವಿಷಯಜ್ಞಾನ ಮುಂತಾದ ಹೆಚ್ಚಿನ, ಆವರೂ ಆವಶ್ಯಕವಾದ, ಜ್ಞಾನವುಳ್ಳ ಪಂಡಿತರು ಪ್ರತಿಮಾಡುವ ಕಾರ್ಯಕ್ಕೆ ಆ ಕಾಲದಲ್ಲಿ ಕೈಹಾಕುತ್ತಿದ್ದಿಲ್ಲವೆಂದೆ ತೋರುತ್ತಿದೆ ಇದರಿಂದಾಗಿ ಹಿಂದಣ ಕೈಬರೆ

ಹಲವ ಪ್ರತಿಗಳಲ್ಲಿ ಅಕ್ಷರಸ್ಖಾಲಿತ್ಯ, ಶಬ್ದಪಾತ, ಪೌನರುಕ್ತ್ಯ ಮುಂತಾದ ಹಲವು ಬಗೆಯ ದೋಷಗಳು ತಲೆಹಾಕಿರುವುದು ಸಾಮಾನ್ಯವಾಗಿದೆ. ಅಂತೆಯೇ ಒಂದೆರಡು ಕೈಬರೆಹದ ಪ್ರತಿಗಳು ಸಾಹಾಯ್ಯದಿಂದ ಪ್ರಾಚೀನ ಗ್ರಂಥಗಳ ಸಂಸ್ಕರಣ ಮಾಡುವ ಕಾರ್ಯ ಪ್ರಯಾಸಕರವೂ ಅತೃಪ್ತಿಕರವೂ ಆಗಿರುವುದೆಂಬುದು ಅನುಭವದ ಸಂಗತಿಯಾಗಿದೆ

ಆದುದರಿಂದ ಪ್ರಾಚೀನ ಸಾಹಿತ್ಯದ ಆವುದೊಂದು ಗ್ರಂಥವನ್ನು ಸಮರ್ಪಕವಾಗಿ ಪರಿಷ್ಕರಿಸಬೇಕಾದರೆ ಅದರ ಕೈಬರೆಹದ ಪ್ರತಿಗಳು ಎಷ್ಟು ಹೆಚ್ಚು ಸಿಕ್ಕುವುವೊ ಅಷ್ಟು ಒಳ್ಳೆಯದು. ಅದರಲ್ಲಿಯೂ ಇತ್ತೀಚಿನವಾದ ಕಾಗದ ಪ್ರತಿಗಳಿಗಿಂತ ತಾಳೆಪ್ಪೋಲೆಯ ಪ್ರತಿಗಳು ಹೆಚ್ಚು ವಿಶ್ವಸನೀಯವಾದುವು. ಒಂದು ಗ್ರಂಥದ ಸಂಪಾದಕ್ಕಾಗಿ ಕಲಿಹಾಕಿದ ಪ್ರತಿಗಳನ್ನು ಅವುಗಳಲ್ಲಿ ಕಂಡುಬರುವ ಹೋಲಿಕೆ-ಭಿನ್ನತೆಗಳನುಸಾರವಾಗಿ ಬೇರೆ ಬೇರೆಯಾಗಿ ವರ್ಗೀಕರಿಸಬೇಕಾಗುವುದು. ಹೋಲಿಕೆ ಹೆಚ್ಚಾಗಿದ್ದುವುಗಳಲ್ಲಿಯೂ ಅಂತಹ ಹೋಲಿಕೆಗಳಿಗೆ ಆ ಪ್ರತಿಗಳಿಗೆಲ್ಲ ಮಾತೃಕೆ ಒಂದೇಯಾದುದೆ ಕಾರಣವಾಗಿರಬೇಕೆಂಬುದನ್ನು ಲಕ್ಷ್ಯದಲ್ಲಿಟ್ಟುಕೊಳ್ಳುವುದಲ್ಲದೆ, ಭಿನ್ನತೆಗೆ ಆಯಾ ಪ್ರತಿಕಾರರ ವಿಶಿಷ್ಟ ಬಲಾಬಲಗಳು ಕಾರಣವಾಗಿರಬೇಕೆಂಬುದನ್ನೂ ಗಮನಿಸಬೇಕಾವುದು. ಹಸ್ತಲಿಖಿತ ಪ್ರತಿಗಳ ವರ್ಗೀಕರಣ ಮಾಡುವಲ್ಲಿ ಅನುಸರಿಸಬೇಕಾದ ತತ್ತ್ವಗಳು ಇತ್ತೀಚೆಗೆ ಕಂಡುಹಿಡಿಯಲ್ಪಟ್ಟು ಪ್ರಕಟವಾಗಿವೆ. ಅವುಗಳ ಬಗೆಗೆ ಹೆಚ್ಚಿನ ವಿವರಗಳು ಅನ್ಯತ್ರ ದೊರೆಯುವುದರಿಂದ ಅವನ್ನೆಲ್ಲ ಇಲ್ಲಿ ವಿವೇಚಿಸುವ ಅವಶ್ಯಕತೆಯಿಲ್ಲ. ಆದರೆ, ಪೂತೃಕೆಗಳ ಉಪಯೋಗದಲ್ಲಿ ಒಂದು ಶಾಸ್ತ್ರೀಯವಾದ ತಂತ್ರವೆ ಈಗ ಏರ್ಪಟ್ಟಿದೆಯಾದರೂ, ಅದರ ಅನುಸರಣದಿಂದ ಕೆಲವೊಂದು ವಿಶಿಷ್ಟ ಬಗೆಯ ತೊಡಕುಗಳು ನಿವಾರಣೆಯಾಗಬಹುದೆ ಹೊರತು ಎಲ್ಲ ತೊಡಕುಗಳೂ ಬಯಲಾಗುವುವೆಂತಲ್ಲ.

ಕೈಬರೆಹದ ಪ್ರತಿಗಳನ್ನಷ್ಟೆ ಕಲಿಹಾಕಿದರೂ ಅವುಗಳಿಂದ ನಿವಾರಣೆಯಾಗದ ಈನ್ನೂ ಎಷ್ಟೋ ತೊಡಕುಗಳು ಸಂಪಾದಕರನ್ನು ಎದುರಿಸುತ್ತಿವೆ

ಯೆಂಬುದು ಸಂಸ್ಕೃತ ಅಥವಾ ಬೇರೆ ದೇಶಭಾಷೆಗಳಿಗಿಂತಲೂ ಕನ್ನಡಕ್ಕೆ ಹೆಚ್ಚು ಅನ್ವಯಿಸುತ್ತಿದೆ. ಕನ್ನಡದ ಹಳೆಯ ಕೈಬರಹದ ಪ್ರತಿಗಳಲ್ಲಿ ಎಷ್ಟೋ ಸಂದರ್ಭಗಳಲ್ಲಿ ಕ-ತ, ದ-ವ, ಗ-ನ ಮೊದಲಾದ ಅಕ್ಷರಗಳು ಪಲ್ಲಟವಾಗಿರುವುದು ಕಂಡುಬರುತ್ತಿದೆ. ಅದೇ ರೀತಿ ಅಲ್ಪಪ್ರಾಣ ಮಹಾಪ್ರಾಣಗಳ ಪಲ್ಲಟ, ರೇಫೆ ಒತ್ತಕ್ಷರಗಳ ಅನಾವಶ್ಯಕಪ್ರಯೋಗ ಅಥವಾ ಆವಶ್ಯಕವೆನಿಸುವ ಒತ್ತಕ್ಷರಗಳ ಅಭಾವ, ಇ, ಉ, ಒ, ಮೊದಲಾದ ಸ್ವರಗಳನ್ನು ಯಿ, ವು, ವೊ ಎಂದು ವ್ಯಂಜನಾದಿಯ ರೂಪದಲ್ಲಿ ಬರೆಯುವ ರೂಢಿ— ಇವೆಲ್ಲ ಅರ್ಥದ ಸಂದಿಗ್ಧತೆಯನ್ನು ಬಲಿಸಲು ಕಾರಣವಾಗುತ್ತಿವೆ. ಇದಲ್ಲದೆ, ಕನ್ನಡದ ಹಳೆಯ ಕೈಬರಹದ ಪ್ರತಿಗಳಲ್ಲಿ ಹ್ರಸ್ವ ದೀರ್ಘಾಕ್ಷರಗಳನ್ನು ಸ್ಪಷ್ಟವಾಗಿ ಸೂಚಿಸಿರುವುದು ಬಹು ವಿರಳ. ಪದ್ಯಗ್ರಂಥಗಳಾಗಿದ್ದರೆ ಛಂದಸ್ಸಿನ ಸಾಹಾಯ್ಯದಿಂದ ಬಹುಮಟ್ಟಿಗೆ ಅವುಗಳನ್ನು ನಿರ್ಧರಿಸಬಹುದು. ಆದರೂ ಇಂತಹ ಕಡೆಗಳಲ್ಲಿಯೂ ಭಿನ್ನಾಭಿಪ್ರಾಯಕ್ಕೆ ಎಡೆಯಿಲ್ಲದಿಲ್ಲ. ಉದಾಹರಣೆಗಾಗಿ ನಾಗವರ್ಮನ:

ಇನಿತಂ ಮೂರ್ಖಯಿನೆಳ್ದ
ತ್ತನಂತರಂ ದೀರ್ಘಶೋಕಮುಂಬಿಡಿಸುವ ಕಿ
ರ್ಚಿನ ಕಿಡಿಯಂದದೆ ನೆಲದೊಳ
ಗಸಮಂ ಮಿದುಮಿಡನೆ ಮಿಡುಕುವೆನ್ನಂ ಕಂಡೆಂ

ಎಂಬ ಪದ್ಯದಲ್ಲಿ ಛಂದೋದೋಷವಿಲ್ಲದಿದ್ದರೂ 'ಕಿಡಿ' ಎಂಬ ಶಬ್ದಕ್ಕೆ ಸರಿಯಾಗಿ ಅರ್ಥವಾಗುವುದಿಲ್ಲೆಂದೂಹಿಸಿ ಅದು 'ಕೀಡಿ' (=ಹುಳು) ಎಂದೆ ಇರಬೇಕೆಂದು ಕೆಲವರು ತರ್ಕಿಸುತ್ತಾರೆ. ಆದರೆ ಈ ತಿದ್ದುಪಾಟು ಅನಾವಶ್ಯಕವೆಂದು ಹಲವರಿಗೆ ತೋರಬಹುದಾಗಿದೆ; ನನಗಂತೂ ಹಾಗೆ ತೋರುತ್ತಿದೆ. ಅದೇನೇ ಇರಲಿ, ಬಸವಣ್ಣನವರ ವಚನಗಳು ಛಂದೋಬದ್ಧವಾದ ಪದ್ಯವಲ್ಲವಾದುದರಿಂದ ಅವುಗಳನ್ನು ಸಂಸ್ಕರಿಸುವ ನಮ್ಮ ಕಾರ್ಯದಲ್ಲಿ ಹ್ರಸ್ವ-ದೀರ್ಘಾಕ್ಷರಗಳ ಸಂದೇಹ ನನಗೆ ಹಲವೆಡೆಗಳಲ್ಲಿ ಗೋಚರಿಸಿದೆ, ಬಾಧಿಸಿದೆ. ಇಂತಹ ಪ್ರಸಕ್ತಿಯಲ್ಲಿ, ಅನೇಕ ಕಡೆಗಳಲ್ಲಿ

ಈಗ ಪ್ರಚಾರದಲ್ಲಿರುವ ಪಾಠಗಳಿಗೆ ವ್ಯತಿರಿಕ್ತವಾಗಿ ತಿದ್ದುಪಡಿಗಳನ್ನು ಮಾಡುವ ಸಾಸಹ ಮಾಡಿದ್ದೇವೆ.

ಎಷ್ಟೋ ಕಡೆಗಳಲ್ಲಿ ಬರಿಯ ಊಹೆಯಿಂದಲೆ ತಿದ್ದುಪಾಟುಗಳನ್ನು (conjectural emendation) ಕೈಕೊಳ್ಳುವ ಪ್ರಸಂಗವೂ ಒದಗುತ್ತಿದೆ. ಇಂಗ್ಲಿಷ ಸಾಹಿತ್ಯದಲ್ಲಿ, ಅದರಲ್ಲಿಯೂ ಶೇಕ್ಸ್‌ಪಿಯರನ ಕೃತಿಗಳಲ್ಲಿ ಕಂಡುಬರುವ ನ್ಯೂನತೆ, ಸಂದಿಗ್ಧತೆ, ವ್ಯರ್ಥತೆ ಮುಂತಾದವುಗಳನ್ನು ಹೋಗಲಾಡಿಸಲು ಸಮರ್ಥರೆನಿಸಿದ ವಿಮರ್ಶಕರು ಊಹೆಯಿಂದಲೆ ಪಾಠಸಂಸ್ಕರಣವನ್ನು ಕೈಕೊಂಡುದುಂಟು. ಅವುಗಳಲ್ಲಿ ಕೆಲವು ವಿದ್ವಜ್ಜನರ ಮಾನ್ಯತೆಯನ್ನು ಪಡೆದಿರುವುದು ನಿಜವಾದರೂ, ಅಸಮರ್ಪಕವೆಂದು ಕಡೆಗಣಿಸಲ್ಪಟ್ಟವುಗಳೆ ಬಹಳ; ಅಲ್ಲದೆ, ಅವುಗಳನ್ನು ಸೂಚಿಸಿದವರ ಪಾಂಡಿತ್ಯಸಾಹಿತ್ಯ ಜ್ಞಾನಗಳ ಬಗೆಗೆ ಸಂದೇಹವೂ ಉಂಟಾಗಿದೆ. ಊಹೆಯಿಂದ ಮಾಡಿದ ಪಾಠಸಂಸ್ಕರಣ ಪ್ರತಿಭಾಜನ್ಯವಾಗಿದ್ದರೆ ಸರಿ, ಇಲ್ಲವಾದರೆ ಅತ್ಯಂತ ಅನರ್ಥಕಾರಕ್ವೆಂಬ ತತ್ತ್ವವನ್ನು ಅಂಗೀಕರಿಸಿಯೆ ನಾವು ಅನಿವಾರ್ಯವೆಂದೆನಿಸಿದ ಕೆಲವು ಸಂದರ್ಭಗಳಲ್ಲಿ ಮಾತ್ರ ಈ ಬಗೆಯ ತಿದ್ದುಪಾಟುಗಳನ್ನು ಕೈಕೊಂಡಿದ್ದೇವೆ. ಅಂತಹವುಗಳನ್ನು [ ] ಈ ಕಂಸಗಳಲ್ಲಿ ಮುದ್ರಿಸಿದ್ದೇವೆ. ಅವುಗಳ ಯುಕ್ತಾಯುಕ್ತತೆಯನ್ನು ಸಹೃದಯರಾದ ವಾಚಕರೆ ಕಂಡುಕೊಳ್ಳಬೇಕು. ಒಂದೆರಡು ಕಡೆ ನಾವು ಉಳಿಸಿಕೊಂಡ ಪಾಠ ನಮ್ಮ ದೃಷ್ಟಿಯಿಂದ ಅಷ್ಟು ಸಮರ್ಪಕವಲ್ಲವೆಂದೆನಿಸಿದರೂ ಅವನ್ನು ತಿದ್ದುವ ಗೊಡೆವೆಗೆ ನಾವು ಹೋಗಿರುವುದಿಲ್ಲ. ಉದಾಹರಣೆಗಾಗಿ, ಬಸವಣ್ಣನವರ ವಚನವಾದ

ಹೊನ್ನ ಹಾವುಗೆಯ ಮೆಟ್ಟಿದವನ, ಮಿಡಿಮುಟ್ಟಿದ ಕಂಜಿಡೆಯವನ;
ಮೈಯಲ್ಲಿ ವಿಭೂತಿಯ ಧರಿಸಿದವನ,
ಕರದಲ್ಲಿ ಕಪಾಲವ ಪಿಡಿದವನ,
ಅರ್ಧನಾರಿಯಾದವನ, ಬಾಣನ ಬಾಗಿಲ ಕಾಯ್ದವನ;
ಸಂಬಿಗೆ ಕುಂಟಣಿಯಾದವನ;

ಜೋಳಂಗೆ ಹೊನ್ನ ಮಳೆಯ ಕರೆವವನ,
ಎನ್ನ ಮನಕ್ಕೆ ಬಂದವನ, ಸದ್ಭಕ್ತರ ಹೃದಯಮಲ್ಲಿಪ್ಪವನ;
ಮಾಡಿದ ಪೂಜೆಯಲೊಪ್ಪವನ,
ಕೂಡಲ ಸಂಗಯ್ಯನೆಂಬವನ ! (೫೭೧ ‡)

ಎಂಬುದರಲ್ಲಿ 'ಮೆಚ್ಚಿದವನ, ಧರಿಸಿದವನ, ಕಾಯ್ದವನ, ಸಂಗಯ್ಯನೆಂಬವನ' ಮುಂತಾದ ರೂಪಗಳಲ್ಲಿ ದ್ವಿತೀಯಾ ವಿಭಕ್ತಿಯಲ್ಲಿರುವುದೆಂದೇ ಸಕ್ಕದ್ದರ್ಶನಕ್ಕೆ ಹೊಳೆಯುವುದು. ಆ ದೃಷ್ಟಿಯಿಂದ ವಿಚಾರಿಸಿದಾಗ ಈ ವಚನದಲ್ಲಿ ಕ್ರಿಯಾಪದವೆ ಇಲ್ಲವೆಂದೂ ಈ ವಚನವೆ ಅಪೂರ್ಣವಾಗಿರುವುದೆಂದೂ ಭಾಸವಾಗದಿರದು. ಅಂತೆಯೆ ಕರ್ನಾಟಕಕವಿಚರಿತೆಯ ೧ನೆಯ ಭಾಗದಲ್ಲಿಂ ಈ ವಚನವನ್ನು ಉದಾಹರಿಸಿರುವುದನ್ನು ನೋಡಿದರೆ ಅಲ್ಲಿ 'ಕೂಡಲ ಸಂಗಯ್ಯನೆಂಬವನ' ಎಂಬ ಕೊನೆಯ ಶಬ್ದಗಳ ಪೂರ್ವದಲ್ಲಿ 'ಕೊಂಡು ಬಾರೆಲವ್ವಾ' ಎಂಬ ಶಬ್ದಗಳು ಬೆಚ್ಚಾಗಿದ್ದುದು ಕಂಡು ಬರುವುದು. ಆದರೆ ತಾಳೆಪೋಲೆಯ ಪ್ರತಿಗಳಲ್ಲಿ ಯಾವುದರಲ್ಲಿಯೂ ಈ ಶಬ್ದಗಳಿಲ್ಲದಿರುವುದರಿಂದ ಅರ್ಥಕ್ಕೆ ಅನುಕೂಲವಾಗಲೆಂದು ಬಂದಣಿಂದ ಯಾರೋ ಸೇರಿಸಬೇಕೆಂದು ಊಹಿಸಿದರೆ ತಪ್ಪಾಗಲಿಕ್ಕಿಲ್ಲ. ನಮ್ಮ ವಿಚಾರದಲ್ಲಿ ದ್ವಿತಿಯಾ ವಿಭಕ್ತಿಯಂತೆ ಕಾಣುವ ರೂಪಗಳು ನಿಜವಾಗಿಯೂ 'ಮೆಟ್ಟಿದವನೆ, ಧರಿಸಿದವನೆ' ಎಂದು ಮುಂತಾಗಿ ಅವಧಾರಣೆಯ ಏಕಾರಗಳನ್ನೊಳಗೊಂಡ ಪ್ರಥಮಾ ವಿಭಕ್ತಿಗಳೆಂದೆ ತೋರುವುವು. ಹಳಗನ್ನಡದ ಕೈಬರಹದ ಪ್ರತಿಗಳಲ್ಲಿ ಏಕಾರಾಂತವನ್ನು ಅಕಾರಾಂತವಾಗಿಯೆ ಬರೆಯುವ ರೂಢಿ ಹೆಚ್ಚಾಗಿದ್ದಿತು. ಅವುಗಳಲ್ಲಿ 'ಕರೆದ, ಬರೆದ' ಮುಂತಾದುವುಗಳನ್ನು 'ಕರದ, ಬರದ' ಎಂದೇ ಬರೆದುದು ಸಾಮಾನ್ಯವಾಗಿ ಕಂಡು ಬರುತ್ತಿದೆ. ಅಲ್ಲದೆ, 'ಅವನೇ ಬಂದನೆಂ'ಬುದನ್ನು ಮಾತಿನಲ್ಲಿ 'ಅವನಕ ಬಂದನೆ'ಂದು ಉಚ್ಚರಿಸುವುದೂ ವಾಡಿಕೆಯಾಗಿದೆ. ಆದುದರಿಂದ 'ಹೊನ್ನ ಹೂವುಗೆಮೆಟ್ಟಿದವ.....ಕಳಿಶಿದವನ' ಎಂದು ಮುಂತಾಗಿ ಪುರಾಣಗಳಲ್ಲಿ ವರ್ಣಿತನಾದ ಶಿವನೂ 'ನನ್ನಮನಕ್ಕೆ ಬಂದ ಕೂಡಲ ಸಂಗಯ್ಯನೂ

‡ ಇದು ಈ ಸಂಸ್ಕರಣದಲ್ಲಿಯ ವಚನ ಸಂಖ್ಯೆ. ಹೀಗೆ ಮುಂದೆಯೂ ತಿಳಿದುಕೊಳ್ಳತಕ್ಕದ್ದು.

ಒಬ್ಬನೆ' ಎಂದು ಶಿವನಿಗೂ ಕೂಡಲ ಸಂಗಮದೇವನಿಗೂ ತಾದಾತ್ಮ್ಯವನ್ನು ಕಲ್ಪಿಸಿದ ವಚನವಿದೆಂದು ನನ್ನ ಮನವರಿಕೆ. ಹೀಗಿದ್ದರೂ, ಭಿನ್ನಾಭಿಪ್ರಾಯವಾಗಲು ಅವಕಾಶವಿದೆಯೆಂದು ತಿಳಿದು ನಾವು ಈ ವಚನವನ್ನು ಆ ರೀತಿ ತಿದ್ದದೆ ಹಾಗೇ ಬಿಟ್ಟಿದ್ದೇವೆ.

ಕೈಬರೆಹದಲ್ಲಿ ಆಗುವ ಸ್ವರಪಲ್ಲಟದಿಂದ ಸಂದಿಗ್ಧತೆ ಹೀಗೆ ಉಂಟಾಗುವುದೆಂಬುವುದಕ್ಕೂ ಊಹೆಯಿಂದ ಮಾಡಿದ ಪಾಠಸುಧಾರಣೆ ಒಮ್ಮೊಮ್ಮೆ ಸರಿಯಾಗಲಾರದೆಂಬುವುದಕ್ಕೂ ಒಂದು ಉದಾಹರಣೆಯನ್ನು ಕೊಡುವುದು ಉಚಿತವೆಂದು ತೋರುತ್ತಿದೆ:

ಲಿಂಗಜಂಗಮ ಒಂದೆ ಎಂದು ನಂಬಿದ ಬಳಿಕ
ಅಪರಂಗನೆಯರು ಲಿಂಗದ ರಾಣಿವಾಸ;
ಅಲ್ಲಿಯೂ ಪೋಳ, ಇಲ್ಲಿಯೂ ಪೋಳ,
ಚೌಡೇಶ್ವರಿಯಲ್ಲಿಯೂ ಪೋಳ !
ಮೊಲೆಯಂಬ ಭಾವ ತಪ್ಪಿ ಅಪ್ಪುವನರ
ತಲೆಯ ಕೊಂಬ ಕೂಡಲ ಸಂಗಮದೇವ. (೬೫೯)

ಈ ವಚನದಲ್ಲಿ ಗೆರೆಹಾಕಿದ ಭಾಗ ತಾಳಪ್ಪೋಲೆಯ ಪ್ರತಿಗಳಲ್ಲಿದ್ದಂತೆ ಇಲ್ಲಿ ಕೊಟ್ಟಿದೆ. 'ಮೊಲೆಯಂಬ' ಇದನ್ನು 'ಮೆಲೆಯೆಂಬ' ಎಂದು ತಿಳಿಯುವುದು ಸ್ವಾಭಾವಿಕವೆ ಆಗಿದೆ. ಆದರೆ 'ಮೊಲೆ' ಎಂಬುದ ಮಾತೆಯ ಚಿಹ್ನವಾದಂತೆ ಕಾಂತೆಯಲಕ್ಷಣವೂ ಆಗಬಹುದಾಗಿದೆ- ಇಲ್ಲಿ 'ಮಾತೆ' ಎಂಬ ಭಾವನೆಯ ಆವಶ್ಯಕವೆಂದು ಯಾರಿಗಾದರೂ ತೋರಬಹುದಾದರಿಂದ ಈ ಭಾಗವನ್ನು ಶ್ರೀ ಪಳಕಟ್ಟಿಯವರ ಸಂಸ್ಕರಣದಲ್ಲಿ ೧೧ 'ಮಾತೆಯೆಂಬ' ಎಂದು ಮುದ್ರಿತವಾದುದು ಸರಿಯೆಂದೆ ಹೇಳಬಹುದು. ನಾವಾದರೂ ಈ ಸಂಸ್ಕರಣದ ಮೂಲದಲ್ಲಿ ಅದನ್ನೆ ಇಟ್ಟುಕೊಂಡು ಇದು ಊಹೆಯ ಸುಧಾರಣೆಯೆಂದು ತೋರಿಸಲು[ ]ಈ ಕಂಸಗಳನ್ನು ಬಳಸಿದ್ದೆವು. ಆದರೆ ಈ ವಚನದಲ್ಲಿ ಮುಂದಿನ ಸಾಲಿನಲ್ಲಿ ಬರುವ 'ತಲೆಯ ಕೊಂಬ' ಎಂಬುದನ್ನು ನೋಡಿದರೆ ಅದಕ್ಕೆ ಅನುಪ್ರಾಸವಾಗುವ 'ಮೊಲೆಯಂಬ' ಎಂಬುದು ಮೂಲಪಾಠಕ್ಕೆ ಹೆಚ್ಚು ಸಮೀಪವರ್ತಿಯಾಗಿರಬೇಕೆಂದು ನಮಗೆ ತೋರಿ,

ತಾಳೆವೋಲೆಯ ಪ್ರತಿಗಳನ್ನೆಲ್ಲ ಇನ್ನೊಂದಕ್ಕೆ ಸರಿಹಚ್ಚುವ ಕಾರ್ಯವನ್ನು ಕೈಕೊಂಡೆವು. ಆಗ ಒಂದು ಪ್ರತಿಯಲ್ಲಿ ಮಾತ್ರ 'ಮೊಲೆಯುಂಬ' ಎಂಬ ಪಾಠ ದೊರಕಿತು. ಈ ರೂಪವೆ ಸಮರ್ಪಕ ಎಂದು ನಮಗೆ ತೋರಿದ್ದರಿಂದ ಈ ಸಂಸ್ಕರಣದಲ್ಲಿ ಅದನ್ನು ಶುದ್ಧಾಶುದ್ಧಪತ್ರಿಕೆಯಲ್ಲಿ ಕೊಟ್ಟಿದ್ದೇವೆ.

ಬಸವಣ್ಣನವರ ಕಾಲದಲ್ಲಿಯೆ ಹಳಗನ್ನಡ ನಡುಗನ್ನಡಕ್ಕೆ ತಿರುಗುತ್ತಿದ್ದಿತೆನ್ನಲು ಬಲವಾದ ಆಧಾರಗಳು ಅನೇಕ ದೊರೆಯುವುವು. ಆ ಕಾರಣಕ್ಕಾಗಿಯೆ ಅವರ ವಚನಗಳಲ್ಲಿ ಹಳಗನ್ನಡದ ರೂಪಗಳೊಡನೆ ನಡುಗನ್ನಡದ ರೂಪಗಳನ್ನೂ ಕಾಣಬಹುದು. ಎರಡನೆಯದಾಗಿ, ವಚನಗಳ ಕೈಬರೆಹದ ಪ್ರತಿಗಳಲ್ಲಿ ಒಂದೇ ಶಬ್ದದ ಬೇರೆ ಬೇರೆ ರೂಪಗಳು ಬೇರೆ ಬೇರೆ ಪ್ರತಿಗಳಲ್ಲಾಗಲಿ, ಒಂದೇ ಪ್ರತಿಯಲ್ಲಿ ಬೇರೆ ಬೇರೆ ಕಡೆಗಳಲ್ಲಾಗಲಿ ಕಾಣಬರುವುವು. ಇಂತಹ ಸಂದರ್ಭಗಳಲ್ಲೆಲ್ಲ ವಚನಕಾರರು ಬಳಸಿದ ಮೂಲರೂಪ ಇದೇ ಎಂದು ನಿರ್ಧಾರವಾಗಿ ಹೇಳುವುದು ಅಸಾಧ್ಯವೇ ಸರಿ. ಆದುದರಿಂದ ಅಂತಹ ಬೇರೆ ಬೇರೆ ರೂಪಗಳನ್ನು ನಮ್ಮೀ ಸಂಸ್ಕರಣದಲ್ಲಿ ಅಲ್ಲಲ್ಲಿ ಉಪಯೋಗಿಸಿಕೊಂಡಿದ್ದೇವೆ. ಆ ಬಗೆಯ ಪ್ರಯೋಗಗಳ ಮತ್ತು ಶಬ್ದರೂಪಗಳ ಮಾದರಿಪಟ್ಟಿಯೊಂದನ್ನು ಓದುಗರ ಅವಗಾಹನೆಗಾಗಿ ಇದರಡಿ ಕೊಟ್ಟಿದ್ದೇವೆ:

(೧) ವ್ಯಾಕರಣ ಪ್ರಯೋಗಗಳು:

ಬಯಸು–ಬಯಿಸು–ಬೈಸು–ಬೈಜು; ಬಸ್ಮವು–ಬಹ್ಮದು–ಬಹುದು–ಬಾಹುದು; (ನೀನ್) ಬಂದೆಯ್–ಬಂದೆ; (ನಾನ್) ಬಂದೆನ್–ಬಂದೆ–ಬಂದೆನು; ನಿಂದೊಡೆ–ನಿಂದಡೆ ನಿಂದರೆ; ನೆನೆಯುತ್ತ–ನೆನೆವುತ್ತ; ಹಲು ದೋರೆ–ಹಲು ದೋರ; ಮೆಲು–ಮೆಲ್ಲು; ನಿಲ್ದ–ನಿಂದ; ಕಾಣ್ಬ–ಕಾಂಬ–ಕಾಬ–ಕಾಣುವ; ಕೆನ್ನೆವಾರಿ–ಕೆನ್ನೆಯಾರೆ; ಅರಿದು–ಅರಿತು; ಸನೆಯೆ–ಸನೆಯಲು–ಸನೆಯ; ಕಾಣು–ಕಾಣಾ–ಕಾಣ; ಕಂಡಾ–ಕಂಡೆಯಾ; ಬಹೆ–ಬಾಹೆ; ಕೂಪ–ಕೂರ್ಪ;

ಆನ್–ಆನು–ಆ; ನೀನ್–ನೀನು–ನೀ; ಮನ–ಮನವು; ತನು–ತನುವು; ಮಾಡುವ–ಮಾಡುವವ; ಎನ್ನ–ಎನ್ನಾ; ಎಲ್ಲ–ಎಲ್ಲಾ.

(೨) ಸಂಧಿಯನ್ನು ಮಾಡುವ ಅಥವಾ ಬಿಡುವ ಐಚ್ಛಿಕಕ್ಕೆ:

ತನುವ ಬಂದಲೆವರಯ್ಯಾ–ತನುವ ಬಂದು ಅಲೆವರು ಅಯ್ಯಾ; ಜಂಗವು ಅನವರತ-ಜಂಗಮವನವರತ; ಸತ್ಯಸಿದ್ಧೋಪದೇಶ–ಸತ್ಯಸಿದ್ಧ-ಉಪದೇಶ.

(೩) ಶಬ್ದಗಳ ಬೇರೆ ಬೇರೆ ರೂಪಗಳು:

ಸೊರೆ–ಸೋರೆ	ಬೊ–ಭೋ
ಮಾವರ–ಮಾದಾರ	ಕೊನೆ–ಗೊನೆ
ತಂಬುಲ–ತಾಂಬೂಲ	ಒಕತನ–ಒಗತನ
ಕಿಂಕಲ–ಕಿಂಕಿಲ	ನೇಮ–ನೇಮ
ಪ್ರಮಾಣ–ಪ್ರಮಾಣು	ಶ್ರವು–ಶ್ರವ
ಡಂಬ-ಡಂಬು-ಡಂಭ	ಶೂಲ-ಸೂಲ
ಮುಕುಟ-ಮುಕುಟ	ಪಶು–ಪಸು-ಹಸು
ನಡು-ನೆಡು	ರಾವಣ ರಾವಳ
ಮುಚ್ಚು-ಮೆಚ್ಚು	ನಾರಿವಾಣ-ನಾರಿವಾಳ
ಪೊಡ-ಪೊಡೆ	ಕಬ್ಬುನ-ಕಬ್ಬುಣ
ಮೆಯ್-ಮೈ	ಸೊಣಕ–ಸೊಣಗ
ಕ್ರಿ-ಕ್ರೀ-ಕ್ರಿಯೆ	ರೂಪು-ರೂಪು–ರೂಪ
ಪುತ್ಥಳಿ–ಪುತ್ತಳಿ	ಪಂಜರ-ಪಂಜರ
ಟಾವು–ಠಾವು	ಒಪ್ಪಚಿ–ಒಪ್ಪಚ್ಚಿ
ಸಯಿಧಾನ— ಸುಯಿಧಾನ	ಸ್ವಯ— ಸಯ

ಆದರೆ ಕೆಲವು ಕಡೆಗಳಲ್ಲಿ ರೂಪವ್ಯತ್ಯಾಸದೊಡನೆ ಅರ್ಥವ್ಯತ್ಯಾಸವೂ ಆಗುವುದೆಂದು ತೋರಿದಲ್ಲಿ ಸಂದರ್ಭಕ್ಕನುಸಾರವಾದ ರೂಪಗಳನ್ನೆ ಇಟ್ಟುಕೊಂಡಿದ್ದೇವೆ. ಅಂತಹ ಕೆಲವು ಉದಾಹರಣೆಗಳನ್ನೂ ಇದರಡಿ ಕೊಟ್ಟಿದ್ದೇವೆ:

('ಕೊಳ' ಎಂಬುದಕ್ಕೆ ಪ್ರತಿಯಾಗಿ) 'ಕೋಳ' (ವಚನ ೫೧೬) ; ('ಒಲೆ' ಎಂಬುದಕ್ಕೆ ಪ್ರತಿಯಾಗಿ (ಓಲೆ) ೨೯೬ ; ('ನೋರೆ' ಎಂಬುದರ ಬದಲು) ಮೋಱೆತೆ (೫೦೨ ; ('ಬರ' ಎಂಬುದಕ್ಕೆ ಬದಲು) 'ಭರ' (೧೨೫ ; ಸಂಚ ೬೩೪ ; ಸಂಚು (೫೧೨) ಕಿಂಕರ (೪೬೫) ; ಕಿಂಕಿಲ ೪೬೫ (೫೨೨)

ಒಂದೊಂದು ಕಡೆ ತಾಳೆವ್ಯೋಲೆಯ ಪ್ರತಿಗಳಲ್ಲಿ ಕಂಡುಬರುವ ಶಬ್ದರೂಪಗಳು ತಪ್ಪಾಗಿರಬೇಕೆಂದು ತೋರಿದರೂ ಅಂತಹ ಅಪರೂಪಗಳೆ ಬಹುಕಾಲ ಬಳಕೆಯಲ್ಲಿರುವುದು ಸಂಭವನೀಯವಾದುದರಿಂದ, ಅವುಗಳ ಪ್ರತಿಯಾಗಿ ಬಹುರೂಪಗಳನ್ನು ಮೂಲದಲ್ಲಿ ಬಳಸುವುದು ಅಷ್ಟು ಪ್ರಶಸ್ತವಲ್ಲವೆಂದು ನನಗೆ ತೋರಿದೆ. ಅಲ್ಲದೆ ಅಂತಹ ಅಪರೂಪಗಳನ್ನೆ ಮುಂದಿನ ಬೇರೆ ಗ್ರಂಥಕಾರರು ಪ್ರಯೋಗಿಸಿರುವುದೂ ಸಾಧ್ಯವಿರುವುದರಿಂದ ಅವುಗಳ ಅರ್ಥವನ್ನು ತಿಳಿದುಕೊಳ್ಳಲು ಈ ಅಪರೂಪಗಳು ಸಾಹಾಯಕವಾಗುತ್ತಿವೆಯೆಂದೆ ನಮ್ಮ ಗ್ರಹಿಕೆ. ಉದಾಹರಣೆಗಾಗಿ:

ಪೋಗಬಿಟ್ಟು. ಮುರಳಿ ಒಂದೆ ನೋಡಿ,:ಮುತ್ತಾಗಬೇಕೆಂಬ ಸಂದೇಹವುಳ್ಳನ್ನಕ್ಕ, ಅವೆ ಪರದಾರ, ನಾಯಕ ನರಕ ತಪ್ಪದು. ಅನ್ಯವಧುವೆಂಬುದು ನಿಮ್ಮ ರಾಮಕಾನ ಇದೇ ದಿವ್ಯ ಕೂಡಲ ಸಂಗಮದೇವ (೭೫೫)

ಈ ವಚನವನ್ನು ಶ್ರೀ. ಫ. ಗು. ಹಳಕಟ್ಟಿಯವರಿಂದ ಸಂಪಾದಿತವಾದ ಬಸವಣ್ಣನವರ ವಚನಗಳು ಮೂರನೆಯ ಸಂಸ್ಕರಣದಲ್ಲಿದ್ದಂತೆಗೆ ಇಲ್ಲಿ ಕೊಟ್ಟಿದ್ದೇವೆ. ಇಲ್ಲಿ ಬಂದಿರುವ 'ಪರದಾರ' ಎಂಬ ಶಬ್ದವು ತಾಳೆವ್ಯೋಲೆಯ ಪ್ರತಿಗಳಲ್ಲಿಲ್ಲ. ಅಲ್ಲಿ ದೊರೆಯುವುದು 'ಪಾರದ್ವಾರ'ವೆಂಬ ಶಬ್ದ. ಈ ಶಬ್ದವು ಸಂದರ್ಭಕ್ಕೆ ಉಚಿತವಾದ ಅರ್ಥವನ್ನು ಕೊಡುವುದಿಲ್ಲೆಂಬ ಅಭಿಪ್ರಾಯದಿಂದ 'ಪರದಾರ' ಎಂಬ ಶಬ್ದವನ್ನು ಯಾರೋ ಇತರ ಪ್ರತಿಕಾರರು ಪ್ರಯೋಗಿಸಿದ್ದಾರೆಂದು ಊಹಿಸಬಹುದು. 'ಪರದಾರ ಎಂಬುದು 'ಪರದಾರಗಮನ ಪಾತಕ' ಎಂಬ ಅರ್ಥದಲ್ಲಿ ಪ್ರಯೋಗವಾದಂತೆ ತೋರುತ್ತಿದೆ. ಆದರೆ ಈ ಅರ್ಥಕೋಶದಲ್ಲಿ ದೊರೆಯುವುದಿಲ್ಲ; ಅದಕ್ಕೆ 'ಪಾರದಾರ್ಯ' ಎಂಬ ಬೇರೊಂದು ಶಬ್ದವೆ ಇದ್ದುದು ಕಂಡುಬರುತ್ತಿದೆ[೩]. ಈ 'ಪರದಾರ್ಯ'ವೇ ಕನ್ನಡಿಗರಕೈಬರೆಹದಲ್ಲಿ ಬರಬರುತ್ತ 'ಪಾರದ್ವಾರ'ವಾಗಿರಬೇಕೆಂದು ನಮಗೆ ತೋರುತ್ತಿದೆ. ಆದರೆ ಈ ಅಪರೂಪ ಬಹುಕಾಲ ಬಳಕೆಯಲ್ಲಿದ್ದಿರಬೇಕು. ಏಕೆಂದರೆ, 'ಪರದಾರಗಮನ ಪಾತಕವನ್ನು ಮಾಡಿದವ' (ಎಂದರೆ 'ಪರದಾರಿ' ಅಥವಾ 'ಪರದಾರಿಕ')

ಎಂಬ ಅರ್ಥದಲ್ಲಿ 'ಪಾರದ್ವಾರಿ' ಎಂಬ ರೂಪ ಸಿಂಗರಾಜಪುರಾಣದ ಕೆಳಗಣ ಪದ್ಯದಲ್ಲಿಗಳ ದೊರೆಕುತ್ತಿದೆ:

ಸೂನೆಗ್ಯಾಱಿ ಕುಲಾಲ ವೇಶಿ ಚಕ್ಕೀಶ ಮುಖ
ಪಾನಿ ಪಾರದ್ವಾರಿ ತಿಲಘಾತಕಂ ಏನುಣ
ಹೀನಗುಲ ಸದ್ಬ್ರಾಹ್ಮಪತ್ಯಸೊಳಗಾದ ಬಲು
ಘೋರತರ ನಿರಯಾತ್ಮರು
ಮೇನಕಾತ್ಮಜಿಯರಸನಂ ಸ್ಮರಿಸಿ ಪೂಜಿಸಲು
ಹೀನತರಪತಿಪಾಪವೆಲ್ಲ ಲಯವಾಗಿ ಸೌ
ಖ್ಯಾನುಭವ ಸುಕೃತಾತ್ಮರಪರಿಂಬ ತಚ್ಛ್ರುತಿಗ
ಳಂ ಕೇಳು ನರಪಾಲಕಾ

ಆದುದರಿಂದ ಈ ಸಂಸ್ಕರಣದಲ್ಲಿ ಮೇಲ್ಕಂಡ ವಚನದಲ್ಲಿ 'ಪಾರದ್ವಾರ ಎಂಬ ರೂಪವನ್ನೆ ಉಳಿಸಿಕೊಂಡಿದ್ದೇವೆ ಕೋರದಲ್ಲಿ ಅದರ ಪುದ್ಧರೂಪವನ್ನು ಸೂಚಿಸಿದ್ದೇವೆ. ಹೀಗೆಯೆ, ಇದೆ ತತ್ತ್ವವನ್ನನುಸರಿಸಿಯೆ, 'ಪುರಾತನ' ಎಂಬುದಕ್ಕೆ ಪ್ರತಿಯಾಗಿ 'ಪುರಾತ' ಎಂಬ 'ಕುಂಭೀಪಾಕ' ಎಂಬುದಕ್ಕೆ ಪ್ರತಿಯಾಗಿ 'ಕುಂಭಿಪಾತಕ' ಎಂಬ ಅಪರೂಪಗಳನ್ನೆ—ಅನ್ಯತ್ರ ಈ ರೂಪಗಳು ಸಿಕ್ಕುವುದರಿಂದ—ಹಾಗೆಯೆ ಉಳಿಸಿಕೊಂಡಿದ್ದೇವೆ.

೩

ಅನೇಕ ವಚನಗಳಲ್ಲಿ ಈಗ ಬಳಕೆಯಲ್ಲಿರುವ ಪಾಠಗಳಿಗೆ ವ್ಯತಿರಿಕ್ತವಾಗಿ ಸರಿಯಾದ ಅರ್ಥವತ್ತಾದ ಪಾಠಗಳನ್ನು ನಮ್ಮೀ ಸಂಸ್ಕರಣದಲ್ಲಿ ಅಂಗೀಕರಿಸಲು ನಮ್ಮ ಸಂಗ್ರಹದಲ್ಲಿವ್ವ ಹಲವು ತಾಳೆಪ್ರೋಲೆಯ ಮಾತೃಕೆಗಳು ಸಾಹಾಯಕವಾಗಿವೆ, ಆಧಾರವಾಗಿವೆ. ಇದರಿಂದಾಗಿ ಎಷ್ಟೋ ವಚನಗಳ ಅರ್ಥದಲ್ಲಿ ಮತ್ತು ಆಶಯದಲ್ಲಿ ಮಹತ್ವದ ಮಾರ್ಪಾಟುಗಳಾಗಿವೆಯೆಂದು ಓದುಗರಿಗೆ ತೋರದಿರದು. ಕೇವಲ ದಿಗ್ದರ್ಶನಕ್ಕೆಂದು ಒಂದೆರಡು ಉದಾಹರಣೆಗಳನ್ನು ಇದರಡಿ ಕೊಡುತ್ತೇವೆ. ಈಗ ಪ್ರಸಾರದಲ್ಲಿರುವ ಬಸವಣ್ಣನವರ ವಚನಗಳ ಮುದ್ರಿತ ಪ್ರತಿಗಳಲ್ಲಿ ಒಂದು ವಚನ ಕೆಳಗಿನಂತೆಗಳ ಮುದ್ರಿತವಾಗಿದೆ:

(೧) **ಒಲವಿಲ್ಲದ ಪೂಜೆ, ನೇಹವಿಲ್ಲದ ಮಾಟ, ಆ ಪೂಜೆಯು ಆ ಮಾಟವು ಚಿತ್ರದ ರೂಹು ಕಾಣಿರಣ್ಣ. ಚಿತ್ರದ ಕಬ್ಬು ಕಾಣಿರಣ್ಣಾ. ಅಪ್ಪಿದರೆ ಸುಖವಿಲ್ಲ ಮೆಲಿದರೆ ರುಚಿ ಇಲ್ಲ. ಕೂಡಲ ಸಂಗಮದೇವ ನಿಜವಿಲ್ಲದವನ ಭಕ್ತಿ.**

ಈ ವಚನವನ್ನು ಅರ್ಥವಿಸಹೋದಲ್ಲಿ, 'ಅಪ್ಪಿದರೆ ಸುಖವಿಲ್ಲ'ವೆಂಬ ಮಾತು 'ಚಿತ್ರದ ರೂಹನ್ನು' ಅನ್ವಯಿಸುವುದೆಂದು ತಿಳಿದುಕೊಳ್ಳುವುದು ಸುಲಭವಾಗುವುದೆಂದು ನೆನೆದರೂ 'ಮೆಲಿದರೆ ರುಚಿಯಿಲ್ಲ' ಎಂಬುದು ಯಾವುದನ್ನು ಕುರಿತು ಹೇಳಿದೆ ಎಂಬುದು ಸಮಸ್ಯೆಯಾಗಿಯೆ ಉಳಿಯುತ್ತಿದೆ.—'ರೂಹ'ನ್ನಾಗಲಿ ರಬ್ಬ'ನ್ನಾಗಲಿ ಮೆಲುವುದು ಅಸಮಂಜಸವಾದುದರಿಂದ, ವಚನಕಾರರೆ ಹೀಗೆ ಬರೆದಿದ್ದರೆ, ಉಪಾಯವಿಲ್ಲದೆ ಏನಾದರೂ ಅರ್ಥ ಹೊರಡಿಸಿ ಸಮಾಧಾನಮಾಡಿಕೊಳ್ಳಬೇಕಾಗುತ್ತಿತ್ತು. ಆದರೆ ಈ ವಚನದಲ್ಲಿ ಬಂದಿರುವ 'ರಬ್ಬು' ಶಬ್ದವು ಬಳಕೆವಾತಿನಲ್ಲಿದೆ; 'ಎದ್ದು ಕಾಣುವುದು, ಸ್ಪುಟವಾದುದು' ಎಂಬ ಅರ್ಥದಲ್ಲಿ ಚಿತ್ರ, ಬಣ್ಣ ಮುತಾದವುಗಳನ್ನು ಕುರಿತು ಹೇಳುವಲ್ಲಿ ಬರುವುದುಂಟು. ಆದರೆ ಈ ಅರ್ಥದಲ್ಲಿಯಾಗಲಿ, ನಾಮಪದವಾಗಿಯಾಗಲಿ ಈ ಶಬ್ದವು ಕನ್ನಡ ನಿಘಂಟುಗಳಲ್ಲಿ ದೊರೆಯದೆ ಇರುವುದರಿಂದ ಇದು ಕನ್ನಡವಲ್ಲವೆಂದೂ ಬಹುತರ ಅನ್ಯದೇಶ್ಯಶಬ್ದವಿರಬೇಕೆಂದೂ ತರ್ಕಿಸಬಹುದಾಗಿದೆ. ಆದುದರಿಂದ ಇಂತಹ ನುಡಿಯನ್ನು ಬಸವಣ್ಣನವರು ಬಳಸಿರಲಾರರೆಂದೆ ಊಹಿಸಬಹುದು. ತಾಳೆವೋಲೆಯ ಮಾತೃಕೆಗಳನ್ನು ನೋಡಲಾಗಿ ಅಲ್ಲಿ ಕಂಡು ಬರುವ ಶಬ್ದ 'ಕಬ್ಬು' ಎಂಬುದು. ಆ ಶಬ್ದವನ್ನಿಟ್ಟುಕೊಂಡು ಈ ವಚನವನ್ನು ಪುನಃ ಸಂಸ್ಕರಿಸಿ ಕೆಳಗಣಂತೆ ಬರೆದರೆ, ಅರ್ಥವು ಎಷ್ಟು ಸುಗಮವಾಗುವುದೆಂಬುದು ತಾನೆ ಗೊತ್ತಾಗುತ್ತಿದೆ:

ಒಲವಿಲ್ಲದ ಪೂಜೆ! ನೇಹವಿಲ್ಲದ ಮಾಟ!!
ಆ ಪೂಜೆಯೂ ಆ ಮಾಟವೂ
ಚಿತ್ರದ ರೂಹು ಕಾಣಿರಣ್ಣಾ! ಚಿತ್ರದ ಕಬ್ಬು ಕಾಣಿರಣ್ಣಾ!!
ಅಪ್ಪಿದರೆ ಸುಖವಿಲ್ಲ! ಮೆಲಿದರೆ ರುಚಿಯಿಲ್ಲ!!
ಕೂಡಲ ಸಂಗಮದೇವಾ, ನಿಜವಿಲ್ಲದವನ ಭಕ್ತಿ!! (೧೨೬)

ಈಗ 'ಚಿತ್ರದ ರೂಹು—ಅಪ್ಪಿದರೆ ಸುಖವಿಲ್ಲ, ಚಿತ್ರದ ಕಬ್ಬು ಮೆಲಿದರೆ ರುಚಿಯಿಲ್ಲ' ಎಂದು ಬಹುಸ್ವಾರಸ್ಯವಾದ ಅರ್ಥ ಹೊರಡಿತ್ತೆಂಬುದು ವಾಚಕರಿಗೆ ಸಹಜವಾಗಿಯೆ ಗೊತ್ತಾಗುವಂತಿದೆ.

ಹೀಗೆ ಕಣ್ಣುತಪ್ಪಿನಿಂದಾಗಲಿ, ಮೂಲಪ್ರತಿಗಳ ಕೊರತೆಯಿಂದಾಗಲಿ ಈಗಾಗಲೆ ಬಳಕೆಯಲ್ಲಿ ಬಂದಿರುವ ಅನೇಕ ಅಪಪಾಠಗಳನ್ನು ಈ ಸಂಸ್ಕರಣದಲ್ಲಿ ಸರಿಯಾಗಿ ತಿದ್ದಿದ್ದೇವೆ. ಅಂತಹವುಗಳಲ್ಲಿ ಈ ಕೆಳಗೆ ಕಾಣಿಸಿದುವು ಕೆಲವು ಮಾತ್ರ:

ಮೊದಲು ಬಳಕೆಯಲ್ಲಿದ್ದ ಪಾಠ	ಈ ಸಂಸ್ಕರಣದಲ್ಲಿಯ ವಚನ ಸಂಖ್ಯೆ	ಈ ಸಂಸ್ಕರಣದಲ್ಲಿ ಅಂಗೀಕೃತವಾದ ಪಾಠ
ಸಿಂಗರದ ಗಾತ್ರ	೪೨	ಸಿಂಗದ ಗಾತ್ರ
ಅಂಗ ಸಂಗಿ	೧೫೫	ಅನಂಗಸಂಗಿ
ಕುಧರ—ಕುಪರ	೨೬೦	ಕುಮುರು
ಅರುಚಿಯುಂಟೆ	೨೮೫	ಅಸುರುಚಿಯುಂಟಿ
ಮಳಲೊಟ್ಟೆ	೩೦೭	ಬಳಲೊಟ್ಟೆ
ಕಾಗೆ ವೃಷ್ಟಿಸುವ	೩೬೧	ಕಾಗೆ ವಿಷ್ಟಿಸುವ
ಭೋಜದೇವ ಬಲ್ಲಾಳು	೩೭೨	ಭೋಜ ದೇವಲಾಳು
ಅಷ್ಟಕೋಟಿ ರೋಮಂಗಳು	೪೯೦	ಅವುಟುಕೋಟಿ ರೋಮಂಗಳು
ಹೋತ ತಂದು	೫೭೫	ಹೊತ್ತು ತಂದು
ಜನ್ಮ	೫೪೧	ಜನ್ನ

(೬) ಈಗ ಪ್ರಚಾರವಾಗಿರುವ ಬಸವಣ್ಣನವರ ವಚನಗಳ ಮುದ್ರಿತ ಪ್ರತಿಯೊಂದರಲ್ಲಿಯೂ ಒಂದು ವಚನ ಕೆಳಗಿನಂತಿದೆ:

ಒಲೆಯ ಬೂದಿಯ ಬಲಿಯಲು ಬೇಡ ಒಲಿದಂತೆ ಹೂಸಿಕೊಂಡಿಪ್ಪುದು ಹುಸಿ ಏನು ಫಲ ಮನದಲ್ಲಿ ಲೇಸಿಲ್ಲದನ್ನಕ್ಕ? ಒಂದನಾಡ ಹೋಗಿ ಒಂಬತ್ತ ನಾಡುವ ಡಂಬಕರ ಮೆಚ್ಚ ಕೂಡಲ ಸಂಗಮದೇವ.

ಇನ್ನೊಂದು ಮುದ್ರಿತ ಪ್ರತಿಯಲ್ಲಿ 'ಬಲಿಯಲು' ಎಂಬುದಕ್ಕೆ ಬದಲಾಗಿ 'ಬರೆಯಲು' ಎಂದಿದೆ; ಉಳಿದುದೆಲ್ಲ ಮೇಲಿನಂತೆಯೆ ಇದೆ. ಇದ್ದ ಹಾಗೆಯೆ ಈ ವಚನದ ಅರ್ಥವನ್ನು ಸಮರ್ಪಕವಾಗಿ ಮಾಡುವುದು ಕಠಿಣವೇ ಸರಿ. ಅಂತೆಯೆ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಪ್ರಕಟಿತವಾದ ''ಕನ್ನಡ ಬಾವುಟ''ದಲ್ಲಿ ಈ ವಚನದ ಮೊದಲಿನ ಭಾಗವನ್ನು ಕೆಳಗೆ ಕಂಡಂತೆ ಸುಧಾರಿಸಿದುದು ಕಂಡುಬರುತ್ತಿದೆ; ಮತ್ತು ಈ ಸುಧಾರಣೆಯನ್ನೆ ಶ್ರೀ ಎಂ. ಆರ್. ಶ್ರೀ ಅವರ ''ವಚನಧರ್ಮಸಾರ"ದಲ್ಲಿಯೂ ಅನುಸರಿಸಲಾಗಿದೆ:

ಒಲೆಯು ಬೂದಿಯು ಬಳಿಯಲು ಬೇಡ, ಒಲೆಯಂತೆ ಹೂಸಿಕೊಂಡಿಪ್ಪುದು ಹುಸಿ .....(ಇತ್ಯಾದಿ)

ಈ ವಚನದಲ್ಲಿ ಕಂಡುಬರುವ 'ಬಲಿಯಲು' ಅಥವಾ 'ಬರೆಯಲು' ಎಂಬ ಮೊದಲೆರಡು ಪಾಠಾಂತರಗಳಿಗೆ ಕೆಲವು ಮಾತೃಕೆಗಳ ಆಧಾರವಿದೆ. ಆದರೆ 'ಕನ್ನಡ ಬಾವುಟ"ದಲ್ಲಿ ಸುಧಾರಣೆಯಾಗಿ ಬಂದಿರುವ 'ಬಳಿಯಲು' ಎಂಬುದಕ್ಕೆ ಮಾತೃಕೆಗಳ ಆಧಾರವೇನೂ ಇಲ್ಲ. ಅರ್ಥದೃಷ್ಟಿಯಿಂದ ಈ ಮೂರರಲ್ಲಿ ಹೆಚ್ಚು ವ್ಯತ್ಯಾಸವಿರುವಂತೆ ತೋರುವುದಿಲ್ಲ. ಆದರೆ 'ಬಳಿಯಲು' ಎಂಬುದರಿಂದ ಅರ್ಥ ಸರಳವಾಗಬಹುದೇನೊ? ಇನ್ನು ''ಕನ್ನಡ ಬಾವುಟ"ದಲ್ಲಿ ತಿದ್ದಿದ ಪಾಠವಾದ 'ಒಲೆಯಂತೆ' ಎಂಬುದಕ್ಕೂ ಯಾವ ಮಾತೃಕೆಯ ಆಧಾರವೂ ಇಲ್ಲ. ಇಷ್ಟಾದರೂ ಒಟ್ಟಿನಲ್ಲಿ ಈ ಅರ್ಥದ ವಚನ ಸುಗಮವಾಗುವುದೆಂದು ನೇಳಲಾಗುವುದಿಲ್ಲ. ಇಂತಹ ಪ್ರಸಂಗಗಳಲ್ಲಿ ಹಲವು (ತಾಳೆವ್ಯೋಲೆಯ) ಮಾತೃಕೆಗಳ ಆಧಾರದಿಂದಲೆ ವಚನಗಳ ಸಂಸ್ಕರಣವನ್ನು ಕೈಕೊಳ್ಳಬೇಕಾದುದು ಅನಿವಾರ್ಯ. ತಾಳೆವ್ಯೋಲೆಗಳ ಆಧಾರದಿಂದಲೆ ಈ ವಚನವನ್ನು ನಾವು ಈ ರೀತಿ ಸಂಸ್ಕರಿಸಿದ್ದೇವೆ:

ಒಲೆಯ ಬೂದಿಯ ಬಿಲಿಯಲು ಬೇಡ:
ಒಲಿದಂತೆ ಹೂಸಿಕೊಂಡಿಪ್ಪುದು.
ಹೂಸಿ ಏನು ಫಲ, ಹುನಡಲ್ಲಿ ಲೇಸಿಲ್ಲದನ್ನಕ್ಕ
ಒಂದನಾಡಹೋಗಿ ಒಂಬತ್ತನಾಡುವ
ಡಂಬಕರ ಮೆಚ್ಚ ಕೂಡಲ ಸಂಗಮದೇವ .

ಶೈವರಿಗೆಲ್ಲ ಮಾನ್ಯವಾದ, ವೀರಶೈವರ ಅಷ್ಟಾವರಣಗಳಲ್ಲಿ ಒಂದಾದ ವಿಭೂತಿಯನ್ನು ಕುರಿತ ವಚನವಿದು. ವಿಭೂತಿಯನ್ನು ಪಟ್ಟೆ ಮಾಡಿ ಉಪಯೋಗಿಸುವ ಕ್ರಮವೊಂದು ಏರ್ಪಟ್ಟಿರುವುದಾದರೂ, ಮೂಲತಃ ಮತ್ತು ತತ್ತ್ವತಃ ಅದು ಬೂದಿಯೆ. ಈ ಸಂಗತಿಯನ್ನು ನೆನಪಿನಲ್ಲಿಟ್ಟು ಕೊಂಡು ಈ ವಚನವನ್ನು ವಿಮರ್ಶಿಸುವುದರಿಂದ ಅರ್ಥ ಈ ರೀತಿಯಾಗಿ ಹೊರಹೊಮ್ಮುತ್ತಿದೆ: "ವಿಭೂತಿಯೇ ಬೇಕೆಂದು ಅದನ್ನು ಪೇಟೆಯಿಂದ ಬಿಲಿತು (=ಕೊಂಡು) ತರುವ ಪ್ರಯಾಸಬೇಡ. ಎಲ್ಲರ ಮನೆಯಲ್ಲಿಯೂ ಒಲೆಯಲ್ಲಿರುವ ಬೂದಿಯೆ ಸಾಕು; ಅದನ್ನೇನು ಕೊಂಡು ತರುವ ಕಾರಣವಿಲ್ಲ. ಮನಸ್ಸಿಗೆ ಬಂದಂತೆ ಹೂಸಿ (=ಪಟ್ಟೆ)ಕೊಳ್ಳಬಹುದು. ಆದರೆ ಮನಸ್ಸು ಪರಿಶುದ್ಧಿಹೊಂದದೆ, ಮೇಲೆ ದೇಹಕ್ಕೆ ಎಷ್ಟು ಪೂಸಿಕೊಂಡರೇನು? ಅದೆಲ್ಲ ವ್ಯರ್ಥ. ಬರಿಯ ಮಾತಿನ ಡಂಭಕರನ್ನು ದೇವರು ಮೆಚ್ಚ; ಅಂತಃಶುದ್ಧಿಯಿದ್ದರೆ ಒಲೆಯ ಬೂದಿಯು ವಿಭೂತಿಯ ಫಲವನ್ನು ಕೊಡುತ್ತಿದೆ"— ಎಂಬುದೆ ಈ ವಚನದಲ್ಲಿ ಬಸವಣ್ಣನವರು ಮಾಡಿದ ಉಪದೇಶ; ಈ ವಚನದಲ್ಲಿ ಬರುವ 'ಬಿಲಿ' (ಎಂದರೆ "ಕೊಂಡುಕೊಳ್ಳು") ಎಂಬ ಶಬ್ದ ಈಗ ಬಳಕೆಯಲ್ಲಿಲ್ಲ; ಬಹುಕಃ ಹಲವು ರತಮಾನಗಳ ಹಿಂದೆಯೆ ಬಳಕೆ ತಪ್ಪಿರಬೇಕು ವಚನಗಳ ಪ್ರತಿ ಮಾಡಿದವರು— ಅರ್ಥತಿಳಿಯದೆಯೊ ಕೈತಪ್ಪಿನಿಂದಲೊ— ಈ ಶಬ್ದವನ್ನು 'ಬಲಿ'ಯೆಂದೊ 'ಬರೆ' ಎಂದೊ ಮಾರ್ಪಡಿಸಿರಬಹುದು. ಆದುದರಿಂದಲೆ ಈಗಿನ ವಾಚಕರಿಗೆ ಅರ್ಥಹತ್ತದೆ ಇನ್ನೂ ಹೆಚ್ಚುಗೊಂದಲವನ್ನು ಉಂಟು ಮಾಡಲು ಕಾರಣವಾಗಿರಬೇಕು. ಇದೆ ಶಬ್ದ ಪ್ರಯೋಗವಾಗಿರುವ ಇನ್ನೊಂದು ಬಸವಣ್ಣನವರ ವಚನದ ಶುದ್ಧಪಾಠ ಕೆಳಗಿನಂತಿದೆ:

ಹೊಲಬುಗೊಂಡಲ್ಲಿಸಜೇಡ, ಬಿಲಿತು ತರಬೇಡ;
ಒಲಿದೊಮ್ಮೆ 'ಶಿವಶರಣ'ನ್ನಿರಯ್ಯಾ!
ಒಂದು ಸೊಲ್ಲಿಂಗೆ ಮುಕ್ತಿ ಸಿದ್ಧಿ
ಕೂಡಲ ಸಂಗಮದೇವ ಭಕ್ತಿಲಂಪಟನಾಗ. (೧೬೦)

ಈ ವಚನವನ್ನು 'ವಚನಶಾಸ್ತ್ರರಹಸ್ಯದಲ್ಲಿ' ಶ್ರೀ ರಂಗನಾಥ ದಿವಾಕರರು ಕೆಳಗಿನಂತೆ ಮುದ್ರಿಸಿದ್ದಾರೆ:

ಹೊಲಬುಗೊಂಡು ಆರಸಬೇಡ. ಬರಿದು ತೆರಬೇಡ. ಒಲಿದರೊಮ್ಮೆ ಶಿವ ಶರಣೆನ್ನಿರಯ್ಯಾ. ಒಂದು ಸೊಲ್ಲಿಂಗೆ ಮುಕ್ತಿ ಸಿದ್ಧ .....

ಇತ್ಯಾದಿ. ಈ ಸುಧಾರಣೆಗೆ ತಾಳೆವ್ರೋಲೆಯ ಪ್ರತಿಗಳ ಆಧಾರವಿಲ್ಲವಾದುದರಿಂದ ಇದು ಕೇವಲ ಊಹೆಯಿಂದಲೆ ಮಾಡಿದುದೆಂದು ಮತ್ತೆ ಹೇಳಬೇಕಾಗಿಲ್ಲ. ಹೀಗೆ ಮೂಲ ಶಬ್ದದ ನಿಜವಾದ ರೂಪ ಇಲ್ಲವೆ ಅರ್ಥ ಸರಿಯಾಗಿ ತಿಳಿಯದ ಕಾರಣಕ್ಕಾಗಿ ಬೇರೆ ಬೇರೆ ಪ್ರತಿಕಾರರು ಅಥವಾ ಸಂಪಾದಕರು ಮಾಡಿದ ಅನೇಕಬಗೆಯ ತಿದ್ದು ಪಾಟುಗಳಿಗೆ ನಿಜವಾಗಿಯೂ ಆಸ್ಪದವಿಲ್ಲವೆಂದು ನಮಗೆ ಕಂಡು ಬಂದಿದೆ. ಅಂತಹ ಸಂದರ್ಭಗಳಲ್ಲಿ ಮೂಲಮಾತೃಕೆಗಳನ್ನು ನೋಡಿ ಸರಿಯಾದ ಪಾಠಗಳನ್ನು ನಿರ್ಧರಿಸಿದ್ದೇವೆ. ಅಂತಹ ಹಲವು ಉದಾಹರಣೆಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಡುತ್ತೇವೆ:

ಬಳಕೆಯಲ್ಲಿದ್ದ ಪಾಠ	ಈ ಸಂಸ್ಕರಣದ ವಚನ ಸಂಖ್ಯೆ	ನಾವು ಅಂಗೀಕರಿಸಿದ ಪಾಠ
ಹಾವ ತಿಂಪವರ	೧೩೨	ಹಾವು ತಿಂಪವರ
ಮುಯ್ಯನಲು	೧೯೮	ಮುಯ್ಯಾನಲು
ನಡೆಯ ಕಂಡು ನಂಬೆ	೨೫೪	ನಡೆಯ ಕಂಡಾ, ನಂಬಿ!
ಕಪಟವೇಷದಿಂದಾಡುವೆ	೩೪೦	ಕಪ್ಪುಡಿ ವೇಷದಿಂದಾನು ಬಂದಾಡುವೆ
ಕಳೆದ ಕೂಲೆಯನೆಮ್ಮಯ್ಯ ಜಾತಿಸೂತಕ (ವ)	೩೪೭	ಕಳೆದ ಹೂಲೆಯನೆಮ್ಮಯ್ಯ ಜಾತಿ ಸೂತಕ!
ವಚದ ಹಾರವ	೪೨೯	ಶ್ವಚದಾಹಾರವ
ಅವನೇವನಾದರೇನು, ಹೇವವಿಲ್ಲದಂಗೈಸಬಹುದೆ?	೪೩೮	ಅವ ನೇನುವಾದರೇನು ಹೇವವಿಲ್ಲದಂಗೈಸಬಹುದೆ?
ಕಿಂಕರನ ಮನೆಯಲ್ಲ ಕಿಂಕರನು ಅನು	೪೬೯	ಕಿಂಕರನ ಮನೆಯಲ್ಲಿ ಕಿಂಕಿಲವನು ಅನುಹಾರುತಿಪ್ಪೆನು

ಕೆನ್ನೆಯಲ್ಲಿ ಕೈವಿಡಿದ	೫೦೪	ಕನ್ನೆಯಲ್ಲಿ ಕೈವಿಡಿದ
ಹೋಮದ ನೇಮದಲ್ಲಿ	೫೭೬	ಹೋಮದ ನೆವದಲ್ಲಿ
ಹವಿಯ ಬೆಳಿದಂತಾಯ್ತು	೫೯೩	ಹವಿಯ ಬೇಳಿದಿಂತಾಯ್ತು
ಜೊಳ್ಳು ಆಳು ನಾನಲ್ಲ ೧೭		
ಜೋಳವಳಿಯುವವ ನಾನಾಲ್ಲಂಲ	೬೯೮	ಜೋಳವಾಳಿಯಾನಲ್ಲ
ತನುಮನಧನವೆಂಬ ಕನ್ನಡಿ	೬೯೫	ತನುಮನಧನವೆಂಬ ಕನ್ನಚ
ಕೋಶಪಾವನ	೬೪೭	ಕೋಶಪಾನ

೪

ವಚನ ಸಮೂಹ ಒಂದು ಶಾಸ್ತ್ರವೆಂಬ—ಆದರಲ್ಲಿಯೂ ವೀರಶೈವ (ಎಂದರೆ ಲಿಂಗಾಯತ) ಮತದ ಶಾಸ್ತ್ರವೆಂಬ—ಅಭಿಪ್ರಾಯ ಸಾಮಾನ್ಯವಾಗಿದೆ. ಈ ಅಭಿಪ್ರಾಯ ಒಂದು ದೃಷ್ಟಿಯಿಂದ ಸರಿಯೆನಿಸಿದರೂ, ವಚನಗಳಲ್ಲಿ ಸಾಹಿತ್ಯಲಕ್ಷಣಗಳು ವಿಪುಲವಾಗಿವೆ, ಪರಿಸ್ಫುಟವಾಗಿವೆಯೆಂಬುದನ್ನು ಸಾಹಿತ್ಯಕೋವಿದರು ಕಂಡು ಹಿಡಿದು ಅವನ್ನು ಸಾಹಿತ್ಯಕೋಟಿಯಲ್ಲಿ ಪರಿಗಣಿಸಿದ್ದಾರೆ. ಕನ್ನಡದಲ್ಲಿ, ಪ್ರಾಚೀನಕಾಲದಲ್ಲಿ, ಅತಿವಿರಳವಾಗಿ ಚಂಪೂಕಾವ್ಯಗಳಲ್ಲಿ ಪದ್ಯಕ್ಕೆ ಅಧೀನವಾಗಿ, ಉಪಯೋಗವಾಗುತ್ತಿದ್ದ ಗದ್ಯರೂಪ ಕನ್ನಡ ಸಾಹಿತ್ಯದ ಒಂದು ಸ್ವತಂತ್ರಭಾಗವಾಗಿ ಏರ್ಪಟ್ಟುದು ವಚನರಚನೆಗೆ ಮೊದಲಾವಂದಿನಿಂದ ಎಂದು ಸಾಹಿತ್ಯಜ್ಞರು ಅಂಗೀಕರಿಸಿದ್ದಾರೆ.

ಹೀಗೆ ವಚನಗಳು ಗದ್ಯಸಾಹಿತ್ಯವೆಂದು ಗಣಿಸಲ್ಪಟ್ಟಿದ್ದರೂ ಇವು ಬರಿಯ ಗದ್ಯವಲ್ಲವೆಂಬುದು ಇದೀಗ ಹಲವರಿಗೆ ಹೊಳೆಯತೊಡಗಿದೆ. ವಚನಗಳನ್ನು ಜನರುಗಳ ಆರಂಭದ ಕಾಲದಿಂದಲೂ ಹಾಡುತ್ತಿದ್ದರೆಂಬುದು ಹರಿಹರರ್ಗ ರಾಘವಾಂಕರ ಗ್ರಂಥಗಳಿಂದ ತಿಳಿದು ಬರುತ್ತಿದೆ. ಕಂದವೃತ್ತಾದಿ ಪದ್ಯಗಳಂತೆ ವಚನಗಳು ಛಂದೋಬದ್ಧವಲ್ಲವಾದರೂ, ಗದ್ಯದಂತೆ ಸ್ವಚ್ಛಂದವಾದುವೂ ಅಲ್ಲ. ಇವುಗಳ ರಚನೆಯಲ್ಲಿ ತೋರುವ ಒಂದು ವಿಧದ ಲಯಬದ್ಧತೆ (rhythm) ಇವುಗಳನ್ನು ಹಾಡುಗಳಂತೆ ಸರಾಗವಾಗಿ ಅನ್ನಲು ಅನುಕೂಲ ಕಲ್ಪಿಸಿದೆ.

ವಚನಗಳಲ್ಲಿ ಪ್ರತೀಯವಾಗುವ ಲಯ ನೂತನ ಬಗೆಯದಾದುದರಿಂದಲೂ, ಕನ್ನಡ ಓದುಗರಲ್ಲಿ ಹಲವರಿಗೆ ಚಿರಿನ್ನೂ ಅಪರಿಚಿತವಾಗಿರುವುದರಿಂದಲೂ, ಈ ಲಯವನ್ನು ಕುರಿತು ಇಲ್ಲಿ ಕೆಲಮಟ್ಟಿಗೆ ವಿಸ್ತಾರವಾಗಿಯೆ ಬರೆಯುವುದಕ್ಕೆ ತೊಡಗಿದ್ದೇವೆ; ದಕ್ಕಾಗಿ ವಾಚಕರ ತಾಳ್ಮೆಯನ್ನೂ ಕೋರುತ್ತೇವೆ.

ಮೊದಲು 'ಲಯ'ದ ಮರ್ಮವನ್ನು ತಿಳಿದುಕೊಳ್ಳುವುದು ಅವಶ್ಯಕ. ಲಯ ಒಂದು ಬಗೆಯ ಆಂದೋಲನ, ಪುನರಾವೃತ್ತಿ ಅಥವಾ ಏರಿಳಿತ. ಈ ಆಂದೋಲನಕ್ಕೆ ಮೊದಲು, ನಡು-ಕೊಳಗಳಿದ್ದು ಅವುಗಳ ಮಧ್ಯಂತರದ ಅವಧಿ ಸರಿಸಮಾನವಾಗಲಿ, ಹೆಚ್ಚು-ಕಡಿಮೆ ಪ್ರಮಾಣದಲ್ಲಿಯಾಗಲಿ ಇರಬಹುದು. ಆದರೆ ಇದರಲ್ಲೆಲ್ಲ ಒಂದು ಬಗೆಯ ನಿಯಮ ಅಥವಾ ಕ್ರಮ ವಿರಬೇಕಾದದು ಸಾಮಾನ್ಯ. ಒಮ್ಮೊಮ್ಮೆ ಈ ನಿಯಮಿತತೆಗೆ ಉನ್ನರೀಕ್ಷಿತವಾಗಿ ಭಂಗ ಬರುವುದರಿಂದಲೂ ಮೂಲ ಆಂದೋಲನ ಹೆಚ್ಚು ಒಡೆದು ಕಾಣಬಹುದಾಗಿದೆ.

ಸಂಗೀತದಲ್ಲಿ ಲಯವು ತಾಳದಿಂದ ಎದ್ದು ಕಾಣುವುದು; ಬರಿಯ ರಾಗನಲ್ಲಿ ಸ್ವರದ ಏರಿಳಿತಗಳಿಂದ ತೋರ್ಪಡುವುದು-ಎಂಬುದು ಎಲ್ಲರಿಗೂ ತಿಳಿದ ವಿಷಯವೆ ಆಗಿದೆ. ಕವಿತೆಯಲ್ಲಿ ತೋರುವ ಲಯವು ಛಂದಸ್ಸನ್ನು ಆಶ್ರಯಿಸಿರುತ್ತದೆ. ಇನ್ನು ವಚನಗಳಲ್ಲಿ ಶ್ರುತವಾಗುವ ಲಯಕ್ಕೆ ಒಂದೊಂದು ವಾಕ್ಯಗಳ ಅಂಗಾಂಗಗಳಲ್ಲಿ ತೋರುವ ರಚನಾಸಾಮ್ಯ (Parallelism)ವೆ ಮುಖ್ಯ ಕಾರಣವೆನ್ನಬಹುದು.

ಕವಿತೆಗೆ ತಳಹದಿಯಾದ ಲಯವನ್ನು ಛಂದಸ್ಸಿನ ದೃಷ್ಟಿಯಿಂದ ವಿಚಾರಿಸಿದಾಗ (೧) ಗುರು-ಲಘು ಅಕ್ಷರಗಳ ವಿನ್ಯಾಸ, (೨) ಮಾತ್ರೆಗಳ ವಿವಿಧ ವಿನ್ಯಾಸ, (೩) ಸ್ವರಾಘಾತ (accent : ಅಕ್ಷರಗಳನ್ನು ಒತ್ತಿ ಅಥವಾ ತೇಲಿಸಿ ಉಚ್ಚರಿಸುವುದು)- ಇವುಗಳಿಂದ ಸಾಧಿಸುವರೆಂಬುದು ವಿದಿತವೆ ಇದೆ. ಕಂದ ವೃತ್ತಾದಿ ಪದ್ಯಗಳನ್ನು ಛಂದಸ್ಸಿನನುಗುಣವಾಗಿ ಲಯಮೊಂದಿಗೆ ಓದುವುದು ಸರಿಯೆನಿಸಿದರೂ, ಅರ್ಥದ ದೃಷ್ಟಿಯಿಂದ

ಓದುವಾಗ ಅವುಗಳನ್ನು ಗಣಾನುರೋಧವಾಗಿ ತುಂಡು ಮಾಡದೆ ಬೇರೆ ರೀತಿಯಲ್ಲಿ ತುಂಡು ಮಾಡಬಹುದೆಂಬುದು ಓದುಗರೆಲ್ಲರ ಅನುಭವಕ್ಕೆ ಬಂದ ಸಂಗತಿ. ಉದಾಹರಣೆಗಾಗಿ:

ಎಳವೆಱೆಯ ಬಳೆಯದ ಗಗನ–
ಸ್ಥಳಿ, ಸಸಿ ಬೆಳೆಯದ ಧರಿತ್ರಿ, ಮೌಕ್ತಿಕ ರತ್ನಂ
ಬಳೆಯದ ಶುಕ್ತಿಕೆ, ಗರ್ಭಂ
ಬಳೆಯದ ಬಾಲಕಿಯ ಬಸಿಱಿನರ್ಥಕಮುಲ್ಕೆ

ಎಂಬಲ್ಲಿ ಕಂದಪದ್ಯವನ್ನು ಅರ್ಥಾನುಸಾರವಾಗಿ

ಎಳವೆಱೆಯ ಬಳೆಯದ ಗಗನಸ್ಥಳಿ,
ಸಸಿ ಬೆಳೆಯದ ಧರಿತ್ರಿ,
ಮೌಕ್ತಿಕರತ್ನಂ ಬಳೆಯದ ಶುಕ್ತಿಕೆ,
ಗರ್ಭಂಬಳೆಯದ ಬಾಲಕೀಯ ಬಸಿಱುಂ
ಅನರ್ಥಕಮುಲ್ಕೆ ?

ಎಂದೂ ಬರೆಯಬಹುದು. ಎರಡನೆಯ ರೀತಿಯಲ್ಲಿ ಬರೆಯುವುದರಿಂದ ಅಥವಾ ಆ ರೀತಿ ಓದುವುದರಿಂದ, ಅರ್ಥವು ಸರಳವಾಗಿ ಹೊರಹೊಮ್ಮುವುದಕ್ಕೆ ಅನುಕೂಲವಾಗುವುದಲ್ಲದೆ, ಇದರಲ್ಲಿ ಬೇರೊಂದು ಬಗೆಯ ಲಯವೂ ಗೋಚರವಾಗುವುದು. ಮೊದಲಿನ ನಾಲ್ಕು ಸಾಲುಗಳಲ್ಲಿ ಕಂಗೊಳಿಸುವ ವಾಕ್ಯಖಂಡಗಳ ರಚನಾಸಾಮ್ಯವೆ ಈ ಪೊಸ ಲಯಕ್ಕೆ ಕಾರಣವೆಂಬುದು, ಈ ರೀತಿ ಬರೆಯುವುದರಿಂದ ತಟ್ಟನೆ ನಮ್ಮ ಗಮನಕ್ಕೆ ಬರುತ್ತಿದೆ.

ಇದರಂತೆ ಹರಿಹರದೇವನ :

ಕರಮೆಸೆದಿತ್ತು ಕೌಮುದಿಯ ಬಿತ್ತು ಚಕೋರಿಯ ತುತ್ತು ನೀರಜೋತ್–
ಕರದ ವಿಪತ್ತು ತಾರೆಗಳ ತುತ್ತು ಸುಧಾಂಬುಧಿಯೊತ್ತು ಜಾರಸೌಂ–
ದರಿಯರ ಮುತ್ತುವಂಬರಪುಲಿಂದಿಯ ಮೂಗಿನ ಮುತ್ತು ನೋಡಲ–
ಚ್ಚರಿಯೆನಿಸಿತ್ತು ಮೂಡದೆಸೆಯಿಂದೆಸೆಯಿತ್ತು ಹಿಮಾಂಶುಮಂಡಲಂ.

ಎಂಬ ಪದ್ಯವನ್ನು ಒಳಗಣ ವಾಕ್ಯಖಂಡಗಳ ರಚನಾಸಾಮ್ಯವನ್ನನುಸರಿಸಿ ಒಡೆದು ಕೆಳಗೆ ಕಾಣಿಸಿದಂತೆ ಬರೆಯಬಹುದು ;

ಕರಮೆಸೆದಿತ್ತು, ಕೌಮುದಿಯ ಬಿತ್ತು,
ಚಕೋರಿಯ ತುತ್ತು, ನೀರಜೋತ್ಕರದ ವಿಪತ್ತು,
ತಾರೆಗಳ ತುತ್ತು, ಸುಧಾಂಬುಧಿಯೊತ್ತು,
ಜಾರಸೌಂದರಿಯರ ಮಿತ್ತು, ಅಂಬರಪುಲಿಂದಿಯ ಮೂಗಿನ ಮುತ್ತು,
ನೋಡಲಚ್ಚರಿಯನಿಸಿತ್ತು, ಮೂಡಣದಿಸೆಯಿಂದೆಸೆಯಿತ್ತು
ಹಿಮಾಂಶುಮಂಡಲಂ.

ಇಲ್ಲಿ ವಾಕ್ಯಖಂಡಗಳ ರಚನಾಸಾಮ್ಯಕ್ಕೆ ಪ್ರಾಸ ಅನುಪ್ರಾಸಗಳ, ಎಂದರೆ ಆಂತರಿಕವಾದ ಇನ್ನೊಂದು ಲಯದ, ಸಾಹಾಯ್ಯವಿದೆಯೆಂಬುದು ಸ್ಪಷ್ಟವಿದೆ. ಈ ಬಗೆಯ ಲಾಲಿತ್ಯವನ್ನನುಸರಿಸಿ ಓದುವುದರಿಂದ ಪ್ರತಿ ಪಾದದ ಕೊನೆಯಲ್ಲಿ ನಿಯತವಾಗಿ ಯತಿಯನ್ನುಳ್ಳ (ಸಂಸ್ಕೃತಜನ್ಯ)ಅಕ್ಷರ ವೃತ್ತಗಳ ಬೇಸರ ತರುವ ಏಕತಾನತೆ (monotony) ಯನ್ನು ತಪ್ಪಿಸ ಬಹುದಲ್ಲದೆ, ಪಾದಪಾದಗಳಲ್ಲಿ ಬೇರೆ ಬೇರೆ ಕಡೆಗಳಲ್ಲಿ ಹಲವು ಎಡೆಗಳಲ್ಲಿ ನಿಲ್ಲುವ ಅವಕಾಶವನ್ನು ಕಲ್ಪಿಸಿ, ಅನೇಕ ಪ್ರಕಾರದ ವೈವಿಧ್ಯವನ್ನೂ ಸಾಧಿಸಬಹುದು. ಸಂಸ್ಕೃತದಲ್ಲಿ ಸಾಧ್ಯವಾಗದ ಈ ವೈವಿಧ್ಯವನ್ನು ನಿಯತಸ್ಥಾನದ ಯತಿಯನ್ನು ಮಿಕ್ಕ ಕನ್ನಡ ಕವಿಗಳು ಹಲವಂದದಿಂದ ವೃತ್ತಪದ್ಯಗಳಲ್ಲಿಯೆ ಸಾಧಿಸಿರುವುದು ಕನ್ನಡ ಸಾಹಿತ್ಯದ ಒಂದು ಸಂಸ್ಮರಣೀಯ ವೈಶಿಷ್ಟ್ಯವಾಗಿದೆ.

ಇನ್ನೊಂದು ಉದಾಹರಣೆಯೆಂದು ಕುಮಾರ ವ್ಯಾಸನ ಸುಪ್ರಸಿದ್ಧ ಪದ್ಯವನ್ನು ೨೫ ಈ ಕೆಳಗೆ ಕಾಣಿಸಿದ ರೀತಿಯಲ್ಲಿ:

ಅರಸುಗಳಿಗಿದು ವೀರ
ದ್ವಿಜರಿಗೆ ಪರಮವೇದದ ಸಾರ
ಯೋಗೀಶ್ವರರ ತತ್ತ್ವವಿಚಾರ
ಮಂತ್ರಜನಕ್ಕೆ ಬುದ್ಧಿಗುಣ;
ವಿರಹಿಗಳ ಶೃಂಗಾರ
ವಿದ್ಯಾಪರಿಣತರ ಅಲಂಕಾರ
ಕಾವ್ಯಕೆ ಗುರು—
ವೆನಲು ರಚಿಸಿದ ಕುಮಾರವ್ಯಾಸ ಭಾರತವ.

ಎಂದು ಬರೆಯುವುದರಿಂದ ಅದರಲ್ಲಿಯ ಆಂತರಿಕ ಲಯ ಸ್ಪುಟವಾಗಿ ಎದ್ದು ಕಾಣುವುದು. ಅಲ್ಲದೆ, 'ಮಂತ್ರಿಜನಕ್ಕೆ ಬುದ್ಧಿಗುಣ' ಮತ್ತು 'ಕಾವ್ಯಕೆ ಗುರು' ಎಂಬ ನುಡಿಗಡಣಗಳು ಆ ಲಯಕ್ಕೆ ಭಂಗವೊಡ್ಡಿ ಆ ಲಯವನ್ನು ಇನ್ನಿಷ್ಟು ಡಾಳವಾಗಿಸಿ ಸೂಚಿಸುತ್ತಿವೆಯೆಂಬುದೂ ಇಲ್ಲಿ ವ್ಯಕ್ತವಾಗುವುದು.

ವಾಕ್ಯಗಳ ಅಂಗಾಂಗಗಳ ರಚನಾಸಾಮ್ಯದಲ್ಲಿ ತೋರುವ ಲಯವೇ ಪುರಾತನ ಭಾಷೆಗಳಲ್ಲಿ ಒಂದಾದ ಹಿಬ್ರೂ (Hebrew) ಭಾಷೆಯ ಪದ್ಯ ರಚನೆಗೆ ಆಧಾರವಾಗಿತ್ತೆಂಬುದೂ ಬಹುಭಾಷಾಪಂಡಿತರಿಗೆ ವೇದ್ಯವಾದ ಸಂಗತಿಯಾಗಿದೆ.[೨೪] ಮೂಲದಲ್ಲಿ ಹಿಬ್ರೂಭಾಷೆಯಲ್ಲಿ ರಚಿತವಾಗಿದ್ದ ಜ್ಯೂ ಮತ್ತು ಕ್ರೈಶ್ಚಿಯನ್ ಮತಗಳ ಧರ್ಮಗ್ರಂಥವಾಗಿದ್ದ ಬೈಬಲ್ (Bible) ಗ್ರಂಥವು ಕ್ರಿ. ಶ. ೧೭ ಶತಮಾನದಲ್ಲಿ ಇಂಗ್ಲಿಷ ಪಂಡಿತ ಮಂಡಲಿಯೊಂದರಿಂದ ರಾಜಾಶ್ರಯದಲ್ಲಿ ಇಂಗ್ಲಿಷಿಗೆ ಅನುವಾದಿಸಲಾಯಿತು. ಆ ಕಾಲದಿಂದಲೂ ಈ ಅನುವಾದ ಆಂಗ್ಲಸಾಹಿತ್ಯದಲ್ಲಿ ಅತ್ಯುನ್ನತ ಸ್ಥಾನವನ್ನು ಪಡೆದಿದೆ. ಈ ಭಾಷಾಂತರವು ಹಿಬ್ರುಭಾಷೆಯಲ್ಲಿಯ ಲಯವನ್ನು ಬಹುಮಟ್ಟಿಗೆ ಕಾಪಾಡಿಕೊಂಡು ಬಂದಿದೆ[೨೫]. ಆದರೆ, ಇದರ ಮುದ್ರಣ ಆರಂಭದಿಂದಲೂ ಮೂರು ಶತಮಾನಕಾಲ ಅತೃಪ್ತಿಕರವಾಗಿಯೆ ಉಳಿದಿದ್ದಿತು ಈ ಗ್ರಂಥ ಒಂದೇ ವಿಧವಾಗಿ ಸರಳಗದ್ಯದ ರೀತಿಯಲ್ಲಿಯೇ, ಆದರೂ ವಾಕ್ಯಸಮುದಾಯ (Paragraph)ಗಳಿಲ್ಲದೆ, ಒಂದೊಂದೆ ವಾಕ್ಯ ಜೇರೆ ಬೇರೆಯಾಗಿ ಕ್ರಮಾಂಕಗಳೊಂದಿಗೆ ಮುದ್ರಿತವಾಗುತ್ತ ಬಂದಿದೆಯೆಂಬುದು ಇದನ್ನು ನೋಡಿದವರಿಗೆಲ್ಲ ಗೊತ್ತಿದ್ದ ಮಾತಾಗಿದೆ. ಮತಾಭಿಮಾನ, ಚಿಕ್ಕಂದಿನ ಅಭ್ಯಾಸ–ಇವುಗಳ ನೆರವಿಲ್ಲದೆ, ಬೈಬಲ್ ಗ್ರಂಥವನ್ನು ಆದ್ಯಂತವಾಗಿ ಓದುವುದು ದುಸ್ತರವೆ ಸರಿ. ಆದರೂ ಉಚ್ಚಸಾಹಿತ್ಯವೆಂಬ ದೃಷ್ಟಿಯಿಂದ ಭಾಷೆಯ ಶುದ್ಧತೆಗಾಗಿ, ಶೈಲಿಯ ರಮ್ಯತೆಗಾಗಿ ಈ ಗ್ರಂಥದ

ಕೆಲವೊಂದು ವಿಶಿಷ್ಟಭಾಗಗಳನ್ನು ಮಾತ್ರ ಮನನಮಾಡುವ ಸಂಪ್ರದಾಯವು ನೆಲೆಗೊಂಡಿದ್ದಿತು.

ಈ ಬೈಬಲ್‌ಗ್ರಂಥದಲ್ಲಿ ಇತಿಹಾಸ, ಕಥೆ, ಪ್ರಬಂಧ, ಖಂಡಕಾವ್ಯ, ಭಾವಗೀತೆ, ಗಾದೆಯ ಮಾತುಗಳು, ನಾಟ್ಯಚ್ಛಟೆ ಮುಂತಾದ ಸಾಹಿತ್ಯದ ವಿವಿಧರೂಪಗಳು ಅಡಕವಾಗಿವೆಯೆಂಬ ಸಂಗತಿ ಈ ಗ್ರಂಥವನ್ನು ಆಳವಾಗಿ ಅಭ್ಯಾಸಮಾಡಿದ ಕೆಲ ಸಾಹಿತ್ಯಿಗರಿಗೆ ಮಾತ್ರ ಮನವರಿಕೆಯಾಗಿದ್ದಿತು. ಅಂತಹರಿಗೆ ಬಹುಕಾಲದಿಂದ ಬಂದ ಸಾಂಪ್ರದಾಯಿಕ ಮುದ್ರಣ ತೀರ ಅಸಮರ್ಪಕವಾಗಿಯೆ ತೋರುತ್ತಿದ್ದಿತು. ಈಚೆಗೆ ಕೆಲ ಸಾಹಿತ್ಯಾಭ್ಯಾಸಿಗಳ, ಪಂಡಿತರ ಮತ್ತು ಪ್ರಾಧ್ಯಾಪಕರ ದೀರ್ಘಪರಿಶ್ರಮದ ಫಲವಾಗಿ ಬೈಬಲ್ಲಿನಲ್ಲಿ ನೂತನ ಸಂಸ್ಕರಣಗಳು ಕೆಲವು[೨೬] ಪ್ರಸಾರವಾಗಿವೆ. ಅವುಗಲ್ಲಿ ನಾಟಕ, ಸಂಭಾಷಣೆ, ಪದ್ಯ, ಗಾದೆಯ ಮಾತು—ಮುಂತಾದ ಸಾಹಿತ್ಯದ ನಾನಾಬಗೆಗಳು ಸ್ಪಷ್ಟವಾಗಿ, ಕಣ್ಣಿಗೇ ಕಾಣುವ ರೀತಿಯಲ್ಲಿ ಮುದ್ರಿತವಾಗಿವೆ ಅಲ್ಲದೆ, ಬಹುಕಾಲ ಗದ್ಯವೆಂದು ಅಂಗೀಕೃತವಾದ ಹಲವು ಭಾಗಗಳು ಲಯಾನುಸಾರವಾಗಿ ಈ ನೂತನ ಸಂಸ್ಕರಣದಲ್ಲಿ ಪದ್ಯದಂದದಲ್ಲಿಯೆ ಅಚ್ಚಾಗಿರುವ್ದು ಇನ್ನೂ ವಿಶೇಷ. ಬೈಬಲ್ಲಿನ ಮೂಲಭಾಷೆಯಾದ ಹಿಬ್ರುವಿನಲ್ಲಿಯ ಪದ್ಯರಚನಾ ಪದ್ಧತಿಯನ್ನು ವಿಮರ್ಶಕರು ತಾರತಮ್ಯದೃಷ್ಟಿಯಿಂದ ಅಭ್ಯಾಸಮಾಡಿ, ಆವಶ್ಯಕವಾದ ಈ ಸುಧಾರಣೆಯನ್ನು ಕೈಕೊಂಡಿದ್ದಾರೆಂಬುದು ಸ್ಪಷ್ಟವಾಗಿ ಗೊತ್ತಾಗುವಂತಿದೆ[೨೭].

ಇಷ್ಟವಾದ ಈ ಸುಧಾರಣೆಯ ಫಲವಾಗಿ ಆಂಗ್ಲ ಬೈಬಲ್ಲಿನ ಬೆಲೆ ಜಾಗತಿಕ ಸಾಹಿತ್ಯದ ದೃಷ್ಟಿಯಿಂದ ಅತ್ಯಧಿಕವಾಗಿಯೆ ಏರಿದೆಯೆಂದು ನಿಸ್ಸಂದೇಹವಾಗಿ ಹೇಳಬಹುದು. ಕನ್ನಡ ವಚನಸಾಹಿತ್ಯವೂ—ಅದರಲ್ಲಿಯೂ ಮುಖ್ಯವಾಗಿ ಬಸವಣ್ಣನವರ ವಚನಗಳು–ಇದೆ ಬಗೆಯ ಲಯವನ್ನು ಒಳಗೊಂಡಿರುವುದರಿಂದ ಇಂತಹ ಸುಧಾರಣೆಯನ್ನು ವಚನ ಸಾಹಿತ್ಯದ ಮುದ್ರಣದಲ್ಲಿಯೂ ಮಾಡಲು ಬರುವುದೆಂದು ನಮಗೆ ತೋಚಿರುವುದರಿಂದ, ಆ ವಿಷಯವನ್ನು ಕುರಿತು ಮುಂದೆ ಸಂಗ್ರಹವಾಗಿಯೇ ಪ್ರಸ್ತಾವ ಮಾಡುತ್ತೇವೆ.

೫

ವಚನಗಳು ಗದ್ಯದ ಒಂದು ಪ್ರಾದರಿ ಎಂದು ಸ್ಥೂಲವಾಗಿ ಹೇಳ ಬಹುದಾದರೂ, ಅವು ನಿಜವಾಗಿಯೂ, ಗದ್ಯದ ಒಂದು ವಿಶಿಷ್ಟಪ್ರಾದರಿ ಯೆಂದೇ ಹೇಳುವವುದು ವಿಹಿತ. ಸೂಕ್ಷ್ಮವಾಗಿ ವಿಚಾರಿಸಿದರೆ ವಿಚನಗಳು ಗದ್ಯಪದ್ಯದ ನಡುವಿನ ಒಂದು ಪ್ರಾದರಿಯೆಂದೇ ಹೇಳಬೇಕಾಗುವುದು. ವಚನಗಳಲ್ಲಿ ಗದ್ಯದ ನಿರರ್ಗಳತೆ ಇಲ್ಲದಿದ್ದರೂ ಅದರ ಸರಳತೆ ಇದೆ; ಪದ್ಯದ ಕ್ರಮಬದ್ಧ ಛಂದೋಗತಿ ಇಲ್ಲದಿದ್ದರೂ ಅದರ ಲಯವಿದೆ. ಹಲವು ವಚನಗಳಲ್ಲಿ ಈ ಲಯವು ಛಂದೋಗತಿಗೆ ಬಹು ಸಮೀಪವರ್ತಿಯಾಗಿರು ವುದರಿಂದ ಅಂತಹ ವಚನಗಳನ್ನು ಹೆಚ್ಚು ವೆತ್ಯಾಸಮಾಡದೆ ಸರಾಗವಾಗಿ ಹಾಡಲು ಅನುಕೂಲನಾಗಿರುವುದು ಕಂಡುಬರುತ್ತಿದೆ೨೭. ಆದರೂ ವಚನ ಗಳಲ್ಲಿಯೂ ಲಯ ಒಮ್ಮೆಲೆ ಕಣ್ಣಿಗೆ ಕಾಣುವಷ್ಟು ಸ್ಥೂಲವಾಗಿಯಾಗಲಿ, ಕಿವಿಗೆ ಕೇಳುವಷ್ಟು ಘನವಾಗಿಯಾಗಲಿ ಇರದೆ ಹೆಚ್ಚು ಸೂಕ್ಷ್ಮವಾಗಿಯೆ ಇರುತ್ತಿದೆ.

ವಚನಗಳಲ್ಲಿಯ ಲಯ ಅನೇಕ ರೀತಿಯಲ್ಲಿ ಗೋಚರವಾಗಬಹು ದಾಗಿದೆ. ಒಮ್ಮೊಮ್ಮೆ ಅದು ಆದಿ, ಮಧ್ಯ, ಅಥವಾ ಅಂತ್ಯ ಪ್ರಾಸಗಳಲ್ಲಿ ಕಂಗೊಳಿಸಬಹುದು. ಈ ಪ್ರಾಸ ಕೆಲವಕ್ಷರಗಳ ಪುನರಾವೃತ್ತಿಯನೊಳ ಗೊಳ್ಳಬಹುದು; ಇಲ್ಲವೆ ಒಂದು ಇಡಿಯ ಶಬ್ದದ ಪುನರಾವೃತ್ತಿಯಾಗಿರ ಬಹುದು. ಹಲವು ಸಾರಿ ಹಿಬ್ರು ಪದ್ಧತಿಯಂತೆ ವಾಕ್ಯಗಳ ಅಥವಾ ವಾಕ್ಯಾಂಗಗಳ ರಚನಾಸಾಮ್ಯದಿಂದ ಈ ಲಯವನ್ನು ಗುರುತಿಸಬಹುದು. ಮತ್ತೆ ಕೆಲವೆಡೆಗಳಲ್ಲಿ ಅರ್ಥಸಾಮ್ಯದಲ್ಲಿಯೆ ಈ ಲಯವನ್ನು ಕಾಣ ಬಹುದು. ಹೀಗೆ ಹಲವಂದದಿಂದೆ ಸಾಧಿತವಾದ ಈ ಲಯವನ್ನು ಕಂಡು ಹಿಡಿದು, ಅದು ಓದುಗರಿಗೂ ಸ್ಪಷ್ಟವಾಗಿ ಕಾಣುವ ರೀತಿಯಲ್ಲಿ ವಚನ ಗಳ ವಿವಿಧ ಭಾಗಗಳನ್ನು ಪಾದಾಪಾದವಾಗಿ ವಿಂಗಡಿಸಿ ಮುದ್ರಿಸಿದರೆ ಅವು ಗಳ ಲಾಲಿತ್ಯ ಹೆಚ್ಚು ಸ್ಫುಟವಾಗಿ ಹೊರಹೊಮ್ಮುವುದೆಂಬುದರಲ್ಲಿ ಸಂದೇಹವಿಲ್ಲ. ಇದೇ ರೀತಿ, ಈಗ ಎಷ್ಟೋ ಕಡೆಗಳಲ್ಲಿ ಈಗ ಸಂದಿಗ್ಧವೆಂದು

ತೋರುವ ವಚನಗಳ ಅರ್ಥವೂ ಸುಗಮವಾಗುವುದೆಂದು ಕಂಡಿತವಾಗಿ ಹೇಳಬಹುದು. ಇದೂ ಅಲ್ಲದೆ, ಸಾಂಪ್ರದಾಯಿಕವಾದ ಪದ್ಧತಿಯಿಂದ ಮುದ್ರಣವಾದ ಅನೇಕ ವಚನಗಳಲ್ಲಿ ನಿರರ್ಥಕವೆಂದೊ, ಅನಾವಶ್ಯಕವಾಗಿ ಪುನರುಕ್ತವಾದುವೆಂದೊ ತೋರುವ ಪದಗಳು, ಅವೇ ವಚನಗಳನ್ನು ಲಂಕಾನುಸಾರವಾಗಿ ಮುದ್ರಿಸಿದಾಗ, ಆವಶ್ಯಕವೆಂದೂ ಭಾವಗರ್ಭಿತವೆಂದೂ ಕಂಡು ಬರುವುವು; ವೇಳೆಯಾಗಿ, ಆಯಾ ವಚನಗಳ ಲಯವು ಅಂತಹಪದಗಳನ್ನೆ ಅವಲಂಬಿಸಿರುವುದೆಂದೂ ಗೋಚರವಾಗುವುದು ಈ ಮಾತಿನ ಯಥಾರ್ಥತೆಯನ್ನು ತೋರಿಸುವುದಕ್ಕಾಗಿ, ಒಂದೆರಡು ಉದಾಹರಣೆಗಳನ್ನು ಇಲ್ಲಿ ಕೊಡುವುದು ಉಚಿತವೆಂದು ಬಗೆಯುತ್ತೇವೆ:

(೧) ಇಪ್ಪತ್ತುನಾಲ್ಕು ತಿಥಿಯಿಂದ ವೆಗ್ಗಳ ಗ್ರಹಣ. ಸಂಕ್ರಾಂತಿಯಿಂದ ವೆಗ್ಗಳ ಏಕಾದಶಿ, ವ್ಯತೀಪಾತದಿಂದ ವೆಗ್ಗಳ. ಸೂಕ್ಷ್ಮ ಶಿವಪಥವನರಿದವಂಗೆ ಹೋಮ ನೇಮ ಜಪತಪದಿಂದ ವೆಗ್ಗಳ. ಕೂಡಲಸಂಗಮದೇವ ನಿಮ್ಮ ಮಾಣದೆ ನೆನೆವವಂಗೆ.

ಇದೊಂದು ಬಸವಣ್ಣನವರ ವಚನ; ಸಾಂಪ್ರದಾಯಿಕ ರೀತಿಯಲ್ಲಿ ಅಚ್ಚಾದಂತೆಯೇ ಇಲ್ಲಿ ಉದಾಹರಿಸಲಾಗಿದೆ. ಈ ವಚನದ ಅರ್ಥವನ್ನು—ಕೂಡಲ ಸಂಗನ ಭಕ್ತರಿಗೆ ತಿಥಿ, ನೇಮ, ಹೋಮ, ಮೊದಲಾದುವು ಮಹತ್ತ್ವದುವಲ್ಲ—ಎಂದು ಸ್ಥೂಲವಾಗಿ ಮಾಡಿಕೊಳ್ಳಬಹುದಾದರೂ, ಶಬ್ದಶಃ ಇದರ ಸರಿಯಾದ ಅರ್ಥವನ್ನು ನಿರ್ಧರಿಸುವುದು ಬಹು ಪ್ರಯಾಸಕರವೆ ಸರಿ! ಕಷ್ಟಪಟ್ಟು ಅರ್ಥಹಚ್ಚಹೋದರೆ: ಗ್ರಹಣವು ಇಪ್ಪತ್ತುನಾಲ್ಕು ತಿಥಿಗಳಿಗಿಂತ ಅಧಿಕ; ಸಂಕ್ರಾಂತಿಗಿಂತ ಏಕಾದಶಿ ಅಧಿಕ; (ಆದರೆ ಸಂಕ್ರಾಂತಿ ಗ್ರಹಣ ಇವುಗಳಲ್ಲಿ ಯಾವುದು ಅಧಿಕವೆಂಬುದು ತಿಳಿಯುವಂತಿಲ್ಲ)—ಮುಂದೆ, ವ್ಯತೀಪಾತಕ್ಕಿಂತ ಹೆಚ್ಚಿನದು—ಯಾವುದು? ಗೊತ್ತಾಗುವ ಹಾಗಿಲ್ಲ. ಇರಲಿ, ಇನ್ನೂ ಮುಂದಕ್ಕೆ ಹೋದರೆ—ಹೋಮ ನೇಮಾದಿಗಳಿಂದ ವೆಗ್ಗಳ—ಎವುದು? ತಿಳಿಯುವುದು ಅಸಾಧ್ಯ! ಇದರ ಮೇಲೆ, 'ಶಿವಪಥವನರಿದವಂಗೆ' ಮತ್ತು ನಿಮ್ಮ 'ಮಾಣದೆ ನೆನೆವವಂಗೆ'-ಇವುಗಳ ಮಧ್ಯೆ 'ಹೋಮನೇಮಜಪತಪಗಳಿಂದ ವೆಗ್ಗಳ'ಎಂಬ ನುಡಿಗಡಣವೊಂದು ಬಂದು ಇಡಿಯ ವಚನವನ್ನು ಒಡೆಯಲಾರದ ಒಗಟನ್ನಾಗಿ ಮಾಡಿದೆ.

ಆದರೆ, ಈ ವಚನದಲ್ಲಿ ಹುದುಗಿರುವ ಲಯವು ಏನನ್ನವಲಂಬಿಸಿದೆ ಎಂಬುದನ್ನು ವಿಚಾರಿಸಿದಾಗ, 'ವೆಗ್ಗಳ' ಎಂಬ ಶಬ್ದದ ಪುನರುಕ್ತಿ, 'ಶಿವಪಥವನರಿದವಂಗೆ ಮತ್ತು 'ನಿಮ್ಮ ಮಾಣದೆ ನೆನೆವಂಗೆ' ಎಂಬಲ್ಲಿ ತೋರುವ ರಚನಾ ಸಾಮ್ಯ, ಇವು ಈ ಲಯವನ್ನು ಸೂಚಿಸಲು ಸಾಹಾಯ್ಯ ಮಾಡುತ್ತಿವೆಯೆಂದು ಗೋಚರವಾಗುವುದು. ಈ ಲಯವನ್ನನುಸರಿಸಿ, ಪಾದಾಪಾದಗಳನ್ನಾಗಿ ವಿಂಗಡಿಸಿ, ಈ ವಚನವನ್ನು ಕೆಳಗೆ ಕಾಣಿಸಿದಂತೆ ಬರೆಯಬಹುದು:

ಇಪ್ಪತ್ತು ನಾಲ್ಕು ತಿಥಿಯಿಂದ ವೆಗ್ಗಳ,
ಗ್ರಹಣ-ಸಂಕ್ರಾಂತಿಯಿಂದ ವೆಗ್ಗಳ,
ಏಕಾದಶಿ– ವ್ಯತೀಪಾತದಿಂದ ವೆಗ್ಗಳ,
ಸೂಕ್ಷ್ಮ ಶಿವಪಥವನರಿದವಂಗೆ—
ಹೋಮನೇಮಜಪತಪಗಳಿಂದ ವೆಗ್ಗಳ,
ಕೂಡಲ ಸಂಗಮದೇವಾ, ನಿಮ್ಮ ಮಾಣದೆ ನೆನೆವಂಗೆ ! (೬೦೯)

ಈಗ ಸರಿಯಾದ ಅರ್ಥಕ್ಕೆ ಸರಳಮಾರ್ಗವೊಂದು ಏರ್ಪಟ್ಟಂತಾಯಿತೆಂದು ತಾನೇ ಕಾಣುವುದು. "ಸೂಕ್ಷ್ಮ ಶಿವಪಥವನರಿದವನಿಗೆ ಇಪ್ಪತ್ತು ನಾಲ್ಕು ತಿಥಿ, ಗ್ರಹಣ, ಸಂಕ್ರಾಂತಿ, ಏಕಾದಶಿ, ವ್ಯತೀಪಾತ ಮೊದಲಾದ-ವವಿತ್ರವೊ ಅನಿಷ್ಟಕಾರಕವೊ ಎಂದೆನಿಸಿದ—ವಿಶಿಷ್ಟ ದಿನಗಳಲ್ಲಿ ಮಾತ್ರ, ಅವಕ್ಕೆಂದೆ ನಿರ್ದಿಷ್ಟಗೊಳಿಸಿದ ಆಚರಣೆಗಳನ್ನು ಆಚರಿಸುವುದಕ್ಕಿಂತ ಹೆಚ್ಚಿನ ಆಚರಣೆಯಿರುವುದಿದೆ: ಆವುದೆಂದರೆ ಆ ಸೂಕ್ಷ್ಮ ಶಿವಪಥವೆ. ಅದು ಪಥ (=ದಾರಿ) ವಾಗುವುದರಿಂದ ಅದನ್ನು ಸದಾ ಬಿಡುವಿಲ್ಲದೆ ನಡೆಯಲೆಬೇಕು; ಪ್ರತಿದಿನವೂ-ಪ್ರತಿಕ್ಷಣವೂ ನಡೆದರೆಮಾತ್ರ ಆ ದಾರಿ ಮುಂದಕ್ಕೆ ಸಾಗುವುದು; ಆದಿಲ್ಲದೆ, ಆವುದಾದರೊಂದು ವಿಶಿಷ್ಟದಿನ, ಆ ದಿನಕ್ಕೆ ಮಾತ್ರ ವಿಧಿಸಿದ ಮಾರ್ಗದಲ್ಲಿ ನಡೆದರೆ ಅದು ಓರನ್ನವಾದ ಬಟ್ಟೆಯೂ ಎನಿಸಲಾರದು, ಪ್ರಗತಿಯೂ ಆಗಲಾರದು. ಆದೆ ರೀತಿ, ಕೂಡಲ ಸಂಗಮದೇವನನ್ನು ಮಾಣದೆ (=ತಪ್ಪದೆ) ಸದಾಕಾಲ ನೆನೆಯುತ್ತಿರುವವನಿಗೆ ಆ ನೆನಹೆ ಹೋಮನೇಮಜಪತಪಗಳಿಂದ ವೆಗ್ಗಳವಾದುದು"—

ಎಂದು ಈ ವಚನದ ಅರ್ಥವನ್ನು ಸಮರ್ಪಕವಾಗಿ ಮಾಡಬಹುದು. ಮೇಲೆ ತೋರಿಸಿದಂತೆ ಲಯಾನುಸಾರವಾಗಿ ಈ ವಚನವನ್ನು ಬರೆಯುವುದರಿಂದ ಇದರಲ್ಲಿ ಎಷ್ಟೊ ದು ಅರ್ಥವೈಶಾಲ್ಯವು ಹುದುಗಿದೆ ಎಂಬುದು ಸ್ಪಷ್ಟವಾಗಿ ಕಂಗೊಳಿಸುತ್ತಿದೆ. ಆವುದಾದರೊಂದು ವಿಶಿಷ್ಟವಾದ ತಿಥಿ ಇಲ್ಲವೆ ದಿನ ಉಳಿದ ದಿನಗಳಿಗಿಂತ ಹೆಚ್ಚು ಪವಿತ್ರವಾದುದು, ಪುಣ್ಯಪ್ರದವಾದುದು, ಫಲದಾಯಕವಾದುದು ಎಂಬ, ಅಥವಾ ಅನಿಷ್ಟಕರವಾದುದು, ಆದುದರಿಂದ ಶಾಂತಿಮಾಡಲು ತಕ್ಕುದು ಎಂಬ ವೈದಿಕ ಮತಾನುಯಾಯಿಗಳ ಸಂಪ್ರದಾಯಬದ್ಧವಾದ ಕಲ್ಪನೆಗಳು ನಿಜವಾಗಿಯೂ ಭ್ರಾಮಕವಾದುವು, ಆದುದರಿಂದ ಶಿವಭಕ್ತರಿಗೆ ಸಲ್ಲವು— ಎಂಬುದೆ ಈ ವಚನದ ಆಶಯ. ಇದು 'ಅಷ್ಟಮಿ, ನವಮಿ ಎಂಬ ಕಲ್ಪಿತವೇಕೋ,' 'ನಿಚ್ಚ ನಿಚ್ಚ ಶಿವರಾತ್ರಿ ಮಾಡುವುದು' ಇತ್ಯಾದಿ ಬಸವಣ್ಣನವರ ಇನ್ನಿತರ ವಚನಗಳ ಅಭಿಪ್ರಾಯಕ್ಕೆ ಅನುರೂಪವಾಗಿಯೆ ಇದೆಯೆಂಬುದೂ ಸ್ಪಷ್ಟವಿದೆ.

ವಚನಗಳಲ್ಲಿ ಸಾಮಾನ್ಯವಾಗಿ ತೋರುವ ಲಯವನ್ನನುಸರಿಸುವುದರಿಂದಲೆ ಅನೇಕ ಸಂದರ್ಭಗಳಲ್ಲಿ ಅರ್ಥವು ಸುಗಮವಾಗುವುದೆಂಬುದು ಓದುಗರ ಮನದಟ್ಟುವುದಕ್ಕೆಂದು ಇನ್ನೊಂದು ಉದಾಹರಣೆಯನ್ನು ನೋಡಬಹುದು:

(೨) ಆದಿ ಅನಾದಿ ಇಲ್ಲದಂದು ಅಜಾಂಡ ಬ್ರಹ್ಮಾಂಡವಿಲ್ಲದಂದು ತಾನೆ. ನಾದ ಬಿಂದು ಕಳಾತೀತನು ಜನಪರಮರಿಲ್ಲದಂದು ತಾನೆ. ನಾಮ ರೂಪಕ್ರಿಯಾತೀತನು ಸಚರಾಚರಗಳಿಲ್ಲ ರಚನೆಗೆ ಬಾರದಂದು ತಾನೆ. ಅಖಂಡಪರಿಪೂರ್ಣನು, ಅಪ್ರಮಾಣ, ಅಗಮ್ಯ ಅಗೋಚರದತ್ತಲಾದ ಮಹಾಘನ ಚೈತನ್ಯಲಿಂಗ, ನೋಡಾ, ಅಪ್ರಮಾಣ ಕೂಡಲ ಸಂಗಮದೇವ .

ಈ ವಚನವನ್ನು ಮೊದಲು೩೦ ಮುದ್ರಿಸಿದ ರೀತಿಯಲ್ಲಿಯೆ ಇಲ್ಲಿ ಉದಾಹರಿಸಿದ್ದೇವೆ. ಇದರಲ್ಲಿ(ಕೆಲಮಟ್ಟಿಗೆ ಲಯಾನುಸಾರವಾಗಿ)ಸಣ್ಣ ಸಣ್ಣ ವಾಕ್ಯಗಳನ್ನು ಮಾಡಿದುದು ಕಂಡುಬರುತ್ತಿದೆ. ಆದರೆ ರಚನಾಸಾಮ್ಯವನ್ನು

ಇನ್ನಿಷ್ಟು ಸೂಕ್ಷ್ಮವಾಗಿ ಅನುಲಕ್ಷಿಸಿದರೆ ಈ ವಚನವನ್ನು ಮುಂದೆ ಕಾಣುವ ತೆರದಲ್ಲಿ ಬರೆಯಬಹುದೆಂಬುದು ಸ್ಪಷ್ಟವಾಗುತ್ತಿದೆ:

ಆದಿ ಅನಾದಿ ಇಲ್ಲದಂದು, ಅಜಾಂಡಬ್ರಹ್ಮಾಂಡವಿಲ್ಲದಂದು
ತಾನೇ ನಾದುಬಿಂದು ಕಲಾತೀತನು.
ಜನಪರಮುರಿಲ್ಲದಂದು
ತಾನೇ ನಾವುರೂಪಕ್ರಿಯಾತೀತನು.
ಸಚರಾಚರಗಳಿಲ್ಲ ರಚನೆಗೆ ಬಾರದಂದು
ತಾನೇ ಅಖಂಡ ಪರಿಪೂರ್ಣನು–
ಅಪ್ರಮಾಣ ಅಗಪ್ಯ ಅಗೋಚರದತ್ತಲಾದ
ಮಹಾಘನಚೈತನ್ಯಲಿಂಗ, ನೋಡಾ,
ಅಪ್ರಮಾಣ ಕೂಡಲ ಸಂಗಮದೇವ

ಹೀಗೆ ವಾಕ್ಯಾವಾಕ್ಯಾಂಗಗಳ ರಚನಾಸಾಮ್ಯವನ್ನನುಸರಿಸಿ ಬರೆಯುವುದರಿಂದ ಈ ವಚನದ ಅರ್ಥ ಸಾಮಾನ್ಯವಾಚಕರಿಗೂ ಸುಸ್ಪಷ್ಟವಾಗಿ ಅವಗತವಾಗುವುದೆಂಬುದನ್ನು ಮತ್ತೆ ಬೇರೆ ಹೇಳಬೇಕಾಗಿಲ್ಲ.

ಸಾಂಪ್ರಾದಾಯಿಕವಾಗಿ ಮುದ್ರಿಸಿದ ವಚನಗಳು ಒಮ್ಮೊಮ್ಮೆ ಎಷ್ಟು ಅಸಮರ್ಪಕವಾಗಿ ತೋರುವುವೆನ್ನುವುದಕ್ಕೆ ಇನ್ನೊಂದು ವಚನವನ್ನು ಉದಾಹರಿಸಿದರೆ ತಪ್ಪಾಗಲಾರದು:

(೩) ಹೊತ್ತಾರೆ ಎದ್ದು ಲಿಂಗದೇವನ ದೃಷ್ಟಿಯಾರೆ ನೋಡದವನ ಸಂಸಾರವೇಷವನ, ಬಾಳುವೇನವನ, ಬೀಳುವೇನವನ, ಸಂಸಾರವೇನವನ, ನಡೆಯೇನವನ, ನುಡಿಯೇನವನ, ಸಂಸಾರವೇನವನ? ಕರ್ತೃ ಕೂಡಲ ಸಂಗಮದೇವ, ನಿಮ್ಮ ತೊತ್ತುಗೆಲಸವ ಮಾಡದವನ ಸಂಸಾರವೇನವನ?

ಈ ವಚನ ಅರ್ಥ, ಒಟ್ಟಾರೆ: ನಸುಕಿನಲ್ಲಿ ಎದ್ದು ಲಿಂಗದೇವನ ಕಣ್ಣು ತುಂಬ ನೋಡದವನ, ಈಶ್ವರಸೇವೆಯನ್ನು ಮಾಡದವನ ಬಾಳು ವ್ಯರ್ಥ—ಎಂದು ಹೊಳೆಯುವುದು ಸರಿಯೆ; ಆದರೂ ಇದರಲ್ಲಿ ನಾಲ್ಕು ಬಾರಿ ಪುನರುಕ್ತವಾಗುವ 'ಸಂಸಾರವೇನವನ' ಎಂಬ ಪದದ ಸ್ವಾರಸ್ಯಗೊತ್ತಾಗುವಂತಿಲ್ಲ; ಕೇವಲ ನಿರರ್ಥಕವೆಂದೇ ತೋರುವುದರಲ್ಲಿ ಸಂದೇಹ

ವಿಲ್ಲ. ಆದುದರಿಂದ ''ವಚನಧರ್ಮಸಾರ''ದಲ್ಲಿ[೨೨] ಈ ವಚನವನ್ನು ಮುಂದಿನಂತೆ ತಿದ್ದಿದುದು ಕಂಡುಬರುತ್ತಿದೆ :

ಹೊತ್ತಾರೆ ಎದ್ದು ಲಿಂಗದೇವನ ದೃಷ್ಟಿಯಾರೆ ನೋಡದವನ ಸಂಸಾರ ವೇನವನ, ಬಾಳುವೆ ಏನವನ, ಬೀಳುವೆ ಏನವನ, ನಡೆ ಏನವನ, ನುಡಿ ಏನವನ, ಕರ್ತು ಕೂಡಲ ಸಂಗಮದೇವಾ, ನಿಮ್ಮ ತೊತ್ತುಗೆಲಸವ ಮಾಡದವನ ಬದು ಕೇನವನ ?

ಈ ರೀತಿ ಸುಧಾರಣೆ ಮಾಡಿದ್ದರೂ, 'ಬಾಳುವೆ ಏನವನ, ಬದುಕೇನವನ' ಎಂಬ ಪದಗಳಾದರೂ 'ಸಂಸಾರವೇನವನ' ಎಂಬರ್ಥವನ್ನೆ ಕೊಡುವುದ ರಿಂದ, ಅವು ಮತ್ತೆ ಪುನರುಕ್ತಗಳೆಂದೇ ತೋರುವುದಿಲ್ಲವೆ ? ಆದುದರಿಂದ, ತಾಳೆವೋಲೆಯ ಮಾತೃಕೆಗಳನ್ನು ಪುನಃ ಅವಲೋಕಿಸಿ,[೨೩] ಅವುಗಳ ಸಾಹಾಯ್ಯದಿಂದ ಈ ವಚನದೊಳಗಿನ ಕೆಲವು ಶಬ್ದಗಳನ್ನು ಸಂಸ್ಕರಿಸಿ, ಲಯಾನುರೋಧವಾಗಿ ಕೆಳಗೆ ಕಾಣಿಸಿದಂತೆ ಬರೆಯುವುದರಿಂದ ಈ ವಚ ನವ ನಿಜವಾದ ಅರ್ಥ ಸರಿಯಾಗಿ ಹೊರಹೊಮ್ಮುವುದೆಂದು ತಾನೆ ತೋರು ವುದರಲ್ಲಿ ಸಂದೇಹವಿಲ್ಲ :

ಹೊತ್ತಾಲೆ ಎದ್ದು ಲಿಂಗದೇವನ ದೃಷ್ಟಿಯಾರೆ ನೋಡದವನ ಸಂಸಾರವೇನವನ?
ಬಾಳುವೆಣನ ಬೀಳುವೆಣನ ಸಂಸಾರವೇನವನ ?
ನಡೆವೆಣನ ನುಡಿವೆಣನ ಸಂಸಾರವೇನವನ ?
ಕರ್ತು ಕೂಡಲ ಸಂಗಮದೇವಾ,
ನಿಮ್ಮ ತೊತ್ತುಗೆಲಸವ ಮಾಡದವನ ಸಂಸಾರವೇನವನ ? (೧೫೭)

ಈ ತೆರನಾಗಿ ವಿಂಗಡಿಸಿ ಬರೆಯುವುದರಿಂದ 'ಸಂಸಾರವೇನವನ' ಎಂಬ ನುಡಿಗಡಣ ಪ್ರತಿಯೊಂದು ಪಾದದ ಕೊನೆಗೆ ಬರುವುದರ ಔಚಿತ್ಯ ಮತ್ತು ಸ್ವಾರಸ್ಯ ಚೆನ್ನಾಗಿ ವ್ಯಕ್ತವಾಗುವುವು. ಅರ್ಥ: ಜೀವಿಸುತ್ತಿದ್ದರೂ ಹೆಣ ನಂತಿರುವವನ, ಈಗಲೆ ಸಾಯುವನೊ ಎನ್ನುವಂತಿರುವವನ, ಹಾಗೆಯೇ ಮಾತಾಡುವಲ್ಲಿಯೂ ನಡೆವಲ್ಲಿಯೂ ಈ ಕ್ಷಣವೆ ಸಾಯುವನೇನೊ ಎನ್ನು ವಷ್ಟು ನಿರ್ವಿಣ್ಣನಾದವನ ಸಂಸಾರವು ಹೇಗೆ ನಿರರ್ಥಕವೊ, ಹಾಗೆಯೆ ನಸುಕಿನಲ್ಲೆದ್ದು ಲಿಂಗದೇವನ ಕಣ್ಣು ತುಂಬ ನೋಡದವನ, ಈಶಸೇವೆ

ಯನ್ನು ಮಾಡದವನ ಬಾಳು ಹಾಳು—ಎಂದಾಗುವುದು. ಈ ವಚನದಲ್ಲಿ ಬಳಸಿದ ಪ್ರತಿಯೊಂದು ಪದಕ್ಕೂ ಮಾರ್ಮಿಕವಾದ ಅರ್ಥವಿದೆ. ಎಂಬುದೂ ಚೆನ್ನಾಗಿ ವೇದ್ಯವಾಗುವುದು. ಅಲ್ಲದೆ, ವಚನ ಶೈಲಿ ಎಷ್ಟು ಭಾವಗರ್ಭಿತವಾದುದೆಂಬುದೂ ಸರಿಯಾಗಿ ಮನದಟ್ಟುವುದು ಈ ರೀತಿ ಮುದ್ರಣದಿಂದ.

ಇದೇ ಬಗೆಯ ಇನ್ನೂ ಅನೇಕ ಉದಾಹರಣೆಗಳನ್ನು ಕೊಡಬಹುದಾದರೂ, ವಚನಭಾಗಗಳನ್ನು ಲಯಾನುಸಾರವಾಗಿ ಅಥವಾ ರಚನಾ ಸಾಮ್ಯವನ್ನನುಸರಿಸಿ ವಿಂಗಡಿಸಿ ಬೇರೆ ಬೇರೆ ಸಾಲಾಗಿ ವಿನ್ಯಾಸಗೊಳಿಸುವುದು ಅರ್ಥದ ಸುಗಮತೆಗೆ ಅನುಕೂಲವಾಗುವುದೆಂಬ ವಿಚಾರವು ಇದುವರೆಗೆ ಕೊಟ್ಟ ನಿದರ್ಶನಗಳಿಂದಲೆ ಸ್ಪಷ್ಟವಾಗುವಂತಿರುವುದರಿಂದ ಹೆಚ್ಚಿನ ಉದಾಹರಣೆಗಳನ್ನು ಕೊಡುವ ಕಾರಣವಿಲ್ಲ. ಆದರೆ ಇಲ್ಲಿ ಗಮನಿಸತಕ್ಕ ಒಂದೆರಡು ಮಹತ್ತ್ವದ ಅಂಶಗಳೂ ಇವೆ.

ಯಾವುದೊಂದು ವಚನವನ್ನು ಎಲ್ಲರೂ ಒಂದೆ ವಿಧವಾಗಿ ವಿಭಾಗಿಸುವರೆಂದಾಗಲಿ, ವಿಭಾಗಿಸಬೇಕೆಂದಾಗಲಿ ನಮ್ಮ ಅಭಿಪ್ರಾಯವಲ್ಲ. ಒಬ್ಬರಿಗೆ ಒಂದು ವಿಧವಾಗಿ ಲಯತೋರಿದರೆ, ಇನ್ನೊಬ್ಬರಿಗೆ ಇನ್ನೊಂದು ವಿಧವಾಗಿ ಕಾಣಬಹುದು. ಒಂದೇ ವಚನದಲ್ಲಿ ಪ್ರಾಸಾನುಪ್ರಾಸಗಳಿಂದ ಪ್ರತೀತವಾಗುವ ಆಂತರಿಕಲಯವೂ ಇರಬಹುದು; ವಾಕ್ಯಾಂಗಗಳ ರಚನಾ ಸಾಮ್ಯವೂ ಇರಬಹುದು. ಆಗ, ಒಬ್ಬರು ಆಂತರಿಕ ಲಯವನ್ನನುಸರಿಸಿ ವಚನವನ್ನು ತುಂಡರಿಸಿದರೆ, ಇನ್ನೊಬ್ಬರು ರಚನಾಸಾಮ್ಯವನ್ನವಲಂಬಿಸಿ ಆ ವಾಕ್ಯವನ್ನು ವಿಭಜಿಸಬಹುದು ಇಂತಹ ಸಂದರ್ಭಗಳಲ್ಲಿ ಒಂದು ಸರಿ, ಇನ್ನೊಂದು ತಪ್ಪು ಎಂದು ಕಂಡಿತವಾಗಿ ಹೇಳುವುದು ಅಶಕ್ಯವೆನಿಸಬಹುದು. ಅಂತೂ ಕಿವಿಗೆ ಇಂಪೆನಿಸುವ ರೀತಿಯಲ್ಲಿ, ಅರ್ಥಕ್ಕೆ ಅನುಕೂಲವಾಗುವ ತೆರದಲ್ಲಿ ವಚನಗಳನ್ನು ಹೇಳುವುದೂ ಬರೆಯುವುದೂ ಸಾಧಿಸುವುದೆ ಮುಖ್ಯ. ಅದಕ್ಕನುರೂಪವಾಗುವಂತೆ ವಚನಗಳನ್ನು ಮುದ್ರಿಸುವುದು ಆವಶ್ಯಕವೆಂಬ ಮಾತು ಸಹೃದಯರಿಗೆ ಮನದಟ್ಟಾದರಾಯಿತು. ಇಂಗ್ಲಿಷ

ಬೈಬಲ್ಲಿನ ನೂತನ ಸಂಸ್ಕರಣಗಳಲ್ಲಿಯೂ ಸಹ ಒಂದೇ ವಾಕ್ಯಸಮುದಾಯವನ್ನು ಬೇರೆ ಬೇರೆ ಸಂಪಾದಕರು ಭಿನ್ನ ಭಿನ್ನ ಪ್ರಕಾರವಾಗಿ ವಿಭಜಿಸಿದ್ದು ಕಂಡುಬರುತ್ತದೆ. ಉದಾಹರಣೆಗೆಂದು ಒಂದನ್ನು ಇಲ್ಲಿ ಕೊಡುತ್ತೇವೆ. (ಹಿಂದೆ ಇದೆ ಪ್ರಸ್ತಾವನೆಯ ಪುಟ (xxvi)ದ ಅಡಿಟಪ್ಪಣಿಯಲ್ಲಿ ಕೊಟ್ಟ) St Johnದ ಆರಂಭದ ವಾಕ್ಯಗಳಾದ :

In the beginning was the word, and the word was with the God.....

ಎಂದು ಆರಂಭವಾಗುವ ಐದುವಾಕ್ಯಗಳ ಸಮುದಾಯವನ್ನೆ ಇತ್ತೀಚಿನ ಇಂಗ್ಲಿಷ್ ಕವಿಗಳಲ್ಲಿ ಸುಪ್ರಸಿದ್ಧರಾದ Robert Bridges ಎಂಬವರು ತಾವು ಸಂಪಾದಿಸಿದ The Spirit of Man ಎಂಬ ಸಂಕಲನ ಗ್ರಂಥ (No: 42) ದಲ್ಲಿ ಲಯಾನುಸಾರವಾಗಿ ಪದ್ಯರೂಪದಲ್ಲಿಳಿ ಮುದ್ರಿಸಿದುದನ್ನು ಓದುಗರು ನೋಡಬಹುದು. ಇದರಿಂದ, ಸಂಸ್ಕರಣಕಾರರ ಪರಿಶ್ರಮ, ಪಾಂಡಿತ್ಯ, ಅನುಭವ, ಒಲವು—ಇವೆಲ್ಲವುಗಳ ಫಲವಾಗಿ ಸಂಸ್ಕರಣದ ರೀತಿಯಲ್ಲಿ ಭೇದಗಳುಂಟಾಗುವುದು ಸಾಧ್ಯವಿದೆಯೆಂಬುದು ಇಲ್ಲಿ ವ್ಯಕ್ತವಾಗುವುದು. ಆದರೆ, ನಾವು ಇದುವರೆಗೆ ವಿವೇಚಿಸಿದ ತತ್ತ್ವಗಳಿಗನುರೂಪವಾಗಿ ವಚನಗಳ ಸಂಸ್ಕರಣವನ್ನು ಶಾಸ್ತ್ರೀಯವಾದ ರೀತಿಯಲ್ಲಿ ಕೈಕೊಳ್ಳುವುದು ಈಗ ಆವಶ್ಯಕವಿದ್ದಂತೆ ಸಾಧ್ಯವೂ ಇದೆ ಎಂಬುದನ್ನು ವಾಚಕರು ಒಪ್ಪಬಹುದೆಂದು ಎಣಿಸುತ್ತೇವೆ. ಈ ತತ್ತ್ವಗಳಿಗನುಸಾರವಾಗಿಯೆ ನಮಗೆ ಸೂಕ್ತಕಂಡ ತೆರದಲ್ಲಿ ಬಸವಣ್ಣನವರ ವಚನಗಳನ್ನು ಮುದ್ರಿಸುವ ಸಾಹಸವನ್ನು ಮಾಡಿದ್ದೇವೆ ಈ ಸಂಸ್ಕರಣದಲ್ಲಿ.

ಕನ್ನಡ ಪುಸ್ತಕಗಳ ಮುದ್ರಣದಲ್ಲಿ ಈಗ ಬಳಕೆಯಲ್ಲಿ ಬಂದಿರುವ ವಿರಾಮ ಚಿಹ್ನಗಳು ಪಾಶ್ಚಾತ್ಯರಿಂದ ಎರವಲಾಗಿ ಬಂದುವು ಎಂಬುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಆದರೆ ಕನ್ನಡದ ಹಳೆಯ ಹಸ್ತಲಿಖಿತ ಪ್ರತಿಗಳಲ್ಲಿ ಪದ್ಯದ ಪಾದಗಳನ್ನು ವಿಂಗಡಿಸಲು ಒಂದು ಲಂಬ

ರೇಖೆ (।) ಯನ್ನು, ಪದ್ಯದ ಅರ್ಧವನ್ನೂ ಮುಗಿತಾಯವನ್ನೂ ಸೂಚಿಸಲಿಕ್ಕೆ ಜೋಡು ಲಂಬ ರೇಖೆ (॥) ಗಳನ್ನು ಬಳಸುತ್ತಿದುದು ಕಂಡು ಬರುತ್ತಿದೆ. ಗದ್ಯದಲ್ಲಿ ಸಾಮಾನ್ಯವಾಗಿ ವಾಕ್ಯದ ಕೊನೆಯಲ್ಲಿ ಒಂದು ಲಂಬರೇಖೆಯಿರುವುದುಂಟು. ವಚನಗಳ ಸಪ್ತಲಿಖಿತ ಪ್ರತಿಗಳಲ್ಲಿ ಈ ಲಂಬರೇಖೆಯ ಉಪಯೋಗ ಕಂಡುಬರುತ್ತಿದ್ದರೂ ಅದು ಅನೇಕ ಕಡೆ ವಾಕ್ಯದ ಮಧ್ಯದಲ್ಲಿಯೂ ಹಲವು ಬಾರಿ ಉಪಯೋಗವಾದುದು ಗೊತ್ತಾಗುತ್ತಿದೆ. ಈ ಬಗೆಯ ಉಪಯೋಗಕ್ಕೆ ಯಾವ ಕಟ್ಟುನಿಟ್ಟೂ ಇಪ್ಪಂತೆ ತೋರುವುದಿಲ್ಲವಾದರೂ, ಎಷ್ಟೋ ಸಂದರ್ಭಗಳಲ್ಲಿ ಅದರಿಂದ ಅರ್ಥ ಸರಳವಾಗುವುದೆಂದೂ ಕಂಡುಬರುತ್ತಿದೆ.

ಬಸವಣ್ಣನವರ ವಚನಗಳ ಈ ಸಂಸ್ಕರಣದಲ್ಲಿ ನಾವು ಈಗಿನ ರೂಢಿಗನುಸಾರವಾಗಿ ಪಾಶ್ಚಾತ್ಯ ವಿರಾಮಚಿಹ್ನಗಳನ್ನೆ ಬಳಸಿದ್ದೇವೆ. ಕನ್ನಡದಲ್ಲಿಯ ವಾಕ್ಯಸರಣಿ ಸಾಮಾನ್ಯವಾಗಿ ಅರ್ಥವನ್ನು ಬಳಸಿಕೊಂಡೆ ಹೋಗುವುದರಿಂದ ಈ ವಿರಾಮಚಿಹ್ನಗಳ ಆವಶ್ಯಕತೆ ಕನ್ನಡಕ್ಕೆ ಅಷ್ಟೊಂದಿಲ್ಲವೆಂಬ ಅಭಿಪ್ರಾಯದವರು ಇರುವರಾದರೂ ಇಂಥ 'ವಚನ'ದಂತಹ ಬಿಗಿಯಾದ ಸಂಗ್ರಹಾತ್ಮಕವಾದ ಶೈಲಿಯಲ್ಲಿ ಈ ಚಿಹ್ನಗಳ ಪ್ರಯೋಜನ ಬಹಳವಾಗಿ ಇದೆಯೆಂದೇ ನಮ್ಮ ಮತ.

ಅಲ್ಪವಿರಾಮ, ಅರ್ಧವಿರಾಮ, ಪೂರ್ಣವಿರಾಮ ಚಿಹ್ನಗಳನ್ನು ಸಾಮಾನ್ಯವಾಗಿ ಎಲ್ಲರೂ ಬಳಸುವ ರೀತಿಯಲ್ಲಿಯೆ ಇಲ್ಲಿಯೂ ಬಳಸಲಾಗಿದೆ. ಒಂದು ವಚನದಲ್ಲಿ ಬರುವ ವಾಕ್ಯಗಳನ್ನು ಲಯಾನುಸಾರವಾಗಿ ಒಡೆದು ಅನೇಕ ಸಾಲುಗಳನ್ನಾಗಿ ಮುದ್ರಿಸಿದ್ದೇವೆ. ಆದರೆ ಮುದ್ರಣ ಕಾಗದದ ಪರಿಮಿತಿಗನುಸಾರವಾಗಿ ಇಂತಹ ಸಾಲುಗಳನ್ನು ಮತ್ತೆ ಒಡೆಯುವ, ಹೆಚ್ಚುಕಡಿಮೆ ಮಾಡಿಕೊಳ್ಳುವ ಪ್ರಸಂಗಗಳು ಅನೇಕ ಸಲ ಒದಗಿವೆ. ವಾಕ್ಯಾರಂಭದ ಸಾಲನ್ನು ಉಳಿದ ಸಾಲುಗಳಿಗಿಂತ ಸ್ವಲ್ಪ ಎಡಗಡೆಗೆ ಮುಂಚಾಚುವಂತೆ ಅಚ್ಚುಮಾಡಿದೆ. ಪ್ರಶ್ನಾರ್ಥಕ ಚಿಹ್ನವನ್ನೂ ಉದ್ಗಾರಸೂಚಕ ಚಿಹ್ನವನ್ನೂ ಸೂಕ್ತತೋರಿದಲ್ಲೆಲ್ಲ ಉಪಯೋಗಿಸಿದೆ.

ಉದ್ಗಾರಸೂಚಕ ಚಿಹ್ನ ಸ್ವಲ್ಪ ಹೆಚ್ಚಾಗಿಯೆ ಪ್ರಯೋಗವಾಗಿದೆಯೆಂದು ಕೆಲವರಿಗೆ ತೋರಬಹುದು. ಬಸವಣ್ಣನವರ ವಚನಗಳು ಅವರ ಹೃದಯದಿಂದ ನೇರವಾಗಿ ಹೊರಹೊಮ್ಮಿದವೆಂದು ತೋರುವುದರಿಂದ ಈ ಚಿಹ್ನೆಗೆ ಹೆಚ್ಚು ಎಡೆಯಿದೆಯೆಂದು ನಾವು ಭಾವಿಸಿದ್ದೆವೆ.

ಇಂಗ್ಲಿಷಿನಲ್ಲಿ ಹೆಚ್ಚು ರೂಢವಾಗಿರುವ, ಕನ್ನಡದಲ್ಲಿ ಅಷ್ಟು ಬಳಕೆಯಲ್ಲಿಲ್ಲದ ಕೋಲನ್ (colon) ಎಂಬ (:) 'ಅಡಕಿಲ' ಚಿಹ್ನವನ್ನು ನಾವು ಈ ಸಂಸ್ಕರಣದಲ್ಲಿ ಹೊಸದಾಗಿ ಉಪಯೋಗಮಾಡಿದ್ದೇವೆ ಮೊದಲು ಬಂದ ಒಂದು ವಿಚಾರಕ್ಕೆ ವಿವರಣೆಯೆಂದೊ ವಿಸ್ತಾರವೆಂದೊ ವಿರೋಧಕವೆಂದೊ ತೋರಬಹುದಾದ ಮುಂದಿನ ವಾಕ್ಯಭಾಗದ ಸಂಬಂಧವನ್ನು ಸೂಚಿಸುವುದಕ್ಕೆ—ಎಂದರೆ ಕೇವಲ ಸಮುಚ್ಚಾಯಕವಲ್ಲದ ಇನ್ನಿತರ ಸಂಬಂಧಗಳನ್ನು ಸೂಚಿಸುವುದಕ್ಕೆ—ಈ ಚಿಹ್ನವನ್ನು ಎರಡು ವಾಕ್ಯಭಾಗಗಳ ಮಧ್ಯದಲ್ಲಿ ಬಳಸಿದ್ದೇವೆ. ಈ ಚಿಹ್ನೆಯ ಈ ಬಗೆಯ ಉಪಯೋಗ ಹೊಸದಾದುದರಿಂದ ಇಲ್ಲಿ ಅದರ ಬಳಕೆಯ ಒಂದೆರಡು ಉದಾಹರಣೆಗಳನ್ನು ಕೊಟ್ಟರೆ ಓದುಗರಿಗೆ ಅನುಕೂಲವೆನಿಸಬಹುದು:

(೧) ಕರಿಘನ: ಅಂಕುಶ ಕಿಱ್ಱುವೆನ್ನಬಪುವೆ? ಬಾರದಯ್ಯಾ (೬)

ಮೊದಲಿನ ಭಾಗಕ್ಕೂ ಮುಂದಿನ ಭಾಗಕ್ಕೂ ವಿರೋಧ.

(೨) ಎನ್ನ ನಡೆಯೊಂದು ಪರಿ: ಎನ್ನ ನುಡಿಯೊಂದು ಪರಿ:
ಎನ್ನೊಳಗೇನೂ ಶುದ್ಧವಿಲ್ಲ ನೋಡಯ್ಯಾ, (೩೦)

ಇಲ್ಲಿ ಮೊದಲಿನ ಸಾಲಿನಲ್ಲಿ ಬಂದ ಎರಡು ವಾಕ್ಯಖಂಡಗಳು ವೈಪರೀತ್ಯವನ್ನು ಸೂಚಿಸುತ್ತಿವೆ. ಮುಂದಿನ ಸಾಲಿನಲ್ಲಿ ಬಂದ ವಾಕ್ಯಖಂಡವು ಅವೆರಡಕ್ಕೂ ವಿವರಣೆಯಾಗಿದೆ.

(೩) ಅಂಕ ಕಂಡ ಕೋಲಾಸೆ ಮತ್ತೇಕಯ್ಯಾ ? ಲಿಂಕ ಕಂಡ ಪ್ರಾಣದಾಸೆ ಮತ್ತೇಕಯ್ಯಾ ? ಭಕ್ತ ಕಂಡ ತನುಮನದಾಸೆ ಮತ್ತೇಕಯ್ಯಾ ? ನಿಮ್ಮಂಕೆಗೆ ಝುಂಕೆಗೆ ಶಂಕಿತನಾದರೆ ಎನ್ನ ಲಿಂಕತನಕ್ಕೆ ಹಾನಿ, ಕೂಡಲ ಸಂಗಮದೇವಾ.

ಇದ್ದಕ್ಕಿದ್ದಂತೆ ಈ ವಚನದ ಅರ್ಥವನ್ನು ಸರಿಯಾಗಿ ತಿಳಿದುಕೊಳ್ಳುವುದು

ದುಸ್ತರವೆ ಅಹುದು. ಕೆಲವು ಮಾತೃಕೆಗಳಲ್ಲಿ 'ಕಂಡು' ಎಂಬುದಕ್ಕೆ ಪ್ರತಿಯಾಗಿ 'ಕಂಡಾ' ಎಂದೂ ದೊರೆಯುತ್ತಿದೆ. ಈ ವಚನವನ್ನು ಕೆಳಗೆ ಕಂಡಂತೆ ಬರೆಯುವುದರಿಂದ ಬಹು ಸ್ವಾರಸ್ಯವಾದ ಅರ್ಥ ಹೊರಡುತ್ತದೆ:

ಅಂಕ ಕಂಡಾ: ಕೋಲಾಸೆ ಮುತ್ತೇಕಯ್ಯಾ ?
ಲಿಂಕ ಕಂಡಾಃ ಪ್ರಾಣದಾಸೆ ಮೆತ್ತೇಕಯ್ಯಾ ?
ಭಕ್ತ ಕಂಡಾ: ತನುಮನದಾಸೆ ಮುತ್ತೇಕಯ್ಯಾ ?
ನಿಮ್ಮ ಅಂಕೆಗೆ ಝುಂಕೆಗೆ ಶಂಕಿತನಾದರೆ
ಎನ್ನ ಲಿಂಕತನಕ್ಕೆ ಹಾನಿ,
ಕೂಡಲ ಸಂಗಮದೇವಾ ! (೭೨೪)

ಇದರ ಅರ್ಥವನ್ನು ಈ ರೀತಿ ಮಾಡಬಹುದು: "(ನಾನು) ಅಂಕ (ಕಂಡೆಯಾ), ಎಂದ ಮೇಲೆ ನಾನು (ಸೂಜಿ-ಬಾಳು ಮೊದಲಾಗಿ) ಯಾವ ಆಯುಧ (=ಕೋಲ)ದಿಂದಾದರೂ ಕಾದಬೇಕು; ಅದು ನನ್ನ ಕರ್ತವ್ಯ. ಒಳ್ಳೆಯ ಆಯುಧ ದೊರೆತರೆ ಮಾತ್ರ ಯುದ್ಧಮಾಡಬಹುದೆಂಬ(ಕೋಲ) ಆಸೆ ಮತ್ತೇಕೆ? ನಾನು ಲಿಂಕ (ಭೃತ್ಯ) ನಾದುದರಿಂದ ಸ್ವಾಮಿಕಾರ್ಯಕ್ಕಾಗಿ ನುಡಿಯಲೂ ಬೇಕು; ಎಂದ ಮೇಲೆ ಪ್ರಾಣದಾಸೆ ಮತ್ತೇಕೆ ? ನಾನು ಭಕ್ತನಾದುದರಿಂದ ತನುಮನಧನಗಳನ್ನು ದಾಸೋಹದಲ್ಲಿ ಸವಿಸಲೆಬೇಕು; ಅದು ತನ್ನ ಧರ್ಮ; ಎಂದ ಮೇಲೆ, ಕೂಡಲ ಸಂಗಮದೇವಾ, ನಿನ್ನ ಆಜ್ಞೆಗೆ ಅಥವಾ ಬೆದರಿಕೆಗೆ ನಾನು ಬೆದರಿದರೆ ನಿನ್ನ ಸೇವಕನಲ್ಲಾ—" ಎಂದು ಸರಳವಾಗಿ ಮಾಡಿಕೊಳ್ಳಬಹುದಲ್ಲವೆ? ಇಲ್ಲಿ 'ಕಂಡಾ' ಎಂಬುದರ ಮುಂದೆ ಪ್ರಶ್ನೆ ಚಿಹ್ನೆಯನ್ನೂ ಬಳಸಬಹುದು; ಆದರೆ ನಮ್ಮ ದೃಷ್ಟಿಯಲ್ಲಿ ಈ ಅಡಕೆಲು ಚಿಹ್ನವೆ ಹೆಚ್ಚು ಸೂಕ್ತವೆಂದು ತೋರಿದೆ.

ಒಂಟಿ (' ') ಅಥವಾ ಜೋಡು (" ") ಅವತರಣ ಚಿಹ್ನಗಳನ್ನು ಅಲ್ಲಲ್ಲಿ ಬಳಸಿದ್ದೇವೆ. ಅದರಿಂದ ಅರ್ಥವ್ಯಕ್ತ ಸುಗುಮವಾಗುವುದೆಂದು ನಮ್ಮ ಎಣಿಕೆ. ಇನ್ನು ವಾಕ್ಯಸರಣಿಯಲ್ಲಿ ಭಂಗದೋರಿದಾಗ ಅದನ್ನು ಸೂಚಿಸುವುದಕ್ಕೆಂದು (dash ಡಾಷ್) ಎಂಬ (—) ಸರಳ ರೇಖೆಯನ್ನು ಉಪಯೋಗಿಸಿದ್ದೇವೆ. ವಾಕ್ಯ ಭಂಗವಾಗಿ; ನಡುವೆ ಬೇರೆ

ವಿಚಾರ ಬಂದಿದ್ದರೆ, ಅಂತಹ ವಾಕ್ಯಭಂಗವನ್ನು, ಅದರ ಹಿಂದೆಯೂ ಮುಂದೆಯೂ ಈ ಸರಳರೇಖೆಯನ್ನು ಬಳಸಿ, ಇತರ ಭಾಗಗಳಿಂದ ಪ್ರತ್ಯೇಕಿಸಿದ್ದೇವೆ. ಉದಾ:

(೪) ಮುನ್ನಿನ ಆದ್ಯರ ಪಥಂಗಳು ಇನ್ನಾರಿಗೆಯೂ ಅಳವಡದು, ನೋಡಾ. ಬಲ್ಲೆನಾಗಿ ಒಲ್ಲೆನವರು ಸಲ್ಲರು ಶಿವಪಥಕ್ಕೆ. ಒಳ್ಳಿಹ ಮೈಲಾರನ ಸಿಂಗಾರದಂತೆ, ವೇಶಿಯ ಬಾಯಂಜಲನುಂಬ ದಾಸಿಯ ಸಂಸಾರದಂತೆ ಕೂಡಲ ಸಂಗನ ಶರಣರ ನರಿಯದ ಉಳಿದ ಭಂಗಿತರ ೩೭.

ಇದಕ್ಕೆ ತಕ್ಕ ವಿರಾಮ ಚಿಹ್ನಗಳನ್ನು ಬಳಸಿ ಕೆಳಗಿನಂತೆ ಬರೆಯುವುದರಿಂದ ಅರ್ಥ ಸರಳವಾಗುವುದರಲ್ಲಿ ಸಂದೇಹವಿಲ್ಲ:

ಮುನ್ನಿನ ಆದ್ಯರ ಪಥಂಗಳು ಇನ್ನಾರಿಗೆಯೂ ಅಳವಡದು, ನೋಡಾ!
ಬಲ್ಲೆನಾಗಿ ಒಲ್ಲೆನು—ಅವರು ಸಲ್ಲರು ಶಿವಪಥಕ್ಕೆ,
ಒಳ್ಳಿಹ ಮೈಲಾರನ ಸಿಂಗಾರದಂತೆ
ವೇಶಿಯ ಬಾಯಂಜಲನುಂಬ ದಾಸಿಯ ಸಂಸಾರದಂತೆ—
ಕೂಡಲ ಸಂಗನ ಶರಣರನರಿಯದ ಉಳಿದ ಭಂಗಿತರ! (೬೩೩)

ಈ ವಚನದ ಎರಡನೆಯ ವಾಕ್ಯವನ್ನು ಈ ರೀತಿ ಅನ್ವಯಿಸಿಕೊಳ್ಳಬಹುದೆಂದು ಕಾಣುತ್ತದೆ. "ಕೂಡಲ ಸಂಗನ ಶರಣರನರಿಯದ ಉಳಿದ ಭಂಗಿತರನ್ನು ಬಲ್ಲೆನಾಗಿ (ನಾನು) ಅವರನ್ನು ಒಲ್ಲೆನು; ಒಳ್ಳಿಹ ಮೈಲಾರನ ಸಿಂಗಾರದಂತೆ, ವೇಶಿಯ ಬಾಯಂಜಲ ತಿನ್ನುವ ದಾಸಿಯ ಸಂಸಾರದಂತೆ ಅವರು ಶಿವಪಥಕ್ಕೆ ಸಲ್ಲರು"—ಎಂದು.

ವಿರಾಮಚಿಹ್ನಗಳನ್ನು ಬಳಸುವಲ್ಲಿ ಒಂದು ಕ್ರಮಬೇಕು, ವಿಶೇಷ ಜಾಗ್ರತಿಯೂ ಬೇಕು–ಎಂದು ಹೇಳಬೇಕಾಗಿಲ್ಲ ಆದರೆ ಅಂತ ಓರನ್ನವಾದ ಬಗೆ ಏರ್ಪಡಬೇಕಾದರೆ ಕನ್ನಡದಲ್ಲಿಯ ಮುದ್ರಣಕಲೆ ಇನ್ನೂ ಬಹುದೂರ ವಿಸ್ತರಿಸಬೇಕು ಸಾಧ್ಯವಿದ್ದಷ್ಟು ಎಚ್ಚರಿಕೆಯನ್ನು ತಳೆದಿದ್ದೇವೆ ಎಂದು ಮಾತ್ರ ನಾವು ಇಲ್ಲಿ ಹೇಳಬಹುದು

ಆದರೆ ಸಕೃದ್ದರ್ಶನಕ್ಕೆ ಈ ವಚನ ಹರಿಬ್ರಹ್ಮರನ್ನು ಮರೆಯಲಾಗದು, ಶಿವನನ್ನು ಮರೆಯಬಹುದು. ಎಂದು ಅರ್ಥವಾಗುವಂತೆ ಕಾಣುವುದರಿಂದ, ಇತ್ತೀಚಿನ ಹಸ್ತಲಿಖಿತ ಪ್ರತಿಗಳಲ್ಲಿ:

ಮರೆಯಲಾಗದೆ ಹರಿಯ? ಮರೆಯಲಾಗದೆ ಬ್ರಹ್ಮನ?
ಮರೆಯಲಾಗದೆ ತೆತ್ತೀಸಕೋಟಿ ದೇವರ್ಕಳ ?
ನಮ್ಮ ಕೂಡಲ ಸಂಗಮದೇವನ ಮರೆಯಲಿಹುದು !

ಎಂದು ತಿದ್ದಿ ಬರೆದಿರಬೇಕೆಂದು ತೋರುತ್ತಿದೆ. ಈ ಪಾಠವೇ ಶ್ರೀ ಹಳಕಟ್ಟಿಯವರ ''ಬಸವೇಶ್ವರನ ವಚನಗಳ"ಲ್ಲಿ ಅಂಗೀಕೃತವಾಗಿದೆ[೬]. ಆದರೆ ಬಸವಣ್ಣನವರು ಹರಿಬ್ರಹ್ಮರನ್ನು ನಂಬುತ್ತಿದ್ದವರನ್ನು ಕುರಿತು ವ್ಯಂಗ್ಯವಾಗಿ ನುಡಿದ ವಚನವಿದೆಂದು ನಮಗೆ ತೋರುತ್ತಿದೆ. ಇಲ್ಲಿ 'ಮರೆ' ಎಂಬ ಶಬ್ದದಲ್ಲಿ ದ್ವಂದ್ವಾರ್ಥವಿದೆಯೆಂದೂ ಹೇಳಬಹುದು. 'ಮರೆ' ಕ್ರಿಯಾಪದವಾದಾಗ 'ವಿಸ್ಮರಣೆಹೊಂದು' ಎಂಬ ಅರ್ಥವನ್ನೂ ನಾಮವಾದಾಗ 'ಆಶ್ರಯ'ವನ್ನೂ ಸೂಚಿಸುತ್ತಿದೆ. ಆದುದರಿಂದ, ''ಹರಿಬ್ರಹ್ಮರನ್ನು ಮರೆಯುವುದು ಈ ಜನರಿಗೆ ಆಗುವುದಿಲ್ಲ; ಆದರೆ ಆ ದೇವತೆಗಳ ಆಶ್ರಯವೂ ಇವರಿಗೆ ಸಿಕ್ಕುವುದಿಲ್ಲ. ಕೂಡಲ ಸಂಗಮನನ್ನು ಮರೆಯಬಹುದೆಂದು ತಿಳಿದಿದ್ದಾರೆ ಇವರು; ಆದರೆ ಕೊನೆಗೆ ಇವರಿಗೆ ನಿಜವಾದ ಆಶ್ರಯಸ್ಥಾನ ಆತನೆ" ಎಂಬುದೇ ಬಸವಣ್ಣನವರ ಅಭಿಪ್ರಾಯವಿದ್ದಿರಬೇಕು[೪]. ಆದುದರಿಂದ ಈ ಸಂಸ್ಕರಣದಲ್ಲಿ ಈ ವಚನದ ತಿದ್ದುಪಡಿಯನ್ನು ನಾವು ತಾಳೆವೋಲೆಯ ಪ್ರತಿಗಳಿಗನುರೂಪವಾಗಿ ಶುದ್ಧಿಪತ್ರಿಕೆಯಲ್ಲಿ ಕೊಟ್ಟಿದ್ದೇವೆ.

೯ ಜಂಗಮಕ್ಕೆಱೆದರೆ ಸ್ಥಾವರ ನೆನೆಯಿತ್ತು. (೧೯೬)

ಎಂಬಲ್ಲಿ 'ನೆನೆ' ಎಂಬ ಶಬ್ದದಲ್ಲಿ (೧) ತೊಯ್ಯು (೨) ಸ್ಮರಿಸು ಎಂಬೆರಡು ಅರ್ಥಕ್ಕೂ ಎಡೆಯಿದೆ. [(ಸ್ಥಾವರ) ಲಿಂಗಕ್ಕೆ ಅಗ್ಗವಣಿ ನೀರಿನಿಂದ ಮಜ್ಜನಕ್ಕೆರೆವುದಕ್ಕಿಂತ ಜಂಗಮರಿಗೆ ಧನವನ್ನು ಸುರಿಸಿದರೆ ಲಿಂಗ ತೃಪ್ತಿಯಾಗುವುದೆಂಬ ಭಾವ.]

ಆದುದರಿಂದ, ಕೋಶದಲ್ಲಿ ನಮಗೆ ದ್ವಂದ್ವಾರ್ಥವಿದೆಯೆಂದು ತೋರಿದ ಎಡೆಗಳಲ್ಲಿ ಶಬ್ದಗಳಿಗೆ ಬೇರೆ ಬೇರೆ ಅರ್ಥಗಳನ್ನು (೧) ಮತ್ತು (೨) ಅಂಕೆಗಳಿಂದ ಸೂಚಿಸಿದ್ದೇವೆ.

ಈ ವಚನಗಳಲ್ಲಿ ಬಳಕೆತಪ್ಪಿ, ಅಂತೆಯೆ, ಅಪರಿಚಿತ ಅಥವಾ ಹೊಸ ವೆನಿಸುವ ಶಬ್ದಗಳು ಅನೇಕವಿರುವುವೆಂಬ ದೃಷ್ಟಿಯಿಂದಲೂ, ಎಷ್ಟೋ ಕಡೆಗಳಲ್ಲಿ ಶ್ಲೇಷೆಗೆ ಅವಕಾಶವಿರುವುದೆಂಬ ದೃಷ್ಟಿಯಿಂದಲೂ ಕೋಶದ ಆವಶ್ಯಕತೆ ಇರುವುದೆಂಬುದು ನಾವು ಮೇಲೆ ಕೊಟ್ಟ ಉದಾಹರಣೆಗಳಿಂದ ಓದುಗರಿಗೆ ಸ್ಪಷ್ಟವಾಗುವುದೆಂದು ಆಶಿಸುತ್ತೇವೆ. ಈ ಕೋಶವನ್ನು ಸಿದ್ಧ ಪಡಿಸುವಲ್ಲಿ ನಾವು ಸಾಧ್ಯವಿದ್ದಷ್ಟು ಶ್ರದ್ಧೆ-ಜಾಗ್ರತೆಗಳನ್ನು ವಹಿಸಿದ್ದೇವೆಂದು ಹೇಳಬಹುದಾದರೂ, ನಮ್ಮ ಕಾರ್ಯ ಸಂಪೂರ್ಣ ತೃಪ್ತಿಕರವಾಗಿದೆಯೆಂದು ಹೇಳಲಾರೆವು. ಹಲವು ಶಬ್ದಗಳಿಗೆ ನಮಗೆ ಸರಿಯಾದ ಅರ್ಥ ದೊರೆಯದ್ದರಿಂದ ಅಂತಹ ಕಡೆಗಳಲ್ಲಿ (ಪ್ರಶ್ನೆ ಚಿಹ್ನೆಯನ್ನು ಬಳಸಿ) ಅರ್ಥವನ್ನು ಕೊಡದೆ ಹಾಗೆ ಬಿಟ್ಟಿದ್ದೇವೆ. ವಾಚಕರೂ, ಪಂಡಿತರೂ, ಜಿಜ್ಞಾಸುಗಳು ಪ್ರಮಾದಗಳನ್ನು ತಿದ್ದಲು ನೆರವಾಗುವರೆಂದು ಆಶಿಸುತ್ತೇವೆ

ವಚನಗಳ ಕೈಬರೆಹದ ಕೆಲವು ತಾಳೆವೋಲೆಯ ಪ್ರತಿಗಳಲ್ಲಿ ಹಳಗನ್ನಡದಲ್ಲಿ ಬಳಕೆಯಾಗುತ್ತಿದ್ದ ಶಕಟ ರೇಫೆ (ಱ)ಯ ಪ್ರಯೋಗ ಕಂಡು ಬರುತ್ತಿದೆ. ಆದರೆ ಅದು ಯಾವಾಗಲೂ ಸರಿಯಾಗಿಯೆ ಉಪಯೋಗವಾಗಿದೆಯೆಂದು ಹೇಳಲಾಗದು. ಆದರೂ ಈ ವರ್ಣದ ಉಪಯೋಗದಿಂದ ಎಷ್ಟೋ ಕಡೆಗಳಲ್ಲಿ ಅರ್ಥ ಸುಗಮವಾಗುವುದೆಂದು ಕಂಡುಬರುತ್ತಿದೆ. ಉದಾಹರಣೆಗಾಗಿ:

(೧೦) ಉಱಿ ತಾಗಿದ ಮೃಗವು ಒಂದಡಿಯಿಡುವುದೆ? (೬೨)

ಎಂಬಲ್ಲಿ ಬಂದಿರುವ 'ಉಱಿ' ಎಂಬುದನ್ನು 'ಉರಿ' ಎಂದು ಬರೆದರೆ ಅದು 'ಪಶು-ಪಕ್ಷಿಗಳನ್ನು ಹಿಡಿಯುವ ಬಲೆ'ಯನ್ನು ಸೂಚಿಸುತ್ತಿದೆಂಬುದು ವಾಚಕರಿಗೆ ಗೊತ್ತಾಗದೆ ಹೋಗುವ ಸಂಭವವಿದೆ. ಆದುದರಿಂದ, ಈ ಸಂಸ್ಕರಣದಲ್ಲಿ ಱಕಾರವನ್ನು ಬಳಸಿದ್ದೇವೆ. ಆದರೆ, ಅಜ್ಞಾನದಿಂದಾ

ಗಲಿ ಮರೆವೆಯಿಂದಾಗಲಿ ಇದರ ಬಳಕೆಯಲ್ಲಿ ತಪ್ಪುಗಳಾಗುವ ಸಂಭವ ವಿರುವುದರಿಂದ, ಅಂತಹ ಅಶುದ್ಧಗಳನ್ನು ಮುಂದಿನ ಮುದ್ರಣದಲ್ಲಿ ಸರಿ ಗೊಳಿಸಲಾಗುವುದು.

೮

ಈ ವಚನಗಳನ್ನು ಸಂಸ್ಕರಿಸುವ ಕಾರ್ಯದಲ್ಲಿ ಅನೇಕ ತಾಳೆ ವ್ರೋಲೆಯ ಮತ್ತು ಕೈಬರೆಹದ ಕಾಗದದ ಪ್ರತಿಗಳನ್ನೂ, ಹಲವು ಮುದ್ರಿತ ಪ್ರತಿಗಳನ್ನೂ, ಅಲ್ಲದೆ ಕೆಲವು ಟೀಕಿನ ಪ್ರತಿಗಳನ್ನೂ ಉಪ ಯೋಗಿಸಿಕೊಂಡಿದ್ದೇವೆ. ರಾ. ಬ. ಹಳಕಟ್ಟಿಯವರು ಸಂಪಾದಿಸಿದ (ಹಳೆಯ ಪದ್ಧತಿಯ) ಎಲ್ಲ ಸಂಸ್ಕರಣಗಳನ್ನೂ "ಹೊಸಪದ್ಧತಿಯ ಬಸವೇಶ್ವರನ ವಚನಗಳು" ಎಂಬುದರ (೧೯೪೨) ಆವೃತ್ತಿಯನ್ನೂ ಬಳಸಿಕೊಂಡಿದ್ದೇವೆ.

ಕೈಬರೆಹದ, ತಾಳೆವ್ರೋಲೆಯ, ಮತ್ತು ಕಾಗದದ ಪ್ರತಿಗಳಲ್ಲೆಲ್ಲ ಸಾಮಾನ್ಯವಾಗಿ ವಚನಗಳ ಅನುಪೂರ್ವಿ ಒಂದೇ ವಿಧವಾಗಿದೆ. ಅಲ್ಲಲ್ಲಿ ಒಂದೆರಡು ಅಪವಾದಗಳೂ ಉಂಟು. ಆದರೆ ಇಂತಹ ಅಪವಾದಗಳು ಪ್ರತಿಮಾಡುವವರ ಕರ್ಣತಪ್ಪಿನಿಂದಾದುವುವೆಂದು ಹೇಳಲು ಬರುವಂತಿದೆ. ಆದುದರಿಂದ, ನಾವು ಹೆಚ್ಚು ಪ್ರತಿಗಳಲ್ಲಿ ಕಾಣುವ ಅನುಪೂರ್ವಿಯನ್ನೆ ಅನುಸರಿಸಿದ್ದೇವೆ. ಅಪವಾದಗಳನ್ನು ಅಡಿಟಿಪ್ಪಣಿಯಲ್ಲಿ ನಿರ್ದೇಶಿಸಿದ್ದೇವೆ.

ಈ ವಚನಗಳಿಗೆ "ಷಟ್‌ಸ್ಥಳದ ವಚನಗಳು" ಎಂದೆ ತಾಳೆವ್ರೊಲೆಯ ಮಾತೃಕೆಗಳಲ್ಲಿ ದೊರೆಯುತ್ತಿದೆ, ಕೈಬರೆಹದ ಪ್ರತಿಗಳಲ್ಲೆಲ್ಲ ಈ ವಚನ ಗಳನ್ನು ಷಟ್‌ಸ್ಥಳಾನುಸಾರವಾಗಿಯೆ ವಿಭಾಗಮಾಡಿದುದೂ ಕಂಡು ಬರು ತ್ತಿದೆ; ಅಲ್ಲದೆ, ಪ್ರತಿಯೊಂದು ಸ್ಥಳದಲ್ಲಿಯೂ ಮತ್ತೆ ಉಪವಿಭಾಗ ಗಳಿದ್ದುದೂ ಗೋಚರವಾಗುತ್ತಿದೆ. ಆದುದರಿಂದ ನಾವು ಈ ಎಲ್ಲ ಭಾಗ-ವಿಭಾಗಗಳನ್ನು ಈ ಸಂಸ್ಕರಣದಲ್ಲಿ ಇದ್ದಂತೆ ಉಳಿಸಿಕೊಂಡಿದ್ದೇವೆ.

ಹಲವರು—ಬಸವಣ್ಣನವರ, ಇಲ್ಲವೆ ಇನ್ನಿತರ ವಚನಕಾರರ ವಚನಗಳು ಬಿಡಿ ಬಿಡಿಯಾಗಿಯೆ ರಚಿತವಾದುವು; ಅವುಗಳಿಗೆಲ್ಲ ಪರಸ್ಪರ ಸಂಬಂಧವನ್ನು ಕಲ್ಪಿಸಿ, ಸ್ಥಳಕಟ್ಟುಗಳನ್ನು ಬಹುಕಾಲದ ತರುವಾಯ

ಬೇರೆಯವರು ಮಾಡಿರಬೇಕು-ಎಂದು ಊಹಿಸುತ್ತಾರೆ. ಆದರೆ ಈ ಊಹೆಗೆ ಬಲವತ್ತರವಾದ ಆಧಾರಗಳು ಇದ್ದಂತೆ ನಮಗೆ ತೋರುವುದಿಲ್ಲ ಅದೇನೆ ಇರಲಿ, ಈ ಸ್ಥಳಕಟ್ಟುಗಳ ಮತ್ತು ಅವಾಂತರ ವಿಭಾಗಗಳು ನಿರ್ದೇಶವು ಎಲ್ಲ ಮಾತೃಕೆಗಳಲ್ಲಿಯೂ ಒಂದೇ ವಿಧವಾಗಿರುವುದರಿಂದ ಅವುಗಳನ್ನು ಇದ್ದಂತೆ ಇಟ್ಟುಕೊಳ್ಳುವುದು ಲೇಸೆಂಬ ನಿರ್ಣಯಕ್ಕೆ ನಾವು ಬಂದಿದ್ದೇವೆ. ಕೆಲವು ಸಂದರ್ಭಗಳಲ್ಲಿ ಮೊದಲಿನ ಒಂದು ಸ್ಥಳದಲ್ಲಿ ಬರುವ ಹಿಂದಣ ಒಂದು ವಚನಕ್ಕೂ ಮತ್ತೊಂದು ಸ್ಥಳದಲ್ಲಿ ಬರುವ ಮುಂದಣ ಇನ್ನೊಂದು ವಚನಕ್ಕೂ ಸಕೃದ್ದರ್ಶನಕ್ಕೆ ಕಾಣಬರುವ ವಿರೋಧ ಈ ಸ್ಥಳಕಟ್ಟುಗಳ ಹಿನ್ನೆಲೆಯಲ್ಲಿಯೆ ಬಗೆಹರಿಯುವುದೆಂದು ಗೊತ್ತಾಗುವುದರಿಂದ ಸ್ಥಳಕಟ್ಟುಗಳನ್ನು ಕಾಯ್ದುಕೊಳ್ಳುವುದು ಆವಶ್ಯಕವೆಂದು ನಮಗೆ ತೋರಿದೆ[೪೮]. ಶ್ರೀ ಹಳಕಟ್ಟಿಯವರೆ ಸ್ಥಳಕಟ್ಟಿನ ಮಹತ್ತ್ವವನ್ನು ಕುರಿತು "ಯಾವುದಕ್ಕೆ ಇಂಗ್ಲಿಷದಲ್ಲಿ ಮಿಷ್ಟಿಸಿಜಮ್ ಎಂಬ ಹೆಸರು ಇದೆಯೊ (ಇದಕ್ಕೆ ನಾವು 'ಶಿವಾನುಭವ, ಎಂಬ ಹೆಸರನ್ನು ಕೊಟ್ಟಿದ್ದೇವೆ) ಆ ವಿಷಯವು ಷಟ್‌ಸ್ಥಲ ವಿಷಯಗಳಲ್ಲಿ ಅಡಕವಾಗಿದ್ದು ಈ ಸ್ಥಲಗಳಿಗೆ ಅನುಸರಿಸಿ ವಚನಗಳ ಜೋಡಣೆ ಇರುವುದುಂಟು," ಎಂದು ಹೇಳಿದುದು[೪೯] ಸರಿಯೆಂದು ನಮ್ಮ ಅಭಿಪ್ರಾಯ.

ಈಗ ಪ್ರಚಾರದಲ್ಲಿರುವ ಬಸವಣ್ಣನವರ ವಚನಗಳಲ್ಲಿ ಕೆಲವಾದರೂ ಪ್ರಕ್ಷಿಪ್ತ ವಚನಗಳು ಸೇರಿರಬೇಕೆಂದೂ, ಪರಸಮಯ ನಿಂದಾವ್ಯಂಜಕಗಳಿಂದಿನಿಸುವ ವಚನಗಳು ಆ ವರ್ಗಕ್ಕೆ ಸೇರಬೇಕಾದುವೆಂದೂ ಕೆಲವರು--ಬಸವಣ್ಣನವರ ಬಗೆಗೆ ಸದಭಿಮಾನವನ್ನು ತಾಳಿಯೆ -- ತರ್ಕಿಸುತ್ತಾರೆ. ಆದರೆ ನಾವು ನೋಡಿದ ಎಲ್ಲ ಕೈಬರಹದ ಪ್ರತಿಗಳಲ್ಲಿಯೂ ಇವೆಲ್ಲ ವಚನಗಳು ಓರಸ್ಥವಾಗಿಯೆ ಇರುವುವು; ಅಲ್ಲದೆ, ಬಸವಣ್ಣನವರ ವಚನಗಳನ್ನು 'ಗೀತೆಗಳೆ'ಂದು ಕರೆದು ಅವುಗಳನ್ನು ಬಹುವಾಗಿ ಹೊಗಳಿದ ಹರಿಹರದೇವನು ಆ ವಚನಗಳ ಪರಿವಿಡಿಯನ್ನೆ ಹೇಳುವನೊ ಎಂಬಂತೆ, ತನ್ನ ಬಸವರಾಜದೇವರಗಳೆಯಲ್ಲಿ[೫೦] ಅವುಗಳನ್ನು ಕೆಳೆಗೆ ಕಾಣಿಸಿದಂತೆ ಬಣ್ಣಿಸಿರುವುದು ಈ ಸಂದರ್ಭದಲ್ಲಿ ನೆನಪಿನಲ್ಲಿಡಲು ತಕ್ಕುದಾಗಿದೆ:

ನೆನೆನೆನೆದು ಪುಳುಕಿಸುತೆ ಗೀತಮುಂ ಪಾಡುತುಂ
ಮುನಿದು ಸಂಗಂಗೆ ಹೊಸಗೀತಮುಂ ಪಾಡುತುಂ
ಮೂದಲಿಸಿ ಪಾಡುತುಂ ಮುದ್ದಿಸುತೆ ಪಾಡುತುಂ
ಆದರಿಸಿ ಪಾಡುತುಂ ಮೇರೆಗೆಡೆ ಪಾಡುತುಂ
ಗೀತಂಗಳೊಳಗೇಕನಿಷ್ಠೆ ಹೊಳೆಹೊಳೆಯುತಿರೆ
ಗೀತಂಗಳೊಳಗಭವಭಕ್ತಿ ಬೆಳೆಬೆಳೆಯುತಿರೆ
ಗೀತದೊಳ್ ಸಂಗನಾಧಿಕ್ಯಮೊಪ್ಪುತ್ತುಮಿರೆ
ಗೀತದೊಳ್ ಶರಣರ ಸಮುಗ್ರವೇ ಜಗಿಲುತಿರೆ
ಗೀತದೊಳ್ ಪರದೈವಶೋಷಣಂ ತೋಲ್ಲುತಿರೆ
ಗೀತದೊಳ್ ಪರಸಮಯಭೀಷಣಂ ಪೊಣ್ಮುತಿರೆ
ಗೀತಂ ಶಿವಂಗೆ ಕರ್ಣಾಭರಣವಾಗುತಿರೆ
ಗೀತವೀಶನ ದಯಾಕರುಷಣವದಾಗುತಿರೆ
ಹಾಡುತುಂ ಶರಣರೊಳ್ ಬಸವಣ್ಣನೊಪ್ಪಿದಂ
ಆಡುತುಂ ಭಕ್ತನಿಧಿ ಬಸವಣ್ಣನೊಪ್ಪಿದಂ.

ಪರಹೈವಶೋಷಣಕೆರವಾದ ಪರಸಮಯಭೀಷಣವೆನಿಸುವಬಸವಣ್ಣನವರ ವಚನಗಳು ಹರಿಹರದೇವನ ಕಾಲದಲ್ಲಿಯೆ ಪ್ರಚಾರದಲ್ಲಿದ್ದುವಾದುದರಿಂದ, ಇಂತಹ ವಚನಗಳು ಪ್ರಕ್ಷಿಪ್ತವಾಗಿರಬಹುದೆ ಎಂಬ ವಿಷಯವನ್ನು ವಿವೇಚಿಸುವ ಗೊಡವೆಗೆ ನಾವು ಕೈಯಾನಲಿಲ್ಲ.

ಬಸವಣ್ಣನವರ ಷಟ್‌ಸ್ಥಳದ ವಚನಗಳಿಗೆ ಹಲವು ಬಗೆಯ ಟೀಕೆಗಳು ಅನೇಕ ಶತಮಾನಗಳಿಂದಲೂ ಬಳಕೆಯಲ್ಲಿದ್ದಂತೆ ಕಂಡು ಬರುತ್ತಿದೆ. ನಮಗೆ ದೊರಕಿದ ಟೀಕಿನ ಪ್ರತಿಗಳಲ್ಲಿ ಕೆಲವು ತಾಳೆವೋಲೆಯ ಮೇಲೆಯೂ ಇವೆ. ಆದರೆ ಇವುಗಳಿಂದ ವಚನಗಳ ಪಾಠದ ಶುದ್ಧತೆಗಾಗಲಿ, ಅರ್ಥದ ಸುಗಮತೆಗಾಗಲಿ ಹೆಚ್ಚು ನೆರವಾಗುವಂತೆ ನಮಗೆ ತೋರಿಲ್ಲ. ಮೇಲಾಗಿ ಈ ಟೀಕೆಗಳು ಶಿವಾನುಭವ, ಶೈವಸಿದ್ಧಾಂತ, ವೇದಾಂತ ಮುಂತಾದ ಪರಂಪರೆಗಳಿಗನುಸಾರವಾಗಿ ಬೇರೆ ಬೇರೆಯಾಗಿರುವಂತೆಯೂ ಕಂಡುಬಂದಿದೆ. ಈ ಟೀಕೆಗಳಿಂದ ಅಲ್ಲೊಂದು ಇಲ್ಲೊಂದು ಶಬ್ದಕ್ಕೆ ಸಾಂಪ್ರದಾಯಿಕ ಅರ್ಥವೇನಿದ್ದಿತೆಂಬುದು ಗೊತ್ತಾಗಬಹುದಾ

ಗಿದೆ. ಒಟ್ಟಿನಲ್ಲಿ ಟೀಕಿನ ಪ್ರತಿಗಳಿಂದ ನಮಗೆ ಹೆಚ್ಚಿನ ಪ್ರಯೋಜನ ವೇನೂ ಆಗಲಿಲ್ಲವೆಂದೇ ಹೇಳಬೇಕಾಗಿದೆ.

೯

ಈ ಸಂಸ್ಕರಣದಲ್ಲಿ ಕೆಲವು ಚಿತ್ರಗಳನ್ನೂ ಸೇರಿಸಲಾಗಿದೆ. ಅವು ಗಳಲ್ಲಿ ಕೂಡಲ ಸಂಗಮದಲ್ಲಿಯ ಬಸವಣ್ಣನವರು ಐಕ್ಯಹೊಂದಿದ ಸ್ಥಾನ ವನ್ನು ಸೂಚಿಸುವ ಕಲ್ಲಮಂಟಪದ ಚಿತ್ರವೊಂದಾಗಿದೆ. ಇನ್ನೊಂದು ತಿವನ ನಾಟ್ಯವನ್ನು ಪ್ರಕಟಿಸುವ ನಟರಾಜನ ಚಿತ್ರ. ಇದು ದಕ್ಷಿಣಭಾರತನಲ್ಲಿ ಅತಿ ಪ್ರಚಾರದಲ್ಲಿರುವ, ಬಹುಭಾವಗರ್ಭಿತ ಶಿಲ್ಪವೆಂದು ಜಗತ್ತಿನಲ್ಲಿಯೆ ಪ್ರಸಿದ್ಧವಿರುವ, ಕಂಚಿನ ಮೂರ್ತಿಯ ಛಾಯಾಚಿತ್ರ[೫೧]. ವೀರಶೈವರು ಮೂರ್ತಿಪೂಜಕರಲ್ಲವಾದುದರಿಂದ, ಬಸವಣ್ಣನವರ ವಚನಗಳ ಗ್ರಂಥದಲ್ಲಿ ಈ ಚಿತ್ರವನ್ನು ಸೇರಿಸಿದುದರ ಔಚಿತ್ಯವನ್ನು ಕೆಲವರು ಪ್ರಶ್ನಿಸಬಹುದು. ಆದರೆ ನಟೇಶ್ವರ ಮೂರ್ತಿಯ ವರ್ಣನೆ ಬಸವಣ್ಣನವರ ವಚನಗಳಲ್ಲಿಯೆ ಬಂದಿರುವುದರಿಂದಲೂ[೫೨], ಅದು ಚೈತನ್ಯಮೂರ್ತಿಯಾಗಿರುವುದರಿಂದಲೂ, ಬಸವಣ್ಣನವರು ತಮ್ಮ ಒಂದು ವಚನದಲ್ಲಿ[೫೩] "ನೀನು ನಾಟ್ಯಕ್ಕೆ ನಿಂದಲ್ಲಿ ನಾನು ಚೈತನ್ಯವೆಂಬ ವಾಹನ ವಾಗಿರ್ದೆ" ಎಂದು ಹೇಳಿಕೊಂಡಿರುವುದರಿಂದಲೂ ಅವುಗಳ ದ್ಯೋತಕ ವೆಂದು ಈ ಚಿತ್ರವನ್ನು ಈ ಸಂಸ್ಕರಣದಲ್ಲಿ ಉದ್ದೇಶಪೂರ್ವಕವಾಗಿಯೆ ಸೇರಿಸಿದ್ದೇವೆ. ಇದೇ ನಟೇಶ ಮೂರ್ತಿಯು ಹಿನ್ನೆಲೆಯಲ್ಲಿ ನಾಟ್ಯವಾಡು ತ್ತಿದ್ದಂತೆ, ಬಸವಣ್ಣನವರು ವಿಚಾರಮಗ್ನರಾಗಿ ಕುಳಿತಂತೆ ಬರೆದಿರುವ ಚಿತ್ರವನ್ನು ಈ ಸಂಸ್ಕರಣದ ರಕ್ಷಾಪತ್ರದ ಮೇಲೆ ಮುದ್ರಿಸಲಾಗಿದೆ. ಈ ಸುಂದರ ಚಿತ್ರವನ್ನು ಈ ಸಂಸ್ಕರಣಕ್ಕೆಂದೆ ಬರೆದುಕೊಟ್ಟ ಸುಪ್ರಸಿದ್ಧ ಚಿತ್ರಕಲಾ ಪ್ರವೀಣರಾದ ಶ್ರೀ ಮಿಣಜಿಗಿ ಮಡಿವಾಳಪ್ಪನವರು ಎ ಆರ್. ಎ. (ಲಂಡನ್) ಅವರಿಗೆ ನಾವು ತುಂಬ ಉಪಕೃತರು.

ಈ ಸಂಸ್ಕರಣವನ್ನು ಅಚ್ಚಿಗೆ ಸಿದ್ಧಪಡಿಸುವಲ್ಲಿ, ಪಾಠಾಂತರಗಳನ್ನು ಗುರುತಿಸುವಲ್ಲಿ, ನಮಗೆ ಧಾರವಾಡದ ರಾಜಾಲಖಮಗೌಡಾ ಹೈಸೂಲ್ಕಿನ

ಶಿಕ್ಷಕರ ವರ್ಗದವರ ಸಾಹಾಯ್ಯ ಬಹಳವಾಗಿದೆ; ಅವರಿಗೆಲ್ಲ ಈ ಮೂಲಕ ನಮ್ಮ ವಂದನೆಯನ್ನು ಸಮರ್ಪಿಸುತ್ತೇವೆ. ಬಸವಣ್ಣನವರ ವಚನಗಳ ತಾಳೆವ್ವೋಲೆಯ, ಕೈಬರೆಹದ ಪ್ರತಿಗಳನ್ನು ನಮಗೆ ಉಪಯೋಗಕ್ಕಾಗಿ ಕೊಟ್ಟ ಎಲ್ಲ ಮಹನೀಯರಿಗೂ ಸಂಸ್ಥೆಗಳಿಗೂ ನಾವು ಚಿರ ಋಣಿಗಳು.

ಅ ಡಿ ಟಿ ಪ್ಪ ಣಿ ಗ ಳು

೧ Meditations of Marcus Aurelius; Analects of Confucius; Sayings of Lord Buddha; Imitation of Christ by Thomas a Kempis–ಇತ್ಯಾದಿ.

೨ ಕುವೆಂಪು: "ವಚನಕಾರ ಬಸವೇಶ್ವರರು" (ಪ್ರಬುದ್ಧ ಕರ್ನಾಟಕ, ಸಂಪುಟ ೩೧, ಸಂಚಿಕೆ ೧, ಪುಟ ೧೧).

೩ ಉದಾಹರಣಾರ್ಥವಾಗಿ: "The New Shakespeare" Edited by Quiller-Couch and Wilson (Cambridge University Press)

೪ ಶ್ರೀ ಎನ್. ಅನಂತರಂಗಾಚಾರ್ಯ: "ಕನ್ನಡ ಗ್ರಂಥಗಳ ಸಂಪಾದನೆ ಅಥವಾ ಸಂಸ್ಕರಣ" (ಪ್ರಬುದ್ಧ ಕರ್ನಾಟಕ, ಸಂಪುಟ ೩೧, ಸಂಚಿಕೆ ೨, ಪುಟ ೯೩–೧೧೫).

೫ ಕರ್ನಾಟಕ ಕಾವಂಬರಿ: ಪದ್ಯ ೯೨೨; (ಪ್ರಬುದ್ಧ ಕರ್ನಾಟಕ ಸಂಪುಟ ೩೧, ಸಂಚಿಕೆ ೨, ಪುಟ ೯೭).

೬ ಪ್ರಬುದ್ಧ ಕರ್ನಾಟಕ, ಸಂಪುಟ ೩೧, ಸಂಚಿಕೆ ೨, ಪುಟ ೯೭.

೭ 'ಮಿಡುಕುವುದೆಂದರೆ ಬರಿ ಓದ್ದಾಡುವುದೆಂತಲ್ಲ; ಅದು ಚಂತೆಯನ್ನು ಸೂಚಿಸುತ್ತಿದೆ. ಅದು 'ಕಿಡಿ'ಯಲ್ಲಿಯಾದರೂ ತೋರುವ ಬಗೆ ಹೇಗೆ? ಆದರೆ, ಚಿಂತೆಗೂ ಕಿಚ್ಚಿಗೂ ಹೋಲಿಕೆಯನ್ನು ಕಲ್ಪಿಸುವುದು ಸಾಮಾನ್ಯವಾಗಿದೆ; ಈ ಪದ್ಯದಲ್ಲಿಯೆ ಆ ಹೋಲಿಕೆ ಇದೆ. ಕಿಚ್ಚಿನ ಕಿಡಿ ಮಿಡುಕುವುದು ಕಣ್ಣಿಗೆ ಕಾಣುತ್ತಿದೆ. ಮೇಲಾಗಿ, 'ಮಿಡುಕು' ಮತ್ತು 'ಮಿನುಗು' ಇವು ಸಮೀಪ

ಸಂಬಂಧಪ ಶಬ್ದಗಳಿಂದೂ ತೋರುತ್ತಿದೆ. ಕಡಿಗೆ 'ಮಿಡುಕುಜೀವ' ಎಂಬ ಪರ್ಯಾಯ ಶಬ್ದ ಬಸವಣ್ಣನವರ ವಚನದಲ್ಲಿ (೨೧೨) ಪ್ರಯೋಗವಾದುದು ಈ ಸಂದರ್ಭದಲ್ಲಿ ಗಮನಾರ್ಹವಾಗಿದೆ.

೮ "After considerable experience, I feel justified in saying that in mosteases ignorance and conceit are the fruitful qarents of conjectural emendation"-William Aldis Wright, General Introduction: The Tempest, P. vii: (The New Shakespeare, edited by Sir Arthur Quiller-Couch & John Dover Wilson).

೯ The fact is there is only one general principle of emendation, which is in its essence devoid of principle. At its finest it is an inspiration. which obeys no laws and cannot be produced to order--W. W. Greig: (Bradby's Shakespeare Criticism, p. 75).

೧೦ ಕರ್ನಾಟಕ ಕವಿಚರಿತೆ ಭಾಗ ೧, (೧೯೨೪), ಪುಟ ೪೭.

೧೧ "ಹೊಸಪದ್ಧತಿಯ ಬಸವೇಶ್ವರನ ವಚನಗಳು": ವಚನ ಸಂ: ೨೯೫

೧೨ ಮಾಹೇಶ್ವರನ ಶರಣಸ್ಥಳ, ವಚನ ಸಂ: ೧೮ (ಶ್ರೀ ಪಳಕಟ್ಟೆಯವರ "ಬಸವೇಶ್ವರನ ವಚನಗಳು" ಮೂರನೆಯ ಆವೃತ್ತಿ ೧೯೩೪).

೧೩ V. S. Apte: The Practical Sanskrit-English Dictionary, p. 612 & 587.

೧೪ ಸಿಂಗರಾಜಪುರಾಣ, ಸಂಧಿ ೪೬, ಪದ್ಯ ೨೫.

೧೫ ಶ್ರೀ ಪಳಕಟ್ಟೆಯವರ "ಬಸವೇಶ್ವರ ವಚನಗಳು" (೩ನೆಯ ಆವೃತ್ತಿ ೧೯೩೪) ಪುಟ, ೧೯.

೧೬ "ಹೊಸಪದ್ಧತಿಯ ಬಸವೇಶ್ವರನ ವಚನಗಳು" (೧೯೪೨) ಪುಟ, ೧೬.

೧೭ ಅದೇ: ಪುಟ ೬೭.

೧೮ "ಕನ್ನಡ ಬಾವುಟ" (ಮೊದಲನೆಯ ಸಂಸ್ಕರಣ) ಪುಟ ೪೨. ಆದರೆ ಇತ್ತೀಚೆಯ ಸಂಸ್ಕರಣದಲ್ಲಿ ಸರಿಯಾಗಿ ತಿದ್ದಲಾಗಿದೆ.

೧೯ ಪರಿಯತದೇವನ "ಬಸವರಾಜದೇವರ ರಗಳೆ": (ಶ್ರೀ ಟಿ. ಎಸ್. ವೆಂಕಣ್ಣಯ್ಯನವರಿಂದ ಸಂಪಾದಿತ) ಸ್ಥಳ ೯, ಪುಟ ೬೪.

೨೦ ರಾಘವಾಂಕ: "ಸಿದ್ಧರಾಮಚರಿತ್ರ": ಸಂಧಿ ೭. ಪದ್ಯ ೫೬.

೨೧ ನಾಗಚಂದ್ರ: ಮಲ್ಲಿನಾಥ ಪುರಾಣ: ಆಶ್ವಾಸ ೩ ಪದ್ಯ ೧೧೧.

೨೨ ಗಿರಿಜಾಕಲ್ಯಾಣ, ಆಶ್ವಾಸಗಳು, ಪದ್ಯ ೯೫.

೨೩ ಕುಮಾರವ್ಯಾಸ ಭಾರತ, ಆದಿಪರ್ವ ಸಂಧಿ ೧, ಪದ್ಯ ೧೭.

೨೪ One of the chief interests of Hebrew among the worlds great literatures is the uniqueness of its verse system, founded less on verbal rhythm than on parallelism of whole expressions. The other languages, burdened as they are with versification of counted syllables and measured verbal sounds, the harmonious intricacies and elastic windings of lyric poetry, have to be attained by a triumph of thought over mechanism: Hebrew poetry carries its lyric rhythm into the very thought itself R. G. Moulton: The Modern Reader's Bible (1934) p. 1431.

೨೫ But parallelism of clauses is independent of particular languages, and appears in any adequate translation—Ibid p. 1518

೨೬ W. I. Courtney. Literary Man's Bible; R. G. Moulton: the Modern Readar's Bible; E. Sunderland Bates; The Bible Designed to be Read as Literature; John Sterling: The Bible For Today &c.

೨೭ ಸಾಂಪ್ರದಾಯಿಕವಾದ ಮೊದಲಿನ ಪದ್ಧತಿಗೂ ನೂತನ ಪದ್ಧತಿಗೂ ಇರುವ ಭೇದವನ್ನು ತೋರಿಸುವದಕ್ಕಾಗಿ ಒಂದು ಉದಾಹರಣೆಯನ್ನು ಇಲ್ಲಿ ಕೊಡುವುದು ಅಸಮುಂಜಸವೆನಿಸಲಾರದು. ಬೈಬಲ್ಲಿನಲ್ಲಿ ಒಂದು ಮಹತ್ತ್ವದ ಭಾಗವಾದ 'ಸೆಂಟ್‌ಜಾನ್' (St-John) ಎಂಬುದರ ಆರಂಭದ ಕೆಲವು ವಾಕ್ಯಗಳು ಸಾಂಪ್ರದಾಯಿಕ ಬೈಬಲ್ಲಿನಲ್ಲಿ ಕೆಳಗೆ ಕಾಣಿಸಿದ ರೀತಿಯಲ್ಲಿ ಮುದ್ರಿತವಾಗಿವೆ:

1 In the beginning was the Word and the Word was with God and the Word was God.

2 The same was in the beginning with God.

3 All things were made by him; and without him was not anything made that was made.

4 In him was life; and the light was the life; of men.

5 And the light shineth in darkness; and the darkness Comprehended it not.

ಈ ರೀತಿ ಮುದ್ರಿಸುವುದರಿಂದ ಈ ಐದು ವಾಕ್ಯಗಳೂ (ಒಂದೊಂದು ವಾಕ್ಯದ ಅರ್ಥ ಸರಳವಾಗಿದೆಯೆಂದರೂ) ಒಂದೇ ವಿಚಾರಕ್ಕೆ ಸಂಬಂಧಪಟ್ಟುವು ಎಂಬ ಅಂಶ ಓದುಗರಿಗೆ ಒಮ್ಮೆಲೆ ಹೊಳೆಯುವುದಿಲ್ಲವೆಂದೇ ಹೇಳಬೇಕು. ಇದನ್ನೆ The Modern Readers' Bible ಎಂಬ ನೂತನ ಸಂಸ್ಕರಣದಲ್ಲಿ. ಅದರ ಸಂಪಾದಕರೂ ಸುಪ್ರಸಿದ್ಧ ಬೈಬಲ್‌ಪಂಡಿತರೂ ಬೈಬಲ್ಲಿನ ನೂತನ ಸಂಸ್ಕರಣಗಳ ಪ್ರಥಮ ಪುರಸ್ಕರ್ತರೂ ಆದ Richard G Moulton ಅವರು ಈ ರೀತಿ ಮುದ್ರಿಸಿರುವುದು ಕಂಡುಬರುತ್ತದೆ:

"IN THE BEGINNIG WAS THE WORD:
AND THE WORD WAS WITH GOD:
AND THE WORD WAS GOD.

The same was in the beginning with God. All things were made through him and without him was not anything made.

ಇತ್ಯಾದಿ. ಇಲ್ಲಿ ಮೇಲಿನ ಐದು ವಾಕ್ಯಗಳೆಲ್ಲ ಒಂದೆ ವಿಚಾರಕ್ಕೆ ಸಂಬಂಧಪಟ್ಟುವು ಎಂಬುದು ಸ್ಪಷ್ಟವಾಗುತ್ತಿದೆಯಲ್ಲವೆ, ಮೊದಲಿನ ವಾಕ್ಯದಲ್ಲಿಯ ಲಯವೂ ಚೆನ್ನಾಗಿ ಒಡೆದು ಕಾಣುತ್ತಿದೆ.

೨೮ ಇತ್ತೀಚೆಗೆ 'ವಚನಗಾಯನ'ವು ಎಲ್ಲ ಕಡೆಗೂ ಪ್ರಸಾರವಾದುದೆ ಈ ಮಾತನ್ನು ಸಮರ್ಥಿಸುತ್ತಿದೆ. ಅಲ್ಲದೆ, "ವಚನಕಾರ ಬಸವೇಶ್ವರರು" ಎಂಬ ಲೇಖನ ಪ್ರಬುದ್ಧಕರ್ನಾಟಕ ಸಂ: ೩, ಸಂಚಿಕೆ ೧) ದಲ್ಲಿ ಶ್ರೀ 'ಕುವೆಂಪು' ಅವರು (ಪುಟ ೧೩) ಬರೆದ ಮಾತುಗಳೂ ಇದಕ್ಕೆ ಸಾಕ್ಷಿಯಾಗಿವೆ.

೨೯ "ಹೊಸಪದ್ಧತಿ ಬಸವೇಶ್ವರನ ವಚನಗಳು" ಶ್ರೀ ಫ. ಗು. ಹಳಕಟ್ಟಿ ಸಂಪಾದಿತ) ಕ್ರಮಸಂಖ್ಯೆ ೫೭೦, ಪುಟ ೬೭.

೩೦ ಶ್ರೀ ರಂಗನಾಥ ದಿವಾಕರ ಅವರ "ವಚನಶಾಸ್ತ್ರರಹಸ್ಯ" (ದ್ವಿತೀಯ ಮುದ್ರಣ ಪುಟ ೩.)

೩೧ "ಹೊಸಪದ್ಧತಿಯ ಬಸವೇಶ್ವರನ ವಚನಗಳು" ಪುಟ ೪೪.

೩೨ ಪುಟ ೧೪೦.

೩೩ 'ಬಾಳುವೇನವನ, ಬೀಳುವೇನವನ, ನಡೆಯೇನವನ, ನುಡಿಯೇನವನ' ಎಂಬೀ ಶಬ್ದಗಳು ತಾಳವೋಲೆಯ ಪ್ರತಿಗಳಲ್ಲಿ 'ಬಾಳ್ವೆಣನ, ಬೀಳ್ವೆಣನ ನಡೆವೆಣನ, ನುಡಿವೆಣನ' ಎಂದಿವೆ ಎಂದು ನಮ್ಮ ಲಕ್ಷ್ಯವನ್ನು ಅತ್ತ ಮೊದಲು ಎಳೆಮುದಕ್ಕಾಗಿ ನಾವು ಶ್ರೀ ಉತ್ತಂಗಿ ಚೆನ್ನಪ್ಪನವರಿಗೆ ಋಣಿಯಾಗಿದ್ದೇವೆ.

೩೪ In the beginning was MIND
and tha Mind was with God,
and the Mind was God.
The same was in the beginning with God.
All things were made by it:
And without it was not anything made that was made.
In it was life,
and the life was the light of men.
And the light shineth in the darkness,
and the darkness overpowered it not .. ..

ರಾಬರ್ಟ್ ಬ್ರಿಜ್ಜಿಸ್ ಅವರು ಒಳ್ಳೆಯ ಕನಿಗಳಾದುದರಿಂದ ಈ ವಚನದಲ್ಲಿಯ ಪದ್ಯಲಯವನ್ನು ಗುರುತಿಸಿ ಪದ್ಯವೆಂಬಲ್ಲಿ ಈ ವಚನವನ್ನು ಮುದ್ರಿಸಿರುವು ಉಚಿತವೆ ಆಗಿದೆ.

೩೫ One of the beauties of Kanarese is that all the pauses and intonations, which in English are represented by punctuation, are expressed by the vernacular idiom itself: so that no well-constructed Kanarese sentence requires any marks of punctuation whatsoever. —E. P. Rice: A History of Kanarese Literature (1921), P. 104.

೩೬ (ಶ್ರೀ ಹಳಕಟ್ಟಿ ಸಂಪಾದಿತ) "ಬಸವೇಶ್ವರನ ವಚನಗಳು" (೧೯೩೪) ಪುಟ ೯೫; "ಹೊಸಪದ್ಧತಿಯ ಬಸವೇಶ್ವರನ ವಚನಗಳು" (೧೯೪೨) ಪುಟ ೬೩.

೩೭ (ಮೇಲಿನವೆ) "ಬಸವೇಶ್ವರನ ವಚನಗಳು" (೧೯೩೪) ಪುಟ; ೯೮; "ಹೊಸಪದ್ಧತಿಯ ಬಸವೇಶ್ವರನ ವಚನಗಳು" (೧೯೪೨) ಪುಟ; ೨.

೩೮ (ಮೇಲಿನದೆ) "ಬಸವೇಶ್ವರನ ವಚನಗಳು" (೧೯೩೪) ಪುಟ ೧೦೨ ಶ್ರೀ. ಎಂ. ಆರ್. ಶ್ರೀನಿವಾಸಮೂರ್ತಿ ಅವರ "ಭಕ್ತಿಭಂಡಾರಿ ಬಸವಣ್ಣನವರು" (ಪರಿಷ್ಕೃತ ಮುದ್ರಣ) ಪುಟ ೬೨; ಆದರೆ (ಶ್ರೀ ಹಳಕಟ್ಟಿಯವರ) "ಹೊಸಪದ್ಧತಿಯ ಬಸವೇಶ್ವರ ವಚನಗಳು" ಇದರಲ್ಲಿ 'ಬಾಲವ' ಎಂಬ ಶಬ್ದವನ್ನು ಬಿಟ್ಟು ಮುದ್ರಿಸಲಾಗಿದೆ. ಅವರಿಂದಲೆ ಸಂಪಾದಿತವಾದ ಈ ವಚನಗಳ ಮೊದಲನೆಯ ಆವೃತ್ತಿಯಲ್ಲಿ 'ಬಸುಗುತ್ತ' ಎಂಬುದಕ್ಕೆ ಪ್ರತಿಯಾಗಿ 'ಮುಸುಗುತ್ತ' ಎಂದಿರುವುದು.

೩೯ ಕಿಟ್ಟೆಲ್ ಅವರ ಕನ್ನಡ-ಇಂಗ್ಲಿಷ್ ನಿಘಂಟು (ನೋ: 'ಬಸು' ಮತ್ತು ಬಸುಱ್ಱು) ಪುಟ ೧೦೯೨; ಮತ್ತು ಹಲಾಯುಧನ "ಅಭಿದಾನ ರತ್ನಮಾಲೆ" (ಮುದ್ರಾಪಕ ವಿಶ್ವವಿದ್ಯಾನಿಲಯದ ಪ್ರಕಟಣೆ) ಪುಟ ೯೯.

೪೦ (ಶ್ರೀ ಹಳಕಟ್ಟಿಯವರ) "ಬಸವೇಶ್ವರನ ವಚನಗಳು" (೧೯೪೪) ಪುಟ ೯೯; ಮೂಸಪದ್ಧತಿಯ "ಬಸವೇಶ್ವರನ ವಚನಗಳು" ಪುಟ: ೪೮.

೪೧ ಇಂತಹ ಕಡೆಗಳಲ್ಲಿ ಭಿನ್ನಾಭಿಪ್ರಾಯಕ್ಕೆ ಎಡೆಯಿದೆಯೆಂಬುದನ್ನೂ ಮರೆಯಲಾಗದು. ಉದಾಹರಣಾರ್ಥವಾಗಿ: ಪರಿಪರದೇವನ ಮಾದಾರ ಚೆನ್ನಯ್ಯನ ರಗಳೆ (ಸಾಲು ೩೧೩)ಯಲ್ಲಿ ಚೆನ್ನಯ್ಯನ ಗುಪ್ತಭಕ್ತಿಯನ್ನು ಶಿವಭಂ ಬಹಿರಂಗಪಡಿಸಿದನೆಂಬ ಸಂದರ್ಭದಲ್ಲಿ "ಮೇದಿನಿಗೆ ಬೀರಿಗರುವಾಯಿತೆನ್ನಯ ಭಕ್ತಿ" ಎಂಬಲ್ಲಿ 'ಬೀರಿಗರು' ಎಂಬುದು ಅರ್ಥವಾಗುವುದಿಲ್ಲವೆಂದು ಬಗೆದು ಅದನ್ನು 'ಬೀದಿಗಱ್ಱು' ಎಂದು ತಿದ್ದಿದರೆ ಅರ್ಥ ಸ್ಪಷ್ಟವಾಗುವುದೆಂದು ಪ್ರಬುದ್ಧ ಕರ್ನಾಟಕ: ಸಂಪುಟ ಸಂಚಿಕೆ ೩೧ ಪುಟ ೯೯) "ಕನ್ನಡ ಗ್ರಂಥಗಳ ಸಂಪಾದನೆ ಅಥವಾ ಸಂಸ್ಕರಣ" ಎಂಬ ಲೇಖನದಲ್ಲಿ ಶ್ರೀ ಎನ್ ಅನಂತರಂಗಾಚಾರ್ಯರವರು ಸೂಚಿಸಿದ್ದಾರೆ. ಆದರೆ "ಬೀದಿಗಱ್ಱುವಾಯಿತ್ತು" ಎಂಬುದನ್ನು ಹೇಗೆ ಅರ್ಥಯಿಸಬೇಕೆಂಬುದನ್ನು ಅವರು ತಿಳಿಸಿಲ್ಲ. ಅದನ್ನು 'ಬೀದಿಗೆ ಱ್ಱುವಾಯಿತ್ತೆ'ಂದಾಗಲಿ 'ಬೀದಿಯ ಕಱ್ಱುವಾಯಿತ್ತೆ'ಂದಾಗಲಿ ಎರಡು ರೀತಿಯಲ್ಲಿ ಅನ್ವಯಿಸಿಕೊಳ್ಳಬಹುದೆಂದು ಕಾಣುತ್ತಿದೆ. ಆದರೆ ಈ ಎರಡು ರೀತಿಯಲ್ಲಿಯೂ

ನಮಗೆ ಸರಿಯಾಪ ಅಥವಾ ಸ್ಪಷ್ಟವಾದ ಅರ್ಥವಾಗಲಿಲ್ಲ. ಇನೆರಡರಲ್ಲಿಯೂ ಹಿಂದೆ ಇರುವ 'ಮೇದಿನಿಗೆ' ಎಂಬುದರ ಔಚಿತ್ಯ ತಿಳಿಯದೆ ಹೋಗುತ್ತಿದೆ. ಆದರೆ ಮೊದಲಿದ್ದ ಪಾಠವನ್ನೆ ಇಟ್ಟುಕೊಂಡು ''ಮೇದಿನಿಗೆ ಬೀರಿ ಗರು ವಾಯಿತ್ತು" (=ಜಗತ್ತಿಗೆಲ್ಲ ಗೊತ್ತಾಗಿ ಬಹಳ ದೊಡ್ಡದಾಯಿತು) ಎಂದು ಸಮರ್ಪಕವಾಗಿ ಅರ್ಥ ಮಾಡಿಕೊಳ್ಳಲು ಬರಬಹುದಲ್ಲವೆ?

೪೨ ಶ್ರೀ ಹಳಕಟ್ಟಿಯವರ ''ಬಸವೇಶ್ವರನ ವಚನಗಳು'' (೧೯೩೪) ಪುಟ ೩೧; ಹೊಸಪದ್ಧತಿಯ ''ಬಸವೇಶ್ವರನ ವಚನಗಳು'' (೧೯೪೨) ಪುಟ ೧೧೨.

೪೩ ಈ ಶಬ್ದ ಕೈಬರೆಹದ ಪ್ರತಿಗಳಲ್ಲಿ 'ಪೆಯು' ಎಂದು ದೊರೆಯುತ್ತಿದೆ. ಕನ್ನಡ ನಿಘಂಟುಗಳಲ್ಲಿ ಈ ಶಬ್ದ ನಮಗೆ ದೊರೆಯಲಿಲ್ಲ. ತೆಲುಗಿನಲ್ಲಿ ಇದು 'ಪೆಯ್ಯ' ಎಂದು ದೊರಕುತ್ತಿದೆ. ಆ ರೂಪವನ್ನೇ ಇಲ್ಲಿ ಇಟ್ಟುಕೊಂಡಿದ್ದೇವೆ.

೪೪ ಶ್ರೀ ಹಳಕಟ್ಟಿಯವರ ''ಬಸವೇಶ್ವರನ ವಚನಗಳು'' (೧೯೩೪) ಪುಟ ೨೩೮; ''ಹೊಸ ಪದ್ಧತಿಯ ಬಸವೇಶ್ವರನ ವಚನಗಳು'' (೧೯೪೨) ಪುಟ: ೧೧೩.

೪೫ ಸೌಂದರನಂಬಿಯು ತನ್ನ ಪ್ರಿಯೆಯ ಸ್ವಸಪಲ್ಲಿಯೆ ಶಿವನನ್ನು ಆವ್ವಾನಿಸಲು ಶಿವನು ಅಲ್ಲಿಯೆ 'ಓ' ಎಂದನೆಂಬುದು ಸುಪ್ರಸಿದ್ಧ ಕಥೆಯಾಗಿದೆ. ಕನ್ನಡ ಸಾಹಿತ್ಯದಲ್ಲಿ ಅನೇಕ ಕಡೆಗಳಲ್ಲಿ ಇವರ ಉಲ್ಲೇಖವಿವೆ. ಬಸವಣ್ಣನವರ ಇನ್ನೊಂದು (೬೮೧) ವಚನದಲ್ಲಿಯೂ ಇವರ ಸ್ಪಷ್ಟವಾದ ಉಲ್ಲೇಖವಿದೆ.

೪೬ ''ಬಸವೇಶ್ವರನ ವಚನಗಳು" (೧೯೩೪) ಪುಟ ೪೪; ಹೊಸಪದ್ಧತಿಯ ಬಸವೇಶ್ವರನ ವಚನಗಳು (೧೯೪೨) ಪುಟ ೪೦; (ಇವರಲ್ಲಿ ಕೊನೆಯ ಸಾಲು 'ನಮ್ಮ ಕೂಡಲ ಸಂಗನುದೇವರ ಮರೆಯಲಹುದೆ?' ಎಂಬ ಪಾಠಾಂತರವಿದೆ.

೪೭ ಹರಿ ಬ್ರಹ್ಮಾದಿಗಳೂ ಭವದಲ್ಲಿ ಬರುವವರಾದುದರಿಂದ ಅವರು ಮೋಕ್ಷ ಕೊಡಲು ಶಕ್ತರಲ್ಲವೆಂದೆ ವೀರಶೈವರ ನಂಬುಗೆ. ರಾಜಶೇಖರವಿಳಾಸದ ಕೆಳಗಣ ಪದ್ಯವು (೮. ೩. ಪ. ೪೨) ಈ ಅಭಿಪ್ರಾಯವನ್ನು ಸಮರ್ಥಿಸುತ್ತಿದೆ:

ಭವದೋಳ್ ಬರ್ಪಮುರರ್ಕಳಂ ಭವವಿಮುಕ್ತ್ಯರ್ಥಂ ಶರಣ್‌ಬೊಕ್ಕೊಡೇ
ನವರೇನೀವರೆ ಮುಕ್ತಿಯಂ ಭವಹರಂ ನೀನಲ್ಲದಿಷ್ಟಾರ್ಥಮಂ
ತನೆ ಮಾಡಲ್ ಸುರಪಾದಪಂ ನೆರೆಗುಮೀ ಬರ್ಬೂರವೃಕ್ಷಂಗಳೀ
ವುವೆ ಕೇಳಂತಿರೆ ನೀನೆ ಮೋಕ್ಷವರದಂ ಶ್ರೀಶೈಲಜಾವಲ್ಲಭಾ

ಳಲ ಸ್ಥಳಕಟ್ಟುಗಳ ಮಾತು ಬಿಟ್ಟರೂ, ಕೆಲಕೆಲವು ಸಂದರ್ಭಗಳಲ್ಲಿ ಒಂದು ವಚನದ ಸರಿಯಾದ ಅರ್ಥಕ್ಕೆ ಅದರ ಹಿಂದಿನ ನೆರವು ಅವಶ್ಯಕ ವೆನಿಸುತ್ತಿದೆ ಈಗಿನ ಕ್ರಮದ ಮೇರೆಗೆ. ಅದರೆ ಶ್ರೀ ಹಳಕಟ್ಟಿಯವರ (೧೯೪೨ರ) ''ಹೊಸ ಪದ್ಧತಿಯ ವಚನಗಳ''ಲ್ಲಿ ಈ ಅನುಪೂರ್ವಿಯು ತಪ್ಪಿದೆ. ಉದಾ: ಬಸವಣ್ಣನವರ ೯೩೧ನೆಯ ''ಆ ಭಸ್ಮತಾಗಿ ಬ್ರಹ್ಮ ತನ್ನ ಕಪಾಲವಿಡಿದನು'' ಇತ್ಯಾದಿಯಾದ ವಚನ ತಿಳಿಯಬೇಕಾದರೆ ಅದರ ಹಿಂದಿನ (೯೩೦) ವಚನವಾದ ''ಒಲೆಯದಿಯನುರುಹಿಹೊಪೆ'' ಎಂಬುದರ ನೆರವು ಬೇಕಾಗುತ್ತಿದೆ. ಅದರೆ ''ಹೊಸ ಪದ್ಧತಿಯ ವಚನಗಳಲ್ಲಿ'' ಇವು ಅನುಕ್ರಮವಾಗಿ ೬೨೧ ಮತ್ತು ೬೯೭ ಆಗಿವೆ; ಹೀಗೆಯೆ ಪರಸ್ಪರ ಸಂಬಂಧವಿದ್ದ ೯೦೫ ಮತ್ತು ೯೦೬ ವಚನಗಳೂ ''ಹೊಸ ಪದ್ಧತಿಯ ವಚನಗಳಲ್ಲಿ ಕ್ರಮತಪ್ಪಿ ೬೬೧ ಮತ್ತು ೬೬೫ ಆಗಿವೆ. ಇದರಿಂದ ಸರಿಯಾದ ಅರ್ಥಕ್ಕೆ ತೊಂದರೆಯಾಗುವುದೆಂಬುದನ್ನು ಬೇರೆ ಸೂಚಿಸುವ ಕಾರಣವಿಲ್ಲ.

೪೯ ಶಿವಾನುಭವ, ಆಗಷ್ಟ ೧೯೩೧.

೫೦ ಸ್ಥಳ ೯, ಸಾಲು ೧೯೫—೨೦೮ (ಶ್ರೀ ಟಿ. ಎಸ್. ವೆಂಕಣ್ಣಯ್ಯನವರ ಸಂಸ್ಕರಣ ಪುಟಗಳು ೬೪—೬೫)

೫೧ ನಟೇಶ ಮೂರ್ತಿಯಿಂದ ತೋರ್ಪಡುವ ಭಾವಗಳನ್ನು ಕುರಿತು:— "The essential signficance of Shiva's Dance is threefold: First, it is the image of Rhythmic Play as the source of all Movement within the Cosmos, which is Represented by the Arch: Secondly, the purpose of his Dance is to Release the countless souls of men from the snare of Illusion: Thirdly, the Place of the dance Chidambaram the Centre of the Universe is within the Heart"-- Anand K. Coomaraswami: The Dance of Shiva: P. 93,--ಹೇಳಿದುದು ಪರಮಾತ್ಮನ ಬಗೆಗೆ ವೀರಶೈವರಿಗಿರುವ ಭವ್ಯಕಲ್ಪನೆಗೆ ಅನುಕೂಲವೆ ಆಗಿದೆ.

೫೨ ವಚನ ೫೪೦

೫೩ ವಚನ ೩



ಕೂಡಲ ಸಂಗಮದ ಮಂಟಪ

॥ ಶ್ರೀ ॥

ಷಟ್‌ಸ್ಥಳದ ವಚನಗಳು

---

೧. ಭಕ್ತಿಸ್ಥಳ

(೧) ಪಿಂಡಸ್ಥಳ

ಉದಕದೊಳಗೆ ಬಯ್ಚಿಟ್ಟ ಬಯ್ಕುಯ ಕೆಚ್ಚಿನಂತಿದ್ದಿತ್ತು;
ಸಸಿಯೊಳಗಣ ರಸದ ರುಚಿಯಂತಿದ್ದಿತ್ತು;
ನನೆಯೊಳಗಣ ಪರಿಮಳದಂತಿದ್ದಿತ್ತು;
ಕೂಡಲ ಸಂಗಮದೇವಾ, ಕನ್ಯೆಯ ಸ್ನೇಹದಂತಿದ್ದಿತ್ತು. ॥ ೧

(೨) ಪಿಂಡಜ್ಞಾನಸ್ಥಳ

೧

ಕಾಳಿಯ ಕಣ್ ಕಾಣದಿಂದ ಮುನ್ನ, ತ್ರಿಪುರಸಂಹಾರದಿಂದ ಮುನ್ನ,
ಹರಿವಿರಂಚಿಗಳಿಂದ ಮುನ್ನ, ಉಮೆಯ ಕಲ್ಯಾಣದಿಂದ ಮುನ್ನ,
ಮುನ್ನ, ಮುನ್ನ, ಮುನ್ನ—
ಅಂದಿಂಗೆಳೆಯ ನೀನು: ಹಳೆಯ ನಾನು,
ಮಹಾದಾನಿ ಕೂಡಲ ಸಂಗಮದೇವಾ. ॥೧॥

೨

ಅಯ್ಯಾ, ನೀನು ನಿರಾಕಾರವಾಗಿರ್ದಲ್ಲಿ
ನಾನು ಜ್ಞಾನವೆಂಬ ವಾಹನವಾಗಿರ್ದೆ, ಕಾಣಾ.
ಅಯ್ಯಾ, ನೀನು ನಾಟ್ಯಕ್ಕೆ ನಿಂದಲ್ಲಿ
ನಾನು ಚೈತನ್ಯವೆಂಬ ವಾಹನವಾಗಿರ್ದೆ, ಕಾಣಾ.
ಅಯ್ಯಾ, ನೀನು ಆಕಾರವಾಗಿರ್ದಲ್ಲಿ
ನಾನು ವೃಷಭನೆಂಬ ವಾಹನವಾಗಿರ್ದೆ, ಕಾಣಾ.
ಅಯ್ಯಾ, ನೀನೆನ್ನ ಭವವ ಕೊಂದಹೆನೆಂದು
ಜಂಗಮಲಾಂಛನನಾಗಿ ಬಂದಲ್ಲಿ,
ನಾನು ಭಕ್ತನೆಂಬ ವಾಹನವಾಗಿರ್ದೆ, ಕಾಣಾ,
ಕೂಡಲ ಸಂಗಮದೇವಾ. ॥ ೩ ॥

೩

ಅಯ್ಯಾ, ಏಳೇಳು ಜನ್ಮದಲ್ಲಿ ಶಿವಭಕ್ತನಾಗಿ
ಬಾರದಿರ್ದೋಡೆ ನಿಮ್ಮಾಣೆ, ನಿಮ್ಮ ಪ್ರಮಥರಾಣೆ!
ನಿಮ್ಮ ಪ್ರಸಾದಕ್ಕಲ್ಲದೆ ಬಾಯ್‌ದೆಱೆಯೆನಯ್ಯಾ.
ಪ್ರಥಮಭವಾಂತರದಲ್ಲಿ ಶಿಲಾದನೆಂಬ
ಗಣೇಶ್ವರನ ಮಾಡಿ ಹೆಸರಿಟ್ಟು ಕರೆದು
ನಿಮ್ಮ ಭೃತ್ಯನ ಮಾಡಿಯೆನ್ನ ನಿರಿಸಿಕೊಂಡಿರ್ದಿರಯ್ಯಾ.
ಎರಡನೆಯ ಭವಾಂತರದಲ್ಲಿ ಸ್ಕಂದನೆಂಬ
ಗಣೇಶ್ವರನ ಮಾಡಿ ಹೆಸರಿಟ್ಟು ಕರೆದು
ನಿಮ್ಮ ಕಾರುಣ್ಯವ ಮಾಡಿರಿಸಿಕೊಂಡಿರ್ದಿರಯ್ಯಾ.
ಮೂಱನೆಯ ಭವಾಂತರದಲ್ಲಿ ನೀಲಲೋಹಿತನೆಂಬ
ಗಣೇಶ್ವರನ ಮಾಡಿ ಹೆಸರಿಟ್ಟು ಕರೆದು
ನಿಮ್ಮ ಲೀಲಾವಿನೋದದಿಂದಿರಿಸಿಕೊಂಡಿರ್ದಿರಯ್ಯಾ
ನಾಲ್ಕನೆಯ ಭವಾಂತರದಲ್ಲಿ ಮನೋಹರನೆಂಬ
ಗಣೇಶ್ವರನ ಮಾಡಿ ಹೆಸರಿಟ್ಟು ಕರೆದು
ನಿಮ್ಮ ಮನಃಪ್ರೇರಕನಾಗಲೆಂದಿರಿಸಿಕೊಂಡಿರ್ದಿರಯ್ಯಾ.

ಅಯ್ದನೆಯ ಭವಾಂತರದಲ್ಲಿ ಕಾಲಲೋಚನನೆಂಬ
ಗಣೇಶ್ವರನ ಮಾಡಿ ಹೆಸರಿಟ್ಟು ಕರೆದು
ಸರ್ವಕಾಲ ಸಂಹಾರವ ಮಾಡಿಸುತ್ತಿರ್ದಿರಯ್ಯಾ.
ಆಱನೆಯ ಭವಾಂತರದಲ್ಲಿ ವೃಷಭನೆಂಬ
ಗಣೇಶ್ವರನ ಮಾಡಿ ಹೆಸರಿಟ್ಟು ಕರೆದು
ನಿಮಗೇಱಲು ವಾಹನನಾಗಲೆಂದಿರಿಸಿಕೊಂಡಿರ್ದಿರಯ್ಯಾ.
ಏಳನೆಯ ಭವಾಂತರದಲ್ಲಿ ಬಸವನೆಂಬ
ಗಣೇಶ್ವರನ ಮಾಡಿ ಹೆಸರಿಟ್ಟು ಕರೆದು
ನಿಮ್ಮೊಕ್ಕುದ ಮಿಕ್ಕುದಕ್ಕೆ
ಯೋಗ್ಯನಾಗಲೆಂದಿರಿಸಿಕೊಂಡಿರ್ದಿರಯ್ಯಾ.
ಇದು ಕಾರಣ, ಕೂಡಲ ಸಂಗಮದೇವಾ,
ನೀವು ಬರಿಸಿದ ಭವಾಂತರದಲ್ಲಿ ನಾನು ಬರುತಿರ್ದೆನಯ್ಯಾ. ॥ ೪ ॥

೫

ಅಯ್ಯಾ ನಿಮ್ಮ ಶರಣನ ಮರ್ತ್ಯಕ್ಕೆ ತಂದೆಯಾಗಿ
ನೆನೆನೆನೆದು ಸುಖಿಯಾಗಿಯಾನು ಬದುಕಿದೆನಯ್ಯಾ.
ಅದೇನು ಕಾರಣ ತಂದೆಯೆಂದಱಿದೆನಯ್ಯಾ:
ಎನ್ನ ಕಾರಣ ತಂದೆಯೆಂದಱಿದೆನಯ್ಯಾ.
ಅಱಿದಱಿದು ನಿಮ್ಮ ಶರಣನು ಆಚರಿಸುವಾಚರಣೆಯ ಕಂಡು
ಕಣ್‌ದೆಱೆದೆನಯ್ಯಾ, ಕೂಡಲ ಸಂಗಮದೇವಾ. ॥ ೫ ॥

೬

'ಕರಿ ಘನ: ಅಂಕುಶ ಕಿಱಿದೆ'ನ್ನ ಬಹುದೆ? ಬಾರದಯ್ಯಾ.
'ಗಿರಿ ಘನ: ವಜ್ರ ಕಿಱಿದೆ'ನ್ನ ಬಹುದೆ? ಬಾರದಯ್ಯಾ.
'ತಮಂಧ ಘನ: ಜ್ಯೋತಿ ಕಿಱಿದೆ'ನ್ನ ಬಹುದೆ? ಬಾರದಯ್ಯಾ.
'ಮಱಹು ಘನ: ನಿಮ್ಮ ನೆನೆವ ಮನ ಕಿಱಿದೆ'ನ್ನ ಬಹುದೆ?
ಬಾರದಯ್ಯಾ, ಕೂಡಲ ಸಂಗಮದೇವಾ. ॥ ೬ ॥

(೩) ಸಂಸಾರಹೇಯಸ್ಥಳ

೧

ಭವಬಂಧನ ಭವಪಾಶವಾದ ಕಾರಣವೇನಯ್ಯಾ?
ಹಿಂದಣ ಜನ್ಮನಲ್ಲಿ ಲಿಂಗವ ಮಜ್ಜಿದೆನಾಗಿ;
ಹಿಂದಣ ಸಿರಿಯಲ್ಲಿ ಜಂಗಮವ ಮಜ್ಜಿದೆನಾಗಿ.
ಅಜ್ಜುದೊಡೀ ಸಂಸಾರವ ಹೊದ್ದಲೀವನೆ
ಕೂಡಲ ಸಂಗಮದೇವ? ॥ ೭ ॥

೨

ಸಂಸಾರಸಾಗರದ ತೆರೆ ಕೊಬ್ಬಿ
ಮುಖದ ಮೇಲೆ ಅಲೆಯುತ್ತಿದ್ದುದೇ, ನೋಡಾ!
ಸಂಸಾರಸಾಗರ ಉರದುದ್ದವೆ? ಹೇಳಾ!
ಸಂಸಾರಸಾಗರ ಕೊರಲುದ್ದವೆ? ಹೇಳಾ!
ಸಂಸಾರಸಾಗರ ಸಿರದುದ್ದವಾವಬಳಿಕ ಏನ ಹೇಳುವೆನಯ್ಯಾ?
ಅಯಾ, ಅಯ್ಯಾ, ಎನ್ನ ಹುಯ್ಯಲ ಕೇಳಯ್ಯಾ,
ಕೂಡಲ ಸಂಗಮದೇವಾ, ನಾನೇವೆನೇವೆನಯ್ಯಾ? ॥ ೮ ॥

೩

ಜಂಪ್ಯನನಂತೆ ಕಳೆ ಸಮಸಿಸಿತ್ತೆನಗೆ:
ಸಂಸಾರವೆಂಬ ರಾಹು ಸರ್ವಗ್ರಾಸಿಯಾಗಿ ನುಂಗಿತ್ತಯ್ಯಾ!
ಇಂದೆನ್ನ ದೇಹಕ್ಕೆ ಗ್ರಹಣವಾಯಿತ್ತು;
ಇನ್ನೆಂದಿಗೆ ಮೋಕ್ಷವಹುದೊ, ಕೂಡಲ ಸಂಗಮದೇವಾ? ॥ ೯ ॥

೪

ಬಲಿ ಗಡಪನೊಡ್ಡಿದಲ್ಲಿರ್ದಂತೆ ಎನ್ನ ಸಂಸಾರ—
ತನು ಕೆಡುವನ್ನಕ್ಕ ಮಾಣದು;
ಪೆಜಿರ ಬಾಧಿಸುವುದು ತನು ಕೆಡುವನ್ನಕ್ಕ ಮಾಣದು;
ಪೆಜಿರ ಛಿದ್ರಿಸುವುದು ತನು ಕೆಡುವನ್ನಕ್ಕ ಮಾಣದು.
ಅಕಟಕಟಾ! ಸಂಸಾರಕ್ಕಾಸತ್ತೆ,
ಕೂಡಲ ಸಂಗಮದೇವಾ. ॥ ೧೦ ॥

೫

ಕಪ್ಪೆ ಸರ್ಪನ ನೆಳಲಲ್ಲಿಪ್ಪಂತೆನಗಾಯಿತ್ತಯ್ಯಾ !
ಅಕಟಕಟಾ ! ಸಂಸಾರ ವೃಥಾ ಹೋಯಿತ್ತಲ್ಲಾ !
ಕರ್ತುವೇ, ಕೂಡಲ ಸಂಗಮದೇವಾ,
ಇವ ತಪ್ಪಿಸಿಯೆನ್ನುವ ರಕ್ಷಿಸಯ್ಯಾ. ॥ ೧೧ ॥

೬

ಶೂಲದ ಮೇಲಣ ವಿಭೋಗವೇನಾದೊಡೇನೊ ?
ನಾನಾವರ್ಣದ ಸಂಸಾರ ಹಾವ ಹಾವಡಿಗನ ಸ್ನೇಹದಂತೆ !
ತನ್ನಾತ್ಮ ತನಗೆ ಪಗೆಯಾದ ಬಳಿಕ
ಬಿನ್ನಾಣವುಂಟೆ, ಮಹಾದಾನಿ ಕೂಡಲ ಸಂಗಮದೇವಾ ? ॥೧೭॥

೭

ಸಂಸಾರವೆಂಬ ಬಲೆಯಲ್ಲಿ ಸಿಲುಕಿದೆನಯ್ಯಾ;
ಎನ್ನುವನು ಕಾಯಯ್ಯಾ, ಕಾಯಯ್ಯಾ !
ಹುರುಳಿಲ್ಲ ! ಹುರುಳಿಲ್ಲ !!
ಕೂಡಲ ಸಂಗಮದೇವಾ, ಶಿವಧೋ ! ಶಿವಧೋ !! ॥ ೧೩ ॥

೮

ನಾನೊಂದ ನೆನೆದೊಡೆ ತಾನೊಂದ ನೆನೆವುದು;
ನಾನಿತ್ತಲೆಳೆದೊಡೆ ತಾನತ್ತಲೆಳೆವುದು;
ತಾ ಬೇಱೆಯೆನ್ನನಳಲಿಸಿ ಕಾಡಿತ್ತು;
ತಾ ಬೇಱೆಯೆನ್ನ ಬಳಲಿಸಿ ಕಾಡಿತ್ತು;
ಕೂಡಲ ಸಂಗನ ಕೂಡಿಹೆನೆಂದೊಡೆ
ತಾನೆನ್ನ ಮುಂದುಗೆಡಿಸಿತ್ತು ಮಾಯೆ ! ॥ ೧೪

೯

ಜನಿತಕ್ಕೆ ತಾಯಾಗಿ ಹೆತ್ತಳು ಮಾಯೆ;
ಮೋಹಕ್ಕೆ ಮಗಳಾಗಿ ಹುಟ್ಟಿದಳು ಮಾಯೆ;
ಕೂಟಕ್ಕೆ ಸ್ತ್ರೀಯಾಗಿ ಕೂಡಿದಳು ಮಾಯೆ.

ಇದಾವಾವ ಪರಿಯಲ್ಲಿ ಕಾಡಿತ್ತು ಮಾಯೆ !
ಈ ಮಾಯೆಯ ಕಳೆವೊಡೆಯೆನ್ನಳವಲ್ಲ;
ನೀವೇ ಬಲ್ಲಿರಿ, ಕೂಡಲ ಸಂಗಮದೇವಾ. ॥ ೧೫ ॥

೧೦

ಕೊಡೆವಿಡಿಯೆ ಕುದುರೆಯ ದೃಢವುಳ್ಳ ರಾವುತನೇಱಿ—
ಕೊಡೆ ಕೋಟ ! ಶೂರರು ಹನ್ನಿಬ್ಬರಯ್ಯಾ !
ಚಂದ್ರಕಾಂತದ ಗಿರಿಯ ಗಜ ಬಂದು ಮೂದಲಿಸೆ
ಅಱಿದು ಕೊಲುವೊಡೆ ರಿಪುಗಳ ಕಲಿತನವ ನೋಡಾ !
ಆವಿಗೆಯೊಳೊದವಿದ ಪುತ್ತಳಿಯ ರೂಹಿನಂತಾಯಿತ್ತು,
ಕೂಡಲ ಸಂಗಮದೇವಾ, ನಿಮ್ಮ ಹೆಸರಿಲ್ಲದ ಹೆಸರು! ॥ ೧೬ ॥

೧೧

'ಇಂದಿಗೆಂತು ನಾಳಿಗೆಂತು' ಎಂದು
ಬೆಂದೊಡಲ ಹೊರೆಯ ಹೊಯಿತ್ತೆನ್ನ ಸಂಸಾರ !
ಹಿಂದೆ ನಾನಾಯೋನಿಯಲ್ಲಿ ಬಂದೆನೆಂಬ ಹೇಯವಿಲ್ಲಾ ;
ಮುಂದೆ ಮುಕ್ತಿಯಾಗಬೇಕೆಂಬ ಯುಕ್ತಿಯಿಲ್ಲಾ !
ಎಂದೆಂದೂ ಸದಾಶಿವನ ಕುಂದದೆ ನೆನೆಯಲೀಯದೆ
ಕೊಂದುದಯ್ಯಾ ಈ ಮಾಯೆ, ಕೂಡಲ ಸಂಗಮದೇವಾ. ॥ ೧೭ ॥

೧೨

ದಿಟ ಪುಟ ಭಕುತಿ ಸಂಪುಟ ನೆಲೆಗೊಳ್ಳದಾಗಿ
ಟಂಬಕನನಾಡಿಸುತ್ತಿದ್ದಿತಯ್ಯಾ ನಿನ್ನ ಮಾಯೆ;
ಟೀವಕ ಟಂಬಕನಾಡಿಸುತ್ತಿದ್ದಿತಯ್ಯಾ ನಿನ್ನ ಮಾಯೆ,
ಕೂಡಲ ಸಂಗಮದೇವಯ್ಯಾ,
ಹೊನ್ನ ಹೆಣ್ಣು ಮಣ್ಣು ತೋಱಿ ! ॥ ೧೮ ॥

೧೩

ಆಸತ್ತೆನಲಸಿದೆನೆಂದೊಡೆ ಮಾಣದು;
ಬೇಸತ್ತೆ ಬೆಂಬಿದ್ದೆನೆಂದೊಡೆ ಮಾಣದು;
ಏವೆನೇವೆನೆಂದೊಡೆ ಮಾಣದು
ಕಾಯದ ಕರ್ಮದ ಫಲಭೋಗವು !
ಕೂಡಲ ಸಂಗನ ಶರಣರು ಬಂದು—
'ಹೋ, ಹೋ, ಅಂಜದಿರೆ'ಂದೊಡಾನು ಬರ್ದುಂಕುವೆನು. ||೧೯||

೧೪

ಸಂಸಾರವೆಂಬ ಸರ್ಪ ಮುಟ್ಟಲು
ಪಂಚೇಂದ್ರಿಯವಿಷಯವೆಂಬ ವಿಷದಿಂದೆ
ಆನು ಮುಂದುಗೆಟ್ಟಿನಯ್ಯಾ; ಆನು ಹೊರಳಿ ಬೀಳುತ್ತಿರ್ದೆನಯ್ಯಾ.
'ಓಂ ನಮಃ ಶಿವಾಯ' ಎಂಬ ಮಂತ್ರವ ಜಪಿಸುತ್ತಿರ್ದೆನಯ್ಯಾ,
ಕೂಡಲ ಸಂಗಮದೇವಾ. ||೨೦||

೧೫

ಅಱಿಯದೆ ಜನನಿಯ ಜಠರದಲ್ಲಿ,
ಬಾರದ ಭವಂಗಳಲ್ಲಿ ಬರಿಸಿದೆ, ತಂದೆ !
ಹುಟ್ಟತ್ತೇ ತಪ್ಪಾಯಿತ್ತೆ, ಎಲೆ ಲಿಂಗವೇ ?
ಮುನ್ನ ಹುಟ್ಟದುದಕ್ಕೆ ಕೃಪೆ ಮಾಡು ಲಿಂಗವೇ !
ಇನ್ನು ಹುಟ್ಟಿದೆನಾದೊಡೆ,
ಕೂಡಲ ಸಂಗಮದೇವಾ, ನಿಮ್ಮಾಣೆ ! ||೨೧||

೧೬

ಎಂದೋ ಸಂಸಾರದ ದಂದುಗ ಹಿಂಗುವುದು ?
ಎಂದೋ ಮನದಲ್ಲಿ ಪರಿಣಾಮವಹುದೆನಗೆಂದೋ, ಎಂದೋ ?
ಕೂಡಲ ಸಂಗಮದೇವಾ,
ಇನ್ನೆಂದೋ ಪರಮಸಂತೋಷದಲ್ಲಿಹುದೆನಗೆಂದೋ ? ||೨೨||

೧೬

ಲೇಸ ಕಂಡು ಮನ ಬಯಸಿ ಬಯಸಿ
ಆಸೆ ಮಾಡಿದೊಡಿಲ್ಲ, ಕಂಡಯ್ಯಾ!
ತಾಳವಮರಕ್ಕೆ ಕೈಯ ನೀಡಿ
ಮೇಲೆ ನೋಡಿ ಗೋಣು ನೊಂದುದಯ್ಯಾ!
ಕೂಡಲ ಸಂಗಮದೇವ, ಕೇಳಯ್ಯಾ,
ನೀವೀವ ಕಾಲಕ್ಕಲ್ಲದಿಲ್ಲ, ಕಂಡಯ್ಯಾ! ॥ ೨೩ ॥

೧೪

ಮುನ್ನ ಮಾಡಿದ ಪಾಪ ಬೆನ್ನ ಬಿಡದನ್ನಕ್ಕ
ಇನ್ನು ಬಯಸಿದರುಂಟೆ ?
ಭಕ್ತಿಯುಳ್ಳವರ ನೋಡಿ ನೋಡಿ ಬಯಸಿದರುಂಟೇ,
ಕೂಡಲ ಸಂಗಮದೇವರಲ್ಲಿ
ಮುನ್ನ ವರವ ಹಡೆಯದನ್ನಕ್ಕ ? ॥ ೨೪ ॥

೧೯

ಚಂದ್ರೋದಯಕ್ಕೆ ಅಂಬುಧಿ ಹೆಚ್ಚುವುದಯ್ಯಾ;
ಚಂದ್ರ ಕುಂದೆ ಕುಂದುವುದಯ್ಯಾ.
ಚಂದ್ರಂಗೆ ರಾಹುವಡ್ಡ ಬಂದಲ್ಲಿಯಂಬುಧಿ ಬೊಬ್ಬಿಟ್ಟತ್ತೆ ?
ಅಂಬುಧಿಯ ಮುನಿಯಾಪೋಷಣವ ಕೊಂಬಲ್ಲಿ
ಚಂದ್ರಮನಡ್ಡ ಬಂದನೆ?
ಆರಿಗಾರೂ ಇಲ್ಲಾ : ಕೆಟ್ಟವಂಗೆ ಕೆಳೆಯಿಲ್ಲಾ !
ಜಗದ ನಂಟ ನೀನೇ, ಅಯ್ಯಾ, ಕೂಡಲ ಸಂಗಮದೇವಾ. ॥ ೨೫ ॥

೨೦

ಒಲೆ ಹತ್ತಿಯುರಿದೊಡೆ ನಿಲಬಹುದಲ್ಲದೆ,
ಧರೆ ಹತ್ತಿಯುರಿದೊಡೆ ನಿಲಬಾರದು.
ಏರಿ ನೀರುಣ್ಬೊಡೆ, ಬೇಲಿ ಕೆಯ್ಯ ಮೇವೊಡೆ,
ನಾರಿ ತನ್ನ ಮನೆಯಲ್ಲಿ ಕಳುವೊಡೆ,
ತಾಯ ಮೊಲೆವಾಲು ನಂಜಾಗಿ ಕೊಲುವೊಡೆ
ಇನ್ನಾರಿಗೆ ದೂಱುವೆ, ಕೂಡಲ ಸಂಗಮದೇವಾ ? ॥ ೨೬ ॥

೨೧
ಎನ್ನ ಗುಣಾವಗುಣವ ಸಂಪಾದಿಸುವೆ, ಅಯ್ಯಾ !
ಪ್ರತಿಯೆ, ಅಪ್ರತಿಮನುಹಿಮಾ, ನಿಮಗಾನು ಪ್ರತಿಯೇ ?
ಕೂಡಲ ಸಂಗಮದೇವಾ, ನೀವು ಮಾಡಲಾನಾದೆನು ! ॥ ೨೭ ॥

೨೨
ಬೆದಕದಿರು, ಬೆದಕದಿರು; ಬೆದಕಿದೊಡೆ ಹುರುಳಿಲ್ಲ !
ಚಿತ್ತರಟ್ಟಿಯ ಕಾಯಲ್ಲಿ ಮತ್ತೇನನಜಿಸುವಿರಯ್ಯಾ ?
ನಿಮ್ಮುತ್ತಮಿಕೆಯನೇ ಪೂರೈಸುವುದು,
ಕೂಡಲ ಸಂಗಮದೇವಾ. ॥ ೨೮ ॥

೨೩
ಎನ್ನ ಚಿತ್ತವು ಅತ್ತಿಯ ಹಣ್ಣು, ನೋಡಯ್ಯಾ;
ವಿಚಾರಿಸಿದೊಡೇನೂ ಹುರುಳಿಲ್ಲವಯ್ಯಾ !
ಪ್ರಪಂಚಿನ ಡಂಬಿನಲ್ಲಿ ಎನ್ನನೊಂದು ರೂಪ ಮಾಡಿ
ನೀವಿರಿಸಿದಿರಿ, ಕೂಡಲ ಸಂಗಮದೇವಾ. ॥ ೨೯ ॥

೨೪
ಎನ್ನ ನಡೆಯೊಂದು ಪರಿ: ಎನ್ನ ನುಡಿಯೊಂದು ಪರಿ:
ಎನ್ನೊಳಗೇನೂ ಶುದ್ಧವಿಲ್ಲ, ನೋಡಯ್ಯಾ.
ನುಡಿಗೆ ತಕ್ಕ ನಡೆಯ ಕಂಡೊಡೆ
ಕೂಡಲ ಸಂಗಮದೇವನೊಳಗಿರ್ಪನಯ್ಯಾ. ॥ ೩೦ ॥

೨೫
ಮುಂಗೈಯ ಕಂಕಣಕೆ ಕನ್ನಡಿಯ ತೋರುವಂತೆ--
ಎನ್ನ ಮನವು ನಿಧಾನವನೊಲ್ಲದೆ ಜಲಗ ಮಚ್ಚಿತ್ತು, ನೋಡಾ!
ನಾಯಿಗೆ ನಾರಿವಾಣವಕ್ಕುವುದೆ, ಕೂಡಲ ಸಂಗಮದೇವಾ? ॥ ೩೧ ॥

೨೬
ಕೊಂಬಿನ ಮೇಲಣ ಮರ್ಕಟನಂತೆ
ನಿಂದಲ್ಲಿ ನಿಲ್ಲಲೀಯದೆನ್ನ ಮನವು;
ಹೊಂದಿದಲ್ಲಿ ಹೊಂದಲೀಯದೆನ್ನ ಮನವು !
ಕೂಡಲ ಸಂಗಮದೇವಾ, ನಿಮ್ಮ ಚರಣಕಮಲದಲ್ಲಿ
ಭ್ರಮರನಾಗಿರಿಸು, ನಿಮ್ಮ ಧರ್ಮ ! ॥ ೩೨

೨೭

ಮರನನೇಱಿದ ಮರ್ಕಟನಂತೆ
ಹಲವು ಕೊಂಬಿಂಗೆ ಹಾಯುತಲಿದೆ—
ಬೆಂದ ಮನವ ನಾನೆಂತು ನಂಬುವೆನಯ್ಯಾ ?
ಎಂತು ನಚ್ಚುವೆನಯ್ಯಾ ?
ಎನ್ನ ಕೂಡಲ ಸಂಗಮದೇವನಲ್ಲಿಗೆ ಹೋಗಲೀಯದಯ್ಯಾ ! ॥ ೨೬ ॥

೨೮

ಅಂದಣವನೇಱಿದ ಸೊಣಗನಂತೆ
ಕಂಡೊಡೆ ಬಿಡದು ಮುನ್ನಿನ ಸ್ವಭಾವವನು—
ಸುಡು ! ಸುಡು !! ಮನವಿದು ವಿಷಯಕ್ಕೆ ಹರಿವುದು;
ಮೃಡ, ನಿಮ್ಮನನುದಿನ ನೆನೆಯಲೀಯದು.
ಎನ್ನೊಡೆಯ ಕೂಡಲ ಸಂಗಮದೇವಾ,
ನಿಮ್ಮ ಚರಣವ ನೆನೆವಂತೆ ಕರುಣಿಸು,
ಸೆಱಗೊಡ್ಡಿ ಬೇಡುವೆ, ನಿಮ್ಮ ಧರ್ಮ ! ॥ ೨೪ ॥

೨೯

ತುಪ್ಪದ ಸವಿಗೆ ಅಲಗ ನೆಕ್ಕುವ ಸೊಣಗನಂತೆನ್ನ ಬಾಳುವೆ !
ಸಂಸಾರಸಂಗವ ಬಿಡದು ನೋಡೆನ್ನ ಮನವು.
ಈ ನಾಯಿತನವ ಮಾಣಿಸು,
ಕೂಡಲ ಸಂಗಮದೇವಾ, ನಿಮ್ಮ ಧರ್ಮ ! ॥ ೨೫ ॥

೩೦

ಒಂದು ಮೊಲಕ್ಕೆ ನಾಯನೊಂಬತ್ತ ಬಿಟ್ಟಂತೆ
'ಎನ್ನ ಬಿಡು, ತನ್ನ ಬಿಡೆ'ಂಬುದು ಕಾಯವಿಕಾರ;
'ಎನ್ನ ಬಿಡು, ತನ್ನ ಬಿಡೆ'ಂಬುದು ಮನೋವಿಕಾರ !
ಕರಣೇಂದ್ರಿಯಂಗಳಿಂಬ ಸೊಣಗ ಮುಟ್ಟದ ಮುನ್ನ
ಮನ ನಿಮ್ಮನೆಯ್ದುವುದೆ, ಕೂಡಲ ಸಂಗಮದೇವಾ ? ॥ ೨೬ ॥

೩೧

ದಂದುಗ ಬಿಡದು ಮನದ ಸಂದೇಹ ಹಿಂಗದಾಗಿ:
ಮುಂದೆ ಲಿಂಗವ ಕಂಡಹೆನೆಂಬುದು ಹುಸಿ, ನೋಡಾ!
ಬೆಂದ ಕರಣಾದಿಗಳು ಒಂದೇ ಪಥವನಱಿಯವು:
ಎಂತು ಶಿವಪಥವೆನಗೆ ಸಾಧ್ಯವಪ್ಪುದಯ್ಯಾ?
ಎನ್ನ ತಂದೆ, ಕೂಡಲ ಸಂಗಮದೇವಾ,
ನಿನ್ನ ಶರಣರ ಬಳಿವಿಡಿದರೆ
ಎನ್ನ ದಂದುಗ ಹಿಂಗುವುದು. ॥ ೩೭ ॥

೩೨

ತನ್ನ ವಿಚಾರಿಸಲೊಲ್ಲದು: ಇದಿರ ವಿಚಾರಿಸಹೋಹುದೀ ಮನವು!
ಏನು ಮಾಡುವೆನೀ ಮನವನು? ಎಂತು ಮಾಡುವೆನೀ ಮನವನು—
ಕೂಡಲ ಸಂಗಮದೇವನ ಶರಣರ
ನಚ್ಚದ, ಮಚ್ಚದ, ಬೆಂದ ಮನವನು? ॥ ೩೮ ॥

೩೩

ತನ್ನಿಚ್ಛೆಯ ನುಡಿದರೆ ನಚ್ಚುವುದೀ ಮನವು:
ಇದಿರಿಚ್ಛೆಯ ನುಡಿದರೆ ಮುಚ್ಚದೀ ಮನವು.
ಕೂಡಲ ಸಂಗನ ಶರಣರ
ನಚ್ಚದ ಮನವ ಕಿಚ್ಚಿನೊಳಗಿಕ್ಕುವೆ! ॥ ೩೯ ॥

೩೪

ಸುಡಲೀ ಮನವೆನ್ನನುಡುಹನ ಮಾಡಿತ್ತು!
ನಡೆವಲ್ಲಿ ನುಡಿವಲ್ಲಿಯಧಿಕನೆಂದೆನಿಸಿತ್ತು.
ಬೆಡಗಿನ ಕೇಲು ಕಳೆದು ಕೆಡೆದ ಬಳಿಕ
ಕಡುಗೂರ್ಪ ಮಡದಿ ತಾ ಮುಟ್ಟಲಱ್ಯಳು;
ಒಡಲನುರಿ ಕೊಂಬುದು; ಒಡವೆಯನರಸು ಕೊಂಬ;
ಕಡುಗೂರ್ಪ ಮಡದಿಯ ಮತ್ತೊಬ್ಬ ಚೆನ್ನಿಗ ಕೊಂಬ!
ಮುನ್ನ ಮಾಡಿದುದು ತನ್ನ ಬೆನ್ನ ಬಿಡದನ್ನಕ್ಕ
ಇನ್ನು ಮಾಡಿದೊಡೊಳವೆ, ಕೂಡಲ ಸಂಗಮದೇವಾ? ॥ ೪೦ ॥

೫೫

ವಚನದ ಹುಸಿ, ನುಸುಳಿಂತು ಮಾಣ್ಬುದೆನ್ನಾ ?
ಮನದ ಮರ್ಕಟತನವೆಂತು ಮಾಣ್ಬುದೆನ್ನಾ ?
ಹೃದಯದ ಕಲ್ಮಷವೆಂತು ಮಾಣ್ಬುದೆನ್ನಾ ?
ಕಾಯವಿಕಾರಕ್ಕೆ ತಜ್ಞಿಸಲುನ್ಮೋದೆನು:
ಎನಗಿದು ವಿಧಿಯೆ, ಕೂಡಲ ಸಂಗಮದೇವಾ ? ॥ ೫೧ ॥

೫೬

ಅಂಗದ ನೋಟವು ಸಿಂಗದ ಗಾತ್ರವು:
ಹಿಂಗದು ಮನವಲ್ಲಿ ನಾನಾವಿಕಾರವು.
ಬಂದಹನೆಂದಜ್ಞಿಯಲಿಕ್ಕಿಲ್ಲವಾಗಿ ಸಂದೇಹ ಬಿಡದು;
ಮುಂದುಗಾಣದು ಲೋಕ !
ಬೆಂದ ಮಾಯಕ್ಕಂಜಿ ನಿಮ್ಮ ಮಜ್ಞಿಪೊಕ್ಕೆ,
ಕೂಡಲ ಸಂಗಮದೇವಾ. ॥ ೫೨ ॥

೫೭

ವಿಕಳನಾದೆನು ಪಂಚೇಂದ್ರಿಯಘಾತುವಿನಿಂದ;
ಮತಿಗೆಟ್ಟೆನು ಮನದ ವಿಕಾರದಿಂದ;
ಧೃತಿಗೆಟ್ಟೆನು ಕಾಯವಿಕಾರದಿಂದ.
ಶರಣುವೊಕ್ಕೆನು, ಕೂಡಲ ಸಂಗಮದೇವಯ್ಯಾ. ॥ ೫೩ ॥

೫೮

ಮುನಿದೆಯಾದೊಡೆ ಒಮ್ಮೆ ಜಜ್ಞಿದೊಡೆ ಸಾಲದೆ ?
ಅಕಟಕಟಾ ! ಮದನಂಗೆ ಮಾಜ್ಞುಗೊಡುವರೆ ?
ಹಗೆಗೆ ಮಾಜ್ಞುಗೊಟ್ಟು ನಿನ್ನವರನೊಪ್ಪಿಸುವರೆ,
ಕೂಡಲ ಸಂಗಮದೇವಾ ? ॥ ೫೪ ॥

೫೯

ಆನೊಬ್ಬನು: ಸುಡುವರೈವರು !
ಮೇಲೆ ಕಿಚ್ಚು ಘನ: ನಿಲಲು ಬಾರದು !
ಕಾಡ ಬಸವನ ಹುಲಿ ಕೊಂಡೊಯ್ವರೆ
ಅರಯ್ಯಲಾಗದೆ, ಕೂಡಲ ಸಂಗಮದೇವಾ ? ॥ ೫೫ ॥

೪೦

ಆಸೆಯಾಮಿಸ, ತಾಮಸ, ಹುಸಿ, ವಿಷಯ,
ಕುಟಿಲ, ಕುಪಕ, ಕ್ರೋಧ, ಕ್ಷುದ್ರ, ಮಿಥ್ಯೆ—
ಇವನೆನ್ನ ನಾಲಗೆಯ ಮೇಲಿಂದತ್ತ ತೆಗೆದು ಕಳೆಯಯ್ಯಾ.
ಅದೇಕೆಂದೊಡೆ ನಿಮ್ಮತ್ತಲೆನ್ನ ಬರಲೀಯವು.
ಇದು ಕಾರಣ, ಇವೆಲ್ಲವ ಕಳೆದು
ಎನ್ನ ಪಂಚಕಳ್ಪುವರ ಭಕ್ತರ ಮಾಡು,
ಕೂಡಲ ಸಂಗಮದೇವಾ. ॥ ೪೬ ॥

೪೧

ಎಂತೊ ಶಿವಭಕ್ತಿಯ ನಾನುಪಮಿಸುವೆನಯ್ಯಾ ?
ಎಂತೋ ಶಿವಾಚಾರವೆನಗೆ ವೇದ್ಯವಪ್ಪುದಯ್ಯಾ ?
ಕಾಮ, ಕ್ರೋಧ, ಲೋಭ, ಮೋಹದಿಂದೆ ಕಟ್ಟುವಡೆದೆನು;
ದಸವು, ತೃಷೆ, ವ್ಯಸನದಿಂದೆ ಕುದಿಯುತ್ತಿದ್ದೇನೆ;
ಪಂಚೇಂದ್ರಿಯ, ಸಪ್ತಧಾತು
ಹಂಚುಪಜೀವಿ ಮಾಡಿ ಕಾಡಿಹುವಯ್ಯಾ !
ಅಯ್ಯಾ, ಅಯ್ಯಾ, ಎನ್ನ ಹುಯ್ಯಲ ಕೇಳಯ್ಯಾ—
ಕೂಡಲ ಸಂಗಮದೇವಾ, ನಾನೇನೆನೇನೆನಯ್ಯಾ ? ॥ ೪೭ ॥

೪೨

ಕಾಯವಿಕಾರ ಕಾಡಿಹುದಯ್ಯಾ;
ಮನೋವಿಕಾರ ಕೂಡಿಹುದಯ್ಯಾ;
ಇಂದ್ರಿಯವಿಕಾರ ಸುಳಿವುದಯ್ಯಾ !
ಸುಳುವಿನೊಳಗೆ ಸುಳಿಯುತ್ತಲಿದ್ದೇನೆ: ಸಿಲುಕಿಸದಿರಯ್ಯಾ;
ಅನ್ಯಚಿತ್ತವಿರಿಸದಿರಯ್ಯಾ: ನಿಮ್ಮ ಚಿತ್ತವಿರಿಸಯ್ಯಾ.
ಅನುಪಮಸುಖಸಾರಾಯಶರಣರಲ್ಲ,
ಕೂಡಲ ಸಂಗಮದೇವಯ್ಯಾ, ಇದನೆ ಬೇಡುವೆನಯ್ಯಾ. ॥ ೪೮ ॥

೪೩

ಬಂದ ಯೋನಿಯನಱಿದು ಸಲಹೆನ್ನ, ತಂದೆ—
ಬೆಂದ ಮನವೆನ್ನ ಗತಿಗೆಡಿಸಿ ಕಾಡಿತ್ತು;
ಬೆಂದ ಮನವೆನ್ನ ಮತಿಗೆಡಿಸಿ ಕಾಡಿತ್ತು !
ಎನ್ನ ತಂದೆ, ಕೂಡಲ ಸಂಗಮದೇವಾ,
ಇವ ಮಾಣಿಸು, ನಿಮ್ಮ ಧರ್ಮ ! ॥ ೪೯ ॥

೪೪

ಬೆಳೆಯ ಭೂಮಿಯೊಳೊಂದು ಪ್ರಳಯದ ಕಸ ಹುಟ್ಟಿ
ತಿಳಿಯಲೀಯದು, ಎಚ್ಚಱಲೀಯದು !
ಎನ್ನವಗುಣವೆಂಬ ಕಸವ ಕಿತ್ತು ಸಲಹಯ್ಯಾ, ಲಿಂಗತಂದೆ;
ಸುಳಿದೆಗೆದು ಬೆಳೆವೆನು, ಕೂಡಲ ಸಂಗಮದೇವಾ. ॥ ೫೦ ॥

೪೫

ವಿಷಯವೆಂಬ ಹಸುರನೆನ್ನ ಮುಂದೆ ತಂದು ಪಸರಿಸಿದೆಯಯ್ಯಾ;
ಹಸುವೇನ ಬಲ್ಲದು ? ಹಸುರೆಂದೆಳಸುವುದು.
ವಿಷಯರಹಿತನ ಮಾಡಿ ಭಕ್ತಿರಸವ ದಣಿಯೆ ಮೇಯಿಸಿ,
ಸುಬುದ್ಧಿಯೆಂಬುದಕವನೆಱೆದು,
ನೋಡಿ ಸಲಹಯ್ಯಾ, ಕೂಡಲ ಸಂಗಮದೇವಾ. ॥ ೫೧ ॥

೪೬

ಕೆಸಱಿಲ್ಲಿ ಬಿದ್ದ ಪಶುವಿನಂತಾನು
ದೆಸೆದೆಸೆಗೆ ಬಾಯ ಬಿಡುತ್ತಿದ್ದೇನಯ್ಯಾ.
ಅಯ್ಯಾ ! ಆರಯ್ವವರಿಲ್ಲ—ಅಕಟಕಟಾ!—
ಪಶುವೆಂದೆನ್ನ ಕೂಡಲ ಸಂಗಮದೇವ
ಕೊಂಬ ಹಿಡಿದೆತ್ತುವನ್ನಕ್ಕ ! ॥ ೫೨ ॥

೪೭

ಬಡಪಸು ಪಂಕದಲ್ಲಿ ಬಿದ್ದೊಡೆ ಕಾಲ ಬಡಿವುದಲ್ಲದೆ
ಬೇಱೆ ಗತಿಯುಂಟೆ ?
ಶಿವ ಶಿವಾ ! ಹೋದಹೆ, ಹೋದಹೆನಯ್ಯಾ !!

ನಿಮ್ಮ ಮನದತ್ತಲೆನ್ನ ತೆಗೆಯಯ್ಯಾ—
ಪಶುವಾನು: ಪಶುಪತಿ ನೀನು!
ತುಡುಗುಣಿಯೆಂದು ಎನ್ನ ಹಿಡಿದು ಬಡಿಯುದ ಮುನ್ನ,
ಒಡೆಯ ನಿಮ್ಮ ಬಯ್ಯದಂತೆ ಮಾಡು,
ಕೂಡಲ ಸಂಗಮದೇವಾ. ॥ ೫೩ ॥

೪೮

ಅಡವಿಯೊಳಗೆ ಹೊಲಬುಗೆಟ್ಟ ಪಶುವಿನಂತೆ
'ಅಂಬೇ, ಅಂಬೇ' ಎಂದು ಕರೆಯುತ್ತಲಿದ್ದೇನೆ;
'ಅಂಬೇ, ಅಂಬೇ' ಎಂದು ಒಜಿಲುತ್ತಲಿದ್ದೇನೆ—
ಕೂಡಲ ಸಂಗಮದೇವ 'ಬಾಳು ಬಾಳೆ'ಂಬನ್ನಕ್ಕ. ॥ ೫೪ ॥

೪೯

ಸಮುದ್ರದೊಳಗಣ ಸಿಂಪಿನಂತೆ ಬಾಯ ಬಿಡುತ್ತಿದ್ದೇನಯ್ಯಾ.
ನೀವಲ್ಲದೆ ಮತ್ತಾರೂ ಎನ್ನನಜಿವವರಿಲ್ಲ, ನೋಡಯ್ಯಾ.
ಕೂಡಲ ಸಂಗಮದೇವಾ,
ನೀವಲ್ಲದೊಳಕೊಂಬವರಿಲ್ಲಯ್ಯಾ. ॥ ೫೫ ॥

೫೦

'ಅಯ್ಯಾ, ಅಯ್ಯಾ' ಎಂದು ಕರೆಯುತ್ತಲಿದ್ದೇನೆ;
'ಅಯ್ಯಾ, ಅಯ್ಯಾ' ಎಂದೊಜಿಲುತ್ತಲಿದ್ದೇನೆ;
'ಓ' ಎನ್ನಲಾಗದೆ, ಅಯ್ಯಾ?
ಆಗಳೂ ನಿಮ್ಮುವ ಕರೆಯುತ್ತಲಿದ್ದೇನೆ:
ಮೌನವೆ,ೀ ಕೂಡಲ ಸಂಗಮದೇವಾ? ॥ ೫೬ ॥

೫೧

ನೀ ಹುಟ್ಟಿಸಿದಲ್ಲಿ ಹುಟ್ಟದೆ ನೀ ಕೊಂದಲ್ಲಿ ಸಾಯದೆ
ಎನ್ನ ವಶವೆ, ಅಯ್ಯಾ?
ನೀವಿರಿಸಿದಲ್ಲಿರದೆ ಎನ್ನ ವಶವೆ, ಅಯ್ಯಾ?
ಅಕಟಕಟಾ! 'ಎನ್ನವನೆನ್ನವನೆ'ನ್ನಯ್ಯಾ,
ಕೂಡಲ ಸಂಗಮದೇವಯ್ಯಾ. ॥ ೫೭ ॥

೫೨

ನರವಿಂಧ್ಯದೊಳಗೆನ್ನ ಹುಲುಗಿಳಿಯ ಮಾಡಿ
ಸಲಹುತ್ತ 'ಶಿವ ಶಿವಾ' ಎಂದೋದಿಸಯ್ಯಾ.
ಭಕ್ತಿಯೆಂಬ ಪಂಜರದೊಳಗಿಕ್ಕಿ ಸಲಹು,
ಕೂಡಲ ಸಂಗಮದೇವಾ. ॥೫೨॥

೫೩

ಅತ್ತಲಿತ್ತಲು ಹೋಗದಂತೆ ಹೆಳವನ ಮಾಡಯ್ಯಾ, ತಂದೆ;
ಸುತ್ತಿ ಸುಳಿದು ನೋಡದಂತೆ ಅಂಧಕನ ಮಾಡಯ್ಯಾ, ತಂದೆ;
ಮತ್ತೊಂದ ಕೇಳದಂತೆ ಕಿವುಡನ ಮಾಡಯ್ಯಾ, ತಂದೆ;
ನಿಮ್ಮ ಶರಣರ ಪಾದವಲ್ಲದೆ
ಅನ್ಯವಿಷಯಕ್ಕೆಳಸದಂತೆ ಇರಿಸು, ಕೂಡಲ ಸಂಗಮದೇವಾ. ॥೫೩॥

೫೪

ಎನ್ನ ಹಾಸು-ಹೊಕ್ಕೆಂಬ ನಿಮ್ಮದಯ್ಯಾ;
ಎನ್ನ ಹಾಸಿ--ವೃದ್ಧಿ ನಿಮ್ಮದಯ್ಯಾ;
ಎನ್ನ ಮಾನಾಪಮಾನ ನಿಮ್ಮದಯ್ಯಾ:
ಬಳ್ಳಿಗೆ ಕಾಯಿ ದಿಮ್ಮಿತ್ತೆ, ಕೂಡಲ ಸಂಗಮದೇವಾ? ॥೫೦॥

೫೫

ಸಟೆಯಿಲ್ಲದಂತೆ, ಪ್ರಪಂಚುವಿಲ್ಲದಂತೆ, ನೈಶಿಕವಿಲ್ಲದಂತೆ
ನಡೆಸಯ್ಯಾ, ಲಿಂಗತಂದೇ;
ಒಂದು ನಿಮಿಷವಾದರೆಯೂ ನಿಮ್ಮ ಶರಣರ ಸಂಗದಲ್ಲಿರಿಸಯ್ಯಾ;
ಬೇಱೆ ಮತ್ತೆ ಅನ್ಯವ ತೋಱದಿರಯ್ಯಾ,
ಹೊಲಬುಗೆಟ್ಟೆನಯ್ಯಾ, ಕೂಡಲ ಸಂಗಮದೇವಾ. ॥೫೧॥

೫೬

''ಇವನಾರವ, ಇವನಾರವ, ಇವನಾರವ?"ನೆಂದೆನಿಸದಿರಯ್ಯಾ.
''ಇವ ನಮ್ಮವ, ಇವ ನಮ್ಮವ, ಇವ ನಮ್ಮವ"ನೆಂದೆನಿಸಯ್ಯಾ.
ಕೂಡಲ ಸಂಗಮದೇವಾ, ನಿಮ್ಮ ಮನೆಯ ಮಗನೆನಿಸಯ್ಯಾ. ॥೫೨॥

೫೭

ಹುಟ್ಟಿಂದು ಲೋಕದಲ್ಲಿ ಹುಟ್ಟಿಸಿ,
ಇಳಿಯಬಿಟ್ಟೊಡೆ ನಿಮ್ಮ ನಗುವರಯ್ಯಾ.
ಶಿವಬಟ್ಟೆಯೊಳೆನ್ನನು ಇರಿಸಯ್ಯಾ, ಹರನೇ,
ಹೊಲಬುಗೆಟ್ಟೆನು, ಬಟ್ಟೆಯ ತೋಱಿಯ್ಯಾ !
ಹುಯ್ಯಲಿಟ್ಟೆನು:—' ಗಣಂಗಳೂ ಕೇಳಿರಯ್ಯಾ,
ಕೂಡಲ ಸಂಗಮದೇವಯ್ಯನೆನ್ನ ಕಾಡಿಹನಯ್ಯಾ !' ॥ ೬೩ ॥

೫೮

ಅಕಟಕಟಾ ! ಶಿವ, ನಿನಗಿನಿತು ಕರುಣವಿಲ್ಲಾ;
ಅಕಟಕಟಾ ! ಶಿವ, ನಿನಗಿನಿತು ಕೃಪೆಯಿಲ್ಲಾ.
ಏಕೆ ಹುಟ್ಟಿಸಿದೆ ಇಹಲೋಕದುಃಖಿಯ, ಪರಲೋಕದೂರನ ?
ಏಕೆ ಹುಟ್ಟಿಸಿದೆ ?
ಕೂಡಲ ಸಂಗಮದೇವಾ, ಕೇಳಯ್ಯಾ,
ಎನಗಾಗಿ ಮತ್ತೊಂದು ತರುಮರನಿಲ್ಲವೇ ? ॥ ೬೪ ॥

೫೯

ನರ ಕೂರಂಬಿನಲೆಚ್ಚ, ಅವಂಗೊಲಿದೆಯಯ್ಯಾ :
ಅರಳಂಬಿನಲೆಚ್ಚ ಕಾಮನನುರುಹಿದೆಯಯ್ಯಾ !
ಇರುಳು ಹಗಲೆನ್ನದೆ ಪ್ರಾಣಘಾತಕವ ಮಾಡಿದ
ಬೇಡನ ಕೈಲಾಸಕೊಯ್ದೆಯಯ್ಯಾ :
ಎನ್ನನೇತಕ್ಕೊಲ್ಲಿ, ಕೂಡಲ ಸಂಗಮದೇವಾ ? ॥ ೬೫ ॥

೬೦

ನೀನೊಲಿದರೆ ಕೊಱಡು ಕೊನರುವುದಯ್ಯಾ ;
ನೀನೊಲಿದರೆ ಬಱಡು ಹಯನಹುದಯ್ಯಾ;
ನೀನೊಲಿದರೆ ವಿಷವೆ ಅಮೃತವಹುದಯ್ಯಾ ;
ನೀನೊಲಿದರೆ ಸಕಲ ಪಡಿಪದಾರ್ಥ ಇದಿರಲಿರ್ಪುವು,
ಕೂಡಲ ಸಂಗಮದೇವಾ. ॥ ೬೬ ॥

೬೧

ಮೇರುಗುಣವನಱಿಸುವುದೆ ಕಾಗೆಯಲ್ಲಿ ?
ಪರುಷಗುಣವನಱಿಸುವುದೆ ಕಬ್ಬುನದಲ್ಲಿ ?
ಸಾಧುಗುಣವನಱಿಸುವುದೆ ಅವಗುಣಿಯಲ್ಲಿ ?
ಚಂದನಗುಣವನಱಿಸುವುದೆ ತರುಗಳಲ್ಲಿ ?
ಸರ್ವಗುಣಸಂಪನ್ನ ಲಿಂಗವೆ, ನೀನೆನ್ನಲ್ಲಿ ಅವಗುಣವನಱಿಸುವುದೆ,
ಕೂಡಲ ಸಂಗಮದೇವಾ ? ॥ ೬೨ ॥

೬೩

ಭವಭವದಲ್ಲಿನ್ನ ಮನವು ನೀವಲ್ಲದೆ—
ಭವಭವದಲ್ಲಿನ್ನ ಮನವು ಸಿಲುಕದೆ ?
ಭವರಾಟಳದೊಳು ತುಂಬದೆ ? ಕೆಡಹದೆ ?
ಭವರೋಗವೈದ್ಯ ನೀನು, ಭವವಿರಹಿತ ನೀನು—
ಅವಧಾರು, ಕರುಣಿಸುವುದು, ಕೂಡಲ ಸಂಗಮದೇವಾ. ॥ ೬೪ ॥

೬೪

ಆಶೆಯೆಂಬ ಪಾಶದಲ್ಲಿ ಭವಬಂಧನವಾಗಿರ್ದೆನಯ್ಯಾ;
ಸಕೃತು ನಿಮ್ಮ ನೆನೆಯಲೆನಗೆ ತೆಱಹಿಲ್ಲವಯ್ಯಾ !
ಕರುಣಾಕರಾ, ಅಭಯಕರಾ, ವರದಾನೀ, ಕರುಣಿಸಯ್ಯಾ;
ಸಂಸಾರಬಂಧನವನು ಮಾಣಿಸೆನಗೆ ಕೃಪೆಮಾಡಿ.
ನಿಮ್ಮ ಶ್ರೀಪಾದಪದ್ಮದಲ್ಲಿ ಭ್ರಮರನಾಗಿರಿಸು,
ಭಕ್ತಜನಮನೋವಲ್ಲಭಾ, ಕೂಡಲ ಸಂಗಮದೇವಾ. ॥ ೬೯ ॥

(೪) ಗುರುಕರುಣ ಸ್ಥಳ

೧

ಮಡಕೆಯ ಮಾಡುವರೆ ಮಣ್ಣೇ ಮೊದಲು;
ತೊಡಗೆಯ ಮಾಡುವರೆ ಹೊನ್ನೇ ಮೊದಲು;
ಶಿವಪಥವನಱಿವರೆ ಗುರುಪಥವೇ ಮೊದಲು;
ಕೂಡಲ ಸಂಗಮದೇವರನಱಿವರೆ
ಶರಣರ ಸಂಗವೇ ಮೊದಲು. ॥ ೭೦ ॥

೨
ನೋಡಿ ನೋಡಿ ಮಾಡುವ ನೇಮ ಸಲ್ಲವು! ಸಲ್ಲವು!!
ತನುವುದ್ದೇಶ, ಮನವುದ್ದೇಶವಾಗಿ ಮಾಡುವ ನೇಮ ಸಲ್ಲವು! ಸಲ್ಲವು!!
ಗುರುಪಥವ ಮೀಱಿ ಮಾಡುವ ನೇಮ ಸಲ್ಲವು! ಸಲ್ಲವು!!
ಕೂಡಲ ಸಂಗಮದೇವಯ್ಯಾ,
ಇವು ನಿಮ್ಮ ನಿಜದೊಳಗೆ ನಿಲ್ಲವು! ನಿಲ್ಲವು!! ॥ ೭೧ ॥

೩
ಗುರುವಚನವಲ್ಲದೆ ಲಿಂಗವೆಂದೆನಿಸದು;
ಗುರುವಚನವಲ್ಲದೆ ನಿತ್ಯವೆಂದೆನಿಸದು;
ಗುರುವಚನವಲ್ಲದೆ ನೇಮವೆಂದೆನಿಸದು.
ತಲೆಯಿಲ್ಲದಟ್ಟಿಗೆ ಪಟ್ಟವ ಕಟ್ಟುವ
ಉಭಯಭ್ರಷ್ಟರ ಮೆಚ್ಚುವನೆ
ನಮ್ಮ ಕೂಡಲ ಸಂಗಮದೇವ? ॥ ೭೨ ॥

(೫) ವಿಭೂತಿಯು ಸ್ಥಳ

೧
ಮುನ್ನ ಮಾಡಿದ ಪಾಪವೆಂತು ಹೋಹುದೆಂದು ಚಿಂತಿಸಬೇಡ:
ಕಹಿಸೋರೆಯ ಕಾಯ ತಂದು ವಿಭೂತಿಯ ತುಂಬಿದೊಡೆ
ಸಿಹಿಯಾಗದೆ ಮೂಱು ದಿವಸಕ್ಕೆ?
ಹಲವುಕಾಲ ಕೊಂದ ಸೂನೆಗಾಱಿನ ಕತ್ತಿಯಾದರೇನು,
ಪರುಷ ಮುಟ್ಟಲಿಕೆ ಹೊನ್ನಾಗದೆ, ಅಯ್ಯಾ?
ಲಲಾಟದಲ್ಲಿ ವಿಭೂತಿ ಬರಲಿಕೆ
ಪಾಪ ಪಲ್ಲಟವಾಗದೆ, ಕೂಡಲ ಸಂಗಮದೇವಾ? ॥ ೭೩ ॥

೨
ನೀರಿಂಗೆ ನೆಯ್ದಿಲೆ ಶೃಂಗಾರ; ಸಮುದ್ರಕ್ಕೆ ತೆರೆಯೇ ಶೃಂಗಾರ;
ನಾರಿಗೆ ಗುಣವೇ ಶೃಂಗಾರ; ಗಗನಕ್ಕೆ ಚಂದ್ರಮನೇ ಶೃಂಗಾರ;
ನಮ್ಮ ಕೂಡಲ ಸಂಗನ ಶರಣರಿಗೆ
ನೊಸಲ ವಿಭೂತಿಯೇ ಶೃಂಗಾರ. ॥ ೭೪ ॥

(೬) ಪಂಚಾಕ್ಷರಿಯ ಸ್ಥಳ

೧

ಕರಿಯಂಜುವುದಂಕುಶಕ್ಕಯ್ಯಾ; ಗಿರಿಯಂಜುವುದು ಕುಲಿಶಕ್ಕಯ್ಯಾ;
ತಮಂಧವಂಜುವುದು ಜ್ಯೋತಿಗಯ್ಯಾ;
ಕಾನನವಂಜುವುದು ಬೇಗೆಗಯ್ಯಾ;
ಪಂಚಮಹಾಪಾತಕವಂಜುವುದು
ಕೂಡಲ ಸಂಗನ ನಾಮಕ್ಕಯ್ಯಾ. ॥ ೭೫ ॥

೨

ಜಪ-ತಪ-ನಿತ್ಯನೇಮವೆನಗುಪದೇಶ:
ನಿಮ್ಮ ನಾಮವೆನಗೆ ಮಂತ್ರ,
ಶಿವನಾಮವೆನಗೆ ತಂತ್ರ,
ಕೂಡಲ ಸಂಗಮದೇವಯ್ಯಾ, ನಿಮ್ಮ ನಾಮ ಕಾಮಧೇನುವೆನಗೆ. ॥ ೭೬ ॥

೩

ಅಕಟಕಟಾ ! ಬೆಡಗು ಬಿನ್ನಾಣವೆಂಬುದೇನೊ ?
'ಓಂ ನಮಃ ಶಿವಾಯ' ಎಂಬುದೇ ಮಂತ್ರ;
'ಓಂ ನಮಃ ಶಿವಾಯ' ಎಂಬುದೇ ತಂತ್ರ;
ನಮ್ಮ ಕೂಡಲ ಸಂಗಮದೇವರ ನೆನೆವುದೇ ಮಂತ್ರ. ॥ ೭೭ ॥

೪

ವಶ್ಯವ ಬಲ್ಲೆವೆಂದೆಂಬಿರಯ್ಯಾ—
ಬುದ್ಧಿಯನಱಯದ ಮನುಜರೂ ಕೇಳಿರಯ್ಯಾ:
ವಶ್ಯವಾವುದೆಂದಱಯದೆ
ಮರುಳುಗೊಂಬಿರೆಲೆ ಗಾವಿಲ ಮನುಜರಿರಾ !
'ಓಂ ನಮಃ ಶಿವಾಯ' ಎಂಬ ಮಂತ್ರ ಸರ್ವಜನವಶ್ಯ,
ಕೂಡಲ ಸಂಗಮದೇವಾ. ॥ ೭೮ ॥

ಸ

ಭವಬಂಧನ-ದುರಿತಂಗಳ ಗೆಲುವೊಡೆ
'ಓಂ ನಮಃ ಶಿವಾಯ—ಶರಣೆಂ'ದೊಡೆ ಸಾಲದೆ ?
'ಹರ ಹರ ಶಂಕರ, ಶಿವ ಶಂಕರ,
ಜಯ ಜಯ ಶಂಕರ ಶರಣೆ'ನ್ನುತ್ತಿರ್ದೇನೆ;
ಎನ್ನ ಪಾತಕ ಪರಿಹಾರ !
'ಕೂಡಲ ಸಂಗಮದೇವ ಶರಣೆ'ನ್ನುತಿರ್ದೇನೆ. ॥ ೭೯॥

ಎ

ಎನ್ನ ಮನದಲ್ಲಿ ಮತ್ತೊಂದನಱಿಯೆನಯ್ಯಾ—
'ಓಂ ನಮಃ ಶಿವಾಯ—ಓಂ ನಮಃ ಶಿವಾಯ' ಎನುತಿರ್ದೇನೆ.
ಎನಗಿದೇ ಮಂತ್ರ; ಎನಗಿದೇ ತಂತ್ರ; ಎನಗಿದೇ ಜಪ;
ಕೂಡಲ ಸಂಗಮದೇವಾ, ನೀನೇ ಬಲ್ಲೆ, ಎಲೆ ಲಿಂಗವೇ ॥ ೮೦ ॥

ಏ

'ಓಂ ನಮಃ ಶಿವಾಯ'
ಎಂಬ ಮಂತ್ರವ ಮೀಱಿಲಮ್ಮದೆ ನಿಂದುದು ವೇದ!
'ಓಂ ನಮಃ ಶಿವಾಯ'
ಎಂಬ ಮಂತ್ರವ ಮೀಱಿಲಮ್ಮದೆ ನಿಂದುದು ಶಾಸ್ತ್ರ!
'ಓಂ ನಮಃ ಶಿವಾಯ'
ಎಂಬ ಮಂತ್ರವ ಮೀಱಿಲಮ್ಮದೆ ನಿಂದುದು ತರ್ಕ!
ಭಯಂಕರ ಭ್ರಮೆಗೊಂಡಿತ್ತು ಮಂತ್ರ-ತಂತ್ರ!
ಶಿವನಂತುವನಱಿಯದೆ ಚಿಂತಿಸುತ್ತಿದ್ದಿತ್ತು ಲೋಕ!
ಕೂಡಲ ಸಂಗಮದೇವ ಶ್ವಪಚನ ಮೆಱೆದೊಡೆ
ಜಾತಿಭೇದವ ಮಾಡಲಮ್ಮವು! ॥ ೮೧ ॥

ಐ

ಬಿಳಿಯ ಕರಿಕೆ, ಕಣಿಗಿಲೆಲೆಯ, ತೊಱೆಯ ತಡಿಯ ಮುಳಲ ತಂದು,
ಗೌರಿಯ ನೋನುವ ಬನ್ನಿರೇ, ಚಿಕ್ಕ ಮುಕ್ಕಳೆಲ್ಲರೂ ನೆರೆದು—
'ಅನುಪಮದಾನಿ ಕೂಡಲ ಸಂಗಮದೇವ
ಗಂಡನಾಗಬೇಕೆ'ಂದು. ॥ ೮೨ ॥

೯

ಎಮ್ಮವರು ಬೆಸಗೊಂಡರೆ ಶುಭಲಗ್ನವೆನ್ನಿರಯ್ಯಾ;
ರಾಶಿ ಕೂಟ ಋಣಸಂಬಂಧವುಂಟೆಂದು ಹೇಳಿರಯ್ಯಾ;
ಚಂದ್ರಬಲ ತಾರಾಬಲವುಂಟೆಂದು ಹೇಳಿರಯ್ಯಾ;
ನಾಳೆನದಿನಕೆಂದಿನ ದಿನ ಲೇಸೆಂದು ಹೇಳಿರಯ್ಯಾ:
ಕೂಡಲ ಸಂಗಮದೇವನ ಪೂಜಿಸಿದ ಫಲ ನಿಮ್ಮದಯ್ಯಾ! ॥ ೮೩ ॥

(೭)ಲಿಂಗಧಾರಣ ಸ್ಥಳ

೧

ಪಾತಕಶತಕೋಟಿಯನೊರಸಲು ಸಾಲದೆ ಒಂದು ಶಿವನ ನಾಮ?
ಸಾಲದೆ ಒಂದು ಹರನ ನಾಮ,
ಕೂಡಲ ಸಂಗಮದೇವಾ,
ನಿಮ್ಮ ಉಂಡಿಗೆಯ ಪಶುವ ಮಾಡಿದೆಯಾಗಿ? ॥ ೮೪ ॥

೨

ಲಿಂಗದ ಉಂಡಿಗೆಯ ಪಶುವಾನಯ್ಯಾ;
ವೇಷಧಾರಿಯಾನು, ಉದರಪೋಷಕನಾನಯ್ಯಾ;
ಕೂಡಲ ಸಂಗನ ಶರಣರ ಧರ್ಮದ ಕವಿಲೆಯಾನು! ॥ ೮೫ ॥

೩

'ನಮಃ ಶಿವಾಯ, ನಮಃ ಶಿವಾಯ, ನಮಃ ಶಿವಾಯ-ಶರಣೆ'ಂದಿತ್ತು;
ಲಲಾಟಲಿಖಿತ ಬರೆದಬಳಿಕ ಪಲ್ಲಟವ ಮಾಡಬಾರದು.
ಎನ್ನ ಉರದ ಉಂಡಿಗೆ, ಸಿರದ ಅಕ್ಷರ—
'ಕೂಡಲ ಸಂಗಯ್ಯ ಶರಣೆ'ಂದಿತ್ತು. ॥ ೮೬ ॥

೪

ಅಡ್ಡ ವಿಭೂತಿಯಿಲ್ಲದವರ ಮುಖ ಹೊಲ್ಲ; ನೋಡಲಾಗದು.
ಲಿಂಗದೇವರಿಲ್ಲದ ಠಾವು ನರವಿಂಧ್ಯ: ಹೊಗಲಾಗದು.
ದೇವಭಕ್ತರಿಲ್ಲದೂರು ಸಿನೆ, ಹಾಳು!
ಕೂಡಲ ಸಂಗಮದೇವಾ. ॥ ೮೭ ॥

೫

ಅಡ್ಡ ತ್ರಿಪುಂಡ್ರದ ಮಣಿಮುಕುಟದ ವೇಷದ ಶರಣರ ಕಂಡರೆ
ನಂಬುವುದೆನ್ನ ಮನವು, ನಚ್ಚುವುದೆನ್ನ ಮನವು ಸಂದೇಹವಿಲ್ಲದೆ.
ಇವಿಲ್ಲದವರ ಕಂಡರೆ ನಂಬೆ, ಕೂಡಲ ಸಂಗಮದೇವಾ. ॥ ೮೫ ॥

(೮) ತಾಮಸನಿರಸನಸ್ಥಳ

೧

ಆರಾಧ್ಯ ಪ್ರಾಣಲಿಂಗವೆಂದಱಿದು,
ಪೂರ್ವಗುಣವಳಿದು, ಪುನರ್ಜಾತನಾದ ಬಳಿಕ
ಸಂಸಾರಬಂಧುಗಳೆನ್ನವರೆಂದೊಡೆ—
' ನಂಟ ಭಕ್ತಿ ನಾಯಕನರಕ',
ಇಂತೆಂದುದು ಕೂಡಲ ಸಂಗನ ವಚನ. ॥ ೮೯ ॥

೨

ತಾಳ ಮರದ ಕೆಳಗೆ ಒಂದು ಹಾಲ ಹರವಿಯಿರ್ದೊಡೆ
ಅದ ಹಾಲಹರವಿಯೆನ್ನರು, ಸುರೆಯ ಹರವಿಯೆಂಬರು.
ಈ ಭಾವನಿಂದೆಯ ಮಾಣಿಸಾ, ಕೂಡಲ ಸಂಗೆಮದೇವಾ. ॥ ೯೦ ॥

೩

ಸುಪಥಮಂತ್ರದುಪದೇಶವ ಕಲಿತು ಯುಕ್ತಿಗೆಟ್ಟು ನಡೆವಿರಯ್ಯಾ;
'ತತ್ತ್ವಮಸಿ' ಎಂಬುದನಱಿದು ಕತ್ತಲೆದೊಡೆವಿರಯ್ಯಾ.
ವೇದವಿಪ್ರರ ವಿಚಾರಿಸಿ ನೋಡಲು
'ಉಪದೇಶಪರೀಕ್ಷೆ ನಾಯಕನರಕ' ಎಂದುದು
ಕೂಡಲ ಸಂಗನ ವಚನದ ಸೂಚನೆ. ॥ ೯೧ ॥

೪

ಕುಂಬಳಕಾಯಿಗೆ ಕಬ್ಬುನದ ಕಟ್ಟ ಕೊಟ್ಟರೆ
ಕೊಳೆವುದಲ್ಲದೆ ಬಲುಹಾಗಬಲ್ಲುದೇ ?
ಅಳಿಮನದವಂಗೆ ಶಿವದೀಕ್ಷೆಯ ಕೊಟ್ಟರೆ
ಭಕ್ತಿ ಎಂತಹುದೊ ?—ಮುನ್ನಿನಂತೆ—
ಕೂಡಲ ಸಂಗಯ್ಯಾ, ಮನಹೀನನ ಮೀಸಲ ಕಾಯ್ದಿರಿಸಿದಂತೆ! ॥ ೯೨ ॥

೫

ಸಗಣಿಯ ಬೆನಕಂಗೆ ಸಂಪಗೆಯರಳಲ್ಲಿ ಪೂಜಿಸಿದರೆ
ರಂಜನೆಯಲ್ಲದೆ ಅದಱ ಗಂಜಳ ಬಿಡದಣ್ಣಾ!
ಮಣ್ಣ ಪುತ್ತಳಿಯ ಮಾಣದೆ ಜಲದಲ್ಲಿ ತೊಳೆದರೆ
ನಿಚ್ಚನಿಚ್ಚಕ್ಕೆ ಕೆಸಱಹುದಲ್ಲದೆ ಅದಱಚ್ಚುಗ ಬಿಡದಣ್ಣಾ!
ಲೋಕದ ಮಾನವಂಗೆ ಶಿವದೀಕ್ಷೆಯ ಕೊಟ್ಟರೆ
ಕೆಟ್ಟವನೇಕೆ ಶಿವಭಕ್ತನಹನು, ಕೂಡಲ ಸಂಗಮದೇವಾ? ॥ ೪೫ ॥

೬

ಕಬ್ಬುನದ ಕೋಡಗವ ಪರುಷ ಮುಟ್ಟಲು
ಹೊನ್ನಾದರೇನು, ಮತ್ತೇನಾದರೇನು,
ತನ್ನ ಮುನ್ನಿನ ರೂಹ ಬಿಡದನ್ನಕ್ಕ—
ಕೂಡಲ ಸಂಗಮದೇವಾ
ನಿಮ್ಮ ನಂಬಿಯೂ ನಂಬದ ಡಂಭಕರಿಗಯ್ಯಾ? ॥ ೪೪ ॥

೭

ತನುವಿನಲ್ಲೊಂದಿಟ್ಟು ಮನದಲ್ಲೆರಡಿಟ್ಟಡೆ
ಬಲ್ಲನೊಲ್ಲನಯ್ಯಾ ಲಿಂಗವು; ಬಲ್ಲನೊಲ್ಲಯ್ಯಾ;
ಪರಚಿಂತೆಯನೊಲ್ಲನೊಲ್ಲ ಕೂಡಲ ಸಂಗಮದೇವ! ॥ ೪೫ ॥

೮

ಒಳಗೆ ಕುಟಿಲ; ಹೊಱಗೆ ವಿನಯವಾಗಿ ಭಕ್ತರೆನಿಸಿಕೊಂಬವರ
ಬಲ್ಲನೊಲ್ಲನಯ್ಯಾ ಲಿಂಗವು!
ಅವರು ಸತ್‌ಪಥಕ್ಕೆ ಸಲ್ಲರು, ಸಲ್ಲರಯ್ಯಾ.
ಒಳಹೊಱಗೊಂದಾಗದವರಿಗೆ ಅಳಿಯಾಸೆದೋಱಿ
ಬೀಸಾಡುವನವರ ಜಗದೀಶ ಕೂಡಲ ಸಂಗಮದೇವ! ॥ ೪೬ ॥

೯

ಮನೆಯೊಳಗೆ ಮನೆಯೊಡೆಯನಿದ್ದಾನೊ ಇಲ್ಲವೊ ?
ಹೊಸ್ತಿಲಲ್ಲಿ ಹುಲ್ಲು ಹುಟ್ಟಿ, ಮನೆಯೊಳಗೆ ರಜ್ಜು ತುಂಬಿ,
ಮನೆಯೊಳಗೆ ಮನೆಯೊಡೆಯನಿದ್ದಾನೋ ಇಲ್ಲವೋ ?
ತನುವಿನೊಳಗೆ ಹುಸಿ ತುಂಬಿ, ಮನದೊಳಗೆ ವಿಷಯ ತುಂಬಿ,
ಮನೆಯೊಳಗೆ ಮನೆಯೊಡಯನಿಲ್ಲಾ—
ಕೂಡಲ ಸಂಗಮದೇವ ! ॥ ೯ ॥

೧೦

ಓಡೆತ್ತ ಬಲ್ಲುದು ಅವಲಕ್ಕಿಯ ಸವಿಯ ?
ಕೋಡಗ ಬಲ್ಲುದೆ ಸೆಳೆಮುಂಚದ ಸುಖವ ?
ಕಾಗೆ ನಂದನ ಬನದೊಳಗಿರ್ದರೇನು,
ಕೋಗಿಲೆಯಾಗಬಲ್ಲುದೆ ? ಹೇಳಾ.
ಕೊಳನ ತಡಿಯಲ್ಲೊಂದು ಹೊಱಸು ಕುಳ್ಳಿರ್ದರೇನು,
ಗಳಹಂಸಿಯಾಗಬಲ್ಲುದೆ, ಕೂಡಲ ಸಂಗಮದೇವಾ ? ॥ ೯೮ ॥

೧೧

ಎನಿಸುಕಾಲ ಕಲ್ಲು ನೀರೊಳಗಿರ್ದರೇನು,
ನೆನೆದು ಮೃದುವಾಗಬಲ್ಲುದೇ ?
ಎನಿಸುಕಾಲ ನಿಮ್ಮ ಪೂಜಿಸಿ ಏವೆನಯ್ಯಾ,
ಮನದಲ್ಲಿ ದೃಢವಿಲ್ಲದನ್ನಕ್ಕ ?
ನಿಧಾನವ ಕಾಯ್ದಿರ್ದ ಬೆಂತರನಂತೆ !—
ಅದಱ ವಿಧಿಯೆನಗಾಯಿತ್ತು, ಕೂಡಲ ಸಂಗಮದೇವಾ. ॥ ೯೯ ॥

೧೨

ಸಂತವಿದ್ದ ಮನೆಗೆ ಕೊಂತವ ತಂದಂತೆ
ಇದನೆಂತು ಸಂತಯ್ಸುವೆನು ?
ಸಂತೆಯ ಗುಡಿಲ ಸೂಳೆಗೆ ಕೊಂತವಳವಡುವುದೆ ?
ಕೂಡಲ ಸಂಗಮದೇವರ ಮಹತ್ತ್ವ ಆರಿಗೆಯೂ ಅಳವಡದು. ॥೧೦೦॥

೧೩

ಕೂಸುಳ್ಳ ಸೂಳೆ ಧನದಾಸೆಗೆ ಒತ್ತೆಯ ಕೊಂಡರೆ
ಕೂಸಿಂಗಲ್ಲ, ಬೊಜಗಂಗಲ್ಲ!
ಕೂಸನೊಮ್ಮೆ ಸಂತಯ್ಸುವಳು; ಬೊಜಗನನೊಮ್ಮೆ ನೆರೆವಳು;
ಧನದಾಸೆ ಬಿಡದು, ಕೂಡಲ ಸಂಗಮದೇವಾ. ॥ ೧೦೧ ॥

೧೪

ಎರದೆಲೆಯಂತೆ ಒಳಗೊಂದು ಹೊಱಗೊಂದಾದರೆ ಮೆಚ್ಚುವನೆ:
ಬಾರದ ಭವಂಗಳ ಬರಿಸುವನಲ್ಲದೆ ಮೆಚ್ಚುವನೆ?
ಅಘೋರನರಕವನುಣಿಸುವನಲ್ಲದೆ ಮೆಚ್ಚುವನೆ?
ಉಡುವಿನ ನಾಲಗೆಯಂತೆ ಎರಡಾದರೆ
ಕೂಡಲ ಸಂಗಯ್ಯ ಮೆಚ್ಚುವನೆ? ॥ ೧೦೨ ॥

೧೫

ಭಕ್ತರ ಕಂಡರೆ ಬೋಳರಪ್ಪಿರಯ್ಯಾ;
ಸವಣರ ಕಂಡರೆ ಬತ್ತಲೆಯಪ್ಪಿರಯ್ಯಾ;
ಹಾರುವರ ಕಂಡರೆ ಹರಿನಾಮವೆಂಬಿರಯ್ಯಾ:
ಅವರವರ ಕಂಡರೆ ಅವರವರಂತೆ!
ಸೂಳೆಗೆ ಹುಟ್ಟಿದವರ ತೋಱಿದಿರಯ್ಯಾ.
ಕೂಡಲ ಸಂಗಮದೇವನ ಪೂಜಿಸಿ ಅನ್ಯದೈವಂಗಳಿಗೆಱಗಿ
ಭಕ್ತರೆನಿಸಿಕೊಂಬ ಅಜ್ಞಾನಿಗಳ ನಾನೇನೆಂಬೆನಯ್ಯಾ? ॥ ೧೦೩ ॥

೧೬

ಗಂಡ ಶಿವಲಿಂಗದೇವರ ಭಕ್ತ:
ಹೆಂಡತಿ ಮಾರಿ-ಮಸಣಿಯ ಭಕ್ತೆ!
ಗಂಡ ಕೊಂಬುದು ಪಾದೋದಕ-ಪ್ರಸಾದ:
ಹೆಂಡತಿ ಕೊಂಬುದು ಸುರೆ-ಮಾಂಸ!
ಭಾಂಡ-ಭಾಜನ ಶುದ್ಧವಿಲ್ಲದವರ ಭಕ್ತಿ
ಹೆಂಡದ ಮಡಕೆಯ ಹೊಱಗೆ ತೊಳೆದಂತೆ,
ಕೂಡಲ ಸಂಗಮದೇವಾ! ॥ ೧೦೪ ॥

೧೭

ಹಾವಾಡಿಗನು ಮೂಕೊಲಿತಿಯು—ತನ್ನ ಕೈಯಲ್ಲಿ ಹಾವು—
ಮಗನ ಮದುವೆಗೆ ಶಕುನವ ನೋಡ ಹೋಹಾಗ,
ಇದಿರಲ್ಲೊಬ್ಬ ಮೂಕೊಲಿತಿಯ ಹಾವಾಡಿಗನ ಕಂಡು
'ಶಕುನ ಹೊಲ್ಲೆ'ಂಬ ಚದುರನ ನೋಡಾ!
ತನ್ನ ಸತಿ ಮೂಕೊಲಿತಿ!—ತನ್ನ ಕೈಯಲ್ಲಿ ಹಾವು!
ತಾನೂ ಮೂಕೊಲಿಯ!
ತನ್ನ ಭಿನ್ನವನಲಿಯದೆ ಅನ್ಯರನೆಂಬ
ಕುನ್ನಿಯನೇನೆಂಬೆ, ಕೂಡಲ ಸಂಗಮದೇವಾ? ॥ ೧೦೫ ॥

೧೮

ಅಂಗದಿಚ್ಛೆಗೆ ಮದ್ಯಮಾಂಸವ ತಿಂಬರು;
ಕಂಗಳಿಚ್ಛೆಗೆ ಪರವಧುವ ನೆರೆವರು:
ಲಿಂಗಲಾಂಛನಧಾರಿಯಾದಲ್ಲಿ ಫಲವೇನು?
ಲಿಂಗಪಥವ ತಪ್ಪಿ ನಡೆವರು ಜಂಗಮಮುಖದಿಂದೆ ನಿಂದೆ ಬಂದರೆ
ಕೊಂಡ ಮಾಲಿಂಗೆ ಹೋಹುದು ತಪ್ಪದು,
ಕೂಡಲ ಸಂಗಮದೇವಾ! ॥ ೧೦೬ ॥

೧೯

ಶಿವಜನ್ಮದಲ್ಲಿ ಹುಟ್ಟಿ, ಲಿಂಗೈಕ್ಯರಾಗಿ, ತಮ್ಮಂಗದಮೇಲೆ ಲಿಂಗವಿರಲು-
ಅನ್ಯರನೆ ಹಾಡಿ, ಅನ್ಯರನೆ ಹೊಗಳಿ,
ಅನ್ಯರ ವಚನವ ಕೊಂಡಾಡಲು, ಕರ್ಮ ಬಿಡದು; ಭವಬಂಧನ!
ಶ್ವಾನಯೋನಿಯಲ್ಲಿ ಬಪ್ಪುದು ತಪ್ಪದು!!
ಇದು ಕಾರಣ, ಕೂಡಲ ಸಂಗಮದೇವಾ,
ನಿಮ್ಮ ನಂಬಿಯೂ ನಂಬದ ಡಂಭಕರಿಗೆ
ಮಳಲ ಗೋಡೆಯನಿಕ್ಕಿ ನೀರಲ್ಲಿ ತೊಳೆದಂತಾಯಿತ್ತು! ॥ ೧೦೭ ॥

೨೦

ಅರ್ಥರೇಖೆ ಇದ್ದಲ್ಲಿ ಫಲವೇನು, ಆಯುಷ್ಯರೇಖೆ ಇಲ್ಲದನ್ನಕ್ಕ?
ಹಂದೆಯ ಕೈಯಲ್ಲಿ ಚಂದ್ರಾಯುಧವಿರ್ದು ಫಲವೇನು?
ಅಂಧಕನ ಕೈಯಲ್ಲಿ ದರ್ಪಣವಿರ್ದು ಫಲವೇನು?
ಮರ್ಕಟನ ಕೈಯಲ್ಲಿ ಮಾಣಿಕವಿರ್ದು ಫಲವೇನು?
ನಮ್ಮ ಕೂಡಲ ಸಂಗನ ಶರಣರನಱಿಯದವರ ಕೈಯಲ್ಲಿ
ಲಿಂಗವಿರ್ದು ಫಲವೇನು ಶಿವಪಥವನಱಿಯದನ್ನಕ್ಕ? ॥ ೧೦೯ ॥

೨೧

ಗಂಡನ ಮೇಲೆ ಸ್ನೇಹವಿಲ್ಲದ ಹೆಂಡತಿ,
ಲಿಂಗದ ಮೇಲೆ ನಿಷ್ಠೆಯಿಲ್ಲದ ಭಕ್ತ
ಇದ್ದರೇನೊ, ಶಿವಶಿವಾ! ಹೋದರೇನೋ?
ಕೂಡಲ ಸಂಗಮದೇವಯ್ಯಾ,
ಊಡದ ಲನಿಂಗೆ ಳ್ಳುಣ್ಣದ ಕಱುವ ಬಿಟ್ಟಂತೆ! ॥ ೧೧೯ ॥

೨೨

ಅವಳ ವಚನ ಬೆಲ್ಲದಂತೆ: ಹೃದಯದಲ್ಲಿಪ್ಪುದು ನಂಜು, ಕಂಡಯ್ಯಾ!
ಕಂಗಳಲ್ಲೊಬ್ಬನ ಕರೆವಳು, ಮನದಲ್ಲೊಬ್ಬನ ನೆರೆವಳು!
ಕೂಡಲ ಸಂಗಮದೇವ, ಕೇಳಯ್ಯಾ:
ಮಾನಿಸಗಳ್ಕೆಯ ನಂಬದಿರಯ್ಯಾ. ॥ ೧೧೦ ॥

೨೩

ಹಾದರಕ್ಕೆ ಹೋದರೆ ಕಳ್ಳದಮ್ಮವಾಯಿತ್ತು;
ಹಾಳುಗೋಡೆಗೆ ಹೋದರೆ ಜೇಳೂಱಿತ್ತು;
ಅಬ್ಬರವ ಕೇಳಿ ತಳವಾರನುಟ್ಟ ಸೀರೆಯ ಸುಲಿದ;
ನಾಚಿ ಹೋದರೆ ಮನೆಯ ಗಂಡ ಬೆನ್ನ ಬಾರನೆತ್ತಿದ;
ಅರಸು ಕೂಡಲ ಸಂಗಮದೇವ ದಂಡವ ಕೊಂಡ! ॥ ೧೧೧ ॥

೨೪

ಗಱು ತೋಱಿ ಗಂಡರೆಂಬವರ ಕಾಣೆ:
ನಿಱು ಸೋಂಕಲು ಮುನಿಯಿಲ್ಲ, ನೋಡಯ್ಯಾ—
ನಂಟತನವೇನವನ ? ಬಂಟತನವೇನವನ ?
ಹುಲ್ಲ ಕಿಚ್ಚು—ಹೊಲೆಯನ ಮೇಳಾಪ:
ಅಲ್ಲಿ ಹುರುಳಿಲ್ಲ , ಕೂಡಲ ಸಂಗಮದೇವಾ! ॥ ೧೧೨ ॥

೨೫

ಅಳಿಯುತ್ತ ಅಳಿಯುತ್ತ ಬಳಲುವರಲ್ಲದೆ ಕೊಳಗ ಬಳಲುವುದೆ?
ನಡೆಯುತ್ತ ನಡೆಯುತ್ತ ಬಳಲುವರಲ್ಲದೆ ಬಟ್ಟೆ ಬಳಲುವುದೆ ?
ಶ್ರವವ ಮಾಡುತ್ತ ಮಾಡುತ್ತ ಬಳಲುವರಲ್ಲದೆ ಕೋಲು ಬಳಲುವುದೆ?
ನಿಜವನಱಿಯದ ಭಕ್ತ ಬಳಲುವನಲ್ಲದೆ ಲಿಂಗ ಬಳಲುವುದೆ?
ಕೂಡಲ ಸಂಗಮದೇವಾ, ಅರಸಱಿಯದ ಬಿಟ್ಟಯ್ಯೋ ! ॥ ೧೧೩ ॥

೧ (ಅ). ಭಕ್ತಸ್ಥಳ

(೯) ಭಕ್ತಜ್ಞಾನಿಸ್ಥಲ

೧

ಒಲೆಯ ಬೂದಿಯ ಬಿಲಿಯಲು ಬೇಡ,
ಒಲಿದಂತೆ ಹೂಸಿಕೊಂಡಿಪ್ಪುದು.
ಹೂಸಿ ಏನು ಫಲ ಮನದಲ್ಲಿ ಲೇಸಿಲ್ಲದನ್ನಕ್ಕ ?
ಒಂದನಾಡಹೋಗಿ ಒಂಬತ್ತನಾಡುವ
ಡಂಭಕರ ಮೆಚ್ಚ ಕೂಡಲ ಸಂಗಮದೇವ. ॥ ೧೧೪ ॥

೨

ಧರಣಿಯ ಮೇಲೊಂದು ಹಿರಿದಪ್ಪ ಅಂಗಡಿಯನಿಕ್ಕಿ
ಹರದ ಕುಳ್ಳಿರ್ದ ನಮ್ಮ ಮಹಾದೇವಸೆಟ್ಟಿ,
ಒಮ್ಮನವಾದರೆ ಒಡನೆ ನುಡಿವನು; ಇಮ್ಮನವಾದರೆ ನುಡಿಯನು.
ಕಾಣಿಯ ಸೋಲ: ಅದ್ದಾಗಾಣಿಯ ಗೆಲ್ಲ!
ಜಾಣ, ನೋಡವ್ವಾ, ನಮ್ಮ ಕೂಡಲ ಸಂಗಮದೇವ! ॥ ೧೧೫ ॥

೩

ನಂಬರು, ನೆಚ್ಚರು, ಬಱಿದೆ ಕರೆವರು;
ನಂಬಲಱಿಯರೀ ಲೋಕದ ಮನುಜರು!
ನಂಬಿ ಕರೆದೊಡೆ 'ಓ' ಎನ್ನನೆ ಶಿವನು
'ನಂಬದೆ ನಚ್ಚದೆ ಬಱಿದೆ ಕರೆವರ
ಕೊಂಬ ಮೆಟ್ಟ ಕೂಗೆ'ಂದ ನಮ್ಮ ಕೂಡಲ ಸಂಗಮದೇವ. ॥೧೧೬॥

೪

ಹುತ್ತವ ಬಡಿದೊಡೆ ಹಾವು ಸಾಯಬಲ್ಲುದೆ, ಅಯ್ಯಾ ?
ಅಘೋರತಪವ ಮಾಡಿದೊಡೇನು ?
ಅಂತರಂಗ-ಆತ್ಮಶುದ್ಧಿಯಿಲ್ಲದವರನೆಂತು ನಂಬುವನಯ್ಯಾ
ಕೂಡಲ ಸಂಗಮದೇವ? ॥ ೧೧೭ ॥

೫

ಕಾಮವೇಕೊ ಲಿಂಗಪ್ರೇಮಿಯೆನಿಸುವಂಗೆ ?
ಕ್ರೋಧವೇಕೊ ಶರಣವೇದ್ಯನೆನಿಸುವಂಗೆ ?
ಲೋಭವೇಕೊ ಭಕ್ತಿಲಾಭವ ಬಯಿಸುವಂಗೆ ?
ಮೋಹವೇಕೊ ಪ್ರಸಾದವೇದ್ಯನೆನಿಸುವಂಗೆ ?
ಮದಮತ್ಸರವುಳ್ಳವಂಗೆ ಹೃದಯಶುದ್ಧವೆಲ್ಲಿಯದೋ ?
ಹದುಳಗರಾದಲ್ಲಿಪ್ಪ ನಮ್ಮ ಕೂಡಲ ಸಂಗಮದೇವ. ॥ ೧೧೮ ॥

೬

ಸಾರ, ಸಜ್ಜನರ ಸಂಗವ ಮಾಡುವುದು :
ದೂರ, ದುರ್ಜನರ ಸಂಗ ಬೇಡವಯ್ಯಾ !
ಆವ ಹಾವಾದರೇನು? ವಿಷವೊಂದೆ:
ಅಂತವರ ಸಂಗ ಬೇಡವಯ್ಯಾ.
ಅಂತರಂಗಶುದ್ಧವಿಲ್ಲದವರ ಸಂಗ
ಸಿಂಗಿ, ಕಾಳಕೂಟ ವಿಷವೋ, ಕೂಡಲ ಸಂಗಮದೇವಾ! ॥ ೧೧೯ ॥

೭

ಹಸಿದು ಎಕ್ಕೆಯ ಕಾಯ ಮೆಲಬಹುದೆ ?
ನೀರಡಿಸಿ ವಿಷವನೀಂಟಬಹುದೆ ?
ಸುಣ್ಣದ ತುಯ್ಯಲ ಬಣ್ಣವೊಂದೆ ಎಂದರೆ
ನಂಟತನಕ್ಕೆ ಉಣ್ಣಬಹುದೆ ?
ಲಿಂಗಸಾರಾಯಸಜ್ಜನರಲ್ಲದವರ
ಕೂಡಲ ಸಂಗಮದೇವರೆಂತೊಲಿವನು ? ॥ ೧೨೦ ॥

೮

ಎಲವದ ಮರ ಹೂತು ಫಲವಾದ ತೆಱನಂತೆ–
ಸಿರಿಯಾದರೇನು ಶಿವಭಕ್ತಿಯಿಲ್ಲದನ್ನಕ್ಕ ?
ಫಲವಾದರೇನು ಹಾವುಮೆಕ್ಕೆಯಕಾಯಿ ?
ಕುಲವಿಲ್ಲದ ರೂಹು ಎಲ್ಲಿದ್ದರೇನು ?
ಬಚ್ಚಲ ನೀರು ತಿಳಿದಲ್ಲಿ ಫಲವೇನು ?
ಅವಗುಣಿಗಳ ಮೆಚ್ಚ ಕೂಡಲ ಸಂಗಮದೇವ. ॥ ೧೨೧ ॥

೯

ಬಚ್ಚಲ ನೀರು ತಿಳಿದರೇನು ? ಸಲ್ಲದ ಹೊನ್ನು ಮತ್ತೆಲ್ಲಿದ್ದರೇನು?
ಆಕಾಶದ ಮಾವಿನ ಫಲವೆಂದರೇನು ? ಕೊಯ್ಯಲಿಲ್ಲ, ಮೆಲ್ಲಲಿಲ್ಲಾ !
ಕೂಡಲ ಸಂಗನ ಶರಣರ ಅನುಭಾವವಿಲ್ಲದವರು
ಎಲ್ಲಿದ್ದರೇನು ? ಎಂತಾದರೇನು? ॥ ೧೨೨ ॥

೧೦

ಗಿಳಿಯೋದಿ ಫಲವೇನು ?
ಬೆಕ್ಕು ಬಹುದ ಹೇಳಲಱಿಯದು !
ಜಗವೆಲ್ಲ ಕಾಂಬ ಕಣ್ಣು:
ತನ್ನ ಕೊಂಬ ಕೊಯಿಲೆಯ ಕಾಣಲಱಿಯದು !
ಇದಿರ ಗುಣವ ಬಲ್ಲೆವೆಂಬರು:
ತಮ್ಮ ಗುಣವನಱಿಯರು, ಕೂಡಲ ಸಂಗಮದೇವಾ. ॥ ೧೨೩ ॥

೧೧

ಲೋಕದ ಡೊಂಕ ನೀವೇಕೆ ತಿದ್ದುವಿರಿ?
ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ;
ನಿಮ್ಮ ನಿಮ್ಮ ಮನವ ಸಂತಯ್ಸಿಕೊಳ್ಳಿ.
ನೆರಿಮನೆಯ ದುಃಖಕ್ಕೆ ಅಳುವವರ ಮೆಚ್ಚ
ಕೂಡಲ ಸಂಗಮದೇವ. ॥ ೧೨೪ ॥

೧೨

ಏತ ತಲೆವಾಗಿದರೇನು? ಗುರುಭಕ್ತನಾಗಬಲ್ಲುದೆ?
ಇಕ್ಕುಳ ಕೈಮುಗಿದರೇನು? ಭೃತ್ಯಾಚಾರಿಯಾಗಬಲ್ಲುದೆ?
ಗಿಳಿಯೋದಿದರೇನು? ಲಿಂಗವೇದಿಯಾಗಬಲ್ಲುದೆ?
ಕೂಡಲ ಸಂಗನ ಶರಣರ ಬಂದ ಬರವ ನಿಂದ ನಿಲವ
ಅನಂಗಸಂಗಿಗಳೆತ್ತ ಬಲ್ಲರು? ॥ ೧೨೫ ॥

೧೩

ಒಲವಿಲ್ಲದ ಪೂಜೆ! ನೇಹವಿಲ್ಲದ ಮಾಟ!
ಆ ಪೂಜೆಯೂ ಆ ಮಾಟವೂ
ಚಿತ್ರದ ರೂಹು ಕಾಣಿರಣ್ಣಾ! ಚಿತ್ರದ ಕಬ್ಬು ಕಾಣಿರಣ್ಣಾ!
ಅಪ್ಪಿದರೆ ಸುಖವಿಲ್ಲ! ಮೆಲಿದರೆ ರುಚಿಯಿಲ್ಲ!—
ಕೂಡಲ ಸಂಗಮದೇವಾ ನಿಜವಿಲ್ಲದವನ ಭಕ್ತಿ!! ॥ ೧೨೬ ॥

೧೪

ಸ್ನೇಹ ತಪ್ಪಿದ ಠಾವಿನಲ್ಲಿ ಗುಣವನಱಿಸುವರೆ, ಅಯ್ಯಾ?
ಹೂ ಬಾಡಿದಲ್ಲಿ ಪರಿಮಳವನಱಿಸುವರೆ, ಅಯ್ಯಾ?
ಎನ್ನ ತಂದೆ ಕೂಡಲ ಸಂಗಮದೇವಾ,
ತೊಱೆಯಿಳಿದರೆ ಅಂಬಿಗಂಗೇನುಂಟು? ॥ ೧೨೭ ॥

೧೫

ಆಸೆಗೆ ಹುಟ್ಟಿದ ಪ್ರಾಣಿ ಆಸೆಯನೆ ಕಲಿತು
ಪುಣ್ಯಪದವಿಯ ಬಯಸಿದರೆ ಭವಮಾಲೆಯ ಭರವು ತಪ್ಪದು.
ಬೇಡಲು ಹುಟ್ಟಿದ ಪ್ರಾಣಿಗೆ ಬೇಡಲು ವಿಧಿಯೇ!
ಸೂಳೆಗೆ ಹುಟ್ಟಿದ ಪ್ರಾಣಿಗೆ ನಿಜಗುಣಸಜ್ಜನವಪ್ಪುದೆ?
ಲಿಂಗ-ಉದಯ, ಶರಣ-ವಿಸ್ತಾರವು ಬಯಿಸಿದರೊಳವೆ,
ಕೂಡಲ ಸಂಗಮದೇವಾ, ನಿಮ್ಮಲ್ಲಿ? ॥ ೧೨೮ ॥

೧೬

ಹಬ್ಬಕ್ಕೆ ತಂದ ಹರಕೆಯ ಕುಱಿ
ತೋರಣಕ್ಕೆ ತಂದ ತಳಿರ ಮೇಯಿತ್ತು;
ಕೊಂದಹರೆಂಬುದನಱಿಯದೆ
ಬೆಂದವೊಡಲ ಹೊರೆಯ ಹೋಯಿತ್ತಲ್ಲದೆ!
ಅದಂದೇ ಹುಟ್ಟಿತ್ತು, ಅದಂದೇ ಹೊಂದಿತ್ತು:
ಕೊಂದವರುಳಿದರೇ, ಕೂಡಲ ಸಂಗಮದೇವಾ? ॥ ೧೬ ॥

೧೭

ಹಾವಿನ ಬಾಯ ಕಪ್ಪೆ ಹಸಿದು ಹಾಱುವ ನೊಣಕ್ಕೆ ಆಸೆ ಮಾಡುವಂತೆ-
ಸೂಲವನೇಱುವ ಕಳ್ಳನು ಹಾಲುತುಪ್ಪವ ಕುಡಿದು
ಮೇಲೇಸುಕಾಲ ಬದುಕುವನೊ?
ಕೆಡುವೊಡಲ ನಚ್ಚಿ, ಕಡುಹುಸಿಯನೆ ಹುಸಿದು, ಒಡಲ ಹೊರೆವರ-
ಕೂಡಲ ಸಂಗಮದೇವನನವರನೊಲ್ಲ, ಕಾಣಿರಣ್ಣಾ. ॥ ೧೭೦ ॥

೧೮

ಆರತವಡಗದು; ಕ್ರೋಧ ತೊಲಗದು;
ಕ್ರೂರ ಕುಭಾಷೆ ಕುಹಕ ಬಿಡದನ್ನಕ್ಕ
ನೀನೆತ್ತಲು ಶಿವನೆತ್ತಲು? ಹೋಗಯ್ಯಾ, ಮರುಳೇ!
ಭವರೋಗವೆಂಬ ತಿಮಿರ ತಿಳಿಯದನ್ನಕ್ಕ
ಕೂಡಲ ಸಂಗಯ್ಯನೆತ್ತ ನೀನೆತ್ತ? ಮರುಳೇ! ॥ ೧೭೧ ॥

೧೯

ಹಾವು ತಿಂದವರ ನುಡಿಸಬಹುದು;
ಹೊಡೆದವರ ನುಡಿಸಬಹುದು:
ಸಿರಿಗರ ಹೊಡೆದವರ ನುಡಿಸಲ ಬಾರದು, ನೋಡಯ್ಯಾ!
ಬಡತನವೆಂಬ ಮಂತ್ರವಾದಿ ಹೊಗಲು
ಒಡನೆ ನುಡಿವರು, ಕೂಡಲ ಸಂಗಮದೇವಾ. ॥ ೧೭೨ ॥

೨೦

ಅರಿಭಕ್ತರಾದವರ ನೆರೆ ಬೇಡ, ಹೊರೆ ಬೇಡ;
ದಾರಿ ಸಂಗಡ ಬೇಡ, ದೂರ ನುಡಿಯಲು ಬೇಡ!
ಕೂಡಲ ಸಂಗನ ಶರಣರಲ್ಲಿ ಅಚ್ಚ ಲಿಂಗೈಕ್ಯಂಗೆ
ತೊತ್ತಾಗಿಹುದಯ್ಯಾ. ॥ ೧೩೩ ॥

೨೧

ಸಾರ, ಸಜ್ಜನರ ಸಂಗ ಲೇಸು ಕಂಡಯ್ಯಾ :
ದೂರ, ದುರ್ಜನರ ಸಂಗವದು ಭಂಗವಯ್ಯಾ.
ಸಂಗವೆರಡುಂಟು; ಒಂದ ಬಿಡು; ಒಂದ ಹಿಡಿ:
ಮುಂಗಳಮೂರ್ತಿ ನಮ್ಮ ಕೂಡಲ ಸಂಗನ ಶರಣರ. ॥ ೧೩೪ ॥

೨೨

ಹೊಲೆಯ ಹೊಲಬಿಗನಾದೊಡೆ
ಅವನ ಹೊರೆಯಲಿಪ್ಪುದು ಲೇಸು, ಕಂಡಯ್ಯಾ.
ಹೊಲಬುಗೆಡದೆ 'ಲಿಂಗ ಶರಣೆ'ನ್ನಿರಯ್ಯಾ;
ಹೊಲಬುಗೆಡಬೇಡ: 'ಶಿವ ಶರಣೆ'ನ್ನಿರಯ್ಯಾ.
ನಮ್ಮ ಕೂಡಲ ಸಂಗನ ಮಹಾಮನೆಯೊಳು
ಮಾದಾರ ಚೆನ್ನಯ್ಯ ಹೊಲಬಿಗನಯ್ಯಾ! ॥ ೧೩೫ ॥

೨೩

ದೂಷಕನವನೊಬ್ಬ ದೇಶವ ಕೊಟ್ಟೆರೆ,
ಆಸೆಮಾಡಿಯವನ ಹೊರೆಯಲಿರಬೇಡ.
ಮಾದರ ಶಿವಭಕ್ತನಾದರೆ ಆತನ ಹೊರೆಯಲ್ಲಿ
ಭೃತ್ಯನಾಗಿರ್ಪುದು ಕರಲೇಸಯ್ಯಾ,
ತೊತ್ತಾಗಿರ್ಪುದು ಕರಲೇಸಯ್ಯಾ.
ಕಾಡ ಸೊಪ್ಪ ತಂದು, ಓಡಿನಲ್ಲಿ ಹುರಿದಿಟ್ಟು
ಕೂಡಿ ಕೊಂಡಿಪ್ಪುದು ನಮ್ಮ ಕೂಡಲ ಸಂಗನ ಶರಣರ. ॥೧೩೬॥

೨೪

ಪರುಷ ಮುಟ್ಟಿದ ಬಳಿಕ ಕಬ್ಬುನವಾಗದು, ನೋಡಾ;
ಲಿಂಗ ಮುಟ್ಟಿದ ಬಳಿದ ಕುಚಿತ್ತಾಚಾರವಾಗದು,
ಕೂಡಲ ಸಂಗನ ಶರಣರು ಅನ್ಯವನಱಿಯರಾಗಿ. ॥ ೧೩೭ ॥

೨೫

ಪಟ್ಟವ ಕಟ್ಟಿದ ಬಳಿಕ ಲಕ್ಷಣವನಱಿಸುವರೆ?
ಲಿಂಗದೇವನ ಪೂಜಿಸಿ ಕುಲವನಱಿಸುವರೆ, ಅಯ್ಯಾ,
ಕೂಡಲ ಸಂಗಮದೇವ 'ಭಕ್ತಕಾಯ ಮುಮುಕಾಯ'ವೆಂದನಾಗಿ?
॥ ೧೩೮ ॥

೨೬

ದೇವಲೋಕ ಮರ್ತ್ಯಲೋಕವೆಂಬುದು ಬೇಱಿಕೆ ಮತ್ತುಂಟೆ?
ಈ ಲೋಕದೊಳಗೇ ಮತ್ತೆ ಅನಂತಲೋಕ!
ಶಿವಲೋಕ ಶಿವಾಚಾರವಯ್ಯಾ;
ಭಕ್ತನಿರ್ಮಿತವೇ ದೇವಲೋಕ;
ಭಕ್ತನಂಗಣವೇ ವಾರಣಾಸಿ;
ಕಾಯವೇ ಕೈಲಾಸ!
ಇದು ಸತ್ಯ ಕೂಡಲ ಸಂಗಮದೇವಾ. ॥ ೧೩೯ ॥

೨೭

ಕಟ್ಟಿದಿರಿನಲ್ಲಿ ಶಿವಭಕ್ತನ ಕಂಡು, ದೃಷ್ಟಿಯಾರಿ ಶರಣೆಂದೊಡೆ
ಹುಟ್ಟಿಗಳು ಜನ್ಮದ ಪಾಪ ಬಿಟ್ಟು ಹಿಂಗುವುದು, ನೋಡಾ;
ಮುಟ್ಟಿ ಚರಣಕೆಱಗಿದೊಡೆ ತನುವೊಪ್ಪದಂತೇ ಅಹುದು,
ಪರುಷ ಮುಟ್ಟಿದಂತೆ!
ಕರ್ತೃ ಕೂಡಲ ಸಂಗನ ಶರಣರ ಸಂಗವು
ಮತ್ತೆ ಭವಮಾಲೆಗೆ ಹೊದ್ದಲೀಯದು, ನೋಡಾ. ॥ ೧೪೦ ॥

೨೮

ಆರಾರ ಸಂಗವೇನೇನ ಮಾಡದಯ್ಯಾ;
ಕೀಡಿ ಕುಂಡಲಿಗನಾಗದೆ, ಅಯ್ಯಾ?
ಚಂದನದ ಸನ್ನಿಧಿಯಲಿ ಪರಿಮಳ ತಾಗಿ
ಬೇವು ಬೊಬ್ಬುಳಿ ತಱಿಯ ಗಂಧಂಗಳಾಗವೆ?
ನಮ್ಮ ಕೂಡಲ ಸಂಗನ ಶರಣರ ಸನ್ನಿಧಿಯಿಂದ
ಕರ್ಮ ನಿರ್ಮಳವಾಗದಿಹುದೆ? ॥ ೧೪೧ ॥

೨೯

ಎಂತಹನಾದರೇನು: ಲಿಂಗ ಮುಟ್ಟದವನೇ ಕೀಳುಜಾತಿ.
ಕುಲವಹುದು ತಪ್ಪದು ಲಿಂಗ ಮುಟ್ಟಲೊಡನೆ:
ಹೊನ್ನಹುದು ತಪ್ಪದು ಪರುಷ ಮುಟ್ಟಲೊಡನೆ.
ಕೂಡಲ ಸಂಗಮದೇವನೊಲ್ಲ ಸರ್ವಸಂದೇಹಿಗಳ! ॥ ೧೪೨ ॥

೩೦

ಓದಿದರೇನು ಕೇಳಿದರೇನು ಶಿವಪಥವನಱಿಯದನ್ನಕ್ಕ?
ಓದಿತ್ತು ಕಾಣಿರೋ ಶುಕನು—ಶಿವಪಥವನಱಿಯದನ್ನಕ್ಕ!
ಓದಿದ ಫಲವು ಮಾದಾರ ಚೆನ್ನಯ್ಯಂಗಾಯಿತ್ತು,
ಕೂಡಲ ಸಂಗಮದೇವಾ. ॥ ೧೪೩ ॥

೩೧

ಹಾವಿನ ಡೊಂಕು ಹುತ್ತಕ್ಕೆ ಸಸಿನ;
ನದಿಯ ಡೊಂಕು ಸಮುದ್ರಕ್ಕೆ ಸಸಿನ:
ನಮ್ಮ ಕೂಡಲ ಸಂಗನ ಶರಣರ ಡೊಂಕು ಲಿಂಗಕ್ಕೆ ಸಸಿನ! ॥೧೪೪॥

೩೨

ಭಕ್ತನ ಮುಖದರ್ಪಣದಲ್ಲಿ ಲಿಂಗವ ಕಾಣಬಹುದು,
ಭಕ್ತದೇಹಿಕದೇವ ಅನಿಮಿಷನಾಗಿ.
ಕೂಡಲ ಸಂಗಮದೇವ
ಭಕ್ತನ ನುಡಿಯ ನಡುನೆ ರಾಶಿಯಾಗಿರ್ಪನು. ॥ ೧೪೫ ॥

೩೩

ಭಕ್ತಿ ಎಂತಹುದಯ್ಯಾ ? ದಾಸಯ್ಯ ಮಾಡಿದಂತಹುದಯ್ಯಾ.
ಭಕ್ತಿ ಎಂತಹುದಯ್ಯಾ ? ಸಿರಿಯಾಳ ಮಾಡಿದಂತಹುದಯ್ಯಾ.
ಭಕ್ತಿ ಎಂತಹುದಯ್ಯಾ? ನಮ್ಮ ಸಿಂಧುಬಲ್ಲಾಳ ಮಾಡಿದಂತಹುದಯ್ಯಾ.
ಭಕ್ತಿ ಎಂತಹುದಯ್ಯಾ ? ಕೂಡಲ ಸಂಗಮದೇವಾ ,
ನೀ ಬಾಣನ ಬಾಗಿಲ ಕಾಯ್ದಂತಹುದಯ್ಯಾ. ॥ ೧೪೬ ॥

೩೪

ಮುನ್ನಿನವರು ಹೋದ ದಾರಿ ಭಯ, ಕಾಣಿರಣ್ಣಾ !
ಬಲ್ಲಾಳನ ವಧುವಿನೊಡನೆ ಸರಸವಾಡಿದಂದಿಂದ ಭಯ, ಕಾಣಿರಣ್ಣಾ!
ಸಿರಿಯಾಳನ ಮಗನ ಬೇಡಿದಂದಿಂದ ಭಯ, ಕಾಣಿರಣ್ಣಾ !
ದಾಸನ ವಸ್ತ್ರವ ಸೀಳಿದಂದಿಂದ ಭಯ, ಕಾಣಿರಣ್ಣಾ !
ಅಘಟಿತಘಟಿತರು ವಿಪರೀತಚರಿತರು
ಕೂಡಲ ಸಂಗನ ಶರಣರು ನಡೆದ ದಾರಿ ಭಯ, ಕಾಣಿರಣ್ಣಾ !!
॥ ೧೪೭ ॥

೩೫

ದೇವನೊಳ್ಳಿದನೆಂದು ಮುಯ್ಯಾನಲು ಬೇಡ !
ಕಲಿಕಟ ಕಾಡಿದನೊಳ್ಳಿದನೆ?
ಅಳಸುವ ನಗಿಸುವನೊಳ್ಳಿದನೆ ?
ಬೆಚ್ಚದೆ ಬೆದಱದೆ ತೊತ್ತುತನವ ಮಾಡಲು
ತನ್ನನೀವ ಕೂಡಲ ಸಂಗಮದೇವ. ॥೧೪೮॥

೩೬

ನೆಱೆ ನಂಬೊ, ನೆಱೆ ನಂಬೋ ಧರಧುರವಿಲ್ಲದೆ ಸಾಮುವೇದಿಗಳಂತೆ;
ನೆಱೆ ನಂಬೊ, ನೆಱೆ ನಂಬೋ ದಾಸ-ದುಗ್ಗಳೆಯಂತೆ;
ನೆಱೆ ನಂಬೊ, ನೆಱೆ ನಂಬೋ ಸಿರಿಯಾಳ-ಚಂಗಳೆಯಂತೆ;
ನೆಱೆ ನಂಬೊ, ನೆಱೆ ನಂಬೋ ಸಿಂಧುಬಲ್ಲಾಳನಂತೆ.
ನಂಬಿದೆಯಾದಡೆ ತನ್ನನೀವ ಕೂಡಲ ಸಂಗಮದೇವ. ॥ ೧೪೯ ॥

೩೭

ಬಲ್ಲಿದರೊಡನೆ ಬವರವಾದರೆ ಗೆಲಲುಂಟು ಸೋಲಲುಂಟು:
ಕಳ್ಳನೊಡನೆ ಭಾಷೆ ಪೂರಾಯ[ವೆ], ಅಯ್ಯಾ?
ನಮ್ಮ ಕೂಡಲ ಸಂಗನ ಶರಣರಿಗೆ ಮಾಡಿ ಮಾಡಿ
ಧನ ಸವೆದು ಬಡವಾದರೆ
ಆ ಭಕ್ತನು ಆ ಲಿಂಗಕ್ಕೆ ಪೂಜೆಯಹನು. ॥ ೧೫೦ ॥

೩೮

ಗಿರಿಗಳ ಮೇಲೆ ಹಲವು ತರುಮರಾದಿಗಳಿದ್ದು
ಸಿರಿಗಂಧದ ಸನ್ನಿಧಿಯಲು ಪರಿಮಳವಾಗವೆ?
ಲಿಂಗವಂತನ ಸನ್ನಿಧಿಯಿಂದ ಹಿಂದಣ ದುಸ್ಸಂಗ ಕೆಡುವುದು.
ಕೂಡಲ ಸಂಗಮದೇವಯ್ಯಾ,
ಸಿರಿಯಾಳನ ಸಾರ್ದ ನರರೆಲ್ಲಾ ಸುರರಾಗರೆ? ॥ ೧೫೧॥

೩೯

ಪರುಷದ ಹೊರೆಯಲ್ಲಿ ಕಬ್ಬುನವಿರ್ದು ಹೊನ್ನಾಯಿತ್ತು, ನೋಡಿರೇ:
ಅವ್ವಾ ಚಂಗಳೇ, ನೀನಿದ್ದೀಳು ಕೇರಿಯವರು
ಲಿಂಗದ ನೋಂಪಿಯ ನೋಂತರೆ? ಹೇಳಾ:
ಕೂಡಲ ಸಂಗಮ ದೇವಂಗೆ
ಚೀಲಾಳನೆಂಬ ಬಾಯಿನವನಿಕ್ಕಿದರೇ? ಹೇಳಾ. ॥ ೧೫೨ ॥

೪೦

ಗೀತವ ಬಲ್ಲಾತ ಜಾಣನಲ್ಲ; ಮಾತ ಬಲ್ಲಾತ ಜಾಣನಲ್ಲ:
ಜಾಣನು, ಜಾಣನು, ಆತ ಜಾಣನು: ಲಿಂಗವ ನೆಱಿನಂಬಿದಾತ;
ಜಾಣನು ಜಂಗಮಕ್ಕೆ ಸವೆಸುವಾತ.
ಆತ ಜಾಣನು: ಜವನ ಬಾಯಲು ಬಾಲವ ಕೊಯ್ದು ಹೋದಾತ;
ಆತ ಜಾಣನು: ನಮ್ಮ ಕೂಡಲ ಸಂಗನ ಶರಣನು! ॥ ೧೫೩ ॥

೪೧

ಲೇಸೆನಿಸಿಕೊಂಡು ಐದು ದಿನ ಬದುಕಿದರೇನು?
ಲೇಸೆನಿಸಿಕೊಂಡು ನಾಲ್ಕು ದಿನ ಬದುಕಿದರೇನು?
ಲೇಸೆನಿಸಿಕೊಂಡು ಮೂಱು ದಿನ ಬದುಕಿದರೇನು?
ಲೇಸೆನಿಸಿಕೊಂಡು ಎರಡು ದಿನ ಬದುಕಿದರೇನು?
(ಶ್ಲೋಕ) ಜೀವಿತಂ ಶಿವಭಕ್ತಾನಾಂ। ವರಂ ಪಂಚದಿನಾನಿ ಚ ॥
ನಾಜಕಲ್ಪಸಹಸ್ರಂತು / ಭಕ್ತಿಹೀನಂ ತು ಶಂಕರೀ ॥
ಎಂದುದಾಗಿ, ಕೂಡಲ ಸಂಗನ ಶರಣರ ವಚನದಲ್ಲಿ,
ಲೇಸೆನಿಸಿಕೊಂಡು ಒಂದು ದಿನ ಬದುಕಿದರೇನೋ? ॥ ೧೫೪ ॥

೪೨

ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯಾ:
ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರಯ್ಯಾ;
ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರಯ್ಯಾ,
ಕೂಡಲ ಸಂಗಮದೇವಾ. ॥ ೧೫೫ ॥

೪೩

ಶಿವಚಿಂತೆ ಶಿವಜ್ಞಾನವಿಲ್ಲದ ಮನುಜರು—
ಸಗಣಕ್ಕೆ ಸಾಸಿರ ಹುಳು ಹುಟ್ಟುವೆ, ದೇವಾ?
ಕಾಡ ಮೃಗವೊಂದಾಗಿರಲಾಗದೆ, ದೇವಾ?
ಊರ ಮೃಗವೊಂದಾಗಿರಲಾಗದೆ, ಹರನೇ?
ನಮ್ಮ ಕೂಡಲ ಸಂಗನ ಶರಣರಿಲ್ಲದ ಊರು, ದೇಶ—
ವನವಾಸ, ನರವಿಂಧ್ಯ, ಕಾಣಿರಣ್ಣಾ! ॥ ೧೫೬ ॥

೪೪

ಹೊತ್ತಾಜೆ ಎದ್ದು ಶಿವಲಿಂಗದೇವನ
ದೃಷ್ಟಿ[ಯಾ]ರೆ ನೋಡದವನ ಸಂಸಾರವೇನವನ?
ಬಾಳುವೆಣನ ಬೀಳುವೆಣನ ಸಂಸಾರವೇನವನ?
ನಡೆವೆಣನ ನುಡಿವೆಣನ ಸಂಸಾರವೇನವನ?
ಕರ್ತು ಕೂಡಲ ಸಂಗಮದೇವಾ,
ನಿಮ್ಮ ತೊತ್ತುಗೆಲಸವ ಮಾಡದವನ ಸಂಸಾರವೇನವನ? ॥ ೧೫೭ ॥

೪೫

ವ್ಯಾಧನೊಂದು ಮೊಲನ ತಂದರೆ ಸಲುವ ಹಾಗಕ್ಕೆ ಬಿಲಿವರಯ್ಯಾ.
ನೆಲನಾಳ್ದನ ಹೆಣನೆಂದರೆ ಒಂದಡಕೆಗೆ ಕೊಂಬವರಿಲ್ಲ, ನೋಡಯ್ಯಾ!
ಮೊಲನಿಂದ ಕರಕಷ್ಟ ನರನ ಬಾಳುವೆ!
ಸಲೆನಂಬೋ ನಮ್ಮ ಕೂಡಲ ಸಂಗಮದೇವನ. ॥ ೧೫೯ ॥

೪೬

ಉತ್ಪತ್ತಿ ಶುಕ್ಲ-ಶೋಣಿತದಿಂದಾದ ಲಜ್ಜೆ ಸಾಲದೇ?
ಮತ್ತೆ ದುರಿತಂಗಳ ಹೆಜ್ಜುವ ಹೇಗತನವೇಕಯ್ಯಾ?
ಮೃತ್ಯುವಿನ ಬಾಯಿಗೆ ತುತ್ತಾಗಲೇಕೆ?
ಒತ್ತೊತ್ತೆಯ ಜನನವ ಗೆಲುವೊಡೆ ಕರ್ತನ ಪೂಜಿಸು—
ನಮ್ಮ ಕೂಡಲ ಸಂಗಮದೇವನ. ॥ ೧೬೦ ॥

೪೭

ಮನವೇ ಸರ್ಪ, ತನುವೇ ಹೇಳಿಗೆ:
ಹಾವಿನೊಡತಣ ಹುದುವಾಳಿಗೆ!
ಇನ್ನಾವಾಗ ಕೊಂದಹುದೆಂದಱಿಯೆ:
ಇನ್ನಾವಾಗ ತಿಂದಹುದೆಂದಱಿಯೆ!
ನಿಚ್ಚಕ್ಕೆ ನಿಮ್ಮ ಪೂಜಿಸಬಲ್ಲೊಡೆ
ಅದೇ ಗಾರುಡ, ಕೂಡಲ ಸಂಗಮದೇವಾ! ॥ ೧೬೧ ॥

೪೮

ನೆರೆ ಕೆನ್ನೆಗೆ, ತೆರೆ ಗಲ್ಲಕೆ, ಶರೀರ ಗೂಡುವೋಗದ ಮುನ್ನ,
ಹಲ್ಲು ಹೋಗಿ, ಬೆನ್ನು ಬಾಗಿ, ಅನ್ಯರಿಗೆ ಹಂಗಾಗದ ಮುನ್ನ,
ಕಾಲ ಮೇಲೆ ಕೈಯನೂಱಿ ಕೋಲ ಹಿಡಿಯದ ಮುನ್ನ,
ಮುಪ್ಪಿಂದೊಪ್ಪವಳಿಯದ ಮುನ್ನ, ಮೃತ್ಯು ಮುಟ್ಟದ ಮುನ್ನ—
ಪೂಜಿಸು ನಮ್ಮ ಕೂಡಲ ಸಂಗಮದೇವನ. ॥ ೧೬೨ ॥

೪೯

ನೀರ ಬೊಬ್ಬುಳಿಕೆಗೆ ಕಬ್ಬುನದ ಕಟ್ಟ ಕೊಟ್ಟು
ಸುರಕ್ಷಿತವ ಮಾಡುವ ಭರವ ನೋಡಾ!
ಮಹಾದಾನಿ ಕೂಡಲ ಸಂಗಮದೇವನ ಪೂಜಿಸಿ
ಬದುಕುವೋ ಕಾಯವ ನಿಶ್ಚಯಿಸದೆ. ॥ ೧೬೨ ॥

೫೦

ಹಂಜರ ಬಲ್ಲಿತ್ತೆಂದು, ಅಂಜದೆ ಓದುವ ಗಿಳಿಯೇ,
ಎಂದೆಂದೂ ಅಳಿಯೆನೆಂದು ಗುಡಿಗಟ್ಟಿದೆಯಲ್ಲಾ—
ನಿನ್ನ ಮನದಲ್ಲಿ—ಮಾಯಮಂಜರ ಕೊಲುವರೆ
ನಿನ್ನ ಹಂಜರ ಕಾವುದೆ, ಕೂಡಲ ಸಂಗಮದೇವನಲ್ಲದೆ? ॥ ೧೬೩ ॥

೫೧

ಸಂಸಾರವೆಂಬುದೊಂದು ಗಾಳಿಯ ಸೊಡರು,
ಸಿರಿಯೆಂಬುದೊಂದು ಸಂತೆಯ ಮಂದಿ, ಕಂಡಯ್ಯಾ!
ಇದ ನೆಚ್ಚಿ ಕೆಡಬೇಡ-ಸಿರಿಯೆಂಬುದ!
ಮಱೆಯದೆ ಪೂಜಿಸು ನಮ್ಮ ಕೂಡಲ ಸಂಗಮದೇವನ. ॥ ೧೬೪ ॥

೫೨

ಎಲೆ ಎಲೆ ಮಾನವಾ, ಅಳಿಯಾಸೆ ಬೇಡವೋ,
ಕಾಳ ಬೆಳದಿಂಗಳು ಸಿರಿ ಸ್ಥಿರವಿಲ್ಲ!
ಕೇಡಿಲ್ಲದ ಪದವೀ[ವ] ಕೂಡಲ ಸಂಗಮದೇವನ
ಮಱೆಯದೆ ಪೂಜಿಸೋ. ॥ ೧೬೫ ॥

೫೩

ಎಂತಕ್ಕೆ! ಎಂತಕ್ಕೆ! ಹಡೆದ ಕಾಯ ಬೀಯವಾಗದ ಮುನ್ನ ಅಟ್ಟುಣ್ಣುವೋ!
ಬೆಱಣಿಯುಳ್ಳಲ್ಲಿ ಹೊತ್ತು ಹೋಗದ ಮುನ್ನ ಅಟ್ಟುಣ್ಣುವೋ!
ಮರಳಿ ಭವಕ್ಕೆ ಬಾಹೆ—ಬಾರದಿಹೆ:
ಕರ್ತು ಕೂಡಲ ಸಂಗಂಗೆ ಶರಣೆನ್ನುವೋ! ॥ ೧೬೬ ॥

೫೪

ಶಕುನವೆಂದೆಂಬೆ, ಅವಶಕುನವೆಂದೆಂಬೆ—
ನಿಮ್ಮವರು ಅಳಲಿಕೆ ಅಂದೇಕೆ ಬಂದೆ?
ನಿಮ್ಮವರು ಅಳಲಿಕೆ ಇಂದೇಕೆ ಹೋದೆ?
ನೀ ಹೋಹಾಗಳಕ್ಕೆ! ನೀ ಬಾಹಾಗಳಕ್ಕೆ!
ಅಕ್ಕೆ ಬಾರದ ಮುನ್ನ ಪೂಜಿಸು ಕೂಡಲ ಸಂಗಮದೇವನ. ॥೧೬೭॥

೫೫

ನಿಮಿಷದ ನಿಮಿಷಂ ಬೋ, ಕ್ಷಣದೊಳಗರ್ಧಂ ಬೋ!
ಕಣ್ಣು ಮುಚ್ಚಿ ಬಿಚ್ಚುವೈಸು ಬೇಗಂ ಬೋ:
ಸಂಸಾರದಾಗುಂ ಬೋ! ಸಂಸಾರದ ಹೋಗುಂ ಬೋ!
ಸಂಸಾರದೊಪ್ಪಂ ಬೋ!
ಕೂಡಲ ಸಂಗಮದೇವಾ,
ನೀ ಮಾಡಿದ ಮಾಯೇಂ ಬೋ, ಅಬ್ರಚ್ಚಾಯೇಂ ಬೋ! ॥೧೬೮॥

೫೬

ಹರನೀವ ಕಾಲಕ್ಕೆ ಸಿರಿಯು ಬೆನ್ನಲ್ಲಿ ಬರ್ಕು
ಹರಿದು ಹೆದ್ದೊಱೆಯೆ ಕೆಱೆ ತುಂಬಿದಂತಯ್ಯಾ!
ನೆರೆಯದ ವಸ್ತು ನೆರೆವುದು ನೋಡಯ್ಯಾ:
ಅರಸು ಪರಿವಾರ ಕೈವಾರ ನೋಡಯ್ಯಾ!
ಪರಮನಿರಂಜನನೆ ಮಱೆದಿದ ಕಾಲಕ್ಕೆ ತುಂಬಿದ ಹರವಿಯ
ಕಲ್ಲು ಕೊಂಡಂತೆ, ಕೂಡಲ ಸಂಗಮದೇವಾ! ॥ ೧೬೯ ॥

೫೭

ಹೊಯ್ದರೆ ಹೊಯ್ಗಳು ಕೈಯ ಮೇಲೆ:
ಬಯ್ದರೆ ಬಯ್ಗುಳು ಕೈಯ ಮೇಲೆ!
ಹಿಂದಣ ಜನನವೇನಾದೊಡಾಗಲಿ—
ಇಂದಿನ ಭೋಗವು ಕೈಯ ಮೇಲೆ!
ಕೂಡಲ ಸಂಗಮದೇವಯ್ಯಾ,
ನಿಮ್ಮ ಪೂಜಿಸಿದ ಫಲ ಕೈಯ ಮೇಲೆ! ॥ ೧೭೦ ॥

೫೮

ಆದ್ಯರ ವಚನ ಪರುಷ, ಕಂಡಣ್ಣಾ :
ಸದಾಶಿವನೆಂಬ ಲಿಂಗವ ನೆಲೆಸಿನಂಬುವುದು;
ನಂಬಲೊಡನೆ ನೀ ವಿಜಯಿ, ಕಂಡಣ್ಣಾ.
ಅಧರಕ್ಕೆ ಕಹಿ, ಉದರಕ್ಕೆ ಸಿಹಿ:
ಕೂಡಲ ಸಂಗನ ಶರಣರ ವಚನ ಬೇವ ಸವಿದಂತೆ. ॥೧೭೧॥

೫೯

ಹೊತ್ತಾಯಿತೆ ಎದ್ದು ಅಗ್ನಿವಣಿ ಪತ್ರೆಯ ತಂದು
ಹೊತ್ತು ಹೋಗದ ಮುನ್ನ ಪೂಜಿಸು ಲಿಂಗವ.
ಹೊತ್ತು ಹೋದ ಬಳಿಕ ನಿನ್ನನಾರು ಬಲ್ಲರು?
ಹೊತ್ತು ಹೋಗದ ಮುನ್ನ, ಮೃತ್ಯುವೊಯ್ಯದ ಮುನ್ನ
ತೊತ್ತುಗೆಲಸವ ಮಾಡು ಕೂಡಲ ಸಂಗಮದೇವನ. ॥೧೭೨॥

೬೦

ಅಚ್ಚಿಗವೇಕಯ್ಯ ಸಂಸಾರದೊಳಗೆ?
ನಿಚ್ಚ ನಿಚ್ಚ ಶಿವರಾತ್ರಿಯ ಮಾಡುವುದು;
ಬೇಗ ಬೇಗ ಅರ್ಚನೆ-ಪೂಜನೆಯ ಮಾಡುವುದು,
ಕೂಡಲ ಸಂಗನ ಕೂಡುವುದು. ॥೧೭೩॥

೬೧

ಅಂದು ಇಂದು ಮತ್ತೊಂದೆನಬೇಡ.
ದಿನವಿಂದೇ 'ಶಿವ ಶರಣೆಂ'ಬವಂಗೆ;
ದಿನವಿಂದೇ 'ಹರ ಶರಣೆಂ'ಬವಂಗೆ;
ದಿನವಿಂದೇ ನಮ್ಮ ಕೂಡಲ ಸಂಗನ ಮಾಣದೆ ನೆನೆವಂಗೆ. ॥೧೭೪॥

೬೨

ಅಷ್ಟವಿಧಾರ್ಚನೆ–ಷೋಡಶೋಪಚಾರವ ಮಾಡುವುದು;
ಮಾಡಿದ ಪೂಜೆಯ ನೋಡುವುದಯ್ಯಾ.
ಶಿವತತ್ತ್ವಗೀತವ ಪಾಡುವುದು;
ಶಿವನ ಮುಂದೆ ನಲಿದಾಡುವುದಯ್ಯಾ.
ಭಕ್ತಿಸಂಭಾಷಣೆಯ ಮಾಡುವುದು;
ನಮ್ಮ ಕೂಡಲ ಸಂಗಯ್ಯನ ಕೂಡುವುದು. ॥ ೧೭೫ ॥

೬೩

ಆಳಿಗೊಂಡಹರೆಂದು ಅಂಜಲದೇಕೆ?
ನಾಸ್ತಿಕವಾಡಿಹರೆಂದು ನಾಚಲದೇಕೆ?
ಆರಾದೊಡಾಗಲಿ ಶ್ರೀಮಹಾದೇವಂಗೆ ಶರಣೆನ್ನಿ.
ಏನೂ ಅಱಿಯೆನೆಂದು ಮೌನಗೊಂಡಿರಬೇಡ:
ಕೂಡಲ ಸಂಗಮದೇವರ ಮುಂದೆ 'ದಂದಣ, ದತ್ತಣ' ಎನ್ನಿ. ॥ ೧೭೬ ॥

೬೪

ಸುಪ್ರಭಾತಸಮಯದಲ್ಲಿ ಅರ್ತಿಯಲ್ಲಿ ಲಿಂಗವ ನೆನೆದರೆ
ತಪ್ಪುವುವು ಅಪಮೃತ್ಯು ಕಾಲ ಕರ್ಮಂಗಳಯ್ಯಾ!
ದೇವಪೂಜೆಯ ಮಾಟ ದುರಿತಬಂಧನದೋಟ!
ಶಂಭು ನಿಮ್ಮಯೆ ನೋಟ ಹೆಱಿಹಿಂಗದ ಕಣ್‌ಬೇಟ!
ಸದಾಸನ್ನಿಹಿತನಾಗಿ ಶರಣೆಂಬುವುದು, ನಂಬುವುದು.
ಜಂಗಮಾರ್ಚನೆಯ ಮಾಟ ಕೂಡಲ ಸಂಗನ ಕೂಟ! ॥ ೧೭೭ ॥

೬೫

ಅಂಕ ಕಳನೇಱಿ ಕೈಮುಱಿದಿರ್ದೊಡೆ,
ಮಾಱಿಂಕ ಬಂದಿಱಿವುದ ಮಾಣ್ಬನೆ?
ನಿಮ್ಮ ನೆನಹ ಮತಿ ಮುಱಿದಿರ್ದೊಡೆ,
ಪಾಪ ತನುವನಂಡಲೆವುದ ಮಾಣ್ಬುದೆ?
ಕೂಡಲ ಸಂಗಯ್ಯನ ನೆನೆದರೆ
ಪಾಪ ಉರಿಗೊಡ್ಡಿದರಗಿನಂತೆ ಕರಗುವುದಯ್ಯಾ. ॥ ೧೭೮ ॥

೬೬

ಆಡಿಹರಯ್ಯಾ ಹಾಡಿಹರಯ್ಯಾ ಮನ ಬಂದ ಪರಿಯಲಿ!
ಶಿವಶರಣರ ಮುಂದೆ ಆ[ಡಿ]ರಯ್ಯಾ ಹಾ[ಡಿ]ರಯ್ಯಾ!
ಕೋಡಂಗಿಯಾಟವನಾಡಿದ ಭಕ್ತಂಗೆ ಬೇಡಿತ್ತ ನೀವ
ನಮ್ಮ ಕೂಡಲ ಸಂಗಮದೇವ. ॥ ೧೭೯ ॥

೬೭

ಹೊಲಬುಗೊಂಡಱಿಸ ಬೇಡ, ಬಿಲಿತು ತರಬೇಡ;
ಒಲಿದೊಮ್ಮೆ 'ಶಿವ ಶರಣೆ'ನ್ನಿರಯ್ಯಾ:
ಒಂದು ಸೊಲ್ಲಿಂಗೆ ಮುಕ್ತಿ ಸಿದ್ಧಿ,
ಕೂಡಲ ಸಂಗಮದೇವ ಭಕ್ತಿಲಂಪಟನಾಗಿ. ॥ ೧೮೦ ॥

೬೮

ನಾದಪ್ರಿಯ ಶಿವನೆಂಬರು—ನಾದಪ್ರಿಯ ಶಿವನಲ್ಲವಯ್ಯಾ;
ವೇದಪ್ರಿಯ ಶಿವನೆಂಬರು—ವೇದಪ್ರಿಯ ಶಿವನಲ್ಲವಯ್ಯಾ:
ನಾದವ ಮಾಡಿದ ರಾವಳಂಗೆ ಆರೆಯಾಯುಷ್ಯವಾಯಿತ್ತು,
ವೇದವನೋದಿದ ಬ್ರಹ್ಮನ ಶಿರ ಹೋಯಿತ್ತು!
ನಾದಪ್ರಿಯನೂ ಅಲ್ಲ, ವೇದಪ್ರಿಯನೂ ಅಲ್ಲ:
ಭಕ್ತಿಪ್ರಿಯ ನಮ್ಮ ಕೂಡಲ ಸಂಗಮದೇವ. ॥ ೧೮೧ ॥

೬೯

ಹಸಿವಾದೊಡುಂಬುದನು, ಸತಿಯ ಸಂಭೋಗವನು
'ಆನಾಗಿ ನೀ ಮಾಡೆ'ಂಬವರುಂಟೆ?
ಮಾಡುವುದು, ಮಾಡುವುದು ಮನವುಟ್ಟ:
ಮಾಡುವುದು, ಮಾಡುವುದು ತನುವುಟ್ಟ.
ತನುವುಟ್ಟ ಮನವುಟ್ಟದಿರ್ದೊಡೆ
ಕೂಡಲ ಸಂಗಮದೇವನೇತಱಲ್ಲಿಯೂ ಮೆಚ್ಚ! ॥ ೧೮೨ ॥

೭೦

ತನ್ನಾಶ್ರಯದ ರತಿಸುಖವನು, ತಾನುಂಬ ಊಟವನು
ಬೇಱೆ ಮತ್ತೊಬ್ಬರ ಕೈಯಲ್ಲಿ ಮಾಡಿಸಬಹುದೆ?
ತನ್ನ ಲಿಂಗಕ್ಕೆ ಮಾಡುವ ನಿತ್ಯನೇಮವನು ತಾ ಮಾಡಬೇಕಲ್ಲದೆ,
ಬೇಱೆ ಮತ್ತೊಬ್ಬರ ಕೈಯಲ್ಲಿ ಮಾಡಿಸಬಹುದೆ?
ಕೆಮ್ಮನೆ ಉಪಚಾರಕ್ಕೆ ಮಾಡುವರಲ್ಲದೆ,
ನಿಮ್ಮನೆತ್ತಬಲ್ಲರು ಕೂಡಲ ಸಂಗಮದೇವಾ? ॥ ೧೪೩ ॥

೭೧

ಬಂಡಿ ತುಂಬಿದ ಪತ್ರೆಯ ತಂದು ಕಂಡ ಕಂಡಲ್ಲಿ ಮಜ್ಜನಕ್ಕೆಱೆವಿರಿ:
ತಾಪತ್ರಯವ ಕಳೆದು ಪೂಜಿಸಿ; ತಾಪತ್ರಯವ ಲಿಂಗನೊಲ್ಲ.
ಕೂಡಲ ಸಂಗಮದೇವ ಬಱಿಯುದಕದಲ್ಲಿ ನೆನೆವನೆ? ॥ ೧೪೪ ॥

೭೨

ಭಕ್ತನಾಗಿ ಲಿಂಗ-ಜಂಗಮವ ಪೂಜಿಸಬೇಕು.

ಭಕ್ತನಾಗಿ ತನ್ನ ತಾ ಪೂಜಿಸಿಕೊಂಬುದು ಎಂತಯ್ಯಾ?
ಸ್ವಾಮಿ-ಭೃತ್ಯಸಂಬಂಧವು ಎಂತಯ್ಯಾ ಪೂರೈಸುವುದು?
ಕೂಡಲ ಸಂಗಮದೇವಾ, ಕಣ್ಣ ಕಟ್ಟಿ ಕನ್ನಡಿಯ ತೋಱಿವಂತೆ!
॥ ೧೪೫ ॥

೭೩

ಭೂಮಿಯೊಳಗೆ ನಿಧಾನವಿದ್ದುದ ಅಂಜನವುಳ್ಳವರು ತೋಱುವರಯ್ಯಾ.
ಅಂಜಲು ಬೇಡ, ಕಂಡಾ; ಮನದಲ್ಲಿ ಸಂದೇಹವ ಮಾಡದಿರಾ.
ಜಂಗಮದೊಳಗೆ ಲಿಂಗಯ್ಯನಿದ್ದಾನೆಂದು ನಂಬಿಗೆಯುಳ್ಳರೆ
ತೋಱುವ ಕೂಡಲ ಸಂಗಯ್ಯ. ॥ ೧೪೬ ॥

೭೪

ಕನ್ನಡಿಯ ನೋಡುವ ಅಣ್ಣಗಳಿರಾ ಜಂಗಮವ ನೋಡಿರೀ:
ಜಂಗಮದೊಳಗೆ ಲಿಂಗಯ್ಯ ಸನ್ನಿಹಿತನಾಗಿರ್ಪ.
'ಸ್ಥಾವರ ಜಂಗಮ ಒಂದೇ' ಎಂದುದು ಕೂಡಲ ಸಂಗನ ವಚನ
॥ ೧೪೭ ॥

೭೫

ಗೀತವ ಹಾಡಿದೊಡೇನು? ಶಾಸ್ತ್ರ-ಪುರಾಣವ ಕೇಳಿದೊಡೇನು?
ವೇದ—ವೇದಾಂತವನೋದಿದೊಡೇನು?
ಮನವೊಲಿದು ಲಿಂಗ-ಜಂಗಮವ ಪೂಜಿಸಲಱಿಯದವರು
ಎಲ್ಲಱಿಲಿ ಅನುಭಾವಿಯಾದೊಡೇನು?
ಭಕ್ತಿಯಿಲ್ಲದವರನೊಲ್ಲ ಕೂಡಲ ಸಂಗಮದೇವ. ॥ ೧೪೪ ॥

೭೬

ಲಿಂಗವ ಪೂಜಿಸಿದ ಬಳಿಕ ಜಂಗಮಕ್ಕಂಜಲೀ ಬೇಕು
ದಕ್ಕ ನುಂಗಿದಂತೆ ಬೆಱಿತುಕೊಂಡಿರಬೇಡ:
ಬೀಗಿ ಬೆಳೆದ ಗೊನೆವಾಳೆಯಂತೆ ಬಾಗಿಕೊಂಡಿದ್ದಡೆ
ಬೇಡಿದ ಪದವಿಯನೀವ ಕೂಡಲ ಸಂಗಮದೇವ. ॥ ೧೪೫ ॥

೭೭

ಹಮ್ಮಿನ ಭಕ್ತಿ ಕರ್ಮಕ್ಕೆ ಮೊದಲು:
ವರ್ಮವನಱಿಯದ ಮಾಟ ಸಯಿದಾನದ ಕೇಡು!
ಬಂದ ಸಮಯೋಚಿತವನಱಿಯದಿದ್ದರೆ
ನಿಂದಿರಲೊಲ್ಲ ಕೂಡಲ ಸಂಗಮದೇವ. ॥ ೧೪೬ ॥

೭೮

ದ್ವೈತಾದ್ವೈತವನೋದಿ ಏನ ಮಾಡುವಿರಯ್ಯಾ—
ನಮ್ಮ ಶರಣರಿಗುರಿಗರಗಾಗಿ ಕರಗದನ್ನಕ್ಕ?
ಸ್ಥಾವರ ಜಂಗಮವೊಂದೆ ಎಂದು ನಂಬದನ್ನಕ್ಕ?
ಕೂಡಲ ಸಂಗಮದೇವಾ, ಬಱಿಯ ಮಾತಿನ ಮಾಲೆಯಲೇನಹುದು?
॥ ೧೪೧ ॥

೭೯

ಲಾಂಛನ ಹೊಱಿಗೆ ಬಂದಿರಲು, ಒಳಗೆ ಲಿಂಗಾರ್ಚನೆ ಎಂತಯ್ಯಾ?
ಮುಖವಲ್ಲಿ ಕಟ್ಟಿದ ಕನ್ನಡಿ, ಮೂಗಿನ ಮೇಲಣ ಕತ್ತಿ!
ಸಮಯಾಚಾರವೆಂತುಟಯ್ಯಾ?
ಕೂಡಲ ಸಂಗಮದೇವಯ್ಯ ಮೂಗ ಕೊಯ್ಯದೆ ಮಾಣ್ಬನೆ? ಹೇಳಯ್ಯಾ.
॥ ೧೪೨ ॥

೮೦

ಆಡುತ್ತ ಹಾಡುತ್ತ ಭಕ್ತಿಯ ಮಾಡಬಹುದು ಲಿಂಗಕ್ಕೆ:
ಅದು ಬೇಡದು, ಬೆಸಗೊಳ್ಳದು—
ತಂದೊಮ್ಮೆ ನೀಡಬಹುದು.
ಕಾಡುವ ಬೇಡುವ ಜಂಗಮ ಬಂದರೆ,
ನೀಡಲು ಬಾರದು, ಕೂಡಲ ಸಂಗಮದೇವಾ ! ॥ ೧೯೩ ॥

೮೧

ಕಲ್ಲ ನಾಗರ ಕಂಡರೆ ಹಾಲನೆಱೆಯೆಂಬರು:
ದಿಟದ ನಾಗರ ಕಂಡರೆ ಕೊಲ್ಲೆಂಬರಯ್ಯಾ !
ಉಂಬ ಜಂಗಮ ಬಂದರೆ ನಡೆಯಂಬರು:
ಉಣ್ಣದ ಲಿಂಗಕ್ಕೆ ಬೋನವ ಹಿಡಿಯೆಂಬರಯ್ಯಾ !
ನಮ್ಮ ಕೂಡಲ ಸಂಗನ ಶರಣರ ಕಂಡುದಾಸೀನವ ಮಾಡಿದರೆ
ಕಲ್ಲ ತಾಗಿದ ಮಿಟ್ಟಿಯಂತಪ್ಪರಯ್ಯಾ! ॥ ೧೯೪ ॥

೮೨

ನಾಗಂಗೆ ಹೊಸತನಿಕ್ಕಿಹೆವೆಂಬರು:
ನಾಗ ಬಂದರೆ ಕೋಲ ಕಳೆದುಕೊಂಬರು!
ಆಗದಯ್ಯಾ, 'ಜಂಗಮ ಲಿಂಗ'ವೆಂಬ ಶಬ್ದವಾಗದಯ್ಯಾ,
ಕೂಡಲ ಸಂಗಮದೇವರಲ್ಲಿ ಸಿಂಥುಬಲ್ಲಾಳಂಗಲ್ಲದಾಗದಯ್ಯಾ!
॥ ೧೯೫ ॥

೮೩

ಎಱೆದರೆ ನೆನೆಯದು, ಮಱೆದರೆ ಬಾಡದು:
ಹುರುಳಿಲ್ಲ, ಹುರುಳಿಲ್ಲ ಲಿಂಗಾರ್ಚನೆ!
ಕೂಡಲ ಸಂಗಮದೇವಯ್ಯಾ,
ಜಂಗಮಕ್ಕೆಱೆದರೆ ಸ್ಥಾವರ ನೆನೆಯಿತ್ತು ! ॥ ೧೯೬ ॥

ಲಳ

ಅಗ್ನಿಯಾಧಾರದಲ್ಲಿ ಕಬ್ಬುನ ನೀರುಂಬುದಯ್ಯಾ :
ಭೂಮಿಯಾಧಾರದಲ್ಲಿ ವೃಕ್ಷ ನೀರುಂಬುದಯ್ಯಾ;
ಜಂಗಮವಾಪ್ಯಾಯನವಾದರೆ ಲಿಂಗ ಸಂತುಷ್ಟಿಯಹುದಯ್ಯಾ :
॥ ಶ್ಲೋಕ ॥ ವೃಕ್ಷಸ್ಯ ವಪನಂ ಭೂಮಿಃ । ಸ್ಥಾವರಸ್ಯ ತು ಜಂಗಮಂ
ಅಹಂ ತುಷ್ಟೋಸ್ಮ್ಯಮಾದೇವಿ । ಉಭಯೋರ್ಲಿಂಗ
ಜಂಗಮಂ (?)

ಇದು ಕಾರಣ ಕೂಡಲ ಸಂಗಮದೇವರಲ್ಲಿ
ಜಂಗಮವಾಪ್ಯಾನವಾದರೆ ಲಿಂಗಸಂತುಷ್ಟಿ. ॥ ೧೯೭ ॥

ಲಶ

ಭಾಂಡವ ತುಂಬಿದ ಬಳಿಕ ಸುಂಕವ ತೆತ್ತಲ್ಲದೆ
ವಿರಹಿತ ಹೋಗಬಾರದು.
ಕಳ್ಳ ನಾಣ್ಯ ಸಲುಗೆಗೆ ಸಲ್ಲದು: ಕಳ್ಳ ನಾಣ್ಯವ ಸಲ್ಲಲೀಯರಯ್ಯಾ!
(ಭಕ್ತಿಯೆಂಬ ಭಾಂಡಕ್ಕೆ ಜಂಗಮವೇ ಸುಂಕಿಗ,
ಕೂಡಲ ಸಂಗಮದೇವಾ.) ॥ ೧೯೮ ॥

ಲಟ

ಮಾಡಿ ನೀಡಿ ಲಿಂಗವ ಪೂಜಿಸಿಹೆನೆಂಬವರೂ ನೀವೆಲ್ಲಾ ಕೇಳಿರಣ್ಣಾ:
ಹಾಗದ ಕೆರಹ ಹೊಲಿಗೆ ಕಳೆದು
ದೇಗುಲಕ್ಕೆ ಹೋಗಿ ದೇವರಿಗೆ ನಮಸ್ಕಾರವ ಮಾಡುವನಂತೆ—
ತನ್ನ ಕೆಜಿಹಿನ ಧ್ಯಾನವಲ್ಲದೆ ದೇವರ ಧ್ಯಾನವಿಲ್ಲಾ!
ಧನವನಿರಿಸದಿರಾ, ಇರಿಸಿದರೆ ಭವ ಬಪ್ಪುದು, ತಪ್ಪದು!
ಕೂಡಲ ಸಂಗನ ಶರಣರಿಗೆ ಸವಿಸಲೇ ಬೇಕು. ॥ ೧೯೯ ॥

ಲಠ

ಉಂಡುದು ಬಂದಿತ್ತೆಂಬ ಸಂದೇಹಿ ಮಾನವಾ, ನೀ ಕೇಳಾ,
ಉಂಡುದೇನಾಯಿತ್ತೆಂಬುದ ನಿನ್ನ ನೀ ತಿಳಿದು ನೋಡಾ;
ಉಂಡುದು ಆಗಳೆ ಅಪ್ಯಯವಾಗಿತ್ತು.
ಆವುಂಡುದನುಣಬಂದ ಹಂದಿಯ ಬಾಳುವೆಯವರ ಕಂಡು
ಆನು ಮಱುಗುವೆನಯ್ಯಾ, ಕೂಡಲ ಸಂಗಮದೇವಾ. ॥ ೨೦೦ ॥

೮೮

ಆಯುಷ್ಯವುಂಟು, ಪ್ರಳಯವಿಲ್ಲೆಂದು ಅರ್ಥವ ಮಡುಗುವಿರಿ:
ಆಯುಷ್ಯವು ತೀರಿ ಪ್ರಳಯವು ಬಂದರೆ ಅರ್ಥವನುಂಬವರಿಲ್ಲಾ!
ನೆಲನನಗಿದು ಮಡಗದಿರಾ! ನೆಲ ನುಂಗಿದೊಡುಗುಳುವುದೆ?
ಕಣ್ಣಿನಲ್ಲಿ ನೋಡಿ, ಮಣ್ಣಿನಲ್ಲಿ ನೆರಹಿ, ಉಣ್ಣದೆ ಹೋಗದಿರಾ!
ನಿನ್ನ ಮಡದಿಗಿರಲೆಂದರೆ ನಿನ್ನಾ ಮಡದಿಯ ಕೃತಕ ಬೇಜಿ:
ನಿನ್ನೊಡಲು ಕೆಡೆಯಲು ಮತ್ತೊಬ್ಬನಲ್ಲಿಗಡಕದೆ ಮಾಣ್ಬಳೆ?
ಹೆಜ್ಜಿರಿಗಿಕ್ಕಿ ಹೆಗ್ಗುಜ್ಜಿಯಾಗ ಬೇಡಾ;
ಕೂಡಲ ಸಂಗನ ಶರಣರಿಗೊಡನೆ ಸವಿಸುವುದು. ॥ ೨೦೧ ॥

೮೯

ತನು-ಮನ-ಧನವ ಹಿಂದಿಕ್ಕಿಕೊಂಡು ಮಾತಿನ ಬಣಬೆಯ,
ಒಳಲೊಟ್ಟೆಯ ನುಡಿವರೂ ನೀವೆಲ್ಲಾ ಕೇಳಿರೇ:
ತಲಹಿಲ್ಲದ ಕೋಲು ಹೊಳ್ಳುಹಾಜುವುದಲ್ಲದೆ ಗುಜ್ಜಿಯ ತಾಗಬಲ್ಲುದೆ?
ಮಾಯಾಪಾಶ ಹಿಂಗಿ ಮನದ ಗಂಟು ಬಿಡದನ್ನಕ್ಕ
ಕೂಡಲ ಸಂಗಮದೇವನೆಂತೊಲಿವನಯ್ಯಾ? ॥ ೨೦೨ ॥

೯೦

ತನು-ಮನ-ಧನವೆಂಬ ಮೂಜು ಕತ್ತಿಯಿವೆ ಸಲೆ ಮೂಗಿನ ಮೇಲಯ್ಯಾ,
ಲಿಂಗಜಂಗಮಕ್ಕೆ ಮಾಡಿಹೆನೆಂಬವಂಗೆ!
ಇದುಕಾರಣ ಕೂಡಲ ಸಂಗನ ಶರಣರಿಗೆ ಅಂಜಲೇಬೇಕು. ॥ ೨೦೩ ॥

೯೧

ಸರ್ವಭೂತಾತ್ಮನೆಂಬ ಮಾತಿನ ಮಾತಿನಲ್ಲಿ ಹೋಗದು:
ತನು-ಮನ-ಧನವ ಗುರುಲಿಂಗ ಜಂಗಮಕ್ಕೆ ಸವೆಸಲಿಬೇಕು.
ಇದುಕಾರಣ ಕೂಡಲ ಸಂಗನ ಶರಣರಿಗೆ ಅಂಜಲೇಬೇಕು. ॥೨೦೪॥

೯೨

ಹಲವು ಮಣಿಯ ಕಟ್ಟಿ ಕುಣಿಕುಣಿದಾಡಿ,
ಹಲವು ಪರಿಯಲಿ ವಿಭೂತಿಯ ಹೂಸಿ,
ಗಣಾಡಂಬರದ ನಡುವೆ ನಲಿನಲಿದಾಡಿ,
ಉಂಡು ತಾಂಬೂಲಗೊಂಡು ಹೋಹುದಲ್ಲಾ!
ತನು-ಮನ-ಧನವ ಸಮರ್ಪಿಸದವರ
ಕೂಡಲ ಸಂಗಮದೇವರೆಂತೊಲಿವನಯ್ಯಾ? ॥ ೨೦೫ ॥

೯೩

ತನುವ ಕೊಟ್ಟು ಗುರುವನೊಲಿಸಬೇಕು;
ಮನವ ಕೊಟ್ಟು ಲಿಂಗವನೊಲಿಸಬೇಕು;
ಧನವ ಕೊಟ್ಟು ಜಂಗಮವನೊಲಿಸಬೇಕು..
ಈ ತ್ರಿವಿಧವ ಹೊಲಿಗುಮಾಡಿ,
ಹಲಿಯ ಹೊಯಿಸಿ, ಕುಲುಹ ಪೂಜಿಸುವರ
ಮೆಚ್ಚ ಕೂಡಲ ಸಂಗಮದೇವ. ॥ ೨೦೬ ॥

೯೪

ಆಡಿದರೇನೊ, ಹಾಡಿದರೇನೊ, ಓದಿದರೇನೊ—
ತ್ರಿವಿಧದಾಸೋಹವಿಲ್ಲದನ್ನಕ್ಕ?
ಆಡದೆ ನವಿಲು? ಹಾಡದೆ ತಂತಿ? ಓದದೆ ಗಿಳಿ?
ಭಕ್ತಿಯಿಲ್ಲದವರನೊಲ್ಲ ಕೂಡಲ ಸಂಗಮದೇವ. ॥ ೨೦೭ ॥

೯೫

ಶಾಸ್ತ್ರ ಘನವೆಂಬೆನೆ? ಕರ್ಮವ ಭಜಿಸುತ್ತಿದೆ!
ವೇದ ಘನವೆಂಬೆನೆ? ಪ್ರಾಣವಧೆಯ ಹೇಳುತ್ತಿದೆ!
ಸ್ಮೃತಿ ಘನವೆಂಬೆನೆ? ಮುಂದಿಟ್ಟಜಿಸುತ್ತಿದೆ!
ಅಲ್ಲೆಲ್ಲಿಯೂ ನೀವಿಲ್ಲದ ಕಾರಣ, ತ್ರಿವಿಧದಾಸೋಹದಲ್ಲಲ್ಲದೆ
ಕಾಣಬಾರದು ಕೂಡಲ ಸಂಗಮದೇವನ! ॥ ೨೦೮ ॥

೯೬

ವೇದದಂತುಟಲ್ಲ, ಶಾಸ್ತ್ರದಂತುಟಲ್ಲ,
ಗೀತವಾತಿನಂತುಂಟಲ್ಲ, ಕೇಳಯ್ಯಾ—
ಮಾತಿನ ಮಾಲೆಯ ಕವುಳಗೋಲ ಶ್ರವದಲ್ಲಿ ಸತ್ತವರೊಳರೆ, ಅಯ್ಯಾ?
ದಿಟದಲಗಿನ ಕಾಳಿಗವಿತ್ತಲಿದ್ದುದೇ
ಕೂಡಲ ಸಂಗನ ಶರಣರು ಬಂದಲ್ಲಿ! ॥ ೨೦೯ ॥

೯೭

ಮಾತಿನ ಮಾತಿನಲ್ಲಪ್ಪುದೆ ಭಕ್ತಿ?
ಮಾಡಿ ತನು ಸವೆಯದನ್ನಕ್ಕ, ಮನ ಸವೆಯದನ್ನಕ್ಕ,
ಧನ ಸವೆಯದನ್ನಕ್ಕ ಅಪ್ಪುದೇ ಭಕ್ತಿ?
ಕೂಡಲ ಸಂಗಮದೇವ ಎಲುದೊಜ್ಜೆ ಸರಸವಾಡುವನು,
ಸೈರಿಸದನ್ನಕ್ಕ ಅಪ್ಪುದೇ ಭಕ್ತಿ? ॥ ೨೧೦ ॥

೯೮

ಹಾವಸೆಗಲ್ಲ ಮೆಟ್ಟಿ ಹರಿದು ಗೊತ್ತ ಮುಟ್ಟಬಾರದಯ್ಯಾ:
ನುಡಿದಂತೆ ನಡೆಯಲು ಬಾರದಯ್ಯಾ.
ಕೂಡಲ ಸಂಗನ ಶರಣರ ಭಕ್ತಿ ಬಾಳ ಬಾಯ ಧಾರೆ! ॥ ೨೧೧ ॥

೯೯

ಭಕ್ತಿಯೆಂಬುದ ಮಾಡಬಾರದು:
ಕರಗಸದಂತೆ ಹೋಗುತ್ತ ಕೊಯ್ಯುದು ಬರುತ್ತ ಕೊಯ್ಯುದು!
ಸಟಸರ್ಪನಲ್ಲಿ ಕೈದುಡುಕಿದರೆ ಹಿಡಿವುದ ಮಾಣ್ಬುದೆ,
ಕೂಡಲ ಸಂಗಮದೇವಾ? ॥ ೨೧೨ ॥

೧೦೦

ಹಲವು ಕಾಲ ಧಾವತಿಗೊಂಡು ಒಟ್ಟಿದ ಹಿದಿರೆಯು
ಒಂದು ಮಿಡುಕುಜಿಲ್ಲಿ ಬೇವಂತೆ,
ಸಲೆ ನೆಲೆ ಸನ್ನಿಹಿತನಾಗಿರ್ಪ ಶರಣನ ಭಕ್ತಿ
ಒಂದನಾಯತದಿಂದೆ ಕೆಡುವುದು.

ಸ್ವಧರ್ಮದಲ್ಲಿ ಗಳಿಸಿದ ಪಿತನ ಧನವ
ಅಧರ್ಮದಲ್ಲಿ ಕೆಡಿಸುವ ಸುತನಂತೆ—
ಶಿವನ ಸೊಮ್ಮ ಶಿವಂಗೆ ಮಾಡದೆ, ಅನ್ಯಕ್ಕೆ ಮಾಡಿದೊಡೆ,
ತನ್ನ ಭಕ್ತಿ ತನ್ನನೇ ಕೆಡಿಸುವದು,
ಕೂಡಲ ಸಂಗಮದೇವಾ. ॥ ೨೧೩ ॥

೧೦೧

ನಚ್ಚಿದೆನೆಂದರೆ, ಮುಚ್ಚಿದೆನೆಂದರೆ, ಸಲೆ ಮಾಜುವೋದೆನೆಂದರೆ
ತನುವನಲ್ಲಾಡಿಸಿ ನೋಡುವೆ ನೀನು,
ಮನವನಲ್ಲಾಡಿಸಿ ನೋಡುವೆ ನೀನು
ಧನವನಲ್ಲಾಡಿಸಿ ನೋಡುವೆ ನೀನು.
ಇವಕ್ಕೆಲ್ಲ ಅಂಜದಿದ್ದರೆ ಭಕ್ತಿಕ್ಕಂಪಿತ ನಮ್ಮ ಕೂಡಲ ಸಂಗಮದೇವ!
॥ ೨೧೪ ॥

೧೦೨

ಕೌಳುಗೋಲ ಒಡಿದು ಶ್ರವವ ಮಾಡಬಹುದಲ್ಲದೆ
ಕಳನೇಱಿ ಕಾದುವುದರಿದು ನೋಡಾ.
ಬಣ್ಣವಿಟ್ಟು ನುಡಿದಲ್ಲಿ ಫಲವೇನು?
ಚಿನ್ನಗೆಯ್ಯನಾಡುವನಂತೆ!
ಬಂದ ಸಮಯವನಱಿತು ಇದ್ದುದ ವಂಚಿಸದಿದ್ದಡೆ,
ಕೂಡಲ ಸಂಗಮದೇವನೊಲಿದು ಸಲಹುವ. ॥ ೨೧೫ ॥

೧೦೩*

ಧನಕ್ಕೆ ಮನವನೊಡ್ಡಿದರೇನು? ಮನಕ್ಕೆ ಧನವನೊಡ್ಡಿದರೇನು?
ತನು-ಮನ-ಧನವ ಱೀಱಿ ಮಾತಾಡಬಲ್ಲರೆ,
ಆತ ನಿಸ್ಪೀಮನು; ಆತ ನಿಜೈಕ್ಯನು.
ತನು-ಮನ-ಧನವನುವಾದರೆ ಕೂಡಲ ಸಂಗಮದೇವನೊಲಿವ. ॥೨೧೬॥

---

* ಈ ವಚನ ತಾ ೨, ರಲ್ಲಿ' ಮಾತ್ರವಿದೆ.

೧೦೪

ಅರ್ಥಪ್ರಾಣಾಭಿಮಾನದಲ್ಲಿ ವಂಚನೆಯಿಲ್ಲದ ಭಕ್ತಿ ಸಮಿಳುಹಾರ.
ಜಂಗಮವೇ ಲಿಂಗವೆಂಬುದಕ್ಕೆ ಏನು ಗುಣ,
ಮನದ ಲಂಪಟತನ ಹಿಂಗದಾಗಿ?
ಒಡೆಯರ ಬರವಿಂಗೆ ಕುನ್ನಿ ಬಾಲಬಡಿದರೆ
ಪೆಚ್ಚವೇನು ಹತ್ತುವುದು, ಕೂಡಲ ಸಂಗಮದೇವಾ? ॥ ೨೧೭॥

೧೦೫

ಹಸಿದು ಬಂದ ಗಂಡನಿಗೆ ಉಣಲಿಕ್ಕದೆ
ಬಡವಾದನೆಂದು ಮುಖಗುವ ಸತಿಯ ಸ್ನೇಹದಂತೆ—
ಬಂದುದನಱಿಯಳು, ಇದ್ದುದ ಸವಿಸಳು!
ಮುಖವಿಲ್ಲದ ಅಕ್ಕೆ ಹಗರಣಿಗನ ತೆಱನಂತೆ
ಕೂಡಲ ಸಂಗಮದೇವಾ! ॥ ೨೧೮ ॥

೧೦೬

ಉದಯದ ಮಾಗಿಯ ಬಿಸಿಲು ಅಂಗಕ್ಕೆ ಹಿತವಾಯಿತ್ತು:
ಮಧ್ಯಾಹ್ನದ ಬಿಸಿಲು ಅಂಗಕ್ಕೆ ಕರಕಠಿಣವಾಯಿತ್ತು!
ಮೊದಲಲ್ಲಿ ಲಿಂಗಭಕ್ತಿ ಹಿತವಾಯಿತ್ತು:
ಕಡೆಯಲ್ಲಿ ಜಂಗಮಭಕ್ತಿ ಕಠಿಣವಾಯಿತ್ತು!
ಇದು ಕಾರಣ ಕೂಡಲ ಸಂಗಮದೇವನನವರ ಬಲ್ಲನಾಗಿ ಒಲ್ಲನಯ್ಯಾ.
॥ ೨೧೯ ॥

೧೦೭

ಬರಬರ ಭಕ್ತಿಯರೆಯಾಯಿತ್ತು, ಕಾಣಿರಣ್ಣಾ :
ಮೊದಲ ದಿನ ಹಣೆಮುಟ್ಟಿ, ಮುಂದಿನ ಕೈಯ ಮುಟ್ಟಿ
ಮೂಱಿಂಬ ದಿನಕ್ಕೆ ತೂಕಡಿಕೆ ಕಾಣಿರಣ್ಣಾ!
ಹಿಡಿಮದ ಬಿಡದಿದ್ದರಿ ಕಡೆಗೆ ಜಾಚುವ;
ಅಲ್ಲದಿದ್ದರೆ, ನಡುನೀರಲ್ಲದ್ದುವ ನಮ್ಮ ಕೂಡಲ ಸಂಗಮದೇವ.
॥ ೨೨೦ ॥

೧೦೪

ಬಿದಿರಲಂದಣವಕ್ಕು, ಬಿದಿರೆ ಸತ್ತಿಗೆಯಕ್ಕು,
ಬಿದಿರಲ್ಲಿ ಗುಡಿಯು ಗೂಡಾರವಕ್ಕು;
ಬಿದಿರಲ್ಲಿ ಸಕಲಸಂಪದವೆಲ್ಲವು !
ಬಿದಿರದವರ ಮೆಚ್ಚ ನಮ್ಮ ಕೂಡಲ ಸಂಗನುದೇವ. ॥ ೨೨೧ ॥

೧೦೫

ಉಂಬಾಗಳಿಲ್ಲೆನ್ನ, ಉಡುವಾಗಳಿಲ್ಲೆನ್ನ,
ಬಂಧುಗಳು ಬಂದಾಗಳಿಲ್ಲೆನ್ನ:
ಲಿಂಗಕ್ಕೆ ಇಲ್ಲೆಂಬ, ಜಂಗಮಕ್ಕೆ ಇಲ್ಲೆಂಬ,
ಬಂದ ಪುರಾತರಿಗೆ ಇಲ್ಲೆಂಬ:
ಸಾವಾಗ ದೇಹವ ದೇಗುಲಕ್ಕೊಯ್ಯೆಂಬ !
ದೇವರಿಗೆ ಹೆಣ ಬಿಟ್ಟ ಹೇಳಿತ್ತೆ, ಕೂಡಲ ಸಂಗನುದೇವಾ ! ॥ ೨೨೨\॥

೧೧೦

ಪಾಪಿಯ ಧನ ಪ್ರಾಯಶ್ಚಿತ್ತಕ್ಕಲ್ಲದೆ ಸತ್‌ಪಾತ್ರಕ್ಕೆ ಸಲ್ಲದಯ್ಯಾ
ನಾಯ ಹಾಲು ನಾಯಿಗಲ್ಲದೆ ಪಂಚಾಮೃತಕ್ಕೆ ಸಲ್ಲದಯ್ಯಾ !
ನಮ್ಮ ಕೂಡಲ ಸಂಗನ ಶರಣರಿಗಲ್ಲದೆ
ಮಾಡುವ ಅರ್ಥ ವ್ಯರ್ಥ, ಕಂಡಯ್ಯಾ ! ॥ ೨೨೩ ॥

೧೧೧

ಬಲಿಯ ಭೂಮಿ, ಕರ್ಣನ ಕವಚ, ಖಚರನ ಆಸ್ತಿ,
ಶಿಬಿಯ ಮಾಂಸ ವೃಥಾ ಹೋಯಿತ್ತಲ್ಲಾ !
॥ಶ್ಲೋಕ॥ ಶಿವಭಕ್ತಿಮತಿಕ್ರಮ್ಯ | ಯದ್ ದಾನಂಚ ವಿಧಿಯತೇ
ನಿಷ್ಫಲಂತು ಭವೇದ್ ದಾನಂ । ರೌರವಂ ನರಕಂ ವ್ರಜೇತ್
ಇಂತೆಂದುದಾಗಿ, ಕೂಡಲ ಸಂಗನ ಶರಣರನರಿಯದೆ
ಕೀರ್ತಿವಾರ್ತೆಗೆ ಮಾಡಿದವನ ಧನವು ವೃಥಾ ಹೋಯಿತ್ತಲ್ಲಾ !
॥ ೨೨೪ ॥

೧೧೨

ಹತ್ತು ಮತ್ತರದ ಭೂಮಿ, ಬತ್ತುವ ಹಯನು, ನಂದಾದೀವಿಗೆಯ
ನಡೆಸಿಹೆವೆಂಬವರ ಮುಖವ ನೋಡಲಾಗದು;
ಅವರ ನುಡಿಯ ಕೇಳಲಾಗದು.
ಅಂಡಜ, ಸ್ವೇದಜ, ಉದ್ಭಿಜ, ಜರಾಯುಜರೆಂಬ ಪ್ರಾಣಿಗಳಿಗೆ
ಭವಿತವ್ಯವ ಕೊಟ್ಟವರಾರೊ ?
ಒಡೆಯರಿಗೆ ಉಂಡಲಿಗೆಯ ಮುಯ್ದುದಿಕ್ಕಿದಂತೆ
" ಎನ್ನಿಂದಲೆ ಆಯಿತ್ತು, ಎನ್ನಿಂದಲೆ ಹೋಯಿತ್ತು "
ಎಂಬವನ ಬಾಯಲ್ಲಿ ಪೆಟ್ಟಿ ಹುಡಿಯ ಹೊಯ್ಯದೆ ಮಾಣ್ಬನೆ
ಕೂಡಲ ಸಂಗನುದೇವ? ॥ ೨೨೫ ॥

೧೧೩

ಅನವರತ ಮಾಡಿಹೆನೆಂದು ಉಪ್ಪರ-ಗುಡಿಯ ಕಟ್ಟಿ ಮಾಡುವ
ಭಕ್ತನ ಮನೆಯದು ಅಂದಣಗಿತ್ತಿಯ ಮನೆ!
ಸರ್ವಜೀವದಯಾಪಾರಿಯೆಂದು ಭೂತದಯಕ್ಕಿಕ್ಕುವವನ ಮನೆ
ಸಯಿಧಾನದ ಕೇಡು!
ಸೂಳೆಯ ಮಗ ನೂಳವ ಮಾಡಿದರೆ ತಾಯ ಹೆಸರಾಯಿತ್ತಲ್ಲದೆ
ತಂದೆಯ ಹೆಸರಿಲ್ಲಾ, ಕೂಡಲ ಸಂಗಮದೇವಾ! ॥ ೨೨೬ ॥

೧೧೪

ಕಾಳಾಗ್ನಿರುದ್ರನ ಮೇಳಾಪವನಱಿಯದವರು
'ಕಾಳು ಬೇಳೆ'ಯೆನುತಿಪ್ಪರಯ್ಯಾ.
ಕಾನನದಡವಿಯಲ್ಲಿ ಕಿಚ್ಚು ಬಾಳುವೆಯಾಗಿ ಮಿಕ್ಕೊಡೆ ಒಱಿಲುವ
ಬಳ್ಳುವಿನಂತಿಪ್ಪರಯ್ಯಾ ಮನುಜರು ನರವಿಂಧ್ಯದೊಳಗೆ. !
ತತ್‌ಕಾಲಪ್ರೇಮವನಱಿಯದೆ ವಿಭವಕ್ಕೆ ಮಾಡಿದವನ ಭಕ್ತಿ
ಇರುಳು ಸತ್ತಿಗೆಯ ಹಿಡಿಸಿಕೊಂಡಂತೆ,
ಕೂಡಲ ಸಂಗಮದೇವಾ! ॥ ೨೨೭ ॥

೧೧೫

ಹರಸಿ ಮಾಡುವುದು ಹರಕೆಯ ದಂಡ:
ನೆರಹಿ ಮಾಡುವುದು ಡಂಭಿನ ಭಕ್ತಿ.
ಹರಸಬೇಡ, ನೆರಹಬೇಡ,
ಬಂದ ಭರವನಱಿದರೆ ಕೂಡಿಕೊಂಡಿಪ್ಪ
ನಮ್ಮ ಕೂಡಲ ಸಂಗಮದೇವ. ॥ ೨೨೮ ॥

೧೧೬

ಹಡೆದೊಡವೆ-ವಸ್ತುವನು ಮೃಡಭಕ್ತರಿಗಲ್ಲದೆ
ಕಡಬಡ್ಡಿಯ ಕೊಡಲಾಗದು.
ಬಂದರೊಂದು ಲೇಸು, ಬಾರದಿದ್ದರೆರೆಡು ಲೇಸು!
ಅಲ್ಲಿದ್ದರೆಯೂ ಲಿಂಗಕ್ಕೆ ಜೋನ; ಇಲ್ಲಿದ್ದರೆಯೂ ಲಿಂಗಕ್ಕೆ ಜೋನ.
ಲಿಂಗದೊಡಪೆ ಲಿಂಗಕ್ಕೆ ಸಾರಿತ್ತಾಗಿ
ಬಂದಿತ್ತೆಂಬ ಪರಿಣಾಮವಿಲ್ಲ, ಬಾರದೆಂಬ ದುಃಖವಿಲ್ಲ.
ಇದುಕಾರಣ, ಕೂಡಲ ಸಂಗಮದೇವಾ,
ನಿಮ್ಮ ಶರಣರಿಗಲ್ಲದೆ ಕಡಬಡ್ಡಿಯ ಕೊಡಲಾಗದು. ॥ ೨೨೯ ॥

೧೧೭

ಓಡಲಾಱದ ಮೃಗವು ಸೊಣಗಂಗೆ ಮಾಂಸವ ಕೊಡುವಂತೆ –
ಮಾಡಲಾಗದು ಭಕ್ತನು, ಕೊಳಲಾಗದು ಜಂಗಮ.
ಹಿರಿಯರು ನರಮಾಂಸವ ಭುಂಜಿಸುವರೆ?
ತನುವುಕ್ಕಿ ಮನವುಕ್ಕಿ ಮಾಡಬೇಕು ಭಕ್ತಿಯ,
ಮಾಡಿಸಿ ಕೊಳ್ಳಬೇಕು ಜಂಗಮ, ಕೂಡಲ ಸಂಗಮದೇವಾ. ॥೨೩೦॥

೧೧೮

ಬಂದುದ ಕೈಕೊಳ್ಳಬಲ್ಲರೆ ನೇಮ,
ಇದ್ದುದ ವಂಚನೆ ಮಾಡದಿದ್ದರೆ ಅದು ನೇಮ;
ನಡೆದು ತಪ್ಪದಿದ್ದರೆ ನೇಮ, ನುಡಿದು ಹುಸಿಯದಿದ್ದರೆ ನೇಮ.
ನಮ್ಮ ಕೂಡಲ ಸಂಗನ ಶರಣರು ಬಂದರೆ
ಒಡೆಯರಿಗೊಡವೆಯನೊಪ್ಪಿಸುವುದೇ ನೇಮ. ॥ ೨೩೧ ॥

೧೧೯

ಹಾಲ ನೇಮ, ಹಾಲ ಕೆನೆಯ ನೇಮ:
ಕೆನೆ ತಪ್ಪಿದ ಬಳಿಕ ಕಿಚ್ಚಡಿಯ ನೇಮ;
ಬೆಣ್ಣೆಯ ನೇಮ, ಬೆಲ್ಲದ ನೇಮ!
ಅಂಬಲಿಯ ನೇಮದವರನಾರನೂ ಕಾಣೆ:
ಕೂಡಲ ಸಂಗನ ಶರಣರಲ್ಲಿ
ಅಂಬಲಿಯ ನೇಮದಾತ ಮಾದಾರ ಚೆನ್ನಯ್ಯ. ॥ ೨೩೨ ॥

೧೨೦

ಮಾಡಿ ಮಾಡಿ ಕೆಟ್ಟರು ಮನವಿಲ್ಲದೆ;
ನೀಡಿ ನೀಡಿ ಕೆಟ್ಟರು ಮನವಿಲ್ಲದೆ;
ಮಾಡುವ ನೀಡುವ ನಿಜಗುಣವುಳ್ಳರೆ
ಕೂಡಿ ಕೊಂಬ ನಮ್ಮ ಕೂಡಲ ಸಂಗಮದೇವ. ॥ ೨೩೩ ॥

೧೨೧

ಮಾಡಿದೆನೆಂಬುದು ಮನದಲ್ಲಿ ಹೊಳೆದರೆ,
ಏಡಿಸಿ ಕಾಡಿತ್ತು ಶಿವನ ಡಂಗುರ!
ಮಾಡಿದೆನೆನ್ನದಿರಾ ಲಿಂಗಕ್ಕೆ, ಮಾಡಿದೆನೆನ್ನದಿರಾ ಜಂಗಮಕ್ಕೆ.
ಮಾಡಿದೆನೆಂಬುದು ಮನದಲ್ಲಿಲ್ಲದಿದ್ದರೆ,
ಬೇಡಿತ್ತನೀವ ಕೂಡಲ ಸಂಗಮದೇವ. ॥ ೨೩೪ ॥

೧೨೨

ಕಳಬೇಡ, ಕೊಲಬೇಡ; ಹುಸಿಯ ನುಡಿಯಲು ಬೇಡ;
ಮುನಿಯ ಬೇಡ, ಅನ್ಯರಿಗೆ ಅಸಹ್ಯಬಡಬೇಡ;
ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ.
ಇದೆ ಅಂತರಂಗ ಶುದ್ಧಿ,ಇದೇಬಹಿರಂಗ ಶುದ್ಧಿ,
ಇದೇ ನಮ್ಮ ಕೂಡಲ ಸಂಗಮದೇವರನೊಲಿಸುವ ಪರಿ! (॥೨೩೫॥)

೧೨೩

ಕೆಡೆನಡೆಯದೆ, ಕೆಡೆನುಡಿಯದೆ, ಅನ್ಯರ ಪ್ರತಿಪಾದಿಸದಿದ್ದರಿ
ಏನ ಮಾಡನಯ್ಯಾ ಲಿಂಗವು, ಏನ ಕೊಡನಯ್ಯಾ ತಾನು?
ಏನ ಬೇಡಿದುದನೀವನಾಗಿ ನಂಬಿಗೆಯುಳ್ಳ ಶಿವಭಕ್ತಂಗೆ,
ಇದೇ ದಿಬ್ಯ, ಕೂಡಲ ಸಂಗಮದೇವಾ. ॥ ೨೩೭ ॥

೧೨೪

ಸ್ವಾಮಿಭೃತ್ಯಸಂಬಂಧಕ್ಕೆ ಆವುದು ಪದವೆಂದರೆ:
ದಿಟವ ನುಡಿವುದು, ನುಡಿದಂತೆ ನಡೆವುದು.
ನುಡಿದು ಹುಸಿವ, ನಡೆದು ತಪ್ಪುವ
ಪ್ರಪಂಚಿಯನೊಲ್ಲ ಕೂಡಲ ಸಂಗಮದೇವ. ॥ ೨೩೮ ॥

೧೨೫

ಸತ್ಯವುಳ್ಳ ಭಂಡವ ತುಂಬುವುದಯ್ಯಾ!
ಸಯಿಧಾನ, ಸಯಿಧಾನವಯ್ಯಾ:
—ಮನ ಧಾರೆವಟ್ಟಲು!
ಕೂಡಲ ಸಂಗನ ಶರಣರು ಹಿಡಿಯದ ಭಂಡವನು
ಆರಾದೊಡಾಗಲಿ ಹೋಗಲೀಯರಯ್ಯಾ. ॥ ೨೩೯ ॥

೧೨೬

ದೇವಲೋಕ ಮರ್ತ್ಯಲೋಕವೆಂಬುದು ಬೇಱಿಲ್ಲ, ಕಾಣಿ ಭೋ!
ಸತ್ಯವ ನುಡಿವುದೆ ದೇವಲೋಕ; ಮಿಥ್ಯವ ನುಡಿವುದೆ ಮರ್ತ್ಯಲೋಕ!
ಆಚಾರವೇ ಸ್ವರ್ಗ, ಅನಾಚಾರವೇ ನರಕ—
ಕೂಡಲ ಸಂಗಮದೇವಾ, ನೀವೇ ಪ್ರಮಾಣು! ॥ ೨೪೦ ॥

೧೨೭

ಪುಣ್ಯ ಪಾಪವೆಂಬುವು ತಮ್ಮಿಷ್ಟ ಕಂಡಿರೇ:
'ಆಯ್ಯಾ' ಎಂದಡೆ ಸ್ವರ್ಗ: 'ಎಲೆವ್ವೋ' ಎಂದಡೆ ನರಕ!
'ದೇವಾ, ಭಕ್ತ ಜಯಾ, ಜೀಯಾ' ಎಂಬ ನುಡಿಯೊಳಗೆ
ಕೈಲಾಸವಿದ್ದುದೇ, ಕೂಡಲ ಸಂಗಮದೇವಾ. ॥ ೨೪೧ ॥

೧೨೮

'ಏನಿ ಬಂದಿರಿ, ಹದುಳವಿದ್ದರೆ?' ಎಂದರೆ
ನಿಮ್ಮ ಮೈಸಿರಿ ಹಾಱುಹೋಹುದೆ?
'ಕುಳ್ಳಿರಿಂ'ದರೆ ನೆಲ ಕುಳಿಹೋಹುದೆ?
ಒಡನೆ ನುಡಿದರೆ ಶಿರ-ಹೊಟ್ಟೆಯೊಡೆವುದೆ?
ಕೊಡಲಿಲ್ಲದಿದ್ದರೊಂದು ಗುಣವಿಲ್ಲದಿರ್ದಡೆ,
ಕೆಡಹಿ ಮೂಗ ಕೊಯ್ಯದೆ ಮಾಣ್ಬನೆ ಕೂಡಲ ಸಂಗಮದೇವನು?
॥ ೨೪೧ ॥

೧೨೯

ಸಂಸಾರದಲ್ಲಿ ಹುಟ್ಟಿ ಮತ್ತೊಂದ ಬಯಸಲೇಕಯ್ಯಾ?
ನಗುವುದು, ನುಡಿವುದು ಶಿವಭಕ್ತರೊಡನೆ.
ಸುಮ್ಮಾನ ಹಮ್ಮು ಬಿಮ್ಮಾಗಿರಲೇಕಯ್ಯಾ?
॥ ಶ್ಲೋಕ ॥ ಅಭ್ಯಾಸಸ್ಯ ವಿಹೀನಸ್ಯ । ತಸ್ಯ ಜನ್ಮ ನಿರರ್ಥಕಂ ।
ಗುರೋರಪಿ ಸಮಂ ಹಾಸ್ಯಂ । ಕರ್ತವ್ಯಂ ಕುಟಿಲಂ ವಿನಾ॥
ನಮ್ಮ ಕೂಡಲ ಸಂಗನ ಶರಣರೊಡನೆ
ಮನದೆಱೆದು ಮಾತನಾಡುವುದಯ್ಯಾ. ॥ ೨೪೨ ॥

೧೩೦

ಭಕ್ತಿಯೆಂಬ ನಿಧಾನವ ಸಾಧಿಸುವರೆ,
ಶಿವಪ್ರೇಮವೆಂಬಂಜನವ ನೆಚ್ಚಿಕೊಂಬುದು.
ಭಕ್ತನಾದವಂಗೆ ಇಪೆ ಪಥವಾಗಿರಬೇಕು.
ನಿಮ್ಮ ಕೂಡಲ ಸಂಗನ ಶರಣರನುಭಾವ ಗಜವೈದ್ಯವಯ್ಯಾ. ॥ ೨೪೩ ॥

೧೩೧

ಕಂಡ ಭಕ್ತರಿಗೆ ಕೈಮುಗಿವಾತನೇ ಭಕ್ತ:
ಮೃದುವಚನವೇ ಸಕಲಜಪಂಗಳಯ್ಯಾ,
ಮೃದುವಚನವೇ ಸಕಲತಪಂಗಳಯ್ಯಾ,
ಸದುವಿನಯವೇ ಸದಾಶಿವನೊಲಿಮೆಯಯ್ಯಾ,—
ಕೂಡಲ ಸಂಗಯ್ಯನಂತಲ್ಲದೊಲ್ಲನಯ್ಯಾ. ॥ ೨೪೪ ॥

೧೩೨

'ಇತ್ತ ಬಾರಯ್ಯಾ ಇತ್ತ ಬಾರಯ್ಯಾ' ಎಂದು
ಭಕ್ತರೆಲ್ಲರೂ ಕೂರ್ತು ಹತ್ತೆ ಕರೆಯುತಿರೆ,
ಮತ್ತೆ ಕೆಲಕ್ಕೆ ಹೋಗಿ, ಶರಣೆಂದು ಹಸ್ತ-ಬಾಯನೆ ಮುಚ್ಚಿ,
ಕಿಱುದಾಗಿ ಭೃತ್ಯಾಚಾರವ ನುಡಿದು,
ವಿನಯವದ್ಧ್ಯಾನವುಳ್ಳರೆ
ಎತ್ತಿಕೊಂಬನಯ್ಯಾ ಕೂಡಲ ಸಂಗಮದೇವ ಪ್ರಮಥರ ಮುಂದೆ.
॥ ೨೪೫ ॥

೧೩೩

ಭಕ್ತ ಭಕ್ತನ ಮನೆಗೆ ಬಂದರೆ ಭೃತ್ಯಾಚಾರವ ಮಾಡಬೇಕು:
ಕರ್ತನಾಗಿ ಕಾಲ ತೊಳೆಯಿಸಿಕೊಂಡರೆ,
ಹಿಂದೆ ಮಾಡಿದ ಭಕ್ತಿಗೆ ಹಾನಿ!
ಲಕ್ಷಗಾವುದ ದಾರಿಯ ಹೋಗಿ
ಭಕ್ತನು ಭಕ್ತನ ಕಾಂಬುದು ಸದಾಚಾರ;
ಅಲ್ಲಿ ಕೂಡಿ ದಾಸೋಹವ ಮಾಡಿದರೆ
ಕೂಡಿ ಕೊಂಬನು ನಮ್ಮ ಕೂಡಲ ಸಂಗಮದೇವನು. ॥ ೨೪೬ ॥

೧೩೪

ದಯವಿಲ್ಲದ ಧರ್ಮವದೇವುದಯ್ಯಾ?
ದಯವೇ ಬೇಕು ಸಕಲಪ್ರಾಣಿಗಳಿಲ್ಲಜಿಲ್ಲಿಯೂ;
ದಯವೇ ಧರ್ಮದ ಮೂಲವಯ್ಯಾ:
ಕೂಡಲ ಸಂಗಯ್ಯನಂತಲ್ಲದೊಲ್ಲನಯ್ಯಾ. ॥ ೨೪೭ ॥

೧೩೫

ತನಗೆ ಮುನಿವವರಿಗೆ ತಾ ಮುನಿಯಲೇಕಯ್ಯಾ?
ತನಗಾದ ಆಗೇನು? ಆವರಿಗಾದ ಚೇಗೇನು?
ತನುವಿನ ಕೋಪ ತನ್ನ ಹಿರಿಯತನದ ಕೇಡು;
ಮನದ ಕೋಪ ತನ್ನ ಱಿವಿನ ಕೇಡು.
ಮನೆಯೊಳಗಣ ಕಿಚ್ಚು ಮನೆಯ ಸುಟ್ಟಲ್ಲದೆ
ನೆರೆಮನೆಯ ಸುಡುವುದೆ, ಕೂಡಲ ಸಂಗಮದೇವಾ? ॥ ೨೪೮ ॥

೧೩೬

ಅರ್ಥಕ್ಕೆ ತಪ್ಪಿದರೇನು ? ಪ್ರಾಣಕ್ಕೆ ತಪ್ಪಿದರೇನು?
ಅಭಿಮಾನಕ್ಕೆ ತಪ್ಪಿದರೇನು ?
ಶರಣರು ಶರಣರಲ್ಲಿ ಗುಣವನಱಿಸುವರೆ ?
ಕೂಡಲ ಸಂಗನ ಶರಣರು ನೊಂದು ಸೈರಿಸಬೇಕು. ॥ ೨೪೯ ॥

(೧೦) ಭಕ್ತಸ್ಥಲ

೧

ಕಾಣದ ಠಾವಿನಲಿ ಜಱಿದರೆಂವರೆ, ಕೇಳಿ ಪರಿಣಾಮಿಸಬೇಕು.
ಅದೇನು ಕಾರಣ? ಕೊಳ್ಳದೆ ಕೊಡದೆ ಅವರಿಗೆ ಸಂತೋಷವಹುದಾಗಿ!
ಎನ್ನ ಮನದ ತದ್ದ್ವೇಷವಳಿದು ನಿಮ್ಮ ಶರಣರಿಗೆ
ಶರಣೆಂಬುವ ಕರುಣಿಸು, ಕೂಡಲ ಸಂಗಮದೇವಾ. ॥ ೨೫೦ ॥

೨

ಕರಗಿಸಿ ಎನ್ನ ಮನದ ಕಾಳಿಕೆಯ ಕಳೆಯಯ್ಯಾ;
ಒರೆಬಣ್ಣಕ್ಕೆ ತಂದೆನ್ನ ಪುಟವಿಕ್ಕಿ ನೋಡಯ್ಯಾ;
ಕಡಿಹಕ್ಕೆ ಬಡಿಪಕ್ಕೆ ತಂದೆನ್ನ ಕಡೆಯಾಣಿಯ ಮಾಡಿ,
ನಿಮ್ಮ ಶರಣರ ಪಾವಕ್ಕೆ ತೊಡಿಗೆಯ ಮಾಡಿ ಸಲುಹು,
ಕೂಡಲ ಸಂಗಮದೇವಾ ! ॥ ೨೫೧ ॥

೩

॥ ಶ್ಲೋಕ ॥ ವೇದಾದಿ ನಾಮ ನಿರ್ನಾಮಂ। ಮಹತ್ಪಂ ಮಹದೀಶ್ವರಂ
ಗುರೂಕ್ತಮಂತ್ರಮಾರ್ಗೇಣ। ಇಷ್ಟಲಿಂಗಂ ತು ಶಂಕರೀ
ಎಂದುದಾಗಿ, ವಚನಪಾತಕವೆನ್ನ, ವಚನದೋಷಂಗಳೆನ್ನ,
ಕಾಡಿ ಕಾಡಿ ಕೆಡಿಸಿಹುವೆನ್ನ, ಕೂಡಲ ಸಂಗಮದೇವಾ,
ಅಹಮ್ಮೆಂಬ ಅಹಂಕಾರವೆನ್ನ ! ॥ ೨೫೨ ॥

೪

ಅವರಿವರೆನ್ನದೆ ಚರಣಕ್ಕೆಱಗಲು ಅಯ್ಯತನವೇಱಿ
ಬೆಬ್ಬನೆ ಬೆಱಿವೆ ನಾನು: ಕೆಚ್ಚು ಬೆಳೆಯಿತ್ತಯ್ಯಾ!
ಆ ಕೆಚ್ಚಿಂಗೆ ಕಿಚ್ಚನಿಕ್ಕಿ ಸುಟ್ಟು ಬೆಳ್ಳಕನ ಮಾಡಿ
ಬೆಳುಗಾರದಂತೆ ಮಾಡು, ಕೂಡಲ ಸಂಗಮದೇವಾ. ॥ ೨೫೩ ॥

೫

ನಡೆಯ ಕಂಡಾ, ನಂಬಿ: ನುಡಿಯಲ್ಲಾ ಉಪಚಾರ!
ಮಿಗಿಲೊಂದು ಮಾತು ಬಂದರೆ ಸೈರಿಸಲಾಱೆನು;
ತುಯ್ಯಲಾದರೆ ಉಂಬೆ; ಹುಯ್ಯಲಾದರೆ ಓಡುವೆ!
ಆಳು ಬೇಡಿದಡೆ ಆಳ್ದನೇನನೀ[ಯ]ನಯ್ಯಾ?
ಆಳಾಗಿ ಹೊಕ್ಕು ಅರಸನಾಗಿ ನಡೆದರೆ,
ಆಳಿಗೊಂಡಿತ್ತೆನ್ನ ಕೂಡಲ ಸಂಗನ ಭಕ್ತಿ! ॥ ೨೫೪ ॥

೬

ಇಱಿಸಿಕೊಂಡು ಭಕ್ತರಾದರೆಮ್ಮವರು;
ತಱಿಸಿಕೊಂಡು ಭಕ್ತರಾದರೆಮ್ಮವರು;
ಕೊಱಿಯಿಸಿಕೊಂಡು ಭಕ್ತರಾದರೆಮ್ಮವರು;
ಜಱಿಯಿಸಿಕೊಂಡು ಭಕ್ತರಾದರೆಮ್ಮವರು;
ಕೂಡಲ ಸಂಗನ ಶರಣರಿಗೆ ಮುಳಿಸ ತಾಳಿ
ಎನ್ನ ಭಕ್ತಿ ಅರಿಯಾಯಿತ್ತು! ॥ ೨೫೫ ॥

೭

ಮನಕ್ಕೆ ನಾಚದ ವಚನ, ವಚನಕ್ಕೆ ನಾಚದ ಮನ!
ಕುಂದ ಹೆಚ್ಚು ನುಡಿವೆ,
ಒಂದು ಮಾತಿನ ಗೆಲ್ಲ–ಸೋಲಕ್ಕೆ ಹಿಡದು ಹೋರುವೆ:
ಕೂಡಲ ಸಂಗನ ಶರಣರೆನ್ನಾಳ್ದರೆಂಬೆ! ॥ ೨೫೬ ॥

೮

ಇಲ್ಲವೆಯ ಮೇಲೆ ಕಂಚೊಡೆದಂತೆ, ಬಡಮನವೆನ್ನ ಕಾಡಿತ್ತಯ್ಯಾ;
ಮತಿಯಿಲ್ಲದ ಮರುಳ ನಾನಯ್ಯಾ; ಭಕ್ತಿಯಿಲ್ಲದ ಬಡವ ನಾನು;
ನಿಮ್ಮ ನೆನಹವಿಲ್ಲದೆ ನಿರ್ಭಾಗ್ಯನಾದೆ,
ಎನಗೆ ನೀ ಕರುಣಿಸಾ, ಕೂಡಲ ಸಂಗಮದೇವಾ! ॥ ೨೫೭ ॥

೯

ಲಿಂಗವ ನಚ್ಚದೀ ಮನವು, ಜಂಗಮವ ನಂಬದೀ ಮನವು;
ಕೂಪರ ಕಂಡರೆ ಒಲ್ಲದೀ ಮನವು.
ಈ ಮನದ ಭ್ರಮೆಯನೆಲ್ಲವ ಮಱಿಸಿ,
ನಿಮ್ಮ ಶರಣರಿಗೆ ಶರಣೆಂಬುದ ಕರುಣಿಸು,
ಕೂಡಲ ಸಂಗಮದೇವಾ. ॥ ೨೫೮ ॥

೧೦

ಅಶನ ಕುಂದದು, ವ್ಯಸನ ಮಾಣದು;
ಆರತವಡಗದು, ಬೆವಹಾರವುಡುಗದು:
ಮಜ್ಜನಕ್ಕೆಜ್ಜೆವೆನಯ್ಯಾ, ಕಾಯವಿಕಾರಿಯಾನು;
ಮಜ್ಜನಕ್ಕೆಜ್ಜೆವೆನಯ್ಯಾ, ಜೀವವಿಕಾರಯಾನು;
ಮಜ್ಜನಕ್ಕೆಜ್ಜೆವೆನಯ್ಯಾ: ಶರಣನಲ್ಲ, ಲಿಂಗೈಕ್ಯನಲ್ಲಾ!
ಕೂಡಲ ಸಂಗಮದೇವರಲ್ಲಿ ಅಂತರಬೆಂತಱಿ ನಾನಯ್ಯಾ! ॥೨೫೯॥

೧೧

ಕುದುರನೇಸು ತೊಳೆದರೆಯೂ ಕೆಸಱು ಮಾಣ್ಬುದೆ?
ಎನ್ನ ಕಾಯದೊಳುಳ್ಳವಗುಣಂಗಳ ಕಳೆದು ಕೃಪೆಯ ಮಾಡಯ್ಯಾ.
ಕಂಬಳಿಯಲ್ಲಿ ಕಣಕವ ನಾದಿದಂತೆ, ಕಾಣರೇ, ಎನ್ನ ಮನ!
ಕೂಡಲ ಸಂಗಮದೇವಾ, ನಿಮಗೆ ಶರಣೆಂದು ಶುದ್ಧ ಕಾಣಯ್ಯಾ.
॥ ೨೬೦ ॥

೧೪

ಕಾಮುಧೇನು ನಿಮ್ಮ ನಾರಿಯರಲು ಪರರ ಬೇಡಲಾಜಿನಯ್ಯಾ
ನಿಮ್ಮುಪ ಪೂಜಸಿ ಭೋಜಂಗೆನ ಬಯಸೀಕಯ್ಯಾ ?
ಒಂದಣ ಜನ್ಮದ ಚಿಹ್ನ ಬಿಯನಸ್ಕ್ಕ
ನಿಮ್ಮುಪ ಪೂಜಸಿ ಏಕೆನಯಯ್ಯಾ ?
ಎನ್ನ ಮನದ ಅವಗುಣವ ಕರೆದು
ನಿಮ್ಮ ಶರಣರಿಗೆ ಶರಣೆಂಬುವ ಕರುಣಿಸು
ಕೂಡಲ ಸಂಗಮದೇವಾ. ॥ ೨೬೧ ॥

೧೫

ದುರ್ವ್ಯಸನಿ ದುರಾಚಾರಿಯೆಂದೆನಿಸಿದಿರಯ್ಯಾ, ಎನ್ನ—
ಲಿಂಗನ್ಯಸನಿ ಜಂಗಮಪ್ರಿಯ ಬಿರುದಿಲ್ಲವೆಸಯ್ಯಾ;
'ಅವಶ್ಯಮನುಸುಧೋಕ್ಷಜೈಕಂಬ್ಬ ಸುರಿಯಯ್ಯಾ,
ಕೂಡಲ ಸಂಗಮದೇವಾ, ಸಂಸಾರವ ಬೇಡುವೆನು! ॥ ೨೬೨ ॥

೧೪

ಧೃತಿಗೆಟ್ಟು ಅನ್ಯರ ಬೇಡದಂತೆ,
ಮತಿಗೆಟ್ಟು ಪರರ ಹೊಗಳದಂತೆ,
ಪರಸತಿಯರ ರತಿಗೆ ಮನಯಾರದಂತೆ,
ಶಿವಪಥವೊಲ್ಲದವರೊಡನಾಡದಂತೆ,
ಅನ್ಯಜಾತಿಯ ಸಂಗವ ಮಾಡದಂತೆ,
ಎನ್ನ ಪ್ರತಿಪಾಡಿಸು, ಕೂಡಲ ಸಂಗಮದೇವಾ. ॥ ೨೬೩ ॥

೧೫

ಮತ್ತೊಂದ ಕಾಣದಂತೆ, ಮತ್ತೊಂದ ಕೇಳದಂತೆ,
ನಿಮ್ಮ ಶರಣರ ಹಾದಿವಳ್ಳದೆ ಅನ್ಯವಿಷಯಕ್ಕೆಳಸದಂತೆ,
ಇರಿಸಯ್ಯಾ, ಕೂಡಲ ಸಂಗಮದೇವಾ. ॥ ೨೬೪ ॥

೧೬

ಮತಿಮುಂದನಾಗಿ ಗತಿಯ ಕಾಣದೆ ಇರ್ದೆನಯ್ಯಾ:
ಹುಟ್ಟುಗುರುಡನ ಕೈಯ ಕೋಲ ಕೊಟ್ಟು ನಡೆಸುವಂತ
ನಡೆಸಯ್ಯಾ, ಎನ್ನಾ:
ನಿಮ್ಮಿಚ್ಛ ಶರಣರ ಒಕ್ಕುದ ಮಿಕ್ಕುದ
ನಚ್ಚಿಸು, ಮಚ್ಚಿಸು, ಕೂಡಲ ಸಂಗಮದೇವಾ. ॥ ೧೬ ॥

೧೭

ಕಾಣದುದನೆಲ್ಲವ ಕಾಣಲಾಱೆನಯ್ಯಾ
ಕೇಳದುದನೆಲ್ಲವ ಕೇಳಲಾಱೆನಯ್ಯಾ
ಪ್ರೇಮವಿಲ್ಲದೆಮ್ಮ ಧನನಲ್ಲ, ನೀವು ಯಯ್ಯಾ !
ಒಲಿಯ ಮುಂದಿದ್ದು ಮಾಡದ ಕನಸ ಕಾಣ್ಬವರನೊಲ್ಲನಯ್ಯಾ,
ಕೂಡಲ ಸಂಗಮದೇವ. ॥ ೧೭ ॥

೧೮

ಕಾಣಬಹುದೆ ಪರುಷದ ಗಿರಿಯಂಘಕಂಗೆ ?
ಅಱಿಯಬಹುದೆ ರಸದ ಬಾಯಿ ನಿರ್ಭಾಗ್ಯಂಗೆ ?
ತಿಗೆಯಬಹುದೆ ಕಡವರವು ದರಿದ್ರಂಗೆ ?
ಕಱಿಯಬಹುದೆ ಕಾಮಧೇನುವಶುದ್ಧಂಗೆ ?
ಹೊನ್ನ ಹುಳುವ ಕಂಡು ನರಿ ತನ್ನ ಬಾಲವ
ಹುಣ್ಣ ಮಾಡಿಕೊಂಡರೆ ಹೋಲಬಹುದೆ ?
ಎನ್ನೊಡೆಯ ಕೂಡಲ ಸಂಗನ ಶರಣರನು
ಪುಣ್ಯವಿಲ್ಲದೆ ಕಾಣಬಹುದೇ ? ॥ ೧೮ ॥

೧೯

ಎಂತಕ್ಕೆ ನಾನಿಮ್ಮ ದೇವರೆಂದಱಿವೆನು ?
ಇಂತಾಗಿ ನೀವೆನ್ನನಾರೆಂದಱಿಯಿರಿ !
ನಂಬಲಱಿಯೆ, ನಂಬಿಸಲಱಿಯೆ,
ಒಲಿಯಲಱಿಯೆ, ಒಲಿಸಲಱಿಯೆ !

॥ ಶ್ಲೋಕ ॥ ಯಥಾ ಭಾವಸ್ತಥಾ ಲಿಂಗಂ ॥ ಸತ್ಯಂ ಸತ್ಯಂ ನ ಸಂಶಯಃ
ಯಥಾ ಭಕ್ತಿಸ್ಥತಾ ಸಿದ್ಧಿಃ । ಸತ್ಯಂ ಸತ್ಯಂ ನ ಸಂಶಯಃ
ಎಂದುದಾಗಿ ಕೂಡಲ ಸಂಗಮದೇವಾ, ಕೇಳಯ್ಯಾ,
ಕೋಟಿ ಕೋಟಿ ವರ್ಷ ಕೋಟಲೆಗೊಂಡನಯ್ಯಾ! ॥ ೨೬೮ ॥

೨೦

ಅರಿಸಿನವನೆ ಮಿಂದು, ಹೊಂದೊಡಿಗೆಯನೆ ತೊಟ್ಟು,
ಪುರುಷನ ಒಲವಿಲ್ಲದ ಲಲನೆಯಂತಾಗಿರ್ದೆನಯ್ಯಾ!
ವಿಭೂತಿಯನೆ ಹೂಸಿ, ರುದ್ರಾಕ್ಷಿಯನೆ ಕಟ್ಟಿ,
ಶಿವ ನಿಮ್ಮೊಲವಿಲ್ಲದಂತೆ ಆಗಿರ್ದೆನಯ್ಯಾ!
ಕೆಟ್ಟು ಬಾಳುವರಿಲ್ಲಾ ಎಮ್ಮವರ ಕುಲದಲ್ಲಿ:
ನೀನೊಲಿದಂತೆ ಸಲಹಯ್ಯಾ, ಕೂಡಲ ಸಂಗಮದೇವಾ. ॥ ೨೬೯ ॥

೨೧

ಉದಯಾಸ್ತಮಾನವೆನ್ನ ಬೆಂದ ಬಸುರಾಂತರ ಕುದಿಯಲಲ್ಲದೆ
ನಿಮ್ಮ ನೆನೆಯಲು ತೆರಹಿಲ್ಲಯ್ಯಾ!
ಎಂತೊ! ಲಿಂಗ ತಂದೆ, ಎಂತಯ್ಯಾ? ಎನ್ನ ಪೂರ್ವಲಿಖಿತ!
ಬೆರಣಿಯಾಯಲಲ್ಲದೆ ಅಟ್ಟುಣ್ಣ ತೆರಹಿಲ್ಲವೆನಗೆ!
ನೀ ಕರುಣಿಸಾ, ಕೂಡಲ ಸಂಗಮದೇವಾ. ॥ ೨೭೦ ॥

೨೨

ತಾಮಸ[ದೆ] ಮುಸುಕಿ ಕಂಗಳ ಕೆಡಿಸಿತ್ತೆನ್ನ ಭಕ್ತಿ;
ಕಾಮವೆಂಬಗ್ನಿಗೆ ಮುಜ್ಜಿದಿಕ್ಕಿತ್ತೆನ್ನ ಭಕ್ತಿ;
ಉದರಕ್ಕೆ ಕುದಿಕುದಿದು ಮುಂದುಗಡಿಸಿತ್ತೆನ್ನ ಭಕ್ತಿ;
ಇದಿರನಾಶ್ರಯಿಸಲು ಹೋಯಿತ್ತೆನ್ನ ಭಕ್ತಿ!
ಹೆಣಮೂಳನು ನಾನು! ಕೂಡಲ ಸಂಗಮದೇವಾ,
ಕ್ಷಣ ಹದುಳವಿರದೆ ಬಾಯ ಬೊಗ್ಗದೇ ಹೋಯಿತ್ತೆನ್ನ ಭಕ್ತಿ!
॥ ೨೭೧ ॥

೨೩

ಏನಿದ್ದರೇನಿದ್ದರೊಲ್ಲದು ನಿಮ್ಮನುಭಾವಕ್ಕೆನ್ನ ಮನವು:
ಡಂಬಕನೆಂಬವನಾನು ಕಂಡಯ್ಯಾ,
ಕೂಡಲ ಸಂಗನ ಪೂಜಿಸಿ ಮಾನವರಾಸೆ ಬಿಡದಾಗಿ. ॥ ೨೨೨ ॥

೨೪

ಬೆಲ್ಲವ ತಿಂದ ಕೋಡಗನಂತೆ ಸಿಹಿಯ ನೆನೆಯದಿರಾ, ಮನವೇ;
ಕಬ್ಬ ತಿಂದ ನರಿಯಂತೆ ಹಿಂಪಕ್ಕೆಳಸದಿರಾ, ಮನವೇ;
ಗಗನವನಡರಿದ ಕಾಗೆಯಂತೆ ದೆಸೆದೆಸೆಗೆ ಹಂಬಲಿಸದಿರಾ, ಮನವೇ.
ಕೂಡಲ ಸಂಗನ ಶರಣರ ಕಂಡು ಲಿಂಗವೆಂದೇ ನಂಬು ಮನವೇ ॥೨೨೩॥

೨೫

ಒಡೆಯನ ಕಂಡರೆ ಕಳ್ಳನಾಗದಿರಾ, ಮನವೇ.
ಭವದ ಭಾರಿಯ ತಪ್ಪಿಸಿಕೊಂಬರೆ
ನೀನು ನಿಯತನಾಗಿ, ಭಯಭರಿತನಾಗಿ,
ಅಹಂಕಾರಿಯಾಗದೆ ಶರಣೆನ್ನು, ಮನವೇ.
ಕೂಡಲ ಸಂಗನ ಶರಣರಲ್ಲಿ ಭಕ್ತಿಯನೊಲುವರೆ
ಕಿಂಕಿಲನಾಗಿ ಬದುಕು, ಮನವೇ. ॥ ೨೨೪ ॥

೨೬

ಕೋ[ಟ್ಯ]ನುಕೋಟಿ ಜಪವನು ಮಾಡಿ
ಕೋಟಲೆಗೊಳ್ಳಲದೇಕೆ ಮನವೇ?
ಕಿಂಚಿತು ಗೀತವೊಂದನಂತಕೋಟಿ ಜಪ!
ಜಪವೆಂಬುದೇಕೆ ಮನವೇ?
ಕೂಡಲ ಸಂಗನ ಶರಣರ ಕಂಡು,
ಆಡಿ ಹಾಡಿ ಬದುಕು, ಮನವೇ! ॥ ೨೨೫ ॥

೨೭

ಮನವೇ ನಿನ್ನ ಜನ್ಮದ ಪರಿಭವನ ಮಾಜಿಸಿಯಲ್ಲಾ, ಮನವೇ!
ಲಿಂಗವ ನಂಬು ಕಂಡಾ, ಮನವೇ:
ಜಂಗಮವ ನಂಬು ಕಂಡಾ, ಮನವೇ;
ಕೂಡಲ ಸಂಗಮದೇವರ ಬಡವೆ ಜೆಂಬತ್ತು, ಕಂಡಾ, ಮನವೇ.
॥ ೨೭ ॥

೨೮

ಸುರರ ಬೇಡಿದಡಿಲ್ಲ, ನರರ ಬೇಡಿದಡಿಲ್ಲ,
ಬರಿದೆ ಶ್ಲಾಘಿಸಬೇಡ, ಮನವೇ:
ಅರನಾವಡೆಯೂ ಬೇಡಿ ಬೇಡಿ, ಬರಿದೆ ಶ್ಲಾಘಿಸಬೇಡ, ಮನವೇ.
ಕೂಡಲ ಸಂಗಮದೇವನಲ್ಲದೆ, ಪರರ ಬೇಡಿದಡಿಲ್ಲ, ಮನವೇ ॥ ೨೮ ॥

೨೯

ಆಡಿ ಅಳುಪದಿರಾ, ಲೇಸ ಮಾಡಿ ಮಱುಗದಿರಾ, ಎಲೆ ಮನವೇ:
ಕೂಡ ತಪ್ಪದಿರಾ: ಬೇಡಿದವರಿಗಿಲ್ಲೆನ್ನದಿರು, ಕಂಡಾ, ಮನವೇ
ನಾಡ ಮಾತು ಬೇಡ, ನೆಲೆಗೊಡ್ಡಿ ಬೇಡು ಕೂಡಲ ಸಂಗನ ಶರಣರ.
॥ ೨೯ ॥

೩೦

ಶ್ವಾನಯವ ಕತ್ತರಿ: ತುದಿನಾಲಿಗೆಯ ಜೆಲ್ಲೀಂ ಜೋ!
ಆಡಿಸೇ[ನೇಂ] ಜೋ, ಹಾಡಿಯೆ[ನೇಂ] ಜೋ,
ನಿಚ್ಚ ನಿಚ್ಚ ಶಿವರಾತ್ರಿಯ ಮಾಡಿಸೆ[ನೇಂ] ಜೋ!
ಅನು ಎನ್ನಂತೆ, ಮನ ಮನವಂತೆ,
ಕೂಡಲ ಸಂಗಮದೇವ: ತಾನು ತನ್ನಂತೆ! ॥ ೩೦ ॥

೩೧

ಒಳ್ಳೆಯ ಮೈಲಾರನವೊಳಗೆನ್ನ ಸಣಬು:
ಹೊರಗಣ ಬಣ್ಣ ಕರಲೇಸಾಯಿತ್ತಯ್ಯಾ!
ಶ್ವಾನನ ನಿದ್ರೆ: ಆಜ್ಞಾನಿಯ ತಪನಂತೆ
ಆಯಿತ್ತಯ್ಯಾ ಎನ್ನ ಮಱಿ, ಕೂಡಲ ಸಂಗಮದೇವಾ ॥ ೩೧ ॥

೩೨

ಲೋಕೋಪಚಾರಕ್ಕೆ ಮಜ್ಜನಕ್ಕೀಪೆನೆಯ್ಯಾ :
ಮನದ ತಾಮಸ ಬಿಡದು, ನುನದ ಕಪಟ ಬಿಡದಯ್ಯಾ;
'ಶಿವರಕ್ಷೆ'ಂಬುದು ಒಪ್ಪಚಿಯಳವಡದಯ್ಯಾ !
ಎನ್ನ ಮನದಲ್ಲಿ ಎರಡುಳ್ಳನ್ನಕ್ಕ
ಕೂಡಲ ಸಂಗಮದೇವರೆಂತೊಲಿವ? ॥ ೨೮೧ ॥

೩೩

ಮಜ್ಜನಕ್ಕೀಪೆನೆಂಬುದಾನು - ಸಜ್ಜನರನ್ನೀಕ್ಷಿಯ್ಯಾ !
ಎನ್ನಲ್ಲಿ(ನನಜಸುವೆ? ನಂಯಮಿ ನಂಬಿನ ಪಂಬಕ ನಾನಯ್ಯಾ,
ಪ್ರಾವ ತೋಟ್ಟಿ ಪಟಿಯ ಬ್ಲೆಮನಂತೆ,
ಕೂಡಲ ಸಂಗನುಪೇವಾ! ॥ ೨೮೨ ॥

೩೪

ಕೆಲಕ್ಕೆ ರುದ್ರನಾವೆನ್ನಲೆ, ಎನ್ನ ಮನಕ್ಕೆ ರುದ್ರನಾಗನೆಂದಯ್ಯಾ?
ಕೈಯ ಮುಟ್ಟಿ ಪೂಜಿಸುವರೆ, ಎನ್ನ ಕೈ ರುದ್ರವನ್ಧರಿಸಿದಯ್ಯಾ;
ಮನಮುಟ್ಟಿ ಪೂಜಿಸುವಂ, ಎನ್ನ ಮನ ರುದ್ರವನ್ಧರಿಸಿದಯ್ಯಾ.
ಭಾವ ರುದ್ರವಾಮೊಡೆ ಕೂಡಲ ಸಂಗಯ್ಯನು
'ಇತ್ತ ಬಾ' ಎಂದೆತ್ತಿಕೊಳ್ಳನೇ(ಕಯ್ಯಾ? ॥ ೨೮೩ ॥

೩೫

ಕುಲಮದಕ್ಕೆ ಹೋರಿ ಜಂಗಮ ಭೇದವ ಮಾಡುವೆ: ಫಲವೇನು?
ನಿತ್ಯಲಿಂಗಾರ್ಚನೆ ಪಾತ್ರಯುಚ್ಛಿಷ್ಟ!
ಫಲಮದಕ್ಕೆ ಹೋರಿ ಲಿಂಗಭೇದವ ಮಾಡುವೆ:
ಜಂಗುಳಿಯ ಕಾವ ಗೋವ ಹಲವು ಹಸುವ ನಿವಾಡಿಸುವಂತೆ !
ತನು ಭಕ್ತನಾಯಿತ್ತು: ಎನ್ನ ಮನ ಭವಿ, ಕೂಡಲ ಸಂಗನುಪೇವಾ
॥ ೨೮೪ ॥

೩೬

ಲಿಂಗದಲ್ಲಿ ಕಠಿಣವುಂಟೆ? ಜಂಗಮದಲ್ಲಿ ಕುಲವುಂಟೆ?
ಪ್ರಸಾದದಲ್ಲಿ ಅನುರುಚಿಯುಂಟೆ?
ಈ ತ್ರಿವಿಧದಲ್ಲಿ ಭಾವಭೇದವನರಿಸುವೆನು—
ಕೂಡಲ ಸಂಗಮದೇವಾ, ಧಾರೆವಟ್ಟಲೆನ್ನ ಭಕ್ತಿ ! ॥ ೨೮೫ ॥

೩೭

ಲೌಕಿಕರ ಕಂಡು ಆಡುವೆ, ಹಾಡುವೆ;
ತಾರ್ಕಿಕರ ಕಂಡು ಆಡುವೆ ಹಾಡುವೆ:
ಸಪಜಗುಣವೆನ್ನಲಿಲ್ಲಯ್ಯಾ;
ನಿಜಭಕ್ತಿಯೆನಗಿಲ್ಲ, ತಂದೇ.
ಏಕೋಭಾವ ಎನಗುಳ್ಳರೆ, ಏಕೆ ನೀ ಕರುಣಿಸೆ,
ಕೂಡಲ ಸಂಗಮದೇವಾ? ॥ ೨೮೬ ॥

೩೮

ಓತಿ ಬೇಲಿವರಿದಂತೆ ಎನ್ನ ಮನವಯ್ಯಾ,
ಪೊತ್ತಿಗೊಂದು ಪರಿಯಪ್ಪ ಗೋಸುಂಬೆಯಂತೆನ್ನ ಮನವು:
ಬಾವುಲ ಬಾಳುವೆಯಂತೆನ್ನ ಮನವು !
ನಡುವಿರುಳೊಳೆದ್ದ ಕುರುಡಂಗೆ ಅಗಸೆಯಲ್ಲಿ ಬೆಳಗಾದಂತೆ—
ನಾನಿಲ್ಲದ ಭಕ್ತಿಯ ಬಯಸಿದರುಂಟೆ,
ಕೂಡಲ ಸಂಗನುದೇವಾ? ॥ ೨೮೭ ॥

೩೯

ಸತ್ಯಸಂಬಂಧ ಸಯವಾದ ಭೃತ್ಯಾಚಾರವೆನಗಿಲ್ಲವಯ್ಯಾ;
ಅನುದಿನ ನಿಮ್ಮ ನೆನೆಯಲು ಭಕ್ತಿಯಿಲ್ಲವಯ್ಯಾ—
ಎನಗೆ ಕೂಡಲ ಸಂಗಮದೇವಾ, ಕರುಣೀ, ಕೃಪೆಯ ಮಾಡಯ್ಯಾ.
॥ ೨೮೮ ॥

೪೦

ಶಬ್ದಸಂಭಾಷಣೆಯ ನುಡಿಯ ವರ್ತಿಸಿ ನುಡಿಸೆ:
ತೊಡಹದ ಬಣ್ಣದ ಕೆಲಸದಂತೆ
ಕಡಿಹಕ್ಕೆ ಒರೆಗೆ ಬಾರದು, ನೋಡಾ!
ಎನ್ನ ಮನದಲೊಂದು, ಹೃದಯದಲೊಂದು,
ವಚನದಲೊಂದು ನೋಡಾ:
ಕೂಡಲ ಸಂಗಮದೇವಾ,
ಆನು ಭಕ್ತನೆಂಬ ಹುಸಿಯ ಮುಸಕವನೇನ ಬಣ್ಣಿಸುವೆನಯ್ಯಾ?
॥ ೨೮೯ ॥

೪೧

ಹಾಲ ತೊಱೆಗೆ ಬೆಲ್ಲದ ಕೆಸಱು, ಸಕ್ಕರೆಯ ಮಳಲು,
ತವರಾಜ್ಯದ ನೊರೆ ತೆರೆಯಂತೆ,
(ಆದ್ಯರ ವಚನವಿರಲು,
ಬೇಱೆ ಬಾವಿಯ ತೋಡಿ ಉಪ್ಪನೀರನುಂಬವನ ವಿಧಿಯಂತೆ
ಆಯಿತ್ತೆನ್ನ ಮತಿ, ಕೂಡಲ ಸಂಗಮದೇವಾ. ॥ ೨೯೦ ॥

೪೨

ಜನ್ಮ ಹುಲ್ಲೆಂಬೆನೆ: ಜನ್ಮವ ಬಿಡಲಹೆನು;
ಭಕ್ತರೊಲವ ಪಡೆವೆನೆ: ಭಕ್ತಿಯ ಪಥವನಱಿವೆನು;
ಲಿಂಗವೆಂದು ಬಲ್ಲೆನೆ: ಜಂಗಮವೆಂದು ಕಾಣ್ಬೆನು:
ನಿಚ್ಚ ನಿಚ್ಚ ಶಿವರಾತ್ರಿಯ ಮಾಡಬಲ್ಲೆನೆ:
ಕೈಲಾಸವ ಕಾಣ ಬಲ್ಲೆನು!
ಎನ್ನಲ್ಲಿ ನಡೆಯಿಲ್ಲವಾಗಿ, ನಾನು ಭಕ್ತನೆಂತಪ್ಪೆನಯ್ಯಾ,
ಕೂಡಲ ಸಂಗಮದೇವಾ? ॥ ೨೯೧ ॥

೪೩

ಉಪುನಿನ ಭಾವದಲ್ಲಿ ಹಡೆವರೆವ್ವ್ರವರು:
ಊಸರವಳ್ಳಿಯಂತೆ ಎನ್ನಿರವು—
ಬಾವುಲ ಬಾಳುವೆಯ ತೆಱನಂತೆ!
ಹೊತ್ತಾಜಿ ಎದ್ದ ಕುರುಡಂಗೆ
ಅಗಸೆಯಲ್ಲಿ ಅಸ್ತಮಾನವಾದಂತೆ;
ಆನು ಭಕ್ತಿಯ ಬಯಸಿವರಹುದೆ
ಕೂಡಲ ಸಂಗಮದೇವಾ? ॥ ೪೨ ॥

೪೪

ಬಿಜಿ ಬಾಳುವೆಗೆ ನಿಮ್ಮ್ಲಲ್ಲಿ—
ಸುಸಿಯ ಹೂಸಿ ನೇಜಿಲ ಹಂಣ ಮಾಱುವಂತೆ--
ಕಾಲ ಸಾಲ ದಾರಿದ್ರ್ಯಕ್ಕಂಜಿ ನಿಮ್ಮ್ ಮಱೆಹೊಕ್ಕೆನಯ್ಯಾ.
ಆವುದು ಸುಸಿಯೆಂಬೆ? ಆವುದು ಕಿಱಿದೆಂಬೆ?
ಇವ ನೀನೇ ಬಲ್ಲೆಯಯ್ಯಾ.
ಕೂಡಲ ಸಂಗಮದೇವಾ, ಆನು ಉಪರಪೋಷಕನಯ್ಯಾ! ॥ ೪೩ ॥

೪೫

ಮೂಗ ಕಂಡ ಕನಸಿನಂತಾಯಿತ್ತೆನ್ನ ಭಕ್ತಿ:
ಗುಣವ ಹೇಳಬಾರದಾರಿಗೆಯೂ; ಕೇಳಲೆಂತೂ ಬಾರದು!
ಎನ್ನ ಹೇಗತನವ ಮಾಣಿಸು, ಕೂಡಲ ಸಂಗಮದೇವಾ. ॥ ೪೪ ॥

೪೬

ಕಾಣಿಯ ಲೋಭ ಕೋಟಿಯ ಲಾಭವ ಕೆಡಿಸಿಮುವ ನಾನಱಿಯೆನಯ್ಯಾ.
ಭಕ್ತಿಯ ಕುಳವ ನಾನಱಿಯದೆ
ಮತಿಗೆಟ್ಟ ಪರಿಯ ನೋಡಯ್ಯಾ.
ಕೂಡಲ ಸಂಗನ ಶರಣರ ಸಂಗದಿಂದಲಱಿವರೆ
ನಾನು ಬದುಕುವೆನಯ್ಯಾ. ॥ ೪೫ ॥

೪೭

ಏನಸೋದಿ, ಏನಕೇಳಿ, ಏನ ಮಾಡಿಯೂ ಫಲವೇನು
ನಿಮ್ಮನರಿಲೆಯದನ್ನಕ್ಕ?
ಶಿವ, ಶಿವ, ಮಹಾದೇವಾ,
ಬಾಳಿಲ್ಲವಳ ಒಲೆಯಂತಾಯಿತ್ತೆನಗೆ,
ಕೂಡಲ ಸಂಗಮದೇವಾ. ॥ ೪೭ ॥

೪೮

ಮುನ್ನೂಜಿನುತ್ತು ದಿನ ಪ್ರೇವವ ಮಾಡಿ,
ಕಳಸೇಜಿ ಕೈಪುಜಿದಂತಾಯಿತ್ತೆನ್ನ ಭಕ್ತಿ!
ಎನಿಸು ಕಾಲ ಲಿಂಗಾರ್ಚನೆಯ ಮಾಡಿ ಏನೆನಯ್ಯಾ
ಮನದಲ್ಲಿ ದೃಢವಿಲ್ಲದನ್ನಕ್ಕ?
ಕೊಡನ ತುಂಬಿದ ಪಾಲ ಕೆಡಹಿ,
ಉಡುಗಲೆನ್ನಳವೆ ಕೂಡಲ ಸಂಗಮದೇವಾ? ॥ ೪೮ ॥

೪೯

ಶಬ್ದಸುಖಕ್ಕೆ ಮುಚ್ಚಿ, ಮಾತಿಂಗೆ ಮಾತನೆ ಕೊಟ್ಟು ಕೆಟ್ಟೆನಯ್ಯಾ;
ಅನುಭಾವ ಲಕ್ಷವೆಯಾಗದೆ, ಬೆಬ್ಬನೆ ಬೆಜಿತೆನಯ್ಯಾ!
ಅಮೃತದ ಕೊಡನ ತುಂಬಿ ಒಡೆದು ಹೊಯ್ದು ಅಜಿಸಲುಂಟೆ?
ನಾನೆಂಬ-ಭೃತ್ಯಸಂಬಂಧವೆ ಎನ್ನ ಭಕ್ತಿ:)
ಪ್ರತ್ಯುತ್ತರ ನಾಯಕನರಕ, ಕೂಡಲ ಸಂಗಮದೇವಾ. ॥ ೪೯ ॥

ಅಂಕ ಓಡಿದರೆ ತೆತ್ತಿಗಂಗೆ ಭಂಗವಯ್ಯಾ:
ಕಾದಿ ಗೆಲಿಸಯ್ಯಾ ಎನ್ನನು—
ಕಾದಿ ಗೆಲಿಸಯ್ಯಾ, ಕೂಡಲ ಸಂಗಮದೇವಯ್ಯಾ.
ಎನ್ನ ತನು-ಮನ-ಧನದಲ್ಲಿ ವಂಚನೆಯಿಲ್ಲದೆ. ॥ ೫೦ ॥

೫೧

ಹೇಡಿ ಬಿರುದ ಕಟ್ಟಿದಂತಾಯಿತೆನ್ನ ವೇಷ:
ಕಾದಬೇಕು, ಕಾದುವರೆ ಮನವಿಲ್ಲ—
ಆಗಳೆ ಹೋಯಿತ್ತು ಬಿರುದು:
ಹಗರಣ ನಗೆಗೆಡೆಯಾಯಿತ್ತು !
ಮಾಲಿಂಕ ಜಂಗಮ ಮನೆಗೆ ಬಂದರೆ,
ಕಾಣದಂತಡ್ಡಮುಸುಡಿಟ್ಟಡೆ,
ಕೂಡಲ ಸಂಗಮದೇವ, ಜಾಣ, ಮೂಗ ಹಲುದೋಜಿ ಕೊಯ್ವ! ॥ ೩೦೦ ॥

೫೨

ಅಚ್ಚ ಶರಣರು ನಿಮ್ಮ ನಿಚ್ಚ ನಿಚ್ಚ ನೆನೆವರು:
ಬಚ್ಚಬಜಾಯ ಮಾತನಾಡುವೆನು !
ಒಪ್ಪಚ್ಚಿ ಅರೆಭಕ್ತಿ ನೆನೆಯಲೀಯದು ನಿಮ್ಮ;
ಮೆಚ್ಚರು ನಿಮ್ಮ ಶರಣರು ಎನ್ನ, ಕೂಡಲ ಸಂಗಮದೇವಾ. ॥ ೩೦೧ ॥

೫೩

ಆಡುವ್ರದಳವಟ್ಟಿತ್ತು, ಹಾಡುವುದಳವಟ್ಟಿತ್ತು;
ಅರ್ಚನೆಯಳವಟ್ಟಿತ್ತು, ಪೂಜನೆಯಳವಟ್ಟಿತ್ತು;
ನಿತ್ಯಲಿಂಗಾರ್ಚನೆ ಮುನ್ನವೆಯಳವಟ್ಟಿತ್ತು:
ಕೂಡಲ ಸಂಗನ ಶರಣರು ಬಂದರೆ
'ಏಗುವುದು, ಎ ಬೆಸನೆ ?'ಂಬುದು ಒಪ್ಪಚಿಯಳವಡದು ! ॥ ೩೦೨ ॥

೫೪

ಒಡೆಯರಿಗೆ ಒಡವೆಯನೊಪ್ಪಿಸಲಾಜದೆ
ಮೋಜಿಯಿಡುವ ಮನವನಾನೇನೆಂಬೆ ?
ನೆತ್ತಿಯಲ್ಲಿ ಆಲಗ ತಿರುಹುವಂತಪ್ಪ
ವೇದನೆಯಹುದೆನಗೆ !

ಕೊಯಿದ ಮೂಗಿಂಗೆ ಕನ್ನಡಿಯ ತೋಱುವಂತಪ್ಪ
ವೇದನೆಯಹುದೆನಗೆ!
ಬೆಂದ ಹುಣ್ಣ ಕಂಬಿಯಲ್ಲಿ ಕೀಸುವಂತಪ್ಪ
ವೇದನೆಯಹುದೆನಗೆ!
ಕೂಡಲ ಸಂಗಮದೇವ ಮಾಡಿ ನೋಡುವ ಹಗರಣವ
ನಾ ಮಾಡಿಹೆನೆಂದರೆ ಮನಕ್ಕೆ ಮನ ನಾಚದೆ, ಅಯ್ಯಾ?
॥ ೩೦೩ ॥

೫೫

ಹೊಱಸಿಕೊಂಡ ಹೋದ ನಾಯಿ: ಮೊಲನೇನ ಹಿಡಿಯುವುದಯ್ಯಾ?
ಇಱಿಯದ ವೀರ: ಇಲ್ಲದ ಸೊಬಗುವ ಹೇಳುವುದೇ ನಾಚಿಕೆ!
ಆನು ಭಕ್ತನೆಂತಪ್ಪೆನಯ್ಯಾ, ಕೂಡಲ ಸಂಗಮದೇವಾ? ॥ ೩೦೪ ॥

೫೬

ಎನ್ನ ಭಕ್ತನೆಂದೆಂಬರು:
ಎನ್ನ ಹೊಱಪಂಚೆ ಒಳಬೊಳ್ಳಿತನವನಱಿಯರಾಗಿ!
ಎನ್ನ ಮಾನಾಪಮಾನ ಶರಣರಲ್ಲಿ; ಜಾತಿ-ವಿಜಾತಿಯು ಶರಣರಲ್ಲಿ;
ತನು-ಮನ-ಧನವೂ ಶರಣರಲ್ಲಿ.
ವಂಚನೆಯುಳ್ಳ ಡಂಭಕ ನಾನು:
ತಲೆಯೊಡೆಯಂಗೆ ಕಣ್ಣ ಬೈಚಿಡುವೆ,
ಕೂಡಲ ಸಂಗಮದೇವಾ. ॥ ೩೦೫ ॥

೫೭

ನೋಡುವರುಳ್ಳರೆ ಮಾಡುವೆ ದೇಹಾರವ:
ಎನಗೊಂದು ನಿಜವಿಲ್ಲ: ಎನಗೊಂದು ನಿಷ್ಪತ್ತಿಯಿಲ್ಲ!
ಲಿಂಗವ ತೋಱು ಉದರವ ಹೊರೆವ
ಭಂಗಗಾಱಿ ನಾನು, ಕೂಡಲ ಸಂಗಮದೇವಾ! ॥ ೩೦೬ ॥

೫೮

ಭಕ್ತಿಯೆಳ್ಳನಿತಿಲ್ಲ: ಯುಕ್ತಿ ಶೂನ್ಯನಯ್ಯಾ ನಾನು:
ತನುವಂಚಕ, ಮನವಂಚಕ, ಧನವಂಚಕ, ನಾನಯ್ಯಾ.
ಕೂಡಲ ಸಂಗಮದೇವಾ, ಒಳಲೊಟ್ಟಿಯೆನ್ನ ಮಾತು ! ॥ ೩೦೭ ॥

೫೯

ತನು ನಿಮ್ಮದೆಂಬೆ, ಮನ ನಿಮ್ಮದೆಂಬೆ, ಧನ ನಿಮ್ಮದೆಂಬೆ:
ಮತ್ತೆಯೂ ವಂಚನೆ ಮಾಣದಯ್ಯಾ.
ಲಿಂಗ ಜಂಗಮವೆಂಬೆ, ಜಂಗಮ ಲಿಂಗವೆಂಬೆ:
ಮತ್ತೆಯೂ ವಂಚನೆ ಮಾಣದಯ್ಯಾ.
ಒಡಲೊಡವೆ ಹಡೆದರ್ಥ ನಿಮ್ಮವೆಂದಱಿಯದೆ
ಕೆಮ್ಮನೆ ಕೆಟ್ಟೆ, ಕೂಡಲ ಸಂಗಮದೇವಾ ! ॥ ೩೦೮ ॥

೬೦

ಊರ ಸೀಱೆಗೆ ಅಸಗ ತಡಬಡಿಹಡೆದಂತೆ
ಹೊನ್ನೆನ್ನದು, ಹೆಣ್ಣೆನ್ನದು, ಮಣ್ಣೆನ್ನದೆಂದು ಮರುಳಾದೆ:
ನಿಮ್ಮನಱಿಯದ ಕಾರಣ ಕೆಮ್ಮನೆ ಕೆಟ್ಟೆ,
ಕೂಡಲ ಸಂಗಮದೇವಾ ! ॥ ೩೦೯ ॥

೬೧

ಅರ್ಥ ಪ್ರಾಣಾಭಿಮಾನ ನಿಮ್ಮದೆಂಬೆ:
ಮತ್ತೆಯೂ ಆಸೆ ಬಿಡದನ್ನಕ್ಕ ಭಕ್ತನೆಂತಪ್ಪೆನಯ್ಯಾ ?
ಶರಣನೆಂತೆನಿಸುವೆನಯ್ಯಾ, ಆನು ಲಿಂಗೈಕ್ಯನೆಂತೆನಿಸುವೆನಯ್ಯಾ ?
ಕೂಡಲ ಸಂಗನ ಶರಣರ ಸಕಲರತಿಗೆ ಸಲ್ಲದನ್ನಕ್ಕ ? ॥ ೩೧೦ ॥

೬೨

ಆನು ನಿಮ್ಮ ಭಕ್ತಿಯಲ್ಲಿ ದರದುರನೆಂಬೆ:
ದಿಟಕ್ಕೆ ಬಂದರೆ ಕಾಣದಂತಡ್ಡಮೊಗವಿಕ್ಕುವೆ---
ಗರುಡಂಗೆ ಘಟಸರ್ಪನ ತೋಱುವಂತೆ !
ಶಿವಶರಣರೆಂದರೆ ಕಿವಿಗೇಳದಂತಿಹೆನು;
ಮನಕ್ಕೆ ಮನವೇ ಸಾಕ್ಷಿಯಯ್ಯಾ, ಕೂಡಲ ಸಂಗಮದೇವಾ.
॥ ೩೧೧ ॥

೬೩

ಆದ್ಯರ ವಚನ ಪರುಷವೆಂದೆಂಬೆನು:
ಆ ಪರುಷ ಎನಗೆಂತು ದೊರೆಕೊಂಬುದಯ್ಯಾ?
ತನು-ಮನ-ಧನವ ವಿವರಿಸಿ ನುಡಿವೆ:
ಸೋಂಕಿಂಗೆ ಸೈರಿಸಲಾಜಿ!
ಹೊಲೆಯರ ಮನ್ನೆಯಂತೆ ನುಡಿವ ಡಂಭಿಕನಾನಯ್ಯಾ,
ಕೂಡಲ ಸಂಗಮದೇವಾ! ॥ ೩೧೨ ॥

೬೪

ಕಾಂಚನವೆಂಬ ನಾಯ ನಚ್ಚಿ, ನಿಮ್ಮನಾನು ಮಱೆದೆನಯ್ಯಾ,
ಕಾಂಚನಕ್ಕೆ ಬೇಳೆಯಲ್ಲದೆ, ಲಿಂಗಕ್ಕೆ ಬೇಳೆಯಿಲ್ಲಾ!
ಪಡಿಕೆಗೆ ಮೆಚ್ಚಿವ ಸೊಣಗ
ಅಮೃತದ ಸವಿಯ ಬಲ್ಲುದೆ, ಕೂಡಲ ಸಂಗಮದೇವಾ? ॥ ೩೧೩ ॥

೬೫

ಒಲುವ ಗಂಡನೊಮ್ಮೆ ಒಲ್ಲದಿಪ್ಪ, ಕಂಡಯ್ಯಾ!
ತಪ್ಪೆನ್ನದು, ತಪ್ಪೆನ್ನದು:
ತನು-ಮನ-ಧನದಲ್ಲಿ ನೂಟ-ಕೂಟವೆಂದಱಿಯದ
ತಪ್ಪೆನ್ನದು, ತಪ್ಪೆನ್ನದು!
ಕಡೆಯಿಲ್ಲದ ಯುಸಿರೆನ್ನದು! ಕೂಡಲ ಸಂಗಮದೇವಾ. ॥ ೩೧೪ ॥

೬೬

ಕಾಣುತ್ತ ಕಡೆಗಣಿಸಿ, ಕೆಡಿಸಿಯಜಿಸುವ
ಮತಿಭ್ರಷ್ಟ ನಾನು, ಲಿಂಗಯ್ಯಾ!
ತನುಲೋಭ, ಮನಲೋಭ, ಧನಲೋಭ
ಮುಂದುಗೆಡಿಸಿ ಕಾಡಿಹುವೆನ್ನಾ.
ತನು-ಮನ-ಧನವ ನಿವೇದಿಸಿದವರ ಮನೆಯ ಮಗನಾನಯ್ಯಾ,
ಕೂಡಲ ಸಂಗಮದೇವಾ. ॥ ೩೧೫ ॥

೬೭

ಹಗಹದಲ್ಲಿ ಬಿದ್ದವರ ಮೇಲೆ ಒರಳ ನೂಂಕುವರೆ?
ಕೋಳದ ಮೇಲೆ ಸಂಕಲೆಯನಿಕ್ಕುವರೆ?
ಬೆಂದ ಹುಣ್ಣಾ ಕಂಬಿಯಲ್ಲಿ ಕೀಸುವರೆ?
ಕೂಡಲ ಸಂಗಯ್ಯನ ಕಾಡವ ಕಾಟ
ಸಿರಿಯಾಳಂಗಲ್ಲದೆ ಸೈರಿಸಬಹುದೇ? ॥ ೩೧೬ ॥

೬೮

ಸೊಲಬಲ್ಲರವರು: ಗೆಲಲಱಿಯರಯ್ಯಾ;
ತನು-ಮನ-ಧನದಲ್ಲಿ ವಂಚನೆಯನಱಿಯರಯ್ಯಾ,
ದಾಸ-ಸಿರಿಯಾಳನವರು.
ಕೂಡಲ ಸಂಗನ ಶರಣರು ಉಪಚಾರವನಱಿಯರಯ್ಯಾ ! ॥ ೩೧೭ ॥

೬೯

ಮಾತಿನಲ್ಲಿ ಶ್ರೋತೃಸುಖವ ನುಡಿಯಬಹುದಲ್ಲದೆ,
ಮಾಡುವ ಸತ್‌ಕ್ರಿಯೆಯಿಂದ ಭಕ್ತನೆನಿಸಬಾರದು;
ಅರ್ಥಪ್ರಾಣಾಭಿಮಾನವಾರಿಗೆಯೂ ಸಮನಿಸದು
ಲಿಂಗಮುಖದಲ್ಲುದಯವಾದ ಶರಣಂಗಲ್ಲದೆ, ಅಯ್ಯಾ.
ಕೂಡಲ ಸಂಗನ ಶರಣರ ಭಕ್ತಿಭಾಂಡಾರವು
ಎನಗೆಂತು ಸಾಧ್ಯವಪ್ಪುದು? ಹೇಳೆನ್ನ ತಂದೇ. ॥ ೩೧೮ ॥

೭೦

ಬಾಣ-ಮಯೂರನಂತೆ ಬಣ್ಣಿಸ ಬಲ್ಲೆನೆ?
ಸಿರಿಯಾಳನಂತೆ ಉಣಲಿಕ್ಕಬಲ್ಲೆನೆ?
ದಾಸಿಮಯ್ಯನಂತೆ ಉಡಕೊಡಬಲ್ಲೆನೆ?
ಉಂಡುಟ್ಟು ಕೊಟ್ಟರೆ ಮುಯ್ಯಿಗೆ ಮುಯ್ಯೆನಿಸಿತ್ತು:
ಎನಗೆ ಕೊಟ್ಟರೆ ಧರ್ಮ! ಕೂಡಲ ಸಂಗಮದೇವಾ. ॥ ೩೧೯ ॥

೭೧

ದಾಸಿದೇವ ತನ್ನ ವಸ್ತ್ರವಸಿತ್ತು ತನಸಿಧಿಯ ಪ್ರಸಾದವ ಪಡೆದ.
ಸಿರಿಯಾಳ ತನ್ನ ಮಗನಸಿತ್ತು ಪ್ರಾಣ-ಪ್ರಸಾದವ ಪಡೆದ.
ಬಲ್ಲಾಳದೇವ ತನ್ನ ವಧುವಸಿತ್ತು ಸಮತಾಪ್ರಸಾದವ ಪಡೆದ.
ಇವರೆಲ್ಲರು ತಮತಮಗೆ ನೂಡಿ ಹಡೆದರು ಸಮ್ಯಕ್‌ಪದವಿಯನು.
ನಾನೇನನೂ ಅಱಿಯದ ಭಕ್ತಿಯ ಬಡವಂಗೆ ಕರುಣಿಸು,
ಕೂಡಲ ಸಂಗಮದೇವಾ. ॥ ೩೨೦ ॥

೭೨

ತ್ರಿವಿಧ ತ್ರಿವಿಧದಲ್ಲಿ ತಪ್ಪಿದ ತಪ್ಪುಕ ನಾನಯ್ಯಾ;
ಒಪ್ಪುಂಗೆ ಕರುಣಿಸಯ್ಯಾ, ಒಪ್ಪುಂಗೆ ಕರುಣಿಸಯ್ಯಾ !
ಇದನಱಿದು ಇನ್ನು ತಪ್ಪಿದೆನಾದರೆ
ನೀ ಮಾಡಿತ್ತೆ ಸಲುವುದು, ಕೂಡಲ ಸಂಗಮದೇವಾ. ॥ ೩೨೧ ॥

೭೩

ಎನ್ನ ತಪ್ಪು ಅನಂತಕೋಟಿ: ನಿಮ್ಮ ಸೈರಣೆಗ ಲೆಕ್ಕವಿಲ್ಲಾ !
ಇನ್ನು ತಪ್ಪಿದೆನಾದರೆ ನಿಮ್ಮ ಪಾದವೇ ದಿಬ್ಯ !
ಕೂಡಲ ಸಂಗಮದೇವಯ್ಯಾ,
ನಿಮ್ಮ ಪ್ರಮಥರ ಮುಂದೆ ಕಿನ್ನರ ಬೊಮ್ಮಣ್ಣನೆ ಸಾಕ್ಷಿ ! ॥ ೩೨೨ ॥

೭೪

ಅಡಿಗಡಿಗೆ ಎನ್ನ ಮನವ ಜಡಿದು ನೋಡದಿರಯ್ಯಾ;
ಬಡವನೆಂದೆನ್ನ ಕಾಡದಿರಯ್ಯಾ:
ಎನಗೆ ಒಡೆಯರುಂಟು ಕೂಡಲ ಸಂಗನ ಶರಣರು. ॥ ೩೨೩ ॥

೭೫

ಭಕ್ತಿವಿಶೇಷವ ಮಾಡುವರೆ ಪತ್ತು ಬೆರಳುಗಳುಂಟು;
ಹಾಸಿ ಮುಡಿವರೆ ತನಗುಂಟು, ತನ್ನ ಪ್ರಮಥರಿಗುಂಟು.
ಮಾರಿತಂದೆಗಳಂತೆ ಎನಗೇಕಪುದಯ್ಯಾ ?
ರತ್ನದ ಸಂಕಲೆಯನಿಕ್ಕಿ ಕಾಡಿಹೆ,
ಕೂಡಲ ಸಂಗಮದೇವಾ, ಶಿವಧೋ ! ಶಿವಧೋ !! ॥ ೩೨೪ ॥

೭೬

ಮನೆ ನೋಡಾ, ಬಡವರು: ಮನ ನೋಡಾ, ಘನ;
ಸೋಂಕಿನಲ್ಲಿ ಸುಖ: ಸರ್ವಾಂಗ ಕಲಿಗಳು;
ಪಸಾರಕ್ಕನುವಿಲ್ಲ: ಬಂದ ಸಾಮಾನಾಳ್ವರಯ್ಯಾ;
ಕೂಡಲ ಸಂಗನ ಶರಣರು ಸ್ವತಂತ್ರರಯ್ಯಾ! ॥ ೭೬ ॥

೭೭

ತತ್ತ್ವವನಱಿದೆನೆಂದು ಮೃತ್ಯುವ ಶರವೊಂದಿನವಯ್ಯಾ.
ನಾನೆತ್ತ ಬಲ್ಲೆ ನಿಮ್ಮ ಶರಣಾಂತಸ್ಥಲವನು?
ನಾನೆತ್ತ ಬಲ್ಲೆ ನಿಮ್ಮ ಶ್ರೀಪಾದವಂದುವನು?
ಸರ್ವಾಪರಾಧಿಯಾನು: ಎನ್ನ ಮನದ ಕೊನೆಯ ಸೂತಕ ಹಿಂಗದು,
ಕೂಡಲ ಸಂಗಮದೇವಾ. ॥ ೭೭ ॥

೭೮

ಆ ಮಿಂಡಲಾಳು ಭೋಜ ಮೇಷ್ಮಲಾಳು:
ಅನು ಸೂಳೆ, ನಮ್ಮಚ್ಚನೂ ಸೂಳೆ!
ಬೆಳ್ಳಿಗೆ ಅವಿನ ಕಱುವೆಂದೊಡೆ ಬಳ್ಳಾಯ ಗೆಲ್ಲುವುದೆ?
ಕೂಡಲ ಸಂಗನ ಶರಣರ ಮುಂದೆ ನಾನು ಬಾಯಿಸಲೆ? ॥ ೭೮ ॥

೭೯

ಅನೆಯು ಆ ದಾರಿಯಲ್ಲಿ ಹೋಯಿತ್ತೆಂಬಡೆ,
ಅಡೂ ಆ ದಾರಿಯಲ್ಲಿ ಹೋಯಿತ್ತೆನ್ನಬಹುದೆ?
ಸಂಗನ ಶರಣರಿಗೆ ಅನು ಸರಿಯಿಂದು ಗಳಿಸಲು ಬಹುದೆ?
ಜಂಗಮಕ್ಕೆ ಮಾಡುವ ಭಿಕ್ತರಿಗೆ ಅನು ಸರಿಯು?
ಹೇಳಾ, ಕೂಡಲ ಸಂಗಮದೇವ. ॥ ೭೯ ॥

೮೦

ಆ ಕರಿಯಾಕೃತಿಯ ಸೂಕರನ ಹೋಲಿಸಿದರೆ
ಆ ಕರಿಯಾಗಲಜ್ಜಿವುದೆ ?
ಭೂನಾಗನಾಕೃತಿಯನು ವ್ಯಾಳೇಂದ್ರನ ಹೋಲಿಸಿದರೆ
ವ್ಯಾಳೇಶನಾಗಲಜ್ಜಿವುದೆ ?
ನಾನು ಭಕ್ತನಾದರೇನಯ್ಯಾ ? ನಮ್ಮ ಕೂಡಲ ಸಂಗಮದೇವನ
ಸದ್‌ಭಕ್ತರ ಹೋಲಲಜ್ಜಿಪೆನೆ ? ॥ ೩೮೯ ॥

೮೧

ಹೋಟನ ವೇಶ್ಯೆ, ಮೂಕಕೂಜಿತಯ ಶೃಂಗಾರ,
ಬೇಟ ಕುರುಡಂಗೆ ನಗೆಗೆಡೆಯಾಯಿತ್ತು !
ನಮ್ಮ ಕೂಡಲ ಸಂಗನ ಶರಣರ ಮುಂದೆ
ಆನು ಭಕ್ತನೆಂಬ ನಾಚಿಕೆ ಸಾಲದೆ ? ॥ ೩೯೦ ॥

೮೨

ಮೂಗಿಲ್ಲದ ಮುಖಕ್ಕೆ ಶೃಂಗಾರವೇ ?
ವಿಕೃತವೇಷಧಾರಿಯಾನು : ಭಂಡನು ! ಲಜ್ಜೆಭಂಡನು !
ಕೂಡಲ ಸಂಗನ ಶರಣರಲ್ಲಿ
ಯಾವ ತೋಟ್ಟು ಪಪಿಯ ಬೇಡುವಂತೆ ! ॥ ೩೯೧ ॥

೮೩

ಮಾಪಿನ ಕಾಯುಯೊಳಗೊಂದು ಬಚ್ಚೆಯ ಕಾಯ ನಾನಯ್ಯಾ:
ಆನು ಭಕ್ತನೆಂತೆಂಬೆ, ನಿಮ್ಮ ಶರಣರ ಮುಂದೆ ನಾಚಿಕೆಯಿಲ್ಲದೆ?
ಕೂಡಲ ಸಂಗನ ಶರಣರ ಮುಂದೆ ನಾನೆಂತು ಭಕ್ತನಪ್ಪೆನಯ್ಯಾ ?
॥ ೩೯೨ ॥

೮೪

ಮರದ ನೆಳಲಲಿದ್ದು ತನ್ನ ನೆಳಲನಜ್ಜಸಬಹುದೆ ?
ನಿಮ್ಮ ಶರಣರ ಮುಂದೆ ನಾನೇತಜ್ಜ ಭಕ್ತನಯ್ಯಾ ?
ನಿಮ್ಮ ಶರಣರ ಮುಂದೆ ನಾನೇತಜ್ಜ ಯುಕ್ತನಯ್ಯಾ ?
ಆನು ಭಕ್ತನೆಂಬ ನುಡಿ ನುಡವೆ, ಕೂಡಲ ಸಂಗಮದೇವಾ ? ॥ ೩೯೩ ॥

೮೫

ಎನ್ನಿಂದ ಕೀಜುಯರಿಲ್ಲ : ಶಿವಭಕ್ತರಿಂದ ಹಿರಿಯರಿಲ್ಲಾ--
ನಿಮ್ಮ ಪಾದ ಸಾಕ್ಷಿ, ಎನ್ನ ಮನ ಸಾಕ್ಷಿ!
ಕೂಡಲ ಸಂಗಮದೇವಾ, ಎನಗಿದೇ ದಿವ್ಯ! ॥ ೩೩೪ ॥

೮೬

ಆನು ಭಕ್ತನಲ್ಲಯ್ಯಾ, ಆನು ವೇಷಧಾರಿಯಯ್ಯಾ ;
ಕಾಟುಗ, ಕೆತ್ತುಗ, ಪ್ರೋಲುಗನೆಂಬುದು ಎನ್ನ ಹೆಸರು !
ಕೂಡಲ ಸಂಗಮದೇವಾ,
ನಿಮ್ಮ ಶರಣರ ಮನೆಯ ಮಗ ನಾನಯ್ಯಾ. ॥ ೩೩೫ ॥

೮೭

ಡಂಬು ದಳುಹು ಎನ್ನದಯ್ಯಾ; ಡಂಬಕನೆಂಬವ ನಾನಯ್ಯಾ,
ನಿಮ್ಮ ನಂಬಿದ ಶರಣರ ಡಿಂಗರಿಗ ನಾನು,
ಕೂಡಲ ಸಂಗಮದೇವಾ. ॥ ೩೩೬ ॥

೮೮

ಚೆನ್ನ-ಚೇರಮರ ಬಂಟನಾನಯ್ಯಾ; ಶಿವಭಕ್ತರ
ಎನ್ನ ಜಾಗುಜೊಲ್ಲಿನೆ ಕಾವ ಗೋವನೆಂಬರು.
ಕೂಡಲ ಸಂಗನ ಶರಣರೊಡೆಯರಾಗಿ
ತಮ್ಮ ತೊತ್ತಿನ ಮಗನೆಂದು ಒಲಿದಂತ ನುಡಿವರು. ॥ ೩೩೭ ॥

೮೯

ಕಾಲಲೊದೆದು ಬಡಿದು ಜಡಿವರಯ್ಯಾ ಭಕ್ತಿಯಯ್ದೆದೆಂದೆನ್ನ.
ಜಜ್ಜುವರಯ್ಯಾ, ನುಡಿವರಯ್ಯಾ,
ಕೂಡಲ ಸಂಗನ ಶರಣರೊಡೆಯರಾಗಿ. ॥ ೩೩೮ ॥

೯೦

ನಡೆವರಯ್ಯಾ ಒಡೆಯರು ತನು-ಮನ-ಧನವ ಮೇಲೆ;
ನುಡಿವರಯ್ಯಾ ಒಂದು ನಿಮಿಷ ಬಾರದಿರ್ದೊಡೆ;
ಜಜ್ಜುವರಯ್ಯಾ ಒಡೆಯರು ಮನಬಂದ ಪರಿಯಲಿ;
ಶಿವ, ಶಿವಾ ! ಅಣೆವರಯ್ಯಾ ಮಂಡೆಯನೂಜು.
ಪ್ರಾಣದೊಡೆಯರಯ್ಯಾ, ಕೂಡಲ ಸಂಗಮದೇವಾ, ನಿಮ್ಮ ಶರಣರು.
॥ ೩೩೯ ॥

೯೦

ಅರ್ಥಪ್ರಾಣಾಭಿಮಾನಕ್ಕೆ ಒಡೆಯರು ಸದ್‌ಭಕ್ತರಲ್ಲದೆ
ಎನಗಾರೂ ಇಲ್ಲವಯ್ಯಾ.
'ಭೃತ್ಯಾಪರಾಧಃ ಸ್ವಾಮಿನೋ ದಂಡಃ'
ಕೂಡಲ ಸಂಗಮದೇವಾ ನೀವೇ ಪ್ರಮಾಣು. ॥ ೩೪೦ ॥

೯೨

ಅರ್ಚಿಸಲಱಿಯೆ, ಪೂಜಿಸಲಱಿಯೆ,
ನಿಚ್ಚ ನಿಚ್ಚ ಶಿವರಾತ್ರಿಯ ನಾ ಮಾಡಲಱಿಯೆ!
ಕಪ್ಪಡಿವೇಷದಿಂದಾನು ಬಂದಾಡಿದೆ, ಕಪ್ಪಡಿವೇಷದಿಂದ!
ಈತನ, ನಿಮ್ಮ ದಾಸರ ದಾಸಿಯ ದಾಸ ನಾನಯ್ಯಾ,
ನಿಮ್ಮ ವೇಷಧಾರಿಯ ಮನೆಯ ಪಂಗುಳ ನಾನಯ್ಯಾ,
ಕೂಡಲ ಸಂಗಮದೇವಾ,
ನಿಮ್ಮ ಲಾಂಛನವ ಧರಿಸಿಹ್ಪ ಉದರಪ್ರೋಷಕ ನಾನಯ್ಯಾ! ॥ ೩೪೧ ॥

೯೩

ಅಪ್ಪನು ಡೋಹಾರ ಕಕ್ಕಯ್ಯನಾಗಿ, ಮುತ್ತಯ್ಯ ಚೆನ್ನಯ್ಯನಾದಲೆ
ಆನು ಬದುಕೆನೆ?
ಮತ್ತಾ ಶ್ವಪಚಯ್ಯನ ಸನ್ನಿಧಿಯಿಂದ
ಭಕ್ತಿಯ ಸದ್‌ಗುಣವ ನಾನಱಿವೆನಯ್ಯಾ.
ಕಷ್ಟಜಾತಿಯ ಜನ್ಮವಲ್ಲಿ ಜನಿಸಿದೆ:
ಎನಗಿದು ವಿಧಿಯೆ! ಕೂಡಲ ಸಂಗಮದೇವಾ? ॥ ೩೪೨ ॥

೯೪

ಉತ್ತಮಕುಲದಲ್ಲಿ ಹುಟ್ಟಿದೆನೆಂಬ
ಕಷ್ಟತನದ ಹೊಱಿಯ ಹೊಱಿಸದಿರಯ್ಯಾ...
ಕಕ್ಕಯ್ಯನೊಕ್ಕುದನಿಕ್ಕ, ನೋಡಯ್ಯಾ;
ದಾಸಯ್ಯ ಶಿವದಾನವನೆಱಿಯ, ನೋಡಯ್ಯಾ;
ಮನ್ನಣೆಯ ಚೆನ್ನಯ್ಯನೆನ್ನುವ ಮನ್ನಿಸ;
ಉನ್ನತ ಮಹಿಮಾ,
ಕೂಡಲ ಸಂಗಮದೇವಾ, ಶಿವಧೋ! ಶಿವಧೋ!! ॥ ೩೪೩ ॥

೯೫

ಸೆಟ್ಟಿಯೆಂದೆಂಬೆನೆ ಸಿರಿಯಾಳನ? ಮಡಿವಾಳನೆಂದೆಂಬೆನೆ ಮಾಚಯ್ಯನ?
ಡೋಹಾರನೆಂದೆಂಬೆನೆ ಕಕ್ಕಯ್ಯನ?
ಮಾದಾರನೆಂದೆಂಬೆನೆ ಜೆನ್ನಯ್ಯನ?
ಅನು ತಾರುವನೆಂದರೆ ಕೂಡಲ ಸಂಗಯ್ಯ ನಗುವನಯ್ಯಾ! ॥೯॥

೯೬

ಜೆನ್ನಯ್ಯನ ಮನೆಯ ದಾಸಿಯ ಮಗನು
ಕಕ್ಕಯ್ಯನ ಮನೆಯ ದಾಸಿಯ ಮಗಳು—
ಇವರಿಬ್ಬರು ಹೊಲವಲಿ ಬೆರಣಿಗೆ ಹೋಗಿ ಸಂಗವ ಮಾಡಿದರು:
ಇವರಿಬ್ಬರಿಗೆ ಹುಟ್ಟಿದ ಮಗ ನಾನು,
ಕೂಡಲ ಸಂಗಮದೇವ ಸಾಕ್ಷಿಯಾಗಿ. ॥೧೦॥

೯೭

ಸೂಳೆಗೆ ಹುಟ್ಟಿದ ಕೂಸಿನಂತೆ
ಅರನಾವಡೆಯೂ 'ಅಯ್ಯಾ, ಅಂಯ್ಯಾ' ಎನಲಾಪ್ಪೆ.
ಜೆನ್ನಯ್ಯನೆನ್ನಯ್ಯನು: ಜೆನ್ನಯ್ಯನ ಮಗ ನಾನು.
ಕೂಡಲ ಸಂಗನ ಮಹಾಮನೆಯೊಳು
ಧರ್ಮಸಂತಾನ ಭಂಡಾರಿ ಬಸವಣ್ಣನು! ॥೧೧॥

೯೮

ಹರನು ಮೂಲಿಗನಾಗಿ, ಪುರಾತರೊಡಗೂಡಿ,
ಬಳಿ ಬಳಿಯಲು ಬಂದ ಮಾದಾರನ ಮಗ ನಾನಯ್ಯಾ,
ಕಳೆದ ಹೊಲೆಯನೆನ್ನಯ್ಯ: ಜಾತಿ ಸೂತಕ!
ಮಾದಾರನ ಮಗ ನಾನಯ್ಯಾ,
ಪನ್ನಗಭೂಷಣ ಕೂಡಲ ಸಂಗಯ್ಯಾ,
ಜೆನ್ನಯ್ಯನೆನ್ನ ಮುತ್ತಯ್ಯನಜ್ಜನಪ್ಪನಯ್ಯಾ!! ॥೧೨॥

೯೯

ಅಪ್ಪನು ನಮ್ಮ ಮಾವರ ಚೆನ್ನಯ್ಯ :
ಬೊಪ್ಪನು ನಮ್ಮ ದೊಡ್ಡರ ಕಕ್ಕಯ್ಯ ;
ಚಿಕ್ಕಯ್ಯನೆಮ್ಮಯ್ಯ, ಕಾಣಿಯಯ್ಯಾ ;
ಅಣ್ಣನು ನಮ್ಮ ಕೆಸ್ಸರ ಬೊಮ್ಮಯ್ಯಾ :
ಎನ್ನನೇತಕ್ಕಟಿಯರಿ, ಕೂಡಲ ಸಂಗಯ್ಯಾ ? ॥ ೩೫ ॥

೧೦೦

ಭಕ್ತಿಯಿಲ್ಲದ ಬಡವ ನಾನಯ್ಯಾ: ಕಕ್ಕಯ್ಯನ ಮನೆಯಲು ಜೀಡಿದೆ;
ಚೆನ್ನಯ್ಯನ ಮನೆಯಲು ಬಡಿದೆ,
ದಾಸಯ್ಯನ ಮನೆಯಲೂ ಜೀಡಿದೆ.
ಎಲ್ಲಾ ಪುರಾತರು ನೆಕೆಂ ಗೈದ್ದಿಗಳುಳ್ಳಿನತೆ
ಎನ್ನ ಪಾತ್ರೆ ತುಂಬಿತ್ತು, ಕೂಡಲ ಸಂಗಮದೇವಾ. ॥ ೩೬ ॥

೧೦೧

ಹಿರಿಯಯ್ಯ ಕ್ಷಪಚಯ್ಯ, ಕಾಣಿಯಯ್ಯ ದೊಡ್ಡಾರ ಕಕ್ಕಯ್ಯ.
ಅಯ್ಯಗಳಯ್ಯನು ನಮ್ಮ ಮಾವಾರ ಚೆನ್ನಯ್ಯನು:
ಕೂಡಲ ಸಂಗಮದೇವಾ,
ನಿಮ್ಮ ಶರಣರೊಳಿರಿಸೆನ್ನ ನಲಿದುವರಾಗಿ. ॥ ೩೭ ॥

೧೦೨

ಎಮ್ಮ ತಾಯಿ ನಿಂಬೆಸ್ವ: ಬೀದನೆಂಬಯಿಂಬಳು ;
ಎಮ್ಮಯ್ಯ ಚೆನ್ನಯ್ಯ: ವಾಯುಜಂಘಣನ ಹೊಲಿಸುವ—
ಎಮಗಾರೂ ಇಲ್ಲೆಸೆಂಬೆಂಬಿರಿ-
ಎಮ್ಮಕ್ಕ ಕಂಚಿಯಲ್ಲಿ ಬಾಣಸವ ಮಾಡುಗಳು;
ಎಮ್ಮಜ್ಜರು ಪಡೆವ ಭಕ್ತಿಯ ನಿಮ್ಮ ಕೈಯಲು ಕೊಂಬೆ, ಕಾಣಾ,
ಕೂಡಲ ಸಂಗಮದೇವಾ ॥ ೩೮ ॥

೧೦೩

ಎನಗಾರೂ ಇಲ್ಲ, ಎನಗಾರೂ ಇಲ್ಲವೆಂಬರು:
ಬಾಣನವ ನಾನು, ಮಯೂರನವ ನಾನು,
ಕಾಳಿದಾಸನವ ನಾನು!
ಕಕ್ಕಯ್ಯ ಹಿರಿಯಯ್ಯ ಚಿಕ್ಕಯ್ಯ ಜೆನ್ನಯ್ಯ
ಎತ್ತಿ ಮುದ್ದಾಡಿ ಸಲಹಿದರೆನ್ನ,
ಕೂಡಲ ಸಂಗಯ್ಯಾ. ॥ ೧೦೩ ॥

೧೦೪

ಅಯ್ಯಾ ನಿಮ್ಮ ವಂಶಾವಳಿಯಲು
ಒಬ್ಬ ತೊತ್ತಿನ ಮಗ ಮಟ್ಟಿದಾತನ ತೊತ್ತಿನ ಮಗ ನಾನಯ್ಯಾ;
ಬಲಿದೊತ್ತು, ಬಳಗದೊತ್ತು, ವಂಶದೊತ್ತು ನಾನಯ್ಯಾ!
ಕೂಡಲ ಸಂಗಮದೇವಾ,
ನಿಮ್ಮ ಒಡೆತನಕ್ಕೆ ಕೇಡಿಲ್ಲವಾಗಿ
ಎನ್ನ ತೊತ್ತುತನಕ್ಕೆ ಕೇಡಿಲ್ಲಾ! ॥ ೧೦೪ ॥

೧೦೫

ಕೈಯೆ ಬೋಧರಿಗೆ, ಮಂಡೆಯ ಮೇಲೆ ಸಿಂಬು:
ಸಿಂಬಕನ ಮನೆಯ ನುಗ ನಾನಯ್ಯಾ;
ಕೂಡಲ ಸಂಗನುದೇನಯ್ಯಾ,
ಮುಂಚಿದ ಕೋಡೀಜು ಬಂದ ತೊತ್ತಿನ ನುಗ ನಾನಯ್ಯಾ. ॥೧೦೫॥

೧೦೬

ಅರಸರ ಮನೆಯಲ್ಲಿ ಅರಸಿಯಾಗಿಪ್ಪವರಂದು:
ಭಕ್ತರ ಮನೆಯಲ್ಲಿ ತೊತ್ತಾಗಿಪ್ಪುದು ಕರಲೇನಯ್ಯಾ:
'ತಾಪೋ ಅಗ್ಗಣಿಯ, ನೀಡೋ ಪತ್ರೆಯ,
ಲಿಂಗಕ್ಕೆ ಜೋನವ ಪಿಡಿಯೋ' ಎಂಬರು:
'ಕೂಡಲ ಸಂಗನ ಮಹಾ ಮನೆಯಲ್ಲಿ
ಒಕ್ಕುದನುಣ್ಣೋ, ತೊತ್ತೇ' ಎಂಬರು. ॥ ೧೦೬ ॥

೧೦೭

ಅನು, ನಿಮ್ಮ ಶರಣರಿಗೆ, ಮಂಡೆಯ ಬೋಳಿಸಿಕೊಂಡು
ಗಂಡುದೊತ್ತಾದೆನಯಾ, ಕೂಡಲ ಸಂಗಮದೇವಾ,
ನಿಮ್ಮ ಶರಣರಿಗೆ. ॥ ೩೫೬ ॥

೧೦೮

ಅನುದಿನ ಮನಮುಟ್ಟಿ ಧನ್ಯನಯ್ಯಾ, ನಮ್ಮಯ್ಯಾ ! ನಮ್ಮಯ್ಯಾ !
ನಿಮ್ಮ ಧರ್ಮದ ಕವಿಲೆಯಾನಯ್ಯಾ !
ಕೂಡಲ ಸಂಗಮದೇವಯ್ಯಾ,
ನಿಮ್ಮ ಶರಣರ ಮನೆಯ ಮಗ ನಾನಯ್ಯಾ ! ॥ ೩೫೭ ॥

೧೦೯

ಕಾಮನ ತೊಡಿದಾತ, ಹೇಮನ ಜಜ್ಜಿದಾತ,
ಭಾನುವಿನ ಉದಯಕ್ಕೆ ಒಳಗಾಗದ ಶರಣನು !
ಆಗಳೂ ನಿಮ್ಮ ನಾಣದೆ ನೆನೆವರ ಮನೆಯಲು
ಶ್ವಾನನಾಗಿರಿಸು, ಮಹಾದಾನಿ, ಕೂಡಲ ಸಂಗಮದೇವಾ. ॥ ೩೫೮ ॥

೧೧೦

ಮೇಲಾಗಲೊಲ್ಲೆನು ಕೀಳಾಗಲಲ್ಲದೆ:
ಕೀಳಂಗಲ್ಲದೆ ಹಯನ ಕಜ್ಜಿವುದೆ ?
ಮೇಲಾಗಿ ನರಕದೊಳೋಲಾಡಲಾಜ್ಞೆನು:
ನಿಮ್ಮ ಶರಣರ ಪಾದಕ್ಕೆ ಕೀಳಾಗಿರಿಸು,
ಮಹಾದಾನಿ ಕೂಡಲ ಸಂಗಮದೇವಾ. ॥ ೩೫೯ ॥

೧೧೧

ಬ್ರಹ್ಮಪದವಿಯನೊಲ್ಲೆ, ವಿಷ್ಣುಪದವಿಯನೊಲ್ಲೆ, ರುದ್ರಪದವಿಯನೊಲ್ಲೆ;
ಮತ್ತಾವ ಪದವಿಯನೊಲ್ಲೆನಯ್ಯಾ !
ಕೂಡಲ ಸಂಗಮದೇವಾ, ನಿಮ್ಮ ಸದ್‌ಭಕ್ತರ
ಪಾದವನಜುದಿಪ್ಪ ಮಹಾಪದವಿಯನೆ ಕರುಣಿಸಯ್ಯಾ. ॥ ೩೬೦ ॥

೧೦೨

ಕಾಗೆ ಬಿಷ್ಟಿಸುವ ಮೊನ್ನೆ ಕಳಸವಪುದಕ್ಕುಂದ
ಒಡೆಯರು ಜೋಗೈಸುವ ಚಮ್ಮಾವುಗೆಯ ಮಾಡಯ್ಯಾ:
ಆಯ್ಯಾ ನಿಮ್ಮ ಶರಣರ ಪಾನಕ್ಕೆ ಚಮ್ಮಾವುಗೆಯ ಮಾಡಯ್ಯಾ!
॥ ಶ್ಲೋಕ ॥ ತಮೋಗುಣಮಲಂಬನಂ ಕೇಚಿತ್ ಕೇಚಿತ್ ಜ್ಞಾನಾವಲಂಬನಂ
ಸಮಂ ತು ಶಿವಭಕ್ತಾನಾಂ ಪಾಮುಕಸ್ಯಾವಲಂಬನಂ
ಕೂಡಲ ಸಂಗಮದೇವಾ,
ನಿಮ್ಮ ನೆರಗೊಡ್ಡಿ ಬೇಡು[ವಿ]ದೊಂದೇ ವರವ ಕರುಣಿಸಯ್ಯಾ.
॥ ೩೬೧ ॥

೧೦೩

ಅವಾನ ಭಾವದಲ್ಲಿ ನೂಡಿ ಕೂಡಿಹೆನೆಂಬರ
ಬಾಗಿಲ ತೋಜಯ್ಯಾ.
ತನುವನೊಪ್ಪಿಸಿದವರ, ಮನವನೊಪ್ಪಿಸಿದವರ, ಧನವನೊಪ್ಪಿಸಿದವರ
ಬಾಗಿಲ ತೋಜಯ್ಯಾ.
ಇವನೆಲ್ಲವನೊಪ್ಪಿಸಿ ಜಂಗಮವೆನ್ನವರೆನ್ನವರೆನ್ನವರೆಂಬವರ
ಕೆರಹ ಹೊತ್ತಿರೆನ್ನನು, ಕೂಡಲ ಸಂಗಮದೇವಾ. ॥ ೩೬೨ ॥

೧೦೪

ಆಯತ, ಸ್ವಾಯತವನುಭಾವವ ನಾನೆತ್ತ ಬಲ್ಲೆನು ?
ಲಿಂಗ-ಜಂಗಮಕ್ಕೆ ಪೂಜಿ ನೀಡುವ
ಉಚ್ಚಷ್ಟ ಶರಣರ ಮನೆಯಲು ಭೃತ್ಯನಾಗಿಪ್ಪೆನಯ್ಯಾ ;
ಇದು ಕಾರಣ: ಕೂಡಲ ಸಂಗನ ಶರಣರಲ್ಲದೆ ಅನ್ಯವನಱಯೆನಾಗಿ.
॥ ೩೬೩ ॥

೧೦೫

ಚಕ್ರೋರ್ವಂಗೆ ಚಂದ್ರಮನ ಬೆಳಗಿನ ಚಿಂತೆ
ಅಂಬುಜಕೆ ಭಾನುವಿನುದಯದ ಚಿಂತೆ
ಭ್ರಮರಂಗೆ ಪರಿಮಳ[ದ] ಬಂದ್ದುಂಬ ಚಿಂತೆ
ಎನಗೆ ನಮ್ಮ ಕೂಡಲ ಸಂಗನದೇವರ ನೆನವುದೆ ಚಿಂತೆ. ॥ ೩೬೪ ॥

೧೧೬

ಹೊಲಬುಗೆಟ್ಟ ಶಿಶು ತನ್ನ ತಾಯ ಬಯಸುವಂತೆ:
ಬಳಿವಪ್ಪಿದ ಪಶು ತನ್ನ ಒಂಡನಜಸುವಂತೆ,
ಬಯಸುತ್ತಿರ್ದೆನಯ್ಯಾ ನಿಮ್ಮ ಶರಣರ ಬರವನು,
ಬಯಸುತ್ತಿರ್ದೆನಯ್ಯಾ ನಿಮ್ಮ ಭಕ್ತರ ಬರವನು.
ದಿನಕರನುದಯಕ್ಕೆ ಕಮಳ ವಿಕಸಿತವಾದಂತೆ
ಎನಗೆ ನಿಮ್ಮ ಶರಣರ ಬರವು, ಕೂಡಲ ಸಂಗಮದೇವಾ. ॥ ೩೬೫ ॥

೧೧೭

ಸೂರ್ಯನುದಯ ತಾವರೆಗೆ ಜೀವಾಳ,
ಚಂದ್ರೋದ್ರಮನುದಯ ನೆಯ್ದಿಲೆಗೆ ಜೀವಾಳ,
ಕೂಪರ ತಾವಿನಲ್ಲಿ ಕೂಟ ಜೀವಾಳ,
ಒಲಿವ ತಾವಿನಲ್ಲಿ ನೋಟ ಜೀವಾಳವಯ್ಯಾ:
ಕೂಡಲ ಸಂಗನ ಶರಣರ ಬರವೆನಗೆ ಪ್ರಾಣ ಜೀವಾಳವಯ್ಯಾ!
॥ ೩೬೬ ॥

೧೧೮

ಜಲವ ತಪ್ಪಿದ ಮತ್ಸ್ಯ ಬದುಕುವುದೇ ಸೋಜಿಗ:
ಗಣತಿಂತಿಣಿಯೊಳಗಿರಿಸೆನ್ನನು, ಲಿಂಗವೇ,
ಶಿವ, ಶಿವಾ, ಕೂಡಲ ಸಂಗನುದೇವಾ,
ಸೆಜ್ಜಗೊಡ್ಡಿ ಬೇಡುವೆನು. ॥ ೩೬೭ ॥

೧೧೯

ಅಯ್ಯಾ, ನಿಮ್ಮ ಮಹಾವ್ರತಿಗಳನಗಲಿ ಬದುಂಕಲಾಜೆನು:
ಶಿವಧ್ಯೋ, ಶಿವಧ್ಯೋ, ಕಂಗಳಶ್ರುಗಳಲ್ಲಿ ಮುಂದುಗಾಣೆನು;
ಲಿಂಗಸಂಗಿಗಳನಗಲಿ ನಾನೆಂತು ಬದುಂಕುವೆ
ಕೂಡಲ ಸಂಗಮದೇವಾ? ॥ ೩೬೮ ॥

೧೨೦

ಜಜ್ಜನೆ ಜರಿದೆನು, ಜಜ್ಜನೆ ಜರಿದೆ, ನೋಡಯ್ಯಾ !
ಬಿಬ್ಬನೆ ಬಿರಿದೆನು, ಬಿಬ್ಬನೆ ಬಿರಿದೆ, ನೋಡಯ್ಯಾ !
ನಾನೊಬ್ಬನೆ ಉಳಿದೆನು, ನಾನೊಬ್ಬನೆ ಉಳಿದೆ,
ಕೂಡಲ ಸಂಗನುದೇವಾ, ನಿಮ್ಮ ಶರಣರನಗಲಿದ ಕಾರಣ! ॥ ೩೬೯ ॥

೧೨೧

ಕಂಡರೆ ಮನೋಹರವಯ್ಯಾ: ಕಾಣದಿದ್ದರೆ ಅವಸ್ಥೆ ! ನೋಡಯ್ಯಾ !
ಹಗಲಿರುಳಹುದು: ಇರುಳು ಹಗಲಹುದು !
ಎಂತಯ್ಯಾ ? ಆಳವಾಡಿ ಕಳೆವೆನು !
ಒಂದು ಜುಗ ಮೇಲೆ ಕೆಡೆದಂತೆ !
ಕೂಡಲ ಸಂಗನ ಶರಣರನಗಲುವ ದಾವತಿಯಿಂದ
ಮುರಣವೇ ಲೇಸು ಕಂಡಯ್ಯಾ. ॥ ೩೭೦ ॥

೧೨೨

ಅಂಗೈ ತಿಂದುವೆನ್ನ, ಕಂಗಳು ಕೆತ್ತಿಹುವಯ್ಯಾ :
ಬಂದಹರಯ್ಯಾ ಪುರಾತರೆನ್ನ ಮನೆಗೆ,
ಬಂದಹರಯ್ಯಾ ಶರಣರೆನ್ನ ಮನೆಗೆ !
ಕಂಡ ಕನಸು ದಿಟವಾಗಿ ಜಂಗಮು ಮನೆಗೆ ಬಂದಡೆ,
ಶಿವಾರ್ಚನೆಯು ಮಾಡಿಸುವೆ,
ಕೂಡಲ ಸಂಗಮದೇವಾ, ನಿಮ್ಮ ಮುಂದೆ. ॥ ೩೭೧ ॥

೧೨೩

ಲಿಂಗವ ಪೂಜಿಸುತ್ತ ಜಂಗಮದ ಮುಖವ ನೋಡುತ್ತಿಪ್ಪ
ಸುಖವ ಕೊಡು, ಕಂಡಾ, ಲಿಂಗವೇ—
ಪರಮಸುಖವ ಕೊಡು, ಕಂಡಾ, ಲಿಂಗವೇ--
ಕೂಡಲ ಸಂಗಮದೇವಾ, ಇದೇ ವರವ ನಿಮ್ಮಲ್ಲಿ ಬೇಡುವೆ. ॥ ೩೭೨ ॥

೧೩೪

ಮನೆದೈವ, ಕುಲದೈವ ಎನಗೆ ನಿಮ್ಮವರಯ್ಯಾ !
ತನು ಮೀಸಲು, ಮನ ಮೀಸಲು, ನಯನ ಮೀಸಲು ಎನ್ನಾ,
ಕೂಡಲ ಸಂಗಮದೇವಾ, ನಿಮ್ಮ ಶರಣರಿಗೆ. ॥ ೩೭೩ ॥

೧೩೫

ಗಿಳಿಯ ಪಂಜರವಿಕ್ಕಿ, ಸೊಡರಿಂಗೆಣ್ಣೆಯನೆಜ್ಜೆಯಮು, ಬತ್ತಿಯನಿಕ್ಕಿ
ಬರವ ಹಾರುತ್ತಿದ್ದೆನಲಗವ್ವಾ.
ತಲೆಗೆಲೆ ಗಿಜಕೆಂದೊಡೆ ಹೊಜಿಗನಾಲಿಸುವ :
ಅಗಲಿದೆನೆಂದೆನ್ನ ಮನ ಧಗಿಲೆಂದಿತ್ತೆಲಗವ್ವಾ !
ಕೂಡಲ ಸಂಗನ ಶರಣರು ಬಂದು, ಬಾಗಿಲ ಮುಂದೆ ನಿಂದು
'ಶಿವಾ' ಎಂದೆನೆ, ಸಂತೋಷಬಟ್ಟನಲಗವ್ವಾ ! ॥ ೩೭೪ ॥

೧೩೬

ತಡವಿಯಲ್ಲೊಬ್ಬ ಕಡುಸೀರಡಿಸಿ,
ಎಡೆಯಲ್ಲಿ ಸೀರಕಂಡಂತಾಯಿತ್ತಯ್ಯಾ !
ಕುರುಡ ಕಣ್ಣ ಪಡೆದಂತ,
ಬಡವ ನಿಧಾನವ ಕಂಡಂತಾಯಿತ್ತಯ್ಯಾ !
ನಮ್ಮ ಕೂಡಲ ಸಂಗನ ಶರಣರ ಬರವೆನ್ನ ಪ್ರಾಣ, ಕಂಡಯ್ಯಾ !
॥ ೩೭೫ ॥

೧೩೭

ಇಂದೆನ್ನ ಮನೆಗೆ ಪ್ರಮಥರು ಬಂದಹರೆಂದು
ಗುಡಿತೋರಣವ ಕಟ್ಟಿ, ಸಡುಸಮ್ಮಾರ್ಜನೆಯ ಮಾಡಿ,
ರಂಗವಾಲಿಯನಿಕ್ಕಿ 'ಉಷ್ಣೆ, ಚಾಂಗು, ಭಲಾ ಎಂಬೆ ;
ತಮ್ಮ ಒಕ್ಕುದನಿಕ್ಕಿ ಸಲಹುವರಾಗಿ,
ಕೂಡಲ ಸಂಗನ ಶರಣರು. ॥ ೩೭೬ ॥

೧೨೮

ಸಾಸವೆಯ ಮೇಲೆ ಸಾಗರವಜ್ಜಿದಂತಾಯಿತ್ತಯ್ಯಾ;
ಆನಂದದಿಂದ ನಲಿನಲಿದಾಡುವೆ,
ಆನಂದದಿಂದ ಕುಣಿಕುಣಿದಾಡುವೆ:
ಕೂಡಲ ಸಂಗನ ಶರಣರು ಬಂದರೆ,
ಉಬ್ಬಿ, ಕೊಬ್ಬಿ, ಪರುಷವಲ್ಲೋಲಾಡುವೆ!

೧೨೯

ಮನ ಮನ ಬೆರಸಿದಲ್ಲಿ ತನು ಕರಗದಿದ್ದರೆ,
ಸೊಂಕಿನಲ್ಲಿ ಪುಳಕಂಗಳು ಹೊಜ್ಜುಹೊಮ್ಮದಿದ್ದರೆ,
ಕಂಡಾಗಳಶ್ರುಜಲಂಗಳು ಸುರಿಯದಿದ್ದರೆ,
ನುಡಿಸಿನಲ್ಲಿ ಗದ್ಗದಂಗಳು ಹೊಜ್ಜುಹೊಮ್ಮದಿದ್ದರೆ—
ಕೂಡಲ ಸಂಗಮದೇವರ ಭಕ್ತಿಗಿನ್ನು ಚಿಹ್ನ,—
ಎನ್ನಲ್ಲಿವಿಜ್ಞವಾಗಿ, ಆನು ಡಂಭಕ ಕಾಣಿರೇ! ॥ ೩೭೮ ॥

೧೩೦

ಅಷ್ಟವಿಧಾರ್ಚನೆ ಷೋಡಶೋಪಚಾರವನು—
ಅರಸಜ್ಜಿಯದ ಬಿಟ್ಟ್ಯ—ಮಾಡುವೆನು!
ಎನ್ನ ತಾಗಿದ ಸುಖವ ಜಂಗಮಕ್ಕರ್ಪಿಸಲಜ್ಜಿಯದ ಉಪಚಾರಿಯಾನು,
ಸ್ಥಾವರಜಂಗಮವಜ್ಜಿಯದ ಪೂಜಕ ನಾನು:
ಮತ್ತೆ ನಾಚದೆ, ಕೂಡಲ ಸಂಗಮದೇವಯ್ಯಾ,
ಜಂಗಮವೆನ್ನ ಪ್ರಾಣಲಿಂಗವೆಂಬೆನು! ॥ ೩೭೯ ॥

೧೩೧

ಆವಿಗೆಯಲೊದಗಿದ ಕರ್ಪಿನಂತೆ,
ಅಮೃತದೊಳಗಿರ್ದ ಸರ್ಪನ ತನುವಿನಂತೆ,
ಇರ್ದೆನಯ್ಯಾ ನಾನು, ಹೊಜ್ಜುಗೆ ನುಣ್ಪಾಗಿ!
ಸಿಂಗಕ್ಕೊಲಿವ ಮದಕರಿಯಂತೆ
ಆನು ಜಂಗಮಕ್ಕೊಲಿದೆನಯ್ಯಾ, ಕೂಡಲ ಸಂಗಮದೇವಾ! ॥೩೮೦॥

೧೩೨

'ನಾವೆರ ಜಂಗಮ ಒಂದೇ'ಯೆಂದು ಇದಿರ ನುಡಿವೆ!
ನಾನೆಡಬಡುತಿಪ್ಪೆ : ಸಹಜನಲ್ಲಯ್ಯಾ!
ಆನು ಸಮ್ಯಕ್ಕನಲ್ಲಯ್ಯಾ!
'ಅನುಭಯಲಿಂಗಸಂಗಿ'ಯೆಂದೆನು :
ಈ ನುಡಿ ಸುಡದಿಹುದೆ, ಕೂಡಲ ಸಂಗಮದೇವಾ? ॥ ೩೮೧ ॥

೧೩೩

ಮುನಿಯನೇಸುಕಾಲ ಬೆಳಗಿದರೆ, ಬೀದಾಗ ಬಲ್ಲುದೆ?
ಕರ್ಮಸ್ಥಿತಿ ಪೆನ್ನ ಬಡನು.
ಅನಂತಕೋಟಿ ಸನ್ಯಾಸವ ಮಾಡಿದರೇನು?
ಸಮಿಷಮುಣಾಸಿನ ಕೆಡಿಸಿತ್ತು!
ನಿಮ್ಮ ನಂಬಿಯೂ ನಂಬದ ದಂಬಕ ನಾನಯ್ಯಾ!
ಕೂಡಲ ಸಂಗಮದೇವಾ. ॥ ೩೮೨ ॥

೧೩೪

ಎಳ್ಳಷ್ಟಿನ ಗಾಣವನಾಡಿದ ಎತ್ತಿನಂತಾಯಿತ್ತೆನ್ನ ಭಕ್ತಿ!
ಉಪ್ಪು ಅಪ್ಪುವಿನಲ್ಲಿ ಅದ್ದಿ ಸೊಲಿದಂತಾಯಿತ್ತೆನ್ನ ಭಕ್ತಿ!
ಕೂಡಲ ಸಂಗಮದೇವಾ, ಆನು ಮಾಡಿದೆನೆಂಬೀ ಕೆಚ್ಚು ಸಾಲದೆ?
॥ ೩೮೩ ॥

೧೩೫

ಅಷ್ಟವಿಧಾರ್ಚನೆ ಷೋಡಶೋಪಚಾರವ
ಮಾಡುವ ಪಮ್ಮಿನಲ್ಲಿ ಬೆಂದೆನಯ್ಯಾ
ಲಿಂಗವೆಂದಡಾಯಿ, ಜಂಗಮವೆಂದಡಾಯಿ, ಪ್ರಸಾದವೆಂದಡಾಯಿ!
ಆನು ಬೆಂದೆನಯ್ಯಾ, ಕೂಡಲ ಸಂಗಮದೇವಾ :
ಆನು ಮಾಡುವುದೆಲ್ಲಾ ಉಪಚಾರವಯ್ಯಾ! ॥ ೩೮೪ ॥

೧೩೬

ಎನ್ನಲ್ಲಿ ಭಕ್ತಿ ಸಾಸವೆಯ ಷಡ್ಭಾಗದನಿತಿಲ್ಲ :
ಎನ್ನ ಭಕ್ತನೆಂಬರು, ಎನ್ನ ಸಮಾಯಾಚಾರಿಯೆಂಬರು !
ನಾನೇನು ಪಾಪವ ಮಾಡಿದೆನೊ :
ಬೆಳಿಯದ ಮುನ್ನವೆ ಕೊಯ್ವರೆ ? ಹೇಳಾ, ಅಯ್ಯಾ !
ಇರಿಯದ ವೀರ ! ಇಲ್ಲದ ಸೊಬಗವ
ಎಲ್ಲಾ ಒಡೆಯರು ಏಜ್ಞಾಸಿ ನುಡಿವರು !
ಎನಗಿದು ವಿಧಿಯೆ ಕೂಡಲ ಸಂಗಮದೇವಾ ? ॥ ೩೮೫ ॥

೧೩೭

ಎನ್ನವರೊಲಿದು ಹೊನ್ನ ಶೂಲದಲ್ಲಿಕ್ಕಿದರೆನ್ನ ಹೊಗಳಿ, ಹೊಗಳಿ !
ಎನ್ನ ಹೊಗಳತೆ ಎನ್ನನಿಮ್ಮೆಯ್ಗೊಂಡಿತ್ತಲ್ಲಾ !
ಅಯ್ಯೊ, ನಿಮ್ಮ ಮನ್ನಣೆಯೇ ಮಸದಲಗಾಗಿ ತಾಗಿತ್ತಲ್ಲಾ !
ಅಯ್ಯೋ ! ನೊಂದೆನು, ಸೈರಿಸಲಾಜೆನು:
ಕೂಡಲ ಸಂಗಮದೇವಾ, ನೀನೆನಗೊಳ್ಳಿದನಾದರೆ,
ಎನ್ನ ಹೊಗಳತೆಗಡ್ಡ ಬಾರಾ, ಥಮ್ರೀ ! ॥ ೩೮೬ ॥

೧೩೮

ಎನ್ನವರೆನಗೊಲಿದು ಹೊನ್ನ ಶೂಲವನಿಕ್ಕಿದರಯ್ಯಾ !
ಅಹಂಕಾರಪೂರಾಯಘಾಯದಲ್ಲಿ
ಆನೆಂತು ಬದುಕುವೆನೆಂತು ಜೀವಿಸುವೆ ?
ಜಂಗಮವಾಗಿ ಬಂದು ಜಜ್ಜಿದು ಶೂಲವನಿಳುಹಿ
ಪ್ರಸಾದದ ಮದ್ದನಿಕ್ಕಿ, ಸಲಹು,
ಕೂಡಲ ಸಂಗಮದೇವಾ. ॥ ೩೮೭ ॥

೧೫೯

ಎಡದ ಕೈಯಲು ಹಾಲ ಬಟ್ಟಲು, ಬಲದ ಕೈಯಲ್ಲಿ ಓಜುಗಟ್ಟುಗೆ:
ಆವಾಗ ಬಂದಾನೋ, ನಮ್ಮಯ್ಯ,
ಬಡಿದು ಹಾಲ ಕುಡಿಸುವ ತಂದೆ ?

ದಂಡಕ್ಷೀರದ್ವಯ ಹಸ್ತಂ । ಜಂಗಮಂ ಭಕ್ತಿಮಂದಿರಂ
ಅತಿಭಕ್ತಿಲಿಂಗಸಂತುಷ್ಟಂ । ಅಪಹಾಸ್ಯಂ ಯಮದಂಡನಂ

ಎಂದುದಾಗಿ, ಕೂಡಲ ಸಂಗಮದೇವಯ್ಯ, ತಾನೇ,
ಭಕ್ತಿಪಥವ ತೋಱುವ ತಂದೆ ! ॥ ೩೮೪ ॥

೧೬೦

ಎನ್ನ ಆಪತ್ತು, ಸುಖ-ದುಃಖವನಿನ್ನಾರಿಗೆ ಹೇಳುವೆ ?
ಶರಣಸ್ಥಳದವರಿಗೆ ಹೇಳಿದರೆ ಮಚ್ಚರ !
ಸವತಿ ಸಕ್ಕರೆ—ಬೇವು ಬೆಲ್ಲ ಉಂಟೆ ?
ಇನ್ನಾರಿಗೆ ಹೇಳುವೆ ?
ಕೂಡಲ ಸಂಗಮದೇವಾ, ಜಂಗಮವಾಗಿ ಬಂದು
ಎನ್ನ ಮನದ ಸೂತಕವ ಕಳೆಯಾ. ॥ ೩೮೫ ॥

೧೬೧

ನಾನಾಸ್ಥಾನಂಗಳಲ್ಲಿ ಬಂದು ಕುಳ್ಳಿರ್ದುದು ತೆರಳುವುದೆ, ಅಯ್ಯಾ :
ಉಭಯಕುಳಕ್ಕಲ್ಲದೆ ತೆರಳದು.
ಬೀದಿಯಲ್ಲಿ ಬಿದ್ದ ಶಿಶುವನು
ಹೆತ್ತ ತಾಯಿ ಹತ್ತರ ಬಂದು ಎತ್ತುವಂತೆ !
ಎನ್ನನಾಱು ಜನ್ಮಕ್ಕೆ ತಂದು ಅಘೋರನರಕದಲ್ಲಿಕ್ಕಿದುದ ನಾ ಬಲ್ಲೆ :
ಕೂಡಲ ಸಂಗಮದೇವಾ ನಿಮ್ಮ ಹಂಗೇನು ? ಹಱುಮೆಯೇನು ?
ಆನುಭಯ ಲಿಂಗಜಂಗಮದ ಮಱೆಹೊಕ್ಕು ಬದುಕಿದೆನು. ॥ ೩೮೬ ॥

೧೬೨

ಅಯ್ಯಾ, ನಿಮ್ಮ ದೇವರೆಂದು ನಂಬಿ ಪೂಜಿಸಲಾಗದಯ್ಯಾ :
ಮೀನಜ, ರೋಮಜ ಮಹಾಮುನಿಗಳ

ಲಯವ ಮಾಡಿದುದ ನಾ ಬಲ್ಲೆನಾಗಿ.
ಅಯ್ಯಾ, ನಿಮ್ಮ ದೇವರೆಂದು ನಂಬಿ ಪೂಜಿಸಲಾಗದಯ್ಯಾ :
ನವಕೋಟಿ ಬ್ರಹ್ಮರಿಗೆ
ಪ್ರಳಯವ ಮಾಡುವದ ನಾ ಬಲ್ಲೆನಾಗಿ.
ಅಯ್ಯಾ, ನಿಮ್ಮ ದೇವರೆಂದು ನಂಬಿ ಪೂಜಿಸಲಾಗದಯ್ಯಾ :
ದಶಕೋಟಿ ನಾರಾಯಣರಿಗೆ
ಮರಣವ ಮಾಡುವುದ ನಾ ಬಲ್ಲೆನಾಗಿ.
ಅಯ್ಯಾ, ನಿಮ್ಮ ದೇವರೆಂದು ನಂಬಿ ಪೂಜಿಸಲಾಗದಯ್ಯಾ :
ಅನಂತಕೋಟಿ ರುದ್ರರಿಗೆ
ಲಯವ ಮಾಡುವದ ನಾ ಬಲ್ಲೆನಾಗಿ.
ಅಯ್ಯಾ, ನಿಮ್ಮ ದೇವರೆಂದು ನಂಬಿ ಪೂಜಿಸಲಾಗದಯ್ಯಾ !
ಎನ್ನನೇಳೇಳು ಭವಕ್ಕೆ ತಂದಲ್ಲಿ
ಅನುಭಯ ಲಿಂಗಜಂಗಮದ ಮುಖಹೊಕ್ಕು
ಭವಂ ನಾಸ್ತಿಯಾಗಿ ಬದುಕಿದೆನಯ್ಯಾ,
ಕೂಡಲ ಸಂಗಮದೇವಾ. ॥ ೩೯೧ ॥

೧೪೩

ಲಿಂಗದರುಶನ ಕರಮುಟ್ಟ ಜಂಗಮದರುಶನ ಶಿರಮುಟ್ಟ
ಆವುದು ಘನವೆಂಬೆ, ಆವುದು ಕಿಱಿದೆಂಬೆ ?
ತಾಳಸಂಪುಟಕ್ಕೆ ಬಾರದ ಘನವ ಅರ್ಪಿಸ ಹೋದರೆ,
ಅರ್ಪಣ ಮುನ್ನವೆ ಇಲ್ಲ : ಗಮನ ನಿರ್ಗಮನವಾಯಿತ್ತು !
ಈ ಉಭಯ ಭೇದವನಱಿಯರಾಗಿ :
ಜಂಗಮವೆ ಲಿಂಗ, ಕೂಡಲ ಸಂಗಮದೇವಾ. ॥ ೩೯೨ ॥

೧೪೪

ಶಿವಭಕ್ತರೆ ಅಧಿಕರು, ನೋಡಯ್ಯಾ, ಎಲ್ಲರಿಂದವು:
ಇದಕ್ಕೆ ಅಧಿಕವಾಗಿ ಜಂಗಮವ ಕಂಡೆ.
ಈ ದ್ವಿವಿಧವನೊಂದೇ ಎಂದು ನಂಬಿದೆ,
ಕೂಡಲ ಸಂಗಮದೇವಾ. ॥ ೩೯೩ ॥

೧೪೫

ಕೃತಯುಗದಲ್ಲಿ ಕೇ[ದಾ]ರವೆಂಬ ಮೂಲಸ್ಥಾನ;
ತ್ರೇತಾಯುಗದಲ್ಲಿ ವಾರಣಾಸಿಯೆಂಬ ಮೂಲಸ್ಥಾನ;
ದ್ವಾಪಾರದಲ್ಲಿ ವಿರೂಪಾಕ್ಷನೆಂಬ ಮೂಲಸ್ಥಾನ;
ಕಲಿಯುಗದಲ್ಲಿ ಪರ್ವತವೆಂಬ ಮೂಲಸ್ಥಾನ.
ನಾನಾ ಸ್ಥಾನಂಗಳ ಮುಟ್ಟಿದೆ ಜಂಗಮವೆ ಲಿಂಗವೆಂದು ನಂಬಿದೆ,
ಕೂಡಲ ಸಂಗಮದೇವಾ. ॥ ೩೯೪ ॥

೧೪೬

ಭಕ್ತದೇಹಿಕದೇವನಪ್ಪ ದೇವನು ಸದ್ಭಕ್ತರ ಬಳಿಯಲು ಬಪ್ಪನಾಗಿ,
ಆಳ್ದನು ಬರಲು ಆಳು ಮಂಚದ ಮೇಲಿಪ್ಪುದು ಗುಣವೇ? ಹೇಳಾ.
ಕೂಡಲ ಸಂಗಮದೇವರು—
ಜಂಗಮರೂಪಾಗಿ ಸಂಗಯ್ಯ ಬಂದಾನೆಂದು
ಎಂದೆಂದೂ ನಾನು ಮುಂಚವನೇಱಿದ ಭಾಷೆ! ॥ ೩೯೫ ॥

೧೪೭

ಜಂಗಮದ ಸನ್ನಿಧಿಯಲ್ಲಿ ನಾನು
ವಾಹನವನೇಱಲಮ್ಮೆ; ಏಱಿದರೆ ಭವ ಹಿಂಗದು!
ಆದೇನು ಕಾರಣ: ಮುಂದೆ ಸೂಲವನೇಱುವ ಪ್ರಾಪ್ತಿಯುಂಟಾದ ಕಾರಣ!
ಜಂಗಮ ಬರಲಾಸನದಲ್ಲಿರಲಮ್ಮೆ: ಇದ್ದರೆ ಭವ ಹಿಂಗದು!
ಏನು ಕಾರಣ: ಮುಂದೆ ಕಾಯ್ದಿಟ್ಟಿಗೆಯ ಮೇಲೆ
ಕುಳ್ಳಿರಿಸುವ ಪ್ರಾಪ್ತಿಯುಂಟಾದ ಕಾರಣ.
ಜಂಗಮದ ಮುಂದೆ ದಿಟ್ಟತನದಲ್ಲಿ ಬೆಜೆತು ನಿಂದಿರಲಮ್ಮೆನು:
ನಿಂದರೆ ಭವ ಹಿಂಗದಾಗಿ!
ಏನು ಕಾರಣ: ಮುಂದೆ ಹೆಡಗುಡಿಯ ಕಟ್ಟಿ
ಕುಳ್ಳಿರಿಸುವ ಪ್ರಾಪ್ತಿಯುಂಟಾದ ಕಾರಣ!
ಇಂತೀ ಬಾಧೆ ಭವಂಗಳಿಗಂಜುವೆನಯ್ಯಾ.
ನಿನ್ನವರ ಸುಳುಹು ನೀನೆಂದೇ ಭಾವಿಸಿ, ತೊತ್ತು-ಭೃತ್ಯನಾಗಿಪ್ಪೆನಯ್ಯಾ
ಕೂಡಲ ಸಂಗಮದೇವಾ. ॥ ೩೯೬ ॥

೧೪೮

ಜಂಗಮವಿರಹಿತ ಲಿಂಗಾರ್ಚನೆ ಓಡು ಬಲಲೆಱಿದ ಜಲದಂತೆ !
ಜಂಗಮಸನ್ನಿಹಿತ ಲಿಂಗಾರ್ಚನೆ : ಇದೆ ಭಕ್ತಿಗೆ ಪಥವಯ್ಯಾ.
ಜಂಗಮ ಪ್ರಸಾದಭೋಗೋಪಭೋಗವು :
ಎನಗಿದೇ ಲಿಂಗಾರ್ಚನೆ.
ಬೇಱಿ ಮತ್ತೊಂದಱಿದೆನಾದರೆ,
ಕೂಡಲ ಸಂಗಮದೇವ ನರಕದಲ್ಲಿಕ್ಕುವ. ॥ ೩೯೭

೧೪೯

ಭಿತ್ತಿಯಿಲ್ಲದೆ ಬರೆಯಬಹುದೆ ಚಿತ್ತಾರವ ?
ಬಿತ್ತಿ ಬೆಳೆಯಬಹುದೆ ಧರೆಯಿಲ್ಲದೆ ?
ಜಂಗಮವಿಲ್ಲದೆ ಮಾಡಬಹುದೆ ?
ರೂಢೀಶನ ಭೇದಿಸಬಹುದೆ ?
ಒಡಲಿಲ್ಲದ ನಿರಾಳ ಕರ್ತೃ, ಕೂಡಲ ಸಂಗಮದೇವ
ಜಂಗಮ ಮುಖವಾದನಾಗಿ ಮತ್ತೊಂದನಱಿಯೆನಯ್ಯಾ. ॥ ೩೯೮

೧೫೦

ಸಮಯೋಚಿತದಲ್ಲಿ ಲಿಂಗಾರ್ಚನೆಯ ಮಾಡುತಿಪ್ಪನಾ ಭಕ್ತನು :
ಮಾಡಿದರೆ ಮಾಡಲಿ : ಮಾಡಿದರೆ ತಪ್ಪೇನು ?
ಆ ಜಂಗಮದ ಶಬ್ದವ ಕೇಳಿ ಪ್ರಸಾದಕ್ಕೆ ಕೈದುಡಿಕಿದರೆ
ಅದು ಪ್ರಸಾದವಲ್ಲ : ಕಲ್ಮಷ !
ಆ ಸಮಯೋಚಿತದಲ್ಲಿ ಬಂದ ಜಂಗಮದ ಶಬ್ದವ ಕೇಳಿ
ಪ್ರಸಾವಕ್ಕೆ ಕೈದೆಗೆದರೆ, ಅದು ಲಿಂಗಕ್ಕೆ ಬೋನ.
ಇದು ಕಾರಣ, ಕೂಡಲ ಸಂಗಮದೇವಾ,
ಇಂತಪ್ಪ ಸದಾಚಾರಿಗಳನೆನಗೆ ತೋಱಿಸಾ. ॥ ೩೯೯

೧೫೧

ಉತ್ತಮ, ಮಧ್ಯಮ, ಕನಿಷ್ಠವೆಂದು ಬಂದ ಜಂಗಮವನೆಂದೆನಾದರೆ
ನೊಂದೆನಯ್ಯಾ, ಬೆಂದೆನಯ್ಯಾ, ಎನ್ನ ಕಿಚ್ಚು ಎನ್ನ ಸುಟ್ಟಿತ್ತು
ಸು[ಖಿ] ಜಂಗಮ, ಸಾಮಾನ್ಯ ಜಂಗಮವೆಂದುಂಟೆ,
ಕೂಡಲ ಸಂಗಮದೇವಾ ? ॥ ೪೦೦

೧೫೨

ಲಾಂಛನವ ಕಂಡು ನಂಬುವೆ : ಅವರಂತರಂಗವ ನೀನೇ ಬಲ್ಲೆ !
ತೊತ್ತಿಂಗೆ ತೊತ್ತುಗೆಲಸವಲ್ಲದೆ, ಅರಸರ ಸುದ್ದಿ ಎನಗೇಕಯ್ಯಾ ?
ರತ್ನವೆಲ್ಲೌಕ್ತಿಕದಚ್ಚು, ಕೂಡಲ ಸಂಗಮದೇವಾ ನಿಮ್ಮ ಶರಣರು.
|| ೪೦೧ ||

೧೫೩

ಆರಾರ ಮನದಲ್ಲಿ ಏನೇನಿಹುದೆಂದಱಿಯೆ :
ಒಳ್ಳಿಹರೆಂದೆಲಮ್ಮೆ ; ಹೊಲ್ಲಹರೆಂದೆನಲಮ್ಮೆ !
ಶಿವಭಕ್ತರಾದ ಕಾರಣ, ಜಂಗಮವೇ ಲಿಂಗ,
ಕೂಡಲ ಸಂಗಮದೇವಾ !
|| ೪೦೨ ||

೧೫೪

ಸಂಗಸಹಿತ ಶರಣರು ಬಂದರೆ ನಂಬುವುದೆನ್ನ ಮನವು,
ನಚ್ಚುವುದೆನ್ನ ಮನವು !
ಹಾವು ನೇಣೆಂಬ ಭ್ರಾಂತುಳ್ಳನ್ನಕ್ಕ ನಾನು ಭಕ್ತನೆಂತಪ್ಪೆನು ?
ಅಂಗ ಲಿಂಗಸಹಿತವಾಗಿ ಬಂದರೆ
ಸಂಗ ನೀನೆಂದು, ಮತ್ತೆ ಮನದಲ್ಲಿ ಸಂದೇಹ ಹೊಳೆದರೆ
ಬೆಂದೆನಲ್ಲಾ ನಾನು, ಕೂಡಲ ಸಂಗಮದೇವಾ !
|| ೪೦೩ ||

೧೫೫

ಕೆಂಡದಲ್ಲಿಟ್ಟಡೆ ಮೆಯ್ ಬೆಂದುದೆಂಬರು :
ಕೊಂಡಿಟ್ಟವನ ಕೈ ಮುನ್ನವೇ ಬೆಂದುದು !
ನೊಂದೆನಾನು ನೊಂದೆನಯ್ಯಾ, ಬೆಂದೆನಾನು ಬೆಂದೆನಯ್ಯಾ !
ಕೂಡಲ ಸಂಗನ ಶರಣರ ಕಂಡು ಕಾಣದಂತಿದ್ದರೆ
ನಾನಂದೇ ಬೆಂದೆನಯ್ಯಾ !
|| ೪೦೪ ||

೧೫೬

ಎಡದ ಕೈಯಲಿ ನಿಗಳವನಿಕ್ಕಿ
ಬಲದ ಕೈಯ ಕಡಿದುಕೊಂಡರೆ ನೋಯದಿಪ್ಪುದೆ ?

ಘ್ರಾಣವೊಂದಾಗಿ ದೇಹ ಬೇಱಿಲ್ಲ :
ಲಿಂಗವ ಪೂಜಿಸಿ ಜಂಗಮವನುದಾಸೀನವ ಮಾಡಿದರೆ
ಬೆಂದೆನಯ್ಯಾ ನಾನು, ಕೂಡಲ ಸಂಗಮದೇವಾ ! ॥ ೪೦೫ ॥

೧೫೭

ತನುವ ನೋಯಿಸಿ, ಮನವ ಬಳಲಿಸಿ,
ನಿಮ್ಮ ಪಾದವಿಡಿದವರೊಳರೆ ?
ಈ ನುಡಿ ಸುಡದಿಹುದೆ ?
ಕೂಡಲ ಸಂಗಮದೇವಾ,
ಶಿವಭಕ್ತರ ನೋವೇ ಅದು ಲಿಂಗದ ನೋವು ! ॥ ೪೦೬ ॥

೧೫೮

ಆತ್ಮಸ್ತುತಿ ಪರನಿಂದೆಯ ಕೇಳಿಸದಿರಯ್ಯಾ, ನಿಮ್ಮ ಧರ್ಮ !
'ಇನು ಭಕ್ತನೆನ್ನಲ್ಲಿ ಲೇಸುಂಟೆ'ಂದು ಪರಿಣಾಮಿಸಿದರೆ
ನಿಮಗಾನು ದ್ರೋ[ಹಿಯ]ಯ್ಯಾ !
ಕೂಡಲ ಸಂಗಮದೇವಾ,
ನಿಮ್ಮ ಶರಣರ ಲೇಸೇ ಎನ್ನ ಲೇಸಯ್ಯಾ ! ॥ ೪೦೭ ॥

೧೫೯

ನಡೆಯಲಱಿಯದೆ, ನುಡಿಯಲಱಿಯದೆ
ಲಿಂಗವ ಪೂಜಿಸಿ ಫಲವೇನು ?
ಅವರ ಸುಖವೆನ್ನ ಸುಖ : ಅವರ ದುಃಖವೆನ್ನ ದುಃಖ !
ಕೂಡಲ ಸಂಗನ ಶರಣ ಮನ ನೊಂದರೆ
ಆನು ಬೆಂದೆನಯ್ಯಾ ! ॥ ೪೦೮ ॥

೧೬೦

ಬಂಜೆ ಬೇನೆಯನಱಿಯದಂತೆ
ಒಬ್ಬರೊಂದ ನುಡಿವಿರಿ, ಕೇಳಿರಯ್ಯಾ.
ಎನ್ನಾಯುಷ್ಯ ಭವಿಷ್ಯ ಎನ್ನ ಭಕ್ತರು, ಕಂಡಯ್ಯಾ ;
ಎನ್ನಾಯುಷ್ಯ ಭವಿಷ್ಯ ಎನ್ನಾ ಪ್ರಮಥರು ಕಂಡಯ್ಯಾ !
ಕೂಡಲ ಸಂಗನ ಶರಣರು ಮುಖಲಿಂಗಿಗಳಯ್ಯಾ ! ॥ ೪೦೯ ॥

೧೬೧

ಬೇಜೂರಲಿದ್ದು ಬಂದ ಜಂಗಮವೆ ಲಿಂಗವೆಂದು,
ಮನೆಯಲಿದ್ದ ಜಂಗಮವನುದಾಸೀನವ ಮಾಡಿದರೆ,
ನಾನು ಬೆಂದೆನಯ್ಯಾ.
ಆನು ಬೆಂದ ಬೇಗೆಯನಱಿಯೆ, ಕಾಣಾ,
ಕೂಡಲ ಸಂಗಮದೇವಾ. ॥ ೪೧೦ ॥

೧೬೨

ಉಟ್ಟು ತೊಟ್ಟು ಪೂಜ್ಯನಾಗಿ ಬಂದ ಜಂಗಮ ವಿಶೇಷನೆಂದು,
ಕಂತೆ-ಬೊಂತೆಯ ಜಂಗಮ ಬಂದರೆ ಹೀನನೆಂದು
ಕಂಡೆನಾದರೆ ಪಂಚಮಹಾಪಾತಕ!
ಇದು ಕಾರಣ, ಅನ್ನ-ವಸ್ತ್ರ-ಧನಮಾಟದಲ್ಲಿ
ಎರಡಾಗಿ ಕಂಡೆನಾದರೆ ನರಕದಲ್ಲಿಕ್ಕುವ
ಕೂಡಲ ಸಂಗಮದೇವ. ॥ ೪೧೧ ॥

೧೬೩

ಅಡ್ಡದೊಡ್ಡ ನಾನಲ್ಲಯ್ಯಾ: ದೊಡ್ಡ ಬಸಜು ಎನಗಿಲ್ಲಯ್ಯಾ:
ದೊಡ್ಡವರಲ್ಲದೆ ನಿಮ್ಮ ಶರಣರು ಮನ್ನಿಸರಯ್ಯಾ!
ಹಡೆದುಂಬ ಸೂಳೆಯಂತೆ ಧನವುಳ್ಳವರನಱಿಸಿಯಱಿಸಿ,
ಬೋಧಿಸಲು ಪ್ರಾರ್ಥಿಸಲು ಮುನ್ನ ನಾನಱಿಯೆನಯ್ಯಾ.
ದೊಡ್ಡತನವೆನಗಿಲ್ಲ: ಅಂಜುವೆನಂಜುವೆ ನಿಮ್ಮ ಪ್ರಮಥರಿಗೆ:
ಅನಾಥ ನಾನಯ್ಯಾ, ಕೂಡಲ ಸಂಗಮದೇವಾ. ॥ ೪೧೨ ॥

೧೬೪

ಕುದುರೆ-ಸತ್ತಿಗೆಯವರ ಕಂಡರೆ ಹೊರಳಿ ಬಿದ್ದು ಕಾಲ ಹಿಡಿವರು!
ಬಡಭಕ್ತರು ಬಂದರೆ 'ಎಡೆಯಿಲ್ಲ, ಅತ್ತ ಸನ್ನಿ' ಎಂಬರು:
ಎನ್ನೊಡೆಯ ಕೂಡಲ ಸಂಗಯ್ಯನವರ
ತಡಗೆಡಹಿ ಮೂಗ ಕೊಯ್ಯದೆ ಮಾಣ್ಬನೆ? ॥ ೪೧೩ ॥

೧೬೫

ದೂರದಿಂದ ಬಂದ ಜಂಗಮವನಯ್ಯಗಳೆಂದು,
ಸಾರಿದ್ದ ಜಂಗಮವ ಪರಿಚಾರಕರೆಂಬ ಕೇಡಿಂಗೆ ಬೆರಗಾದೆನಯ್ಯಾ:
ಸಾರಿದ್ದವರ ದೂರದವರೆಂದು ಬೇಱೆ ಮಾಡಿದರೆ
ಕೂಡಲ ಸಂಗಮದೇವ ಸಿಂಗಾರದ ಮೂಗ
ಹಲುದೋಱೆ ಕೊಯ್ಯದೆ ಮಾಣ್ಬನೆ ? ॥ ೪೧೪ ॥

೧೬೬

ಹಿಡಿಸೆಡೆಯನೆ ಕಾಸಿ, ಹಿಡಿವ ಕೈ ಬೆಂದು,
ಮಿಡುಮಿಡನೆ ಮಿಡುಕುವ ಮರುಳ ಮಾನವನೇ,
ಬಡವರೆಂದೆನಬೇಡಾ ಲಾಂಛನಧಾರಿಯನು ;
ಕಡುಸ್ನೇಹದಿಂದವರ ಪೂಜೆಯ ಮಾಡುವುದು.
ನಿಜವಡಗಿದ ರೂಪು, ನಿರ್ವಯಲ ಸ್ಥಾನ,
ನಡೆಲಿಂಗ, ಜಂಗಮ : ಕೂಡಲ ಸಂಗಮದೇವ ! ॥ ೪೧೫ ॥

೧೬೭

ಹಾಲ ಕಂದಲು, ತುಪ್ಪದ ಮಡಕೆಯ
'ಜೋಡು ಮುಕ್ಕೆ' ನ ಬೇಡ—
ಹಾಲು ಸಿಹಿ, ತುಪ್ಪ ಕಮ್ಮನೆ : ಲಿಂಗಕ್ಕೆ ಜೋನ !
ಕೂಡಲಸಂಗನ ಶರಣರ
ಅಂಗಹೀನರೆಂದರೆ ನಾಯಕನರಕ ! ॥ ೪೧೬ ॥

೧೬೮

ಆಚಾರವಱಿಯಿರಿ, ವಿಚಾರವಱಿಯಿರಿ:
ಜಂಗಮ ಸ್ಥಲ ಲಿಂಗ ಕಾಣಿರಯ್ಯಾ.
ಜಾತಿಭೇದವಿಲ್ಲ, ಸೂತಕವಿಲ್ಲ,
ಅಜಾತಂಗೆ ಕುಲವಿಲ್ಲ !
ನುಡಿದಂತೆ ನಡೆಯದಿದ್ದರೆ
ಕೂಡಲ ಸಂಗಯ್ಯ ಮೆಚ್ಚ, ಕಾಣಿರಯ್ಯಾ. ॥ ೪೧೭ ॥

೧೬೯

ಸ್ಥಾವರ-ಭಕ್ತಂಗೆ ಸೀಮೆಯಲ್ಲದೆ
ಘನಲಿಂಗಜಂಗಮಕ್ಕೆ ಸೀಮೆಯೆಲ್ಲಿಯದು ?
ಅಂಬುಧಿಗೆ ಸೀಮೆಯಲ್ಲದೆ
ಹರಿವ ನದಿಗೆ ಸೀಮೆಯೆಲ್ಲಿಯದು ?
ಭಕ್ತಂಗೆ ಸೀಮೆಯಲ್ಲದೆ
ಜಂಗಮಕ್ಕೆ ಸೀಮೆಯುಂಟೆ, ಕೂಡಲ ಸಂಗಮದೇವಾ? ॥ ೧೧೮ ॥

೧೭೦

ಎತ್ತಿಕೊಳ್ಳಲೇಕೆ, ಮತ್ತಿಳುಹಲೇಕಯ್ಯಾ ?
ದರದುರದ ಭಕ್ತಿಯ ಮಾಡಲೇಕಯ್ಯಾ ?
ನಿಂದಿಸಲೇಕೆ, ಸ್ತುತಿಸಲೇಕೆ ?
ಹೋಗಬಿಟ್ಟು ಜಂಗಮವ ಹಿಂದೆಯಾಡುವನ ಬಾಯಲಿ
ಮೆಟ್ಟ ಹುಡಿಹೊಯ್ಯದೆ ಮಾಣ್ಬನೆ
ಕೂಡಲ ಸಂಗಮದೇವಾ ? ॥ ೧೧೯ ॥

೧೭೧

ಮರಕ್ಕೆ ಬಾಯಿ ಬೇರೆಂದು ತಳಕ್ಕೆ ನೀರೆಱೆದರೆ
ಮೇಲೆ ಪಲ್ಲವಿಸಿತ್ತು ನೋಡಾ !
ಲಿಂಗದ ಬಾಯಿ ಜಂಗಮವೆಂದು ಪಡಿಪದಾರ್ಥವ ನೀಡಿದರೆ
ಮುಂದೆ ಸಕಲ ಪದಾರ್ಥವನೀವನು !
ಆ ಜಂಗಮವ ಹರನೆಂದು ಕಂಡು ನರನೆಂದು ಭಾವಿಸಿದರೆ
ನರಕ ತಪ್ಪದು, ಕಾಣಾ, ಕೂಡಲ ಸಂಗಮದೇವಾ ! ॥ ೧೨೦ ॥

೧೭೨

ಆರಾಧನೆಯ ಮಾಡಿದಡೆ ಅಮೃತದ ಬೆಳಸು :
ವಿರೋಧಿಸಿದಡೆ ವಿಷದ ಬೆಳಸು !

ಇದು ಕಾರಣ ಲಿಂಗಜಂಗಮಕ್ಕಂಜಲೆ ಬೇಕು .
ಸ್ಥಾವರ ಜಂಗಮ ಒಂದೆಯೆಂದಜ್ಞಾದರೆ
ಕೂಡಲ ಸಂಗನುದೇವ ಶರಣಸನ್ನಿಹಿತ ! ॥(೪೨೧)॥

೧೭೩

ಹೊಸತಿಲ ಪೂಜಿಸಿ ಹೊಲಿವಟ್ಟು ಹೋದ
ಒಕ್ಕಲಿತಿಯಂತಾಯಿತ್ತೆನ್ನ ಭಕ್ತಿ !
ಜಂಗಮವೆನ್ನೊಡೆಯರೆಂದು ಒಕ್ಕುದ ಕೊಂಡು
ಉದಾಸೀನವ ಮಾಡಿದರೆ,
ಇಹಲೋಕಕ್ಕೆ ದೂರ, ಪರಲೋಕಕ್ಕೆ ದೂರ !
ಕೂಡಲ ಸಂಗನುದೇವ ಅಘೋರನರಕದಲ್ಲಿಕ್ಕುವ ! ॥ ೪೨೨ ॥

೧೭೪

ಲಿಂಗವ ಪೂಜೆಯ ಮಾಡಿ ಜಂಗಮವ ಕಂಡುದಾಸೀನವ ಮಾಡಿದರೆ
ಆ ಲಿಂಗಪೂಜಕರಿಗೆ ಮಾಡಿದ ಶಿವದೂತರ ದಂಡವೆಂಬುದು !
ಲೋಕದ ಕರ್ಮಿಗಳಿಗೆ ಮಾಡಿದ ಯಮದೂತರ ದಂಡವೆಂಬುದು !
ಇದು ಕಾರಣ, ಲಿಂಗ,ಜಂಗಮವನೊಂದೆಯೆಂದಜ್ಞಾಯದರ
ಎನಗೆ ತೋಱದಿರಯ್ಯಾ, ಕೂಡಲ ಸಂಗಮದೇವಾ. ॥೪೨೩॥

೧೭೫

ಜಂಗಮವ ನಿಂದೆಯ ಮಾಡಿ ಲಿಂಗವ ಪೂಜಿಸುವ ಭಕ್ತನ
ಅಂಗವಣಿಯೆಂತೋ ? ಶಿವ ಶಿವಾ !
ನಿಂದಿಸುವ ಪೂಜಿಸುವ ಪಾತಕವಿದ ಕೇಳಲಾಗದು.
' ಗುರುವಿನ ಗುರು ಜಂಗಮ '
ಇಂತೆಂದುದು ಕೂಡಲ ಸಂಗಯ್ಯನ ವಚನ. ॥೪೨೪॥

೧೭೬

ಅರಸನ ಕಂಡು ತನ್ನ ಪುರುಷನ ಮಱೆದರೆ
ಮರನೇಱು ಕೈಬಿಟ್ಟಂತಾಯಿತ್ತಯ್ಯಾ !

ಇಹಲೋಕಕ್ಕೆ ದೂರ, ಪರಲೋಕಕ್ಕೆ ದೂರ,
ನಮ್ಮ ಕೂಡಲ ಸಂಗಮದೇವ ಜಂಗಮ ಮುಖಲಿಂಗವಾದಕಾರಣ.
॥ ೪೨೫ ॥

೧೭೭

ಜಂಗಮವಿಲ್ಲದ ಮಾಟ, ಕಂಗಳಿಲ್ಲದ ನೋಟ !
ಹಿಂಗಿತ್ತು ಶಿವಲೋಕ, ಇನ್ನೆಲ್ಲಿಯದಯ್ಯಾ ?
ಲಿಂಗಕ್ಕೆ ಮಾಡಿದ ಬೋನವ ಸಿಂಬಕ ತಿಂಬಂತೆ
ಸಮಯೋಚಿತವನಱಿಯದೆ ಉದರವ ಹೊರೆವವರ
ನರಕದಲ್ಲಿಕ್ಕದೆ ಮಾಣ್ಬನೆ ಕೂಡಲ ಸಂಗಮದೇವ ? ॥ ೪೨೬ ॥

೧೭೮

ಲಿಂಗದಲ್ಲಿ ದಿಟವನಱಿಸುವರೆ ಜಂಗಮವ ನೆಱಿನಂಬುವುದು :
ನಡೆಲಿಂಗ, ನುಡಿಲಿಂಗ, ಮುಖಲಿಂಗವೆಂದೇ ನಂಬೋ !
' ಯತ್ರ ಮಾಹೇಶ್ವರ ತತ್ರಸನ್ನಿಹಿತ ' ನಾಗಿ
ಅಧರ ತಾಗಿದ ರುಚಿಯ, ಉದರ ತಾಗಿದ ಸುಖವ
ಉಣ್ಬ, ಉಡುವ ಕೂಡಲ ಸಂಗಮದೇವ ಜಂಗಮಮುಖದಲ್ಲಿ ॥ ೪೨೭ ॥

೧೭೯

ಜಂಗಮದ ಮನ-ಭಾವದಲ್ಲಿ ಭಕ್ತ [ನೆ] ಭೃತ್ಯನೆಂದು,
ಭಕ್ತನ ಮನ-ಭಾವದಲ್ಲಿ ಜಂಗಮ [ವೆ] ಕರ್ತನೆಂದು ಇದ್ದ ಬಳಿಕ,
' ಬಂದುದು, ಬಾರದು, ಇದ್ದುದು, ಹೋಯಿತ್ತೆ ' ಂಬ
ಸಂದೇಹವಿಲ್ಲದಿರಬೇಕು.
ಹೋಯಿತ್ತೆಂಬ ಗುಣವುಳ್ಳನ್ನಕ್ಕ
ನಿಮಗೆ ದೂರ, ನಿಮ್ಮವರಿಗೆ ಮುನ್ನವೆ ದೂರ !
ಶಿವಾಚಾರಕ್ಕಲ್ಲಿಂದತ್ತ ದೂರ !!
ಜಂಗಮದ ಹರಿದ ಹರವು, ಜಂಗಮದ ನಿಂದ ನಿಲವು,
ಜಂಗಮದ ಗಳಗರ್ಜನೆ, ಜಂಗಮದ ಕೋಳಾಟಕೆ ಸೈರಿಸದಿದ್ದರೆ
ನೀನಂದೇ ಮೂಗ ಕೊಯಿ, ಕೂಡಲ ಸಂಗಮದೇವಾ ! ॥ ೪೨೮ ॥

೧೪೦

ನಯನದಾಹಾರವ ಜಂಗಮವ ನೋಡಿಸುವೆ,
ಶ್ರೋತ್ರದಾಹಾರವ ಜಂಗಮವ ಕೇಳಿಸುವೆ,
ಘ್ರಾಣದಾಹಾರವ ಜಂಗಮವ ವಾಸಿಸುವೆ,
ಜಿಹ್ವೆಯಾಹಾರವ ಜಂಗಮವನೂಡಿಸುವೆ,
[ತ್ವ] ಚದಾಹಾರವ ಜಂಗಮಕ್ಕೆ ಹೊದ್ದಿಸುವೆ;
ಅಧಿಕ ಪ್ರೇಮ ಪ್ರಣಾಮವ ಮಾಡುವೆ —
ಸಕಲ ಪದಾರ್ಥಂಗಳ ನೀಡುವೆನು,
ಕೂಡಲ ಸಂಗಾ, ನಿಮ್ಮ ಶರಣರಿಗೆ. ॥೪೦॥

(೧೧) ಭಕ್ತನ ಮಹೇಶಸ್ಥಳ

೧

ಎಂಬತ್ತುನಾಲ್ಕು ಲಕ್ಷ ಮುಖದೊಳಗೊಂದೇ ಮುಖವಾಗಿ
ಕಾಡಿ ನೋಡೆನ್ನನು, ಬೇಡಿ ನೋಡೆನ್ನನು :
ಬೇಡದಿದ್ದರೆ, ಅಯ್ಯಾ, ನಿಮಗೆ ಪ್ರಮಥರಾಣೆ !
ನೀನಾವ ಮುಖದಲು ಬಂದು ಬೇಡಿದಡೀವೆ,
ಕೂಡಲ ಸಂಗಮದೇವಾ. ॥ ೪೩೦ ॥

೨

ಕಂದಿದೆನಯ್ಯಾ ಎನ್ನ ನೋಡುವರಿಲ್ಲದೆ;
ಕುಂದಿದೆನಯ್ಯಾ ಎನ್ನ ನುಡಿಸುವರಿಲ್ಲದೆ;
ಬಡವಾದೆನಯ್ಯಾ ಎನ್ನ ತನು, ಮನ, ಧನವ ಬೇಡುವಂಜಿದೆ !
ಕಾಡುವ ಬೇಡುವ ಶರಣರ ತಂದು
ಕಾಡಿಸು, ಬೇಡಿಸಯ್ಯಾ, ಕೂಡಲ ಸಂಗಮದೇವಾ. ॥ ೪೩೧ ॥

೩

ವೇಷ ಅವಿಚಾರದಲ್ಲಿ ನಡೆಯಿತ್ತೆಂದು
ಆಸುರದಲ್ಲಿ ಬಗುಳುವ ಕುನ್ನಿ, ನೀ ಕೇಳಾ :
ಹಲುಬಯನೆ ದಾಸನ ವಸ್ತ್ರವ ?
ಉಣ್ಣನೆ ಚೆನ್ನಯ್ಯನ ಸಂಗಾತ ?
ಪರವಧುವ ಕೊಳ್ಳನೆ ಸಿಂಧು ಬಲ್ಲಾಳನ ?
ಬೇಡನೆ ಸಿರಿಯಾಳನ ಮಗನ ?
ನಡೆವುದು ನುಡಿವುದು ಅವಿಚಾರವೆಂದು,
ಭಾವವಿಭಾವವೆಂದು ಕಂಡೆನಾದರೆ
ತಪ್ಪೆನ್ನದು, ಮೂಗ ಕೊಯಿ !
ಕೂಡಲ ಸಂಗಮದೇವಾ. ॥ ೪೩೨ ॥

೪

ನೀನಿಕ್ಕದ ಬೀಯದಲ್ಲಿ ವಂಚನೆಯುಳ್ಳರೆ
ಸಂಗಾ, ನಿಮ್ಮ ತೊತ್ತುತನಕ್ಕೆ ದೂರವಯ್ಯಾ !
ಕದ್ದು ತಿಂದರೆ ಕೈಹಿಡಿದೊಪ್ಪಿಸಿ ಬಡಿದು
ತುಡುಗುಣಿತನವ ಬಿಡಿಸಯ್ಯಾ !
ಜಂಗಮ ಮನೆಗೆ ಬಂದಲ್ಲಿ ಓಸರಿಸಿದರೆ
ಹಿಡಿದು ಮೂಗ ಕೊಯಿಯಯ್ಯಾ !
ಕೂಡಲ ಸಂಗಮದೇವಾ. ॥ ೪೩ ॥

೫

ದೇವನಿಂತಹನೆಂದು ತೋಱಿಕೊಡುವೆನು ಗಣಂಗಳಿಗೆ :
ಬಲ್ಲಾಳನ ವಧುವ ಬೇಡಿದಾತನೀ ದೇವ !
ದೇವನಿಂತಹನೆಂದು ತೋಱಿಕೊಡುವೆನು ಗಣಂಗಳಿಗೆ :
ದಾಸನ ವಸ್ತ್ರವ ಬೇಡಿದಾತನೀ ದೇವ !
ದೇವದಿಂತಹನೆಂದು ತೋಱಿಕೊಡುವೆನು ಗಣಂಗಳಿಗೆ :
ಸಿರಿಯಾಳನ ಮಗನ ಬೇಡಿದಾತನೀ ದೇವ !
ಕೂಡಲ ಸಂಗಮದೇವ ಜಂಗಮ ಮುಖಲಿಂಗವಾಗಿ,
ಕಾಡಿ ನೋಡುವ, ಬೇಡಿ ನೋಡುವ ! ॥ ೪೩೪ ॥

೬

ಹೊನ್ನಿನೊಳಗೊಂದೊರೆಯ, ಸೀರೆಯೊಳಗೊಂದೆಳೆಯ
ಇಂದಿಂಗೆ ನಾಳಿಂಗೆ ಬೇಕೆಂದೆನಾದರೆ,
ನಿಮ್ಮಾಣೆ ! ನಿಮ್ಮ ಶರಣಾರಾಣೆ !
ನಿಮ್ಮ ಶರಣರಿಗಲ್ಲದೆ ಮತ್ತೊಂದನಱಿಯೆ,
ಕೂಡಲ ಸಂಗಮದೇವಾ. ॥೪೩೫॥

೭

ಆಲುತ್ತಲು ಹಱಿಯ ಹೊಯಿಸಿ ಅಂಕವ ಮಾಡಿದೆನೆಲ್ಲರ ಕಂಡು !
ಆನು ಬೇಡೆಂದರೂ ಮಾಣೆ, ಕಲಿತನವ ಮಾಡಿದೆನೆಲ್ಲರ ಕಂಡು !
ಅಲ್ಲಿ ಹೋಯಿತ್ತು ಗಳೆಯೆಂದರೆ
ಆಸೆಮಾಡೆನು, ಕೂಡಲ ಸಂಗಮದೇವಾ. ॥ ೪೩೬ ॥

೮

ಕಾಗೆಯೊಂದೆಗುಳ ಕಂಡರೆ ಕರೆಯದೆ ತನ್ನ ಬಳಗವನು ?
ಕೋಳಿಯೊಂದು ಕುಟುಕ ಕಂಡರೆ ಕೂಗಿ ಕರೆಯದೆ ತನ್ನ ಕುಲವೆಲ್ಲವ ?
ಶಿವಭಕ್ತನಾಗಿ ಭಕ್ತಿಪಕ್ಷವಿಲ್ಲದಿದ್ದರೆ ಕಾಗೆ ಕೋಳಿಯಿಂದ ಕರಕಷ್ಟ !
ಕೂಡಲ ಸಂಗಮದೇವಾ. ॥ ೪೩೭ ॥

೯

ಆವ ನೇ [ಮವಾ] ದರೇನು ? ಹೇಮವಿಲ್ಲದಂಗೈಸಬಹುದೆ ?
ಕೊಡಲಿಲ್ಲೆಂಬುದಱಿಂದ ಸಾಯಲುಬಹುದು : ಸೈರಿಸಬಾರದು !
ಬೇಡುವವರ ನೋಡಿ ನೋಡಿ, ಈಯಲಿಲ್ಲದವನ ಜೀವನವದೇತಕೊ
ಕೂಡಲ ಸಂಗಮದೇವಾ ? ॥ ೪೩೮ ॥

೧೦

ಹರಗಣಪಂಕ್ತಿಯ ನಡುವೆ ಕುಳ್ಳಿರ್ದು
ನಾನು ಒಡೆಯತನದ ನಾಯ ತೇಜವ ಹೊತ್ತುಕೊಂಡು—
ಮಡದಿಯೆನ್ನ ಗಲೊಳಗೆ ಸಕಲದೇವಾನ್ನವ
ಒಡೆಯರಿಂದಲೂ ಮಿಗಿಲಾಗಿಕ್ಕಲು
ತೆಗೆದಿರಿಸಿದೆನು !
ಈ ಪರಿಯ ಆಯ ಕಣ್ಗೆ ತೋಱಿಲು ಕಲ್ಮಷವಾದುವು !
ಕರುಣಿ ಚೆನ್ನಬಸವಣ್ಣ[ನ] ಮರೆದುಕೊಂಡೆನಾದರೆ
ಒಡೆಯ ಕೂಡಲ ಸಂಗಯ್ಯ ಕೆಡಹಿ ನರಕದಲ್ಲಿಕ್ಕುವ ! ॥ ೪೩೯ ॥

೧೧

ಭಕ್ತಿಸುಭಾಷೆಯ ನುಡಿಯ ನುಡಿವೆ, ನುಡಿದಂತೆ ನಡೆವೆ,
ನಡೆಯೊಳಗೆ ನುಡಿಯ ಪೂರೈಸುವೆ—
ಮೇಲೆ ತೂಗುವ ತ್ರಾಸು ಕಟ್ಟಳಿ ನಿಮ್ಮ ಕೈಯಲ್ಲಿ;
ಒಂದು ಜವೆ ಕೊಱತೆಯಾದರೆ
ಎನ್ನನದ್ದಿ ನೀನೆದ್ದು ಹೋಗು,
ಕೂಡಲ ಸಂಗಮದೇವಾ. ॥ ೪೪೦ ॥

೧೨

ಓಡುವಾತ ಲಿಂಕನಲ್ಲ, ಬೇಡುವಾತ ಭಕ್ತನಲ್ಲ :
ಓಡಲಾಗದು ಲಿಂಕನು, ಬೇಡಲಾಗದು ಭಕ್ತನು.
ಓಡೆನಯ್ಯಾ, ಬೇಡೆನಯ್ಯಾ,
ಕೂಡಲ ಸಂಗಮದೇವಾ. ॥ ೪೪೧ ॥

೧೩

ಚಂದ್ರಶೈತ್ಯದಲು ಬೆಳೆದ ಕಾಯಕ್ಕೆ
ಬೆಳದಿಂಗಳ ಬಯಸುವ ಹಂಗೇಕಯ್ಯಾ ?
ಶರಣರ ಸಂಗದಲಿರ್ದು ಶಿವನ ಬೇಡುವ ಹಂಗೇಕಯ್ಯಾ ?
ಕೂಡಲ ಸಂಗಯ್ಯನ ಶರಣರು ಬಂದು
ತಮ್ಮವನೆಂದರೆಸಾಲವೆ ಅಯ್ಯಾ ? ॥ ೪೪೨ ॥

೧೪

ದಾಸನ ವಸ್ತ್ರವ ಬೇಡದ ಮುನ್ನ
ತವನಿಧಿಯನಿತ್ತರೆ ನಿಮ್ಮ ದೇವರೆಂದೆಂಬೆ !
ಸಿರಿಯಾಳನ ಮಗನ ಬೇಡದ ಮುನ್ನ
ಕಂಚಿಯ ಪುರದ ಕೈಲಾಸಕ್ಕೊಯಿದರೆ ನಿಮ್ಮ ದೇವರೆಂದೆಂಬೆ !
ಬಲ್ಲಾಳನ ವಧುವ ಬೇಡದ ಮುನ್ನ
ಸ್ವಯಲಿಂಗವಾವರೆ ನಿಮ್ಮ ದೇವರೆಂದೆಂಬೆ !
ದೇಹಿ ನೀನು, ವ್ಯಾಪಾರಿಗಳು ನಮ್ಮವರು !
ಬೇಡು, ಕೂಡಲ ಸಂಗಮದೇವಾ, ಎಮ್ಮವರ ಕೈಯಲು ! ॥ ೪೪೩ ॥

೧೫

ಎಲ್ಲರೂ ವೀರರು, ಎಲ್ಲರೂ ಧೀರರು;
ಎಲ್ಲರೂ ಮಹಿಮರು, ಎಲ್ಲರೂ ಪ್ರಮಥರು :
ಕಾಳೆಗದ ಮುಖದಲ್ಲಿ ಕಾಣಬಾರದು,
ಓಡುವ ಮುಖದಲ್ಲಿ ಕಾಣಬಹುದು !
ನಮ್ಮ ಕೂಡಲ ಸಂಗನ ಶರಣರು ಧೀರರು,
ಉಳಿದವರೆಲ್ಲಾ ಅಧೀರರು ! ॥ ೪೪೪ ॥

೧೬

ಎಲ್ಲಿ ನೋಡಿದಲ್ಲಿ ಮನವೆಳಸಿದರೆ
ಆಣೆ, ನಿಮ್ಮಾಣೆ, ನಿಮ್ಮ ಪ್ರಥಮರಾಣೆ !
ಪರವಧುವನು ಮಹಾದೇವಿಯೆಂಬೆ,
ಕೂಡಲ ಸಂಗಮದೇವಾ. ॥ ೪೪೫ ॥

೧೭

ಹರಿವ ಹಾವಿಂಗಂಜೆ, ಉರಿಯ ನಾಲಗೆಗಂಜೆ, ಸುರಗಿಯ ಮೊನೆಗಂಜೆ!
ಒಂದಕ್ಕಂಜುವೆ, ಒಂದಕ್ಕಳುಕುವೆ :
ಪರಸ್ತ್ರೀ ಪರಧನವೆಂಬೀ ಜೂಬಿಂಗಂಜುವೆ !
ಮುನ್ನಂಜದ ರಾವಣನೇವಿಧಿಯಾದ !
ಅಂಜುವೆನಯ್ಯಾ, ಕೂಡಲ ಸಂಗಮದೇವಾ. ॥ ೪೪೬ ॥

೧೮

ಒಂದಕ್ಕೊಂಬತ್ತ ನುಡಿದು, ಕಣ್ಣ ಕೆಂಚನೆ ಮಾಡಿ, ಗಂಡುಗೆದಱಿ,
ಮುಡುಹಿಕ್ಕಿ ಕೆಲೆವವರ ಕಂಡಡಂಜುವೆ, ಓಸರಿಸುವೆ !
ಓಡಿದೆನೆಂಬ ಭಂಗವಾದಡಾಗಲಿ :
ನಮ್ಮ ಕೂಡಲ ಸಂಗನ ಶರಣರ ಅನುಭಾವವಿಲ್ಲದವರ
ಹೊಲಮೇರೆಯ ಹೊಂದೆ, ಹೊಲನ ಬಿಟ್ಟೋಡುವೆ ! ॥ ೪೪೭ ॥

೧೯

ಒಡೆಯರು ಬಂದರೆ ಗುಡಿತೋರಣವ ಕಟ್ಟಿ;
ನಂಟರು ಬಂದರೆ ಸಮಯವಿಲ್ಲೆನ್ನಿ !
ಅಂದೇಕೆ ಬಾರರು ನೀರಿಂಗೆ ನೇಣಿಂಗೆ ಹೊಱಗಾದಂದು ?
ಸಮಯಾಚಾರಕ್ಕೊಳಗಾದಂದು ?
ಪರುಷ ಮುಟ್ಟಲು ಕಬ್ಬುಣ ಸುವರ್ಣವಾಯಿಪ್ಪತ್ತು :
ಬಳಿಕ ಬಂಧುಗಳುಂಟೆ, ಕೂಡಲ ಸಂಗಮದೇವಾ ? ॥ ೪೪೮ ॥

೨೦

ಒಡೆಯರಾಡುವ ಮಾತ ಕಡೆ ಪರಿಯಂತರ ಕೇಳಿ,
ಇದಿರು ಹೋಗಿ ಕಿಂಕರನಾಗಿ ಒನ್ನಹವ ಮಾಡುವ
ಸದ್ಭಕ್ತರ ತೋಜಯ್ಯಾ !
ಒಡೆಯರಾಡುವ ಮಾತ ಕಂಡು ಕರೆವಲ್ಲಿ ಕೆಡೆಮೆಟ್ಟಿ
ಬಾಯಿ ಘನವೆಂದು ಆಡುವವನ ತೋಜದಿರಯ್ಯಾ,
ಅವನ ಸಂಗದಲ್ಲಿರಿಸದಿರಯ್ಯಾ,
ಅವನ ಸಹಪಂಕ್ತಿಯಲ್ಲಿ ಕುಳ್ಳಿರಿಸದಿರಯ್ಯಾ !
ಕೂಡಲ ಸಂಗಮದೇವಯ್ಯಾ ನಿಮ್ಮ ಜೇಡುವುದೊಂದೇ ವರವು.

॥ ೪೪೯ ॥

೨೧

ಒಡಹಾರುವನೇನು ಭಕ್ತನಾದರೆಯೂ ನೇಣಿನ ಹಂಗ ಬಿಡ !
ಮಾಲೆಗಾಜನೇನು ಭಕ್ತನಾದರೆಯೂ ಬಾವಿಯ ಜೊಮ್ಮನ ಹಂಗ ಬಿಡ !
ಬಣಜಗನೇನು ಭಕ್ತನಾದರೆಯೂ ಒಟ್ಟಿಲ ಜನಕನ ಹಂಗ ಬಿಡ !
ಕಂಚುಗಾಜನೇನು ಭಕ್ತನಾದರೆಯೂ ಕಾಳಿಕಾದೇವಿಯ ಹಂಗ ಬಿಡ !
ನಾನಾವ ಹಂಗಿನವನಲ್ಲ, ನಿಮ್ಮ ಶರಣರ ಹಂಗಿನವನಯ್ಯಾ,
ಕೂಡಲ ಸಂಗಮದೇವಾ !

॥ ೪೫೦ ॥

೨೨

ಶ್ರೀವಿಭೂತಿರುದ್ರಾಕ್ಷಿಯಿಪ್ಪವರ ಲಿಂಗವೆಂಬೆ :
ಇಲ್ಲದವರ ಭವಿಯೆಂಬೆ.
ಕೂಡಲ ಸಂಗಮದೇವಾ, ಸದ್ಭಕ್ತರ ನೀನೆಂಬೆ.

॥ ೪೫೧ ॥

೨೩

ದೇವಸಹಿತ ಭಕ್ತ ಮನೆಗೆ ಬಂದರೆ
ಕಾಯಕವಾವುದೆಂದು ಬೆಸಗೊಂಡರೆ,
ನಿಮ್ಮಾಣೆ ! ನಿಮ್ಮ ಪುರಾತರಾಣೆ ! ತಲೆದಂಡ ! ತಲೆದಂಡ !!
ಕೂಡಲ ಸಂಗಮದೇವಾ, ಭಕ್ತರ ಕುಲವಜಿಸಿದರೆ
ನಿಮ್ಮ ರಾಣಿವಾಸದಾಣೆ !

॥ ೪೫೨ ॥

೨೪

ಲಿಂಗಾಂಗಿಗಳಿಲ್ಲದವರ, ಶರಣಸಂಗವಿಲ್ಲದವರ
ಕಂಡರೆ ನಾಚುವೆ.
ಅವರ ನುಡಿ ಎನಗೆ ಸಮನಿಸದಯ್ಯಾ,
ಕೂಡಲ ಸಂಗಮದೇವಾ, ಅಲ್ಲಿ ನೀವಿಲ್ಲದ ಕಾರಣ. ॥ ೪೫೩ ॥

೨೫

ಶ್ರೀವಿಭೂತಿಯ ಹೂಸದವರ, ಶ್ರೀರುದ್ರಾಕ್ಷಿಯ ಧರಿಸಿದವರ,
ನಿತ್ಯ ಲಿಂಗಾರ್ಚನೆಯ ಮಾಡದವರ,
ಜಂಗಮವೇ ಲಿಂಗವೆಂದರ್ಚಿಯದವರ,
ಸದ್ಭಕ್ತರ ಸಂಗದಲ್ಲಿರದವರ ಎನಗೊಮ್ಮೆ ತೋರಿದಿರು,
ಕೂಡಲ ಸಂಗಮದೇವಾ, ಸಜಿಗೊಡ್ಡಿ ಬೇಡುವೆನು ! ॥ ೪೫೪ ॥

೨೬

ಕೂಪವರಿಗೆ ಹೇಳುವೆನು ಕುಳಸ್ಥಳಂಗಳೆಲ್ಲವನು;
ಕೂರದವರಿಗೆ ಹೇಳಿ ನಾನೇವೆನು ಫಲವನೆ ?
ಕಜ್ಜಲ ಭೂಮಿಯಲ್ಲಿ ಕಜ್ಜೆದ ವೃಷ್ಟಿಯ ತೆಜನಂತೆ
ಅವರೆತ್ತ ಬಲ್ಲರು ಎನ್ನ ಸುಖ-ದುಃಖವ ?
ಅಂಗತವಿಲ್ಲದ ಸಂಗವು ಅಳಲಿಲ್ಲದ ಹುಯ್ಯಲಂತೆ !
ಇದು ಕಾರಣ, ಕೂಡಲ ಸಂಗಮದೇವಾ,
ನಿಮ್ಮ ಶರಣರಿಗಲ್ಲದೆ ಬಾಯ್‌ದೆಜಿಯಿಸು. ॥ ೪೫೫ ॥

೨೭

ಒಡೆದೋಡು ಎನ್ನ ಮನೆಯಲ್ಲಿಲ್ಲದಂತೆ ಮಾಡಯ್ಯಾ,
ಕೊಡು ದೇವ, ಎನ್ನ ಕೈಯಲ್ಲೊಂದು ಕಜ್ಜಕೆಯ;
' ಮೃಡದೇವಾ ಶರಣ ' ಎಂದು ಭಿಕ್ಷಕ್ಕೆ ಹೋದರೆ, ಅಲ್ಲಿ,
' ನಡೆ ದೇವಾ ' ಎಂದೆನಿಸು, ಕೂಡಲ ಸಂಗಮದೇವಾ ! ॥ ೪೫೬ ॥

೨೮

ಭವವಿರಹಿತ ಭಕ್ತನಾವ ಬಳಿಕ
ಭಕ್ತಿಭಾಜನವಲ್ಲಿ ಮಾಡಿ ಭಸಿಗಿಕ್ಕಲಾಗದಯ್ಯಾ :
ಯುಕ್ತಿಶೂನ್ಯರಿಗೆ ಮುಂದೆ ಪ್ರಸಾದ ದೂರ !

ಮುಕ್ತಿಯಿಲ್ಲ ! ಮುಂದೆ ನಾಯ ಬಸುಜಿಲ್ಲಿ
ಬಪ್ಪುದು ತಪ್ಪದು ಪೃಥ್ವಿಯೊಳಗೆ !
ಕೂಡಲ ಸಂಗಮದೇವಾ, ನಿಮ್ಮ ಶರಣರಿಗಲ್ಲದೆ,
ಅನಾಚಾರಕ್ಕೆಲ್ಲಿಯದೊ ? ॥ ೪೫೭ ॥

(೧೨) ಭಕ್ತನ ಪ್ರಸಾದಿಸ್ಥಳ

೧

ಅಯ್ಯಾ, ನಿಮ್ಮ ಶರಣರ ದಾಸೋಹಕ್ಕೆ
ಎನ್ನ ತನುಮನಧನವಲಸವಂತೆ ಮಾಡಯ್ಯಾ.
ತನು ದಾಸೋಹಕ್ಕುಬ್ಬುವಂತೆ ಮಾಡು,
ಮನ ದಾಸೋಹಕ್ಕೆ ಲೀಯವಹಂತೆ ಮಾಡು,
ಧನ ದಾಸೋಹಕ್ಕೆ ಸವೆದು, ನಿಮ್ಮ ಶರಣರ ಪ್ರಸಾದದಲ್ಲಿ
ನಿರಂತರ ಆಡಿ ಹಾಡಿ, ಸೋಡಿ ಕೂಡಿ, ಭಾವಿಸಿ ಸುಖಿಸಿ,
ಪರಿಣಾಮಿಸುವಂತೆ ಮಾಡು, ಕೂಡಲ ಸಂಗಮದೇವಾ. ॥ ೪೫೮ ॥

೨

ಹಾರುವ ಹಾರುವನಪ್ಪೆ ಸದ್‌ಭಕ್ತರಿನ್ನು ವರೆಂದು;
ಹಾರುವ ಹಾರುವನಪ್ಪೆ ಶರಣರು ಎನ್ನುವರಿನ್ನುವರೆಂದು,
ಕೂಡಲ ಸಂಗನ ಶರಣರು ತಮ್ಮೊಕ್ಕುದನಿಕ್ಕಿ ಸಲಹುವರಾಗಿ. ॥ ೪೫೯ ॥

೩

ಒಕ್ಕುದ ಮಿಕ್ಕುದನುಂಡು ಕಿವಿವಿಡಿದಾಡುವೆ :
ಶರಣರ ಮನೆಯ ಲೆಂಗಿಯ ಡಿಂಗರಿಗ ನಾನು;
ಕೂಡಲ ಸಂಗನ ಶರಣರ ಮನೆಯ
ಭಕ್ತಿಯ ಮುರುಕ ನಾನು. ॥ ೪೬೦ ॥

೪

ಗುರುಲಿಂಗಜಂಗಮದಿಂದೆ ನಾ ಮೋದಕ ಪ್ರಸಾದವಾಯಿತ್ತು.
ಆ ಭಾವನೆ ಮಹಾಪ್ರಸಾದವಾಗಿ—
ಎನಗೆ ಬೇಱೆ ಪ್ರಸಾದವೆಂಬುದಿಲ್ಲಾ,
ಕೂಡಲ ಸಂಗಮದೇವಾ. ॥ ೪೬೧ ॥

೫

ಅಹುದೆಂದಜಾಯೆ, ಆಗದೆಂದಜಾಯೆ,
ಆದಿಯ ಪಥವ ತೋಜಲಜಾಯ,
ಸತ್ಯವನಜಾಯೆ, ಸಹಜವನಜಾಯೆ,
ಸಜ್ಜನಶುದ್ಧವ ಮುನ್ನವೇ ಅಜಾಯೆ !
ನಿಮ್ಮ ಶರಣರ ಒಕ್ಕುದನುಂಡಿಪ್ಪೆ,
ಕೂಡಲ ಸಂಗಮದೇವಾ. ॥ ೪೬೩ ॥

೬

ಆವನಾದರೇನು, ಶ್ರೀಮುಹಾದೇವನ ನೆನೆವವನ
ಬಾಯ ತಂಬುಲ ಮೆಲುವೆ, ಬೀಳುಡಿಗೆಯ ಹೊದೆವೆ,
ಪಾದರಕ್ಷೆಯ ಕಾಯ್ದು ಬದುಕುವೆ,
ಕೂಡಲ ಸಂಗಮದೇವಾ. ॥ ೪೬೪ ॥

೭

ಒಂದುವನಜಾಯದ ಸಂದೇಹಿ ನಾನಯ್ಯಾ;
ನಂಬುಗೆಯಿಲ್ಲದ ಡಂಬಕ ನಾನಯ್ಯಾ;
ನಿಮ್ಮ ನಂಬಿದ ಶರಣರ ಡಿಂಗರಿಗ ನಾನಯ್ಯಾ,
ಕೂಡಲ ಸಂಗಮದೇವಾ. ॥ ೪೬೫ ॥

೮

ಬಿಡದೆ ಬಾಯಗಲ ಎಂಜಲ ಕಾಯ್ದಿಪ್ಪೆನು : ಕಿಂಕರನು;
ಕಿಂಕರರ ಮನೆಯಲ್ಲಿ ಕಿಂಕಿಲವನು ಆನು ಹಾರುತಿಪ್ಪೆನು.
ನಮ್ಮ ಕೂಡಲ ಸಂಗನ ಶರಣರ ಒಕ್ಕುದ ಮಿಕ್ಕಿದನುಂಬ
ಕಿಂಕರ ನಾನು ! ॥ ೪೬೬ ॥

೯

ಪೊತ್ತಿಂಗೇಕೆ ಲಕ್ಷಣ ? ಒಡೆಂಗೇಕೆ ಲಜಾರ ?
ಆಗಮವೇಕೆ ಡಿಂಗರಿಗಂಗೆ, ಒಕ್ಕುದನುಂಬುವಂಗಯ್ಯಾ ?
ಕೂಡಲ ಸಂಗಮದೇವಾ,
ನಿಮ್ಮ ನಂಬುವುದಾಚಾರವಯ್ಯಾ, ॥ ೪೬೭ ॥

೧೦

ತೊತ್ತಿಂಗೆ ಲಕ್ಷಣವೇಕಯ್ಯಾ ?
ಅವರೊಕ್ಕುದನುಂಡು ಮಿಕ್ಕುದ ಕಾಯ್ದುಕೊಂಡಿಪ್ಪುದು.
ಸಾರೆ ಹೊರಸೇಕೆ ? ಅವಳಿಗೆ ಮಾಜುತ್ತರವೇಕೆ ?
ಕೂಡಲ ಸಂಗನ ಶರಣರೊಡನೆ
ಇದಿರುತ್ತರವೇಕೆ ಸಿಂಬಕಂಗೆ ? ॥ ೪೬೭ ॥

೧೧

ಪಾಪೋದಕವ ಕೊಂಬೆ; ಪ್ರಸಾದವ ಕೊಂಬೆ;
ಅರ್ಥಪ್ರಾಣಾಭಿಮಾನ ನಿಮ್ಮದೆಂಬೆ !
ರಾತ್ರಿಯಲೊತ್ತೆಯ ಕೊಂಬ ಪಾತಕ ಸೂಳೆಯಂತೆ
ಬಜಾಯ ಮಾತಿಂಗೊಲೆವನೆ
ನಮ್ಮ ಕೂಡಲ ಸಂಗಮದೇವ ? ॥ ೪೬೮ ॥

೧೨

ಪಾತಕ ಮಹಾಪಾತಕವ ಮಾಡಿದವನು
ಸದ್ಭಕ್ತರ ಮನೆಗೆ ಹೋಗಿ,
ಅವರೊಕ್ಕ ಪ್ರಸಾದವನಾಯ್ದುಂಡರೆ
ಸಕಲ ಬ್ರಹ್ಮಹತ್ಯಾದಿ ಪಾತಕ ಪರಿಹಾರವು
ಒಮ್ಮೆ ಜೇಡಿಕೊಂಡುಂಡರೆ.
ಪಾತಕೇಷು ಮನಃಪ್ರಾಪ್ತೇ । ಶಿವಭಕ್ತಗೃಹಂ ವ್ರಜೇತ್
ಯಾಚಯೇದನ್ನಮಮೃತಂ । ತದಲಾಭೇ ಜಲಂ ಪಿಬೇತ್
ಇದು ಕಾರಣ, ಕೂಡಲ ಸಂಗಮದೇವಾ,
ನಿಮ್ಮ ಸದ್ಭಕ್ತರಿಗೆ ' ನಮೋ ನಮಃ ' ಎಂಬೆನು. ॥೪೬೯॥

೧೩

ನಾನು ಹೊತ್ತ ಹುಳ್ಳಿಯ ಹೊಜ್ಜೆಯನಂಬಲಿಗೆ
ಕೊಂಬವರಿಲ್ಲ, ನೋಡಯ್ಯಾ.
ಆನು ನಿಮ್ಮ ಶರಣರ ಒಕ್ಕುದನುಂಡು ಬದುಕಿದೆನಯ್ಯಾ.
ಮೀರುವ ಸಾವಿವ ಕಾಗೆ ಹೊಂಬಣವಪ್ಪುದು ತಪ್ಪದು,
ಕೂಡಲ ಸಂಗಮಪ್ಪೇವಾ. ॥ ೪೭೦ ॥

೧೪

ಭವಭವದಲ್ಲಿ ನಿಮ್ಮ ಜಂಗಮವೆ ಶರಣಯ್ಯಾ :
ಅವರುಂಡು ಮಿಕ್ಕುದ ಉಡಿಗಿ, ಒಕ್ಕು,
ಪ್ರಸಾದವನಾಯ್ದುಂಬ ಮರುಳ ನಾನಯ್ಯಾ !
ನಮ್ಮ ಕೂಡಲ ಸಂಗನ ಶರಣರ
ಲಿಂಗವ ನಾ ಹಿಂಗಲಾಜಿ ! ॥ ೪೭೧ ॥

೧೫

ದಾಸಿಯ ವರ್ಗದಲ್ಲಿಪ್ಪೆನು ಶಿವಶರಣರ ಮನೆಯಲ್ಲಿ :
ಅವರೊಕ್ಕುದನುಂಡು, ಮಿಕ್ಕುದ ಕಾಯ್ದುಕೊಂಡಿಪ್ಪ ಕಾರಣ
ಕಾಲ ಮುಟ್ಟಲಮ್ಮವು; ಕಲ್ಪಿತ ತೊಡೆಯಿತ್ತು;
ಎನ್ನ ಭವಬಂಧನ ಹಿಂಗಿತ್ತು; ಕರ್ಮ ನಿರ್ಮಲನಾಯಿತ್ತು !
ಅವರ ತೊತ್ತಿನ ತೊತ್ತಿನ ಮಜ್ಜುಮೊತ್ತಿನ ಮಗನೆಂದು
ಕೂಡಲ ಸಂಗಮದೇವ ' ಇತ್ತ ಬಾ ' ಯೆಂದೆತ್ತಿಕೊಂಡನು ! ॥೪೭೨॥

೧೬

ಜನ್ಮ ಜನ್ಮಕ್ಕೆ ಕೋಗಲೀಯದೆ, ' ಸೋಹಂ ' ಎಂದೆನಿಸದೆ,
' ದಾಸೋಹಂ ' ಎಂದೆನಿಸಯ್ಯಾ.
ಲಿಂಗಜಂಗಮದ ಪ್ರಸಾದವ ತೋಜು ಬದುಕಿಸಯ್ಯಾ.
ಕೂಡಲ ಸಂಗಮದೇವಾ. ॥ ೪೭೩ ॥

೧೭

ಕರ್ತರು ನಿಮ್ಮ ಗಣಂಗಳು ಎನ್ನ ತೊತ್ತುಮಾಡಿ ಸಲಹಿದ ಸುಖವು
ಸಾಲೋಕ್ಯ, ಸಾಮಿಪ್ಯ, ಸಾರೂಪ್ಯ, ಸಾಯುಜ್ಯದಂತುಟಲ್ಲಾ---
ಕೇಳಿರಯ್ಯಾ, ಕೂಡಲ ಸಂಗನ ಶರಣರು
ತಮ್ಮ ಒಕ್ಕುದನಿಕ್ಕಿ ಸಲಹಿದ ಸುಖವು ! ॥ ೪೭೪ ॥

(೧೩) ಭಕ್ತನ ಪ್ರಾಣಲಿಂಗಿಸ್ಥಳ

೧

ತೊತ್ತಿಂಗೆ ಬಲ್ಲಹನೊಲಿದರೆ ಪದವಿಯ ಮಾಡದೆ ಮಾಣ್ಬನೆ ?
ಜೇಡರ ದಾಸಯ್ಯಂಗೊಲಿದಾತ ಮತ್ತೊಬ್ಬ ದೇವನೆ, ಅಯ್ಯಾ ?
ಮಾದರ ಚೆನ್ನಯ್ಯಂಗೆ, ಡೋಹರ ಕಕ್ಕಯ್ಯಂಗೆ,
ತೆಲುಗ ಜೊಮ್ಮಯ್ಯಂಗೆ ಒಲಿದಾತ ಮತ್ತೊಬ್ಬ ದೇವನೆ, ಅಯ್ಯಾ ?
ಎನ್ನ ಮನದ ಪಂಚೇಂದ್ರಿಯ ನಿಮ್ಮತ್ತಲಾದರೆ
ತನ್ನತ್ತ ಮಾಡುವ ಕೂಡಲ ಸಂಗಯ್ಯ. ॥ ೪೭೫ ॥

೨

ಹೊಱಿಗೆ ಹೂಸಿ ಏವೆನಯ್ಯಾ,
ಒಳಗೆ ಶುದ್ಧವಾಗದನ್ನಕ್ಕ ?
ಮಣಿಯ ಕಟ್ಟಿ ಏವೆನಯ್ಯಾ,
ಮನ ಮುಟ್ಟದನ್ನಕ್ಕ ?
ನೂಱಿನೋದಿ ಏವೆನಯ್ಯ,
ನಮ್ಮ ಕೂಡಲ ಸಂಗಮದೇವರ ಮನಮುಟ್ಟಿ ನೆನೆಯದನ್ನಕ್ಕ ?
॥ ೪೭೬ ॥

೩

ಸುಚಿತ್ತದಿಂದಲೆನ್ನ ಮನವು
ನಿಮ್ಮ ನೆನೆಯಲೊಲ್ಲದು : ಎಂತಯ್ಯಾ ?
ಎನಗಿನ್ನಾವುದು ಗತಿ ? ಎಂತಯ್ಯಾ ?
ಎನಗಿನ್ನಾವುದು ಮತಿ ? ಎಂತಯ್ಯಾ ?
ಹರ ಹರಾ, ಕೂಡಲ ಸಂಗಮದೇವಾ,
ಮನವ ಸಂತೈಸೆನ್ನಾ. ॥ ೪೭೭ ॥

೪

ಆಷ್ಟಾದಳಕಮಲವ ಸುತ್ತುವ ಜೀವಾತ್ಮನ
ಮೆಟ್ಟಿದ ದಳವನಱಿಯದೆ
೧ ಭಕ್ತನಾನೆಂತೆಂಬೆ, ಆನು ಶರಣನೆಂತೆಂಬೆ,

ಆನು ಲಿಂಗೈಕ್ಯನೆಂತೆಂಬೆ,
ಕೂಡಲ ಸಂಗಮದೇವಾ, ಎನ್ನ ಮನ ಸಮಾಧಾನವಾಗದನ್ನಕ್ಕ ?
|| ೪೭೮ ||

೫

ನಾ ನಿಮ್ಮ ನೆನೆವೆನು : ನೀವೆನ್ನನಜುಯಿರಿ;
ನಾ ನಿಮ್ಮನೋಲೈಸುವೆನು; ನೀವೆನ್ನ ಕಾಣಿರಿ.
ನಾನೆಂತು ಬದುಕುವೆನೆಂತು ಜೀವಿಸುವೆನಯ್ಯಾ ?
ಕೂಡಲ ಸಂಗಮದೇವಾ,
ಎನಗೆ ನೀನೇ ಪ್ರಾಣ ಗತಿ ಮತಿ ನೋಡಯ್ಯಾ ! ||೪೭೯||

೬

ತಂದೆ ನೀನು, ತಾಯಿ ನೀನು;
ಬಂಧು ನೀನು, ಬಳಗ ನೀನು;
ನೀನಲ್ಲದೆ ಮತ್ತಾರೂ ಇಲ್ಲಯ್ಯಾ !
ಕೂಡಲ ಸಂಗಮದೇವಾ,
ಹಾಲಲದ್ದು, ನೀರಲದ್ದು ! || ೪೮೦ ||

೭

ಎನ್ನಾಪತ್ತು-ಸುಖ-ದುಃಖ ನೀನೇ, ಕಂಡಯ್ಯಾ;
ಮತ್ತಾರೂ ಇಲ್ಲ; ಹರಹರಾ, ನೀನೇ ಕಂಡಯ್ಯಾ !
ಎನ್ನ ಮಾತಾಪಿತರೂ ನೀನೇ ಕಂಡಯ್ಯಾ,
ಕೂಡಲ ಸಂಗಮದೇವಾ. || ೪೮೧ ||

೮

ಎನ್ನ ಜನ್ಮವ ತೊಡೆದ ನೀ ಧರ್ಮಿ,
ಎನ್ನ ಜನ್ಮವನತಿಗಳೆದ ನೀ ಧರ್ಮಿ,
ಎನ್ನ ಭವಬಂಧನವ ನಿಕರಿಸಿದೆಯಾಗಿ
ಶಿವನೇ ಗತಿಮತಿಯೆಂದು ನಂಬಿದೆನಯ್ಯಾ.
ಎನ್ನ ಅಷ್ಟಮದಂಗಳ ಸುಟ್ಟುರುಹಿದೆಯಾಗಿ

ಕಟ್ಟುಗ್ರಹದಿಂದ ನಿಮ್ಮ ಶ್ರೀಚರಣವ ಕಂಡೆ :
ಸೃಷ್ಟಿಪ್ರತಿಪಾಲಕಾ, ನಿಮ್ಮ ನಂಬಿದೆ, ಕರುಣಿಸು,
ಕೂಡಲ ಸಂಗಮದೇವಾ. ||೪೮||

೯

ಭವರೋಗವೈದ್ಯನೆಂದು ನಾ ನಿಮ್ಮ ಪೂಜೆಯೊಳ್ಕೆ,
ಭಕ್ತಿದಾಯಕ, ನೀ ಕರುಣಿಸು, ಲಿಂಗತಂದೇ !
' ಜಯಜಯ ಶ್ರೀಮಹಾದೇವ, ಜಯಜಯ ಶ್ರೀಮಹಾದೇವ,
ಜಯಜಯ ಶ್ರೀಮಹಾದೇವ ' ಎನ್ನುತ್ತಿದ್ದಿತೆನ್ನ ಮನವು.
ಕೂಡಲ ಸಂಗಮದೇವಂಗೆ ಶರಣೆಂದಿತ್ತೆನ್ನ ಮನವು ! ||೪೯||

---

(೧೪) ಭಕ್ತನ ಶರಣಸ್ಥಳ

೧

ಅಂಗೈಯೊಳಗಣ ಲಿಂಗವ ನೋಡುತ್ತ
ಕಂಗಳು ಕಡೆಗೋಡಿವಱಲಾವುತ್ತ ಸುರಿಯುತ್ತ ಎಂದಿಪ್ಪೆನೊ ?
ನೋಟವೇ ಪ್ರಾಣವಾಗಿ ಎಂದಿಪ್ಪೆನೊ ?
ಕೂಟವೇ ಪ್ರಾಣವಾಗಿ ಎಂದಿಪ್ಪೆನೊ,
ಎನ್ನಂಗವಿಕಾರದ ಸಂಗವಳಿಮ,
' ಕೂಡಲ ಸಂಗಯ್ಯಾ, ಲಿಂಗಯ್ಯಾ, ಲಿಂಗ ಲಿಂಗ ಲಿಂಗ ' ವೆನ್ನುತ್ತ? ||೪೯||

೨

ಎಮೆ ಬಿರವನ್ನಕ್ಕ, ಮನ ದಣಿವನ್ನಕ್ಕ,
ನಾಲಿಗೆ ನಲಿನಲಿದಾಡುವನ್ನಕ್ಕ
ನಿಮ್ಮ ನಾಮಾಮೃತವ ತಂದೆಱೆಸು ಕಂಡಯ್ಯಾ
ಎನಗೆನ್ನ ತಂದೇ !

ಬಿರಿಮುಗಳಂದದಿ ಎನ್ನ ಹೃದಯ
ನಿಮ್ಮ ಶ್ರೀಚರಣವ ಮೇಲೆ ಬಿದ್ದರಳುಗೆ,
ಕೂಡಲ ಸಂಗಮದೇವಾ. ॥ ೪೦೫ ॥

೩

ಆದಿ ಕಾಲು ದಣಿಯವು, ನೋಡಿ ಕಣ್ಣು ದಣಿಯವು
ಹಾಡಿ ನಾಲಿಗೆ ದಣಿಯದು : ಇನ್ನೇವೆನಿನ್ನೇವೆ ?
ನಿಮ್ಮ ಕೈಯಾರೆ ಪೂಜಿಸಿ ಮನ ದಣಿಯಲೊಲ್ಲದಿನ್ನೇವೆನಿನ್ನೇವೆ ?
ಕೂಡಲ ಸಂಗಮದೇವ, ಕೇಳಯ್ಯಾ,
ನಿಮ್ಮುರುವ ಬಗಿದಾನು ಹೋಗುವ ಭರವೆನಗೆ ! ॥ ೪೦೬ ॥

೪

ಕಾಮಸಂಗ ನಿಸ್ಸಂಗವಾಗಿ ಇನ್ನಾವ ಸಂಗವನಜುಯೆನಯ್ಯಾ.
ಮಿಗೆವೊಲಿದೆನಾಗಿ ಅಗಲಲಾಜೆನು :
ನಗೆಮೊಗದರಸಾ, ಅವಧಾರು ! ಕೂಡಲ ಸಂಗಮದೇವಾ,
ಬಗಿದು ಹೋಗುವೆ ನಾ ನಿಮ್ಮ ಮನವನು !

೫

ನೋಡಿ ನೋಡಿ ಲಿಂಗಧ್ಯಾನವೆನ್ನ ಮನವು :
ರಾಗರಂಜನೆಯ ಉತ್ಪತ್ತಿ ಸ್ಥಿತಿ ಲಯ ನಿನಗೆಂದಾದುವು.
ರಾಗರಂಜನೆಯ ಪೂಜೆ ಎನ್ನ ಮನ,
ಕೂಡಲ ಸಂಗಮದೇವಾ, ಆಹಾ, ಎನ್ನ ಮನ ! ॥ ೪೦೮ ॥

೬

ವಾರವೆಂದಜುಯೆ, ದಿನವೆಂದಜುಯೆ;
ಏನೆಂದಜುಯೆನಯ್ಯಾ !
ಇರುಳೆಂದಜುಯೆ, ಹಗಲೆಂದಜುಯೆ;
ಏನೆಂದಜುಯೆನಯ್ಯಾ !
ನಿಮ್ಮುವ ಪೂಜಿಸಿ ಎನ್ನುವ ಮಜುತೆದೆ,
ಕೂಡಲ ಸಂಗಮದೇವಾ. ॥ ೪೦೯ ॥

೬

ನಿಮ್ಮ ನೋಟವನಂತಸುಖ, ಕೂಟ ಪರಮಸುಖ !
ಅವುಟುಕೋಟಿ ರೋಮಂಗಳೂ ಕಂಗಳಾಗಿ ನೋಡುತ್ತಿದ್ದೆನು !
ಕೂಡಲ ಸಂಗಮದೇವಯ್ಯಾ, ನಿಮ್ಮ ನೋಡಿ ನೋಡಿ
ಮನವಲ್ಲಿ ರತಿಹುಟ್ಟಿ ನಿಮಿರ್ದುವೆನ್ನ ಕಳೆಗಳು ! ॥ ೪೯೦ ॥

೭

ವಚನದಲ್ಲಿ ನಾಮಾಮೃತ ತುಂಬಿ, ನಯನದಲ್ಲಿ ಮೂರುತಿ ತುಂಬಿ,
ಮನದಲ್ಲಿ ನಿಮ್ಮ ನೆನಹು ತುಂಬಿ, ಕಿವಿಯಲ್ಲಿ ಕೀರುತಿ ತುಂಬಿ,
ಕೂಡಲ ಸಂಗಮದೇವಾ, ನಿಮ್ಮ ಚರಣಕಮಲದಲಾನು ತುಂಬಿ !
॥ ೪೯೧ ॥

೮

ಅಡಿಗಡಿಗೆ ಲಿಂಗವನಡರಿಯಡರಿ ನೋಡಿ ನೋಡಿ ಕಂಗಳು,
ಕಡೆಗೋಡಿವಱಿದುವೆನಗಯ್ಯಾ ಎನ್ನ ಶ್ರುಜಲಂಗಳು.
ಅಲಿಕಲ್ಲ ರೂಹಿನಂತೆ, ಅರಗಿನ ಪುತ್ತಳಿಯಂತೆ
ತನು ಪುಳಕಿತವಾದ ಬೆಮರುಬಿಂದುಗಳೆಲ್ಲಾ !
ಕೂಡಲ ಸಂಗನ ದರ್ಶನಸ್ಪರ್ಶನದಿಂದ—
ಮನವೊಲಿದು ನೆರೆವ ಭರವನೇನ ಹೇಳುವೆನಯ್ಯಾ ! ॥ ೪೯೨ ॥

೯೦

ತಾಳಮಾನಸರಿಸವನಱಿಯೆ, ಓಜೆಬಜಾವಣೆಯ ಲೆಕ್ಕವನಱಿಯೆ,
ಅಮೃತಗಣ ದೇವಗಣವನಱಿಯೆ !
ಕೂಡಲ ಸಂಗಮದೇವಾ, ನಿನಗೆ ಕೇಡಿಲ್ಲವಾಗಿ
ಆನುವೊಲಿದಂತೆ ಹಾಡುವೆ ! ॥ ೪೯೩ ॥

೯೧

ವರಂ ಪ್ರಾಣಪರಿತ್ಯಾಗಃ । ಛೇದನಂ ಶಿರಸೋ ಪಿ ವಾ
ನತ್ವನಕೃಚ್ಯ್ರ ಭುಂಜೀಯಾತ್ । ಭಗವಂತಂ ತ್ರಿಲೋಚನಂ
ಎಂದುದಾಗಿ, ದೇಹಧರ್ಮ ತನ್ನ ಆದಂತೆ ಆಗಲಿ,
ಕೂಡಲ ಸಂಗನ ಪೂಜಿಸದಲ್ಲದೆ ನಿಲಲಾಱೆನು. ॥ ೪೯೪ ॥

೧೩

ಸುರರು ಕಿನ್ನರರು ಕಿಂಪುರುಷರೆಂಬವರನಾರು ಬಲ್ಲರು ?
ಎನ್ನ ಚಿತ್ತವು ನಿಮ್ಮ ಮೇಲೆ, ಸಂಗಯ್ಯಾ;
ಎನ್ನ ಚಿತ್ತವು ನಿಮ್ಮ ಮೇಲೆ, ಲಿಂಗಯ್ಯಾ.
ಕೂಡಲ ಸಂಗಮದೇವಾ.
ಅನ್ಯವೆಂಬುದನಱಿಯೆನಯ್ಯಾ. ॥ ೪೯೫ ॥

೧೪

ಮಂಡೆಯ ಬೋಳಿಸಿಕೊಂಡು ಗಂಡುದೊತ್ತುವೊಕ್ಕೆನಯ್ಯಾ !
ಲಜ್ಜೆಗೆಟ್ಟಾದರೂ ಲಿಂಗವನೊಲಿಸುವೆ;
ನಾಣುಗೆಟ್ಟಾದರೂ ಲಿಂಗವನೊಲಿಸುವೆ !
ಕೆಲದ ಸಂಸಾರಿಗಳು ನಗುತಿರ್ದೊಡಿರಲಿ;
ಕೂಡಲ ಸಂಗಮದೇವಾ, ಶರಣಗತಿವೊಕ್ಕೆನಯ್ಯಾ ! ॥ ೪೯೬ ॥

೧೫

ಎನಗೆ ನಿಮ್ಮ ನೆನಹಾದಾಗಲೆ ಉದಯ :
ಎನಗೆ ನಿಮ್ಮ ಮಱಿಹಾದಾಗಲೆ ಅಸ್ತಮಾನ !
ಎನಗೆ ನಿಮ್ಮ ನೆನಹವೆ ಜೀವನ :
ಎನಗೆ ನಿಮ್ಮ ನೆನಹವೆ ಪ್ರಾಣ, ಕಾಣಾ, ತಂದೇ, ಸ್ವಾಮೀ !
ಎನ್ನ ಹೃದಯದಲ್ಲಿ ನಿಮ್ಮ ಚರಣದುಂಡಿಗೆಯನೊತ್ತಯ್ಯಾ :
ವದನದಲ್ಲಿ ಷಡಕ್ಷರಿಯ ಬರೆಯಯ್ಯಾ, ಕೂಡಲ ಸಂಗಮದೇವಾ.
॥ ೪೯೭ ॥

೧೬

ಎನ್ನ ಕಾಯವ ದಂಡಿಗೆಯ ಮಾಡಯ್ಯಾ;
ಎನ್ನ ಸಿರಿವ ಸೋರೆಯ ಮಾಡಯ್ಯಾ;
ಎನ್ನ ನರವ ತಂತಿಯ ಮಾಡಯ್ಯಾ;
ಎನ್ನ ಬೆರಳ ಕಡ್ಡಿಯ ಮಾಡಯ್ಯಾ !
ಬತ್ತೀಸ ರಾಗವ ಹಾಡಯ್ಯಾ; ಉರದಲೊತ್ತಿ ಬಾರಿಸು,
ಕೂಡಲ ಸಂಗಮದೇವಾ. ॥ ೪೯೮ ॥

೧೬

ಕುರುಳು ಬೆರಳು ಮುಡಹು ಮುಂಬಲ್ಲ ಕೊಳ್ಳಿ;
ನಿಜಾಯನಿಕ್ಕಿ ದಾಂಟಿದರೆ ಅಂತೆನ್ನ ನಂಬಾ !
ಪರಪುರುಷರ ಮುಖವ ನೋಡದಂತೆ ಮಾಡಾ;
ಬಳಿಕ ನೀ ಹೇಂಗಿರಿಸಿದಂತೆ ಇರಿಸಾ!
ಎನ್ನುರದಲ್ಲಿ ಕೂಡಲ ಸಂಗಯ್ಯನೆಂದು ಬರೆಯಾ :
ಹರಿಬ್ರಹ್ಮರಿಗೆಜಿಗದಂತೆ ಬಳಿಸೀರನೆಜಿಯಾ ! ॥ ೪೯ ॥

೧೭

ಕಂಡ ಕನಸು, ನಿಧಾನವ ಕಂಡೆನಯ್ಯಾ;
ಬಿಡಲಾರದ ನಿಧಾನವ ಕಂಡೆನಯ್ಯಾ;
ಕೂಡಲ ಸಂಗಯ್ಯನೆಂಬ ನಿಧಾನವ ಕಂಡು ಬಿಡಲಾಜಿನಯ್ಯಾ.
॥ ೫೦೦ ॥

೧೮

ಹೊನ್ನ ಹಾವುಗೆಯ ಮೆಟ್ಟಿದವನ, ಮಿಡಿಮುಟ್ಟಿದ ಕೆಂಜಡೆಯವನ;
ಮೈಯಲ್ಲಿ ವಿಭೂತಿಯ ಧರಿಸಿದವನ,
ಕರದಲ್ಲಿ ಕಪಾಲವ ಪಿಡಿದವನ,
ಅರ್ಧನಾರಿಯಾದವನ, ಬಾಣನ ಬಾಗಿಲ ಕಾಯ್ದವನ;
ನಂಜಿಗೆ ಕುಂಟಣಿಯಾದವನ,
ಜೋಳಂಗೆ ಹೊನ್ನ ಮಳೆಯ ಕಜಿಸಿದವನ;
ಎನ್ನ ಮನಕ್ಕೆ ಬಂದವನ, ಸಚ್ಚಕ್ತರ ಹೃದಯದಲ್ಲಿಪ್ಪವನ;
ಮಾಡಿದ ಪೂಜೆಯಲೊಪ್ಪುವನ, ಕೂಡಲ ಸಂಗಯ್ಯನೆಂಬವನ !
॥ ೫೦೧ ॥

೧೯

ಮನಕ್ಕೆ ಮನೋಹರವಲ್ಲದ ಗಂಡರು
ಮನಕ್ಕೆ ಬಾರರು, ಕೇಳವ್ವಾ ಕೆಳದೀ.
ಪನ್ನಗಭೂಷಣರಲ್ಲದ ಗಂಡರು

ಇನ್ನೆನಗಾಗದ ಮೊಜಿ, ನೋಡವ್ವಾ !
ಕನ್ನೆಯಂದಿನ ಕೂಟ : ಚಿಕ್ಕಂದಿನ ಬಾಳುವೆ,
ನಿಮ್ಮಾಣೆಯಂಗ್ಯಾ ಕೂಡಲ ಸಂಗಮದೇವಾ ! ॥ ೫೦೨ ॥

೨೦

ಜಗವೆಲ್ಲಾ ಅರಿಯಲು ಎನಗೊಬ್ಬ ಗಂಡನುಂಟು :
ಆನು ಮುತ್ತೈದೆ, ಆನು ಸಿಟ್ಟೈದೆ.
ಕೂಡಲ ಸಂಗಯ್ಯನಂತಪ್ಪ ಎನಗೊಬ್ಬ ಗಂಡನುಂಟು ! ॥ ೫೦೩ ॥

೨೧

ಸಂಸಾರವೆಂಬ ಶ್ವಾನನಟ್ಟ ಮೀಸಲ ಬೀಸರ ಮಾಡದಿರಯ್ಯಾ.
ಎನ್ನ ಚಿತ್ತವು ನಿಮ್ಮ ಧ್ಯಾನವಯ್ಯಾ :
ನೀವಲ್ಲದೆ ಮತ್ತೇನನೂ ಅಱಿಯೆನು.
ಕನ್ನೆಯಲ್ಲಿ ಕೈವಿಡಿದೆನು, ನಿಮ್ಮಲ್ಲಿ ನೆರೆದೆನು,
ಮನ್ನಿಸು, ಕಂಡಾ, ಮಹಾಲಿಂಗವೇ.
ಸತಿಯಾನು, ಪತಿ ನೀನು, ಅಯ್ಯಾ :
ಮನೆಯೊಡೆಯ ಮನೆಯ ಕಾಯ್ದಿಪ್ಪಂತೆ
ನೀನೆನ್ನ ಮನವ ಕಾಯ್ದಿಪ್ಪ ಗಂಡನು !
ನಿಮಗೋತ ಮನವನನ್ಯಕ್ಕೆ ಹರಿಸಿದರೆ
ನಿನ್ನ ಭವಾನ ಹಾನಿ, ಕೂಡಲ ಸಂಗಮದೇವಾ. ॥ ೫೦೪ ॥

(೧೫) ಭಕ್ತಸ್ಥೈಕ್ಯಸ್ಥಳ

೧

ನೀನೊಲಿಯಿತ್ತೇ ಪುಣ್ಯ : ನೀನೊಲ್ಲದುದೇ ಪಾಪ, ಕಂಡಯ್ಯಾ
ಸಕಲ ಜಗದ್ಗೊಳಗೆ ಅನುಶ್ರುತನಾಗಿಪ್ಪೆಯಯ್ಯಾ :
ನೀನೊಲಿದವನೇ ನಿಮ್ಮನಜುವನು :
ಪ್ರಸಾದಾದ್ದೇವತಾಭಕ್ತಿಃ । ಪ್ರಸಾದೋ ಭಕ್ತಿ ಸಂಭವಃ
ಯಥಾಂಕುರತೋವಾ ಬೀಜಂ । ಬೀಜತೋವಾ ಯಥಾಂಕುರಃ
ನೀನೊಲಿದವನೇ ಧನ್ಯ, ಜಗಕ್ಕೆ ಪಾವನ,
ಕೂಡಲ ಸಂಗಮದೇವಾ. ॥ ೫೦೫ ॥

೨

ಅಷ್ಟವಿಧಾರ್ಚನೆ ಷೋಡಶೋಪಚಾರವ,
ಅಂದಂದಿನ ಕೃತ್ಯವನಂದಂದಿಗೆ ಆನು ಮಾಡಿ ಶುದ್ಧನಯ್ಯಾ !
ಹಂಗು ಹಱಿಯಿಲ್ಲದ ಕಾರಣ,
ಕೂಡಲ ಸಂಗಮದೇವ ನಿಷ್ಫಲದಾಯಕನಾಗಿ,
ಆನು ಮಾಡಿ ಶುದ್ಧನಯ್ಯಾ ! ॥ ೫೦೬ ॥

೩

' ಮಾಟ-ಕೂಟ ಫಲ ಪ್ರಾಪ್ತಿ ' ಎಂಬ ಮಾತ ಕೇಳಲಾಗದು, ಶಿವ ಶಿವಾ
ನಿಮ್ಮ ಭಕ್ತರಿಗೆ ' ಮಾಡಿದೆ ' ನೆನ್ನದಿರೆಂದು
ಶ್ರೀಗುರುಲಿಂಗವು ಕೃಪೆಯ ಮಾಡಿದ ಕಾರಣ,
ಆಲ್ಲಿ ಮಾಡುವರೂ ಮಾಡಿಸಿಕೊಂಬವರೂ ನೀವೇ,
ಕೂಡಲ ಸಂಗಮದೇವಾ. ॥ ೫೦೭ ॥

೪

ಅಯ್ಯಾ, ನಿಮ್ಮ ಅನುಭಾವದಿಂದ ಎನ್ನ ತನು ಹಾಳಾಯಿತ್ತಯ್ಯಾ !
ಅಯ್ಯಾ, ನಿಮ್ಮ ಅನುಭಾವದಿಂದ ಎನ್ನ ಮನ ಹಾಳಾಯಿತ್ತಯ್ಯಾ !
ಅಯ್ಯಾ, ನಿಮ್ಮ ಅನುಭಾವದಿಂದ ಎನ್ನ ಕರ್ಮ ಛೇದನವಾಯಿತ್ತು !
ನಿಮ್ಮವರು ಹೇಳಿ ಅಡಿಗಡಿಗೆ ಭಕ್ತಿಯೆಂಬ ಒಡವೆಯ
ದಿಟಮಾಡಿ ತೋಱಿದರು, ಕಾಣಾ, ಕೂಡಲ ಸಂಗಮದೇವಾ ॥೫೦೮॥

೫

ಭಕ್ತನೆಂತೆಂಬೆನಯ್ಯಾ ಭವಿಸಂಗ ಬಿಡದನ್ನಕ್ಕ ?
ಮಾಹೇಶ್ವರನೆಂತೆಂಬೆನಯ್ಯಾ
ಪರಸ್ತ್ರೀಯ ಪರರರ್ಥದಾಸೆ ಬಿಡದನ್ನಕ್ಕ ?
ಪ್ರಸಾದಿಯೆಂತೆಂಬೆನಯ್ಯಾ
ಆಧಿ ವ್ಯಾಧಿ ನಷ್ಟವಾಗದನ್ನಕ್ಕ ?
ಪ್ರಾಣಲಿಂಗಿಯೆಂತೆಂಬೆನಯ್ಯಾ
ಪ್ರಾಣ ಸ್ಥಿರವಾಗದನ್ನಕ್ಕ ?
ಶರಣನೆಂತೆಂಬೆನಯ್ಯಾ, ಪಂಚೇಂದ್ರಿಯ ನಾಸ್ತಿಯಾಗದನ್ನಕ್ಕ ?
ಐಕ್ಯನೆಂತೆಂಬೆನಯ್ಯಾ
ಜನನ ಮರಣ ವಿರಹಿತವಾಗದನ್ನಕ್ಕ ?
ಇಂತಪ್ಪ ಭಾಷೆ ವ್ರತ ನೇಮಂಗಳ ನಾನಱಿಯೆನಯ್ಯಾ !
ಅಘಟಿತ ಘಟಿತ ವರ್ತಮಾನವ ನಾನೆಱಿಯೆನಯ್ಯಾ !
ನಿಮ್ಮ ಶರಣರ ತೊತ್ತು, ಭೃತ್ಯಾಚಾರವ ಮಾಡುವೆ,
ಕೂಡಲ ಸಂಗಮದೇವಾ. ॥ ೫೦೯ ॥

[೬

ಅಭ್ಯಾಸವೆನ್ನ ವರ್ತಿಸಿತ್ತಯ್ಯಾ :
ಭಕ್ತಿ ಸಾಧ್ಯವಾಗದು, ನಾನೇವೆನಯ್ಯಾ ?
ಆ ನಿಮ್ಮ ಮನಬೊಗುವನ್ನಕ್ಕ ನೀವೆನ್ನ ಮನಬೊಗುವನ್ನಕ್ಕ
ಕಾಯಗುಣಂಗಳ ಕಳೆದವರಿಗೆ ಶರಣೆಂಬೆ,
ಕೂಡಲ ಸಂಗಮದೇವಾ. ॥ ೫೧೦ ॥

೭

ತನುಸಾರಾಯರ, ಮನಸಾರಾಯರ, ಜ್ಞಾನಸಾರಾಯರ
ತೋಱಿಯ್ಯಾ, ನಿಮ್ಮ ದರ್ಮ !
ಭಾವಸಾರಾಯರ ಭಕ್ತಿಸಾರಾಯರ
ತೋಱಿಯ್ಯಾ, ನಿಮ್ಮ ಧರ್ಮ !

ಕೂಡಲ ಸಂಗಮದೇವಯ್ಯಾ, ನಿಮ್ಮನಱಿಯದವಗುಣಿಗಳ
ತೋಱಿದಿರಯ್ಯಾ, ನಿಮ್ಮ ಧರ್ಮ ! ॥ ೫೧೧ ॥

೯

ಸಂಚುವಿಲ್ಲದ, ಭಕ್ತಿವಂಚನೆಯಿಲ್ಲದ
ಮಹಂತನ ತೋಱಾ.
ತನುಶುಚಿಗಳ ಮನಶುಚಿಗಳ ತೋಱಾ.
ಇಂತಪ್ಪ ಶಿವಲಿಂಗೈಕ್ಯರ ತೋಱಿ, ಬದುಕಿಸು,
ಕೂಡಲ ಸಂಗಮದೇವಾ. ॥ ೫೧೨ ॥

೯

ಕಾಮಸಂಗವಳಿದು ಅನುಭಾವಸಂಗದಲುಳಿದವರ ಅಗಲಲಾಱೆನು.
ಶಿವಂಗೆ ಮಿಗೆಯೊಲಿದವರನು ನಾನಗಲಲಾಱೆನು, ಕಾಣಾ,
ಕೂಡಲ ಸಂಗಮದೇವಾ. ॥ ೫೧೩ ॥

೧೦

ಭಕ್ತಿರತಿಯ ವಿಕಳತೆಯ ಯುಕ್ತಿಯನೇನ ಬೆಸಗೊಂಬಿರಯ್ಯಾ ?
ಕಾಮಿಗುಂಟೆ ಲಜ್ಜೆ–ನಾಚಿಕೆ ? ಕಾಮಿಗುಂಟೆ ಮಾನಾಪಮಾನವು ?
ಕೂಡಲ ಸಂಗನ ಶರಣರಿಗೊಲಿದ ಮರುಳನನೇನ ಬೆಸಗೊಂಬಿರಯ್ಯಾ ?
॥ ೫೧೪ ॥

೧೧

ಇಂದು ಹುಟ್ಟಿದ ಕೂಸಿಂಗೆ ಇಂದೇ ಜವ್ವನವಾಯಿತ್ತಯ್ಯಾ !
ಆ ಕೂಸು ಬೀದಿಯಲ್ಲಿ ಒತ್ತೆಗೊಳ್ಳಲು ನಿಂದಿತ್ತಯ್ಯಾ !
ಇದರ ಸಂಗಸುಖದನುಭಾವವನು
ಕೂಡಲ ಸಂಗಮದೇವ ತಾನೇ ಬಲ್ಲ ! ॥ ೫೧೫ ॥

೧೨

ಸಕ್ಕರೆಯ ಕೊಡನ ತುಂಬಿ ಹೊಲಗೆ ಸವಿದರೆ ರುಚಿಯುಂಟೆ ?
ತಕ್ಕೈಸಿ ಭುಜತುಂಬಿ ಲಿಂಗಸ್ಪರ್ಶನವ ಮಾಡದೆ
ಅಕ್ಕಟಾ ! ಸಂಸಾರ ವೃಥಾ ಹೋಯಿತ್ತಲ್ಲಾ !

ಅದೇತಲಿ ಭಕ್ತಿ ? ಅದೇತಲಿ ಯುಕ್ತಿ ?
ಕೂಡಿಕೋ, ಕೂಡಲ ಸಂಗಮದೇವಾ. ॥ ೫೧೬ ॥

೧೩

ಕಾಳಿದಾಸಂಗೆ ಕಣ್ಣನಿತ್ತೆ, ಓಹಿಲಯ್ಯನ ನಿಜಪುರಕ್ಕೊಯಿದೆ;
ನಂಬಿ ಕರೆದೊಡೋ ಎಂದೆ,
ತೆಲುಗ ಜೊಮ್ಮಯ್ಯಂಗೆ ಒಲಿದೆ, ದೇವಾ.
ಕೂಡಲ ಸಂಗಮದೇವಾ,
ಎನ್ನನೇಕೆ ಒಲ್ಲೆಯಯ್ಯಾ ? ॥ ೫೧೭ ॥

೧೪

ಪರಚಿಂತೆ ಎನಗೇಕಯ್ಯಾ ? ನಮ್ಮ ಚಿಂತೆ ನಮಗೆ ಸಾಲದೆ ?
' ಕೂಡಲ ಸಂಗಯ್ಯ ಒಲಿದಾನೊ, ಒಲಿಯನೊ ' ಎಂಬ ಚಿಂತೆ
ಹಾಸಲುಂಟು, ಹೊದೆಯಲುಂಟು ! ॥ ೫೧೮ ॥

೧೫

ಕಣ್ಣ ಕೋಪಕ್ಕೆ ಮುಂದಲೆಯಿಡಿ ನುಡಿದೆ :
ಮನಮೆಚ್ಚಿ ಮರುಳಾದೆ, ನೋಡವ್ವಾ !
ಕೇಳು, ಕೇಳವ್ವಾ, ಕೆಳದೀ,
ಸಖಿಯರಿಲ್ಲದೆ ಸುಖವ ಬಯಸುವರುಂಟೆ ? ಹೇಳಾ.
ಎನ್ನ ಮುನಿಸು ಎನ್ನಲ್ಲಿಯೆ ಅಡಗಿತ್ತು :
ಇನ್ನು ಬಾರಯ್ಯಾ, ಕೂಡಲ ಸಂಗಮದೇವಾ. ॥ ೫೧೯ ॥

೧೬

ಲಜ್ಜೆಗೆಟ್ಟೆನು, ನಾಣುಗೆಟ್ಟೆನು;
ಕುಲಗೆಟ್ಟೆನು, ಛಲಗೆಟ್ಟೆನು :
ಸಂಗಾ, ನಿನ್ನ ಪೂಜಿಸಿ ಭವಗೆಟ್ಟೆನು, ನಾನಯ್ಯಾ !
ಕೂಡಲ ಸಂಗಮದೇವಯ್ಯಾ
ನಿಮ್ಮ ಮುಟ್ಟ ಹುಟ್ಟುಗೆಟ್ಟೆನು ನಾನು !! ॥ ೫೨೦ ॥

೧೭

ಮಾಡುವ ಭಕ್ತನ ಕಾಯ ಬಾಳೆಯ ಕಂಭದಂತಿರಬೇಕು:
ಮೆಲ್ಲಮೆಲ್ಲನೆ ಹೊರೆಯೆತ್ತಿ ನೋಡಿದರೆ
ಒಳಗೆ ಕೆಚ್ಚಿಲ್ಲದಿರಬೇಕು.
ಮೇಲಾದ ಫಲವ ನಮ್ಮವರು ಬೀಜಸಹಿತ ನುಂಗಿದರು :
ಎನಗಿನ್ನಾವ ಭವವಿಲ್ಲ, ಕಾಣಾ,
ಕೂಡಲ ಸಂಗಮದೇವಾ. ॥ ೫೨೧ ॥

೧೮

ಜಂಗಮವ ಕೂಡಿಕೊಂಡು ಲಿಂಗಾರ್ಚನೆಯ
ಮಾಡುವುದು ಲೇಸಯ್ಯಾ ಭಕ್ತಂಗೆ.
ಆ ಭಕ್ತನ ಕೂಡಿಕೊಂಡು ಲಿಂಗಾರ್ಚನೆಯ
ಮಾಡುವುದು ಲೇಸಯ್ಯಾ ಜಂಗಮಕ್ಕೆ.
ಆ ಜಂಗಮದ ಕರ್ತವ್ಯವೆ ಆ ಭಕ್ತಂಗೆ ದಾಸೋಹ !
ಆ ಭಕ್ತನ ಕಿಂಕಲವೆ ಆ ಜಂಗಮಕ್ಕ ದಾಸೋಹ !
ಆ ಭಕ್ತನೊಳಗೆ ಜಂಗಮವಡಗಿ,
ಆ ಜಂಗಮದೊಳಗೆ ಭಕ್ತನಡಗಿ—
ಇದೇನೆಂದು ಹವಣಿಸುವೆನಯ್ಯಾ ಎರಡೊಂದಾದ ಘನವ ?
ಇದೇನೆಂದುಪಮಿಸುವೆನಯ್ಯಾ ತೆಜಃಪುಲ್ಲದ ಘನವ ?
ಈ ಎರಡಕ್ಕೆ ಭವವಿಲ್ಲೆಂದು, ಕೂಡಲ ಸಂಗಯ್ಯಾ,
ನಿಮ್ಮ ಶ್ರುತಿಗಳು ಹೇಳಿದುವಾಗಿ,
ನಿಮ್ಮ ಕರುಣವೆನಗಾಯಿತ್ತು. ॥ ೫೨೨ ॥

೧೯

ಹರಿವ ನಡಿಯ ತೆಜಃನ ಹೋಲಬಲ್ಲರೆ ಭಕ್ತಿ;
ಕೂಡಿ ಸುಯಿದಾನವ ನೀಡಬಲ್ಲರೆ ಭಕ್ತಿ.
ನೀಡಿ ಮಿಕ್ಕುದ ಕಾಯ್ದುಕೊಂಡಿರಬಲ್ಲರೆ
ಕೂಡಿಕೊಂಡಿಪ್ಪ ನಮ್ಮ ಕೂಡಲ ಸಂಗಮದೇವ ! ॥ ೫೨೩ ॥

೨೦

ಏನು ಮಾಡುವೆ ? ಎನ್ನ ಪುಣ್ಯದ ಫಲವು !
ಶಾಂತಿಯು ಮಾಡಹೋದರೆ, ಕೂಡೆ ಜೇತಾಳನಾಯಿತ್ತು !
ಕೂಡಲ ಸಂಗಮದೇವನ ಪೂಜಿಸಿಹೆನೆಂದರೆ
ಭಕ್ತಿ ಎಂಬ ಮೃಗವೆನ್ನನಟ್ಟಿ ಬಂದು ನುಂಗಿತ್ತಯ್ಯಾ ! ॥ ೨೦೪ ॥

೨೧

ಭಕ್ತಿಯೆಂಬ ಪೃಥ್ವಿಯ ಮೇಲೆ ಗುರುವೆಂಬ ಬೀಜವಂಕುರಿಸಿ
ಲಿಂಗವೆಂಬ ಎಲೆಯಾಯಿತ್ತು.
ಲಿಂಗವೆಂಬ ಎಲೆಯ ಮೇಲೆ
ವಿಚಾರವೆಂಬ ಹೂವಾಯಿತ್ತು,
ಆಚಾರವೆಂಬ ಕಾಯಾಯಿತ್ತು,
ನಿಷ್ಪತ್ತಿಯೆಂಬ ಹಣ್ಣಾಯಿತ್ತು.
ನಿಷ್ಪತ್ತಿಯೆಂಬ ಹಣ್ಣು ತೊಟ್ಟು ಬಿಟ್ಟು ಕಳಚಿ ಬೀಳುವಲ್ಲಿ
ಕೂಡಲ ಸಂಗಮದೇವ ತನಗೆ ಬೇಕೆಂದು ಎತ್ತಿಕೊಂಡ. ॥ ೨೦೫ ॥

ಮಾಹೇಶ್ವರ ಸ್ಥಳ

(೧೬) ಮಾಹೇಶ್ವರ ಜ್ಞಾನಿಸ್ಥಲ

೧

' ಸ್ವಾಮಿ ನೀನು, ಶಾಶ್ವತ ನೀನು : '
ಎತ್ತಿದೆ ಬಿರುದ ಜಗವೆಲ್ಲಱಿಯಲು.
' ಮಹಾದೇವ, ಮಹಾದೇವ : '
ಇಲ್ಲಿಂದ ಮುಂದೆ ಶಬ್ದವಿಲ್ಲ !
ಪಶುಪತಿ ಜಗಕ್ಕೆ ಏಕೋದೇವ :
ಸ್ವರ್ಗ ಮರ್ತ್ಯ ಪಾತಾಳದೊಳಗೆ
ಒಬ್ಬನೆ ದೇವ ಕೂಡಲ ಸಂಗಮದೇವ. ॥ ೫೨೬ ॥

೨

ಶ್ರುತಿಗಗಮ್ಯ, ದ್ವಾದಶಾಂತ್ಯನಪ್ರತಿಮಮಹಿಮಂಗೆ ಪ್ರತಿಯುಂಟೆ ?
' ಸೋಮಃ ಪವತೇ ' ಎಂಬ ಶ್ರುತಿಯನಱಿತು,
ಶಿವ ' ನೇಕೋ ದೇವ, ರುದ್ರನದ್ವಿತೀಯನೆ ' ಂದು
ನಂಬುವುದು, ಕಾಣಿರಣ್ಣಾ.
' ಕೂಡಲ ಸಂಗಮದೇವನಲ್ಲದೆ ಇಲ್ಲ ' ವೆಂದೆತ್ತಿದೆ
ಬಿರುದ ಜಗವೆಲ್ಲಱಿಯಲು. ॥ ೫೨೭ ॥

೩

ಉಪ್ಪರಗುಡಿ, ನಂದಿವಾಹನ ಸದ್ಯೋಜಾತನ
ಬಾಗಿಲ ಮುಂದೆ ಸಾರುತ್ತೈದಾವೆ, ನೋಡಾ :
ಶ್ರುತಿಗಳು ನಾಲ್ಕು ವೇದವೂ ಹುಸಿಯದೆ
' ಭರ್ಗೋದೇವಸ್ಯ ಧೀಮಹಿ ' ಎಂದುದಾಗಿ
ಕೂಡಲ ಸಂಗಮನಲ್ಲದಿಲ್ಲೆಂದುದು ವೇದ. ॥ ೫೨೮ ॥

೪

' ವೇದ ಸ್ವಯಂಭು ' ವೆಂಬ ವಾದಿ ನೀ ಕೇಳಿಲವ್ವೋ :
' ಏಕೋ ದೇವ ರುದ್ರನದ್ವಿತೀಯ ' ನೆಂದು
ನಂಬುವುದು ಕಾಣಿರಣ್ಣಾ
' ಓಂ ದ್ಯಾವಾ ಭೂಮೀಜನಯಂ ದೇವ ಏಕೋ ದೇವ
ಏಕೋ ಹಿ ರುದ್ರೋ ನದ್ವಿತೀಯಾಯ ತಸ್ತುಃ '
ಎಂದು ನಂಬುವುದು, ಕಾಣಿರಣ್ಣಾ
' ಚಕಿತಮಭಿಧತ್ತೇ ' ಎಂದು ಶ್ರುತಿ ಸಾರುತ್ತೈದಾವೆ.
ಜಗದ ಕರ್ತ ಕೂಡಲ ಸಂಗಮದೇವನೊಬ್ಬನೇ, ಕಾಣಿರಣ್ಣಾ. ॥೪॥

೫

ಶ್ರುತಿತತಿಶಿರದ ಮೇಲೆ ' ಅತ್ಯತಿಷ್ಠದ್ದಶಾಂಗುಲ ' ನ
ನಾನೇನೆಂಬೆನಯ್ಯಾ,
ಘನಕ್ಕೆ ಘನಮಹಿಮನ, ಮನಕ್ಕಗೋಚರನ ?
' ಅಣೋರಣೀಯಾನ್ ಮಹತೋ ಮಹೀಯಾನ್ '
ಮಹದಾನೀ ಕೂಡಲ ಸಂಗಮದೇವ. ॥ ೫ ॥

೬

ಸಕಲ ನಿಷ್ಕಲವ ಕೂಡಿಕೊಂಡಿಪ್ಪೆಯಾಗಿ
ಸಕಲ ನೀನೇ, ದೇವಾ; ನಿಷ್ಕಲ ನೀನೇ, ಕಂಡಯ್ಯಾ.
ವಿಶ್ವತಸ್‌ಚಕ್ಷು ನೀನೇ, ದೇವಾ; ವಿಶ್ವತೋಮುಖ ನೀನೇ, ದೇವಾ;
ವಿಶ್ವತೋಬಾಹು ನೀನೇ ದೇವಾ, ಕೂಡಲ ಸಂಗಮದೇವಾ. ॥೬॥

೭

ಎತ್ತೆತ್ತ ನೋಡಿದತ್ತತ್ತ ನೀನೇ ದೇವಾ;
ಸಕಲವಿಸ್ತಾರದ ರೂಹು ನೀನೇ, ದೇವಾ;
ವಿಶ್ವತಸ್‌ಚಕ್ಷು ನೀನೇ, ದೇವಾ; ವಿಶ್ವತೋಮುಖ ನೀನೇ, ದೇವಾ;
ವಿಶ್ವತೋಬಾಹು ನೀನೇ, ದೇವಾ;
ವಿಶ್ವತಃಪಾದ ನೀನೇ, ದೇವಾ; ಕೂಡಲ ಸಂಗಮದೇವಾ. ॥ ೭ ॥

೮

ಜಲಕೂರ್ಮನಾಗಮೇದಿನಿ ಸಪ್ತಸಾಗರ
ಅಜಾಂಡಭಾಂಡ ಹರಿವಿರಂಚಿಗಳು
ನಿಮ್ಮ ಉದರದ ಕೊನೆಯ ಪ್ರಾಣಿಗಳಯ್ಯಾ !
ಕೂಡಲ ಸಂಗನ ಮಹಾಮನೆಯಲು ಅಸ್ತಿಗ್ರಾಹಕನೆಂಬ ಗಣೇಶ್ವರನ
ಇಚ್ಛಾಮಾತ್ರದಿಂದೆ ಜಗಜುಗವಯ್ಯಾ ? ॥ ೫೩೩ ॥

೯

ರುದ್ರ ಮುಖದಲ್ಲಿ, ವಿಷ್ಣು ಭುಜದಲ್ಲಿ, ಜಂಘೆಯಲ್ಲಿ ಅಜ ಜನನವು !
ಇಂದ್ರ ಪಾದದಲ್ಲಿ, ಚಂದ್ರ ಮನದಲ್ಲಿ, ಚಕ್ಷುವಿನಲ್ಲಿ ಸೂರ್ಯ ಜನನವು !
ಮುಖದಲ್ಲಿ ಅಗ್ನಿಯು, ಪ್ರಾಣದಲ್ಲಿ ವಾಯು
ನಾಭಿಯಲ್ಲಿ ಅಂತರಿಕ್ಷವು.
ಸಿರದಲುದಯ ತೆತ್ತೀಸಕೋಟಿ ದೇವತೆಗಳು,
ಪಾದತಳದಲ್ಲಿ ಭೂಮಿ ಜನನವು !
ತ್ರೋತ್ರದಲ್ಲಿ ದಶದಿಕ್ಕುವೂ !
ಜಗವ ನಿಕ್ಷೇಪಿಸಿದ ಕುಕ್ಷಿಯಲ್ಲಿ ಅಕ್ಷಯನಗಣಿತನು !
ಸಾಸಿರ ತಲೆ, ಸಾಸಿರ ಕಣ್ಣು, ಸಾಸಿರ ಕೈ, ಸಾಸಿರ ಪಾದ,
ಸಾಸಿರಸನ್ನಿಹಿತ ನಮ್ಮ ಕೂಡಲ ಸಂಗಯ್ಯ ! ॥ ೫೩೪ ॥

೧೦

ವಿಶ್ವಾಧಿಕೋರುದ್ರನ ಹೊಗಳುವ ಶ್ರುತಿಗಳು :
'ವಿಶ್ವರೂಪಾಯ ವೈ ನಮಃ'
ಪರಮರೂಪನೇ ನಮೋ, ಪರರತತ್ತ್ವನೇ ನಮೋ,
ಆದಿಯಾರೂಢಭಯಂಕರನೇ ನಮೋ
ಹರಿಯನು ಹರಿಸಿದನೇ
ಎಂದು ಶ್ರುತಿಯು ಸಾರುತ್ತಿರಲು—
ಸಂಹಾರಕಾರಣನೇ ನಮೋ, ನಮ್ಮ ಕೂಡಲ ಸಂಗಮದೇವಾ,
ಮಹನ್‌ಮಹದ್‌ಭ್ಯೋ ನಮಃ ॥ ೫೩೫ ॥



ನಟರಾಜನ ಕಂಚಿನ ಪ್ರತಿಮೆ

೧೧

ಅಯ್ದುದೇ ಬ್ರಹ್ಮನ ಕಪಾಲ ಕರದಲ್ಲಿ :
ಅಯ್ದುದೇ ವಿಷ್ಣುವಿನ ನಯನ ಪಾದವಲ್ಲಿ
ಅಯ್ದುದೇ ಕಾಮನ ಸುಟ್ಟ ಭಸ್ಮ ವೈಯಲ್ಲಿ
ಮುಖ ಮೂದಲೆ ಏಕಯ್ಯಾ, ಕೂಡಲ ಸಂಗಮದೇವಾ ? ॥ ೫೩೬ ॥

೧೨

ಹರನ ಕೊರಳಲ್ಲಿಪ್ಪ ಕರೋಟಿಮಾಲೆಯ
ಶಿರದ ಲಿಖಿತವ ಕಂಡು ಮರುಳುತಂಡಗಳು ಓದಿ ನೋಡಲು
' ಇವನಜ, ಇವ ಹರಿ, ಇವ ಸುರಪತಿ,
ಇವ ಧರಣೀಂದ್ರನಿವನಂತಕ ' ನೆಂದು
ಹರುಷದಿಂದ ಸರಸವಾಡಿತ್ತ ಕಂಡು
ಹರ ಮುಕುಳಿತನಾಗಿ ನಸು ನಕ್ಕನು
ನಮ್ಮ ಕೂಡಲ ಸಂಗಮದೇವ. ॥ ೫೩೭ ॥

೧೩

ಅದುರಿತು ಪಾದಾಘಾತದಿಂದ ಧರೆ;
ಬಿದಿರಿದುವು ಮುಕುಟ ತಾಗಿ ತಾರಕೆಗಳು;
ಉದುರಿದುವು ಕೈ ತಾಗಿ ಲೋಕಂಗಳೆಲ್ಲಾ !
ಮಹೀ ಪಾದಾಘಾತಾದ್ ವ್ರಜತಿ ಸಹಸಾ ಸಂಶಯಪದಂ
ಪದಂ ವಿಷ್ಣೋರ್ ಭ್ರಾಮ್ಯದ್ಭುಜಪರಿಘರುಗ್ಣಗ್ರಹಗಣಂ ।
ಮುಹುರ್ ದ್ಯೌರ್ದೌಸ್ಥ್ಯಂ ಯಾತ್ಯನಿಭೃತ ಜಟಾತಾಡಿತತಟಾ
ಜಗದ್ರಕ್ಷಾಯೈ ತ್ವಂ ನಟಸಿ ನನು ವಾಮೈವ ವಿಭುತಾ ॥
ನಮ್ಮ ಕೂಡಲ ಸಂಗಮದೇವನಿಂದು ನಾಟ್ಯವನಾಡೆ. ॥ ೫೩೮ ॥

೧೪

ಆಜುಕೋಟಿ ಬ್ರಹ್ಮರು ಮಡಿವಲ್ಲಿ ನಾರಾಯಣಗೆ ಒಂದು ದಿನವಾಯ್ತು.
ನಾರಾಯಣರೊಂದು ಕೋಟಿ ಮಡಿವಲ್ಲಿ ರುದ್ರನ ಕಣ್ಣೆವೆ ಹಳಚಿತ್ತು.
ರುದ್ರಾವತಾರ ಹಲವಳಿದಲ್ಲಿ
ನಮ್ಮ ಕೂಡಲ ಸಂಗಮದೇವನೇನೆಂದೂ ಅಜೀಯನು. ॥೫೩೯॥

೧೫

ಯುಗಜುಗಪ್ರಳಯವಹುದೂ ಕಾಣೆನಿಂದೂ ಕಾಣೆ !
ಧಿಗಿಲುಭುಗಿಲೆಂದುರಿವುದೂ ಕಾಣೆನಿಂದೂ ಕಾಣೆ !
ಕೂಡಲ ಸಂಗಮದೇವನಲ್ಲದೆ ತಲೆದೋಱುವ
ದೈವಂಗಳನೂ ಕಾಣೆನಿಂದೂ ಕಾಣೆ ! ॥ ೫೪೦ ॥

೧೬

ಒಬ್ಬ ಕೆಂಜಸೊಬ್ಬ ಕರಿಕನೊಬ್ಬ ಶುದ್ಧಧವಳಿತನೆಂತಯ್ಯಾ, ಲಿಂಗವೇ ?
ಒಬ್ಬರಿಗೊಬ್ಬರು ಘನವೆಂಬರು : ಅದೆಂತಯ್ಯಾ ?
ಒಬ್ಬರಿಗೊಬ್ಬರು ಹಿರಿದೆಂಬರು; ಎಂತಯ್ಯಾ ?
ಬ್ರಹ್ಮಪ್ರಳಯ, ವಿಷ್ಣುಮರಣ ಉಂಟು,
ನಮ್ಮ ಕೂಡಲ ಸಂಗಂಗಿಲ್ಲ ! ॥ ೫೪೧ ॥

೧೭

ಹರಿ-ಹರನೊಂದೆ ಎಂದರೆ ಸುರಿಯವೆ ಬಾಯಿಲ್ಲಿ ಬಾಲಹುಳುಗಳು ?
ಹರಿಗೆ ಹತ್ತುಪ್ರಳಯ ! ಬ್ರಹ್ಮಂಗನಂತಪ್ರಳಯ !
ಹರಂಗೆ ಪ್ರಳಯವುಂಟೆಂಬುದ ಬಲ್ಲರೆ ನೀವು ಹೇಳಿರೆ !
ಪ್ರಳಯ, ಪ್ರಳಯ ಅಂದಂದಿಂಗೆ !
ಹಳೆಯ ಕೂಡಲ ಸಂಗಮದೇವ !! ॥ ೫೪೨ ॥

೧೮

ವಿಷ್ಣು ಕರ್ಮಿ, ರುದ್ರ ನಿಷ್ಕರ್ಮಿ :
ಕ್ರಮವನಱಿಯದೆ ನುಡಿವಿರೋ !
ವೇದಶ್ರುತಿಗಳ ತಿಳಿಯಲಱಿಯದೆ
ವಾದವ ಮಾಡುವರಿಲ್ಲಾ ಕೇಳಿ :
ವಿಷ್ಣು ನಾನಾಯೋನಿಯಲ್ಲಿ ಬಾರದ ಭವಂಗಳಲ್ಲಿ ಬರುತಿಪ್ಪ :
ರುದ್ರನಾವ ಯೋನಿಯಲ್ಲಿ ಬಂದನೆಂದು ನೀವು ಹೇಳಿರೊ !

" ಓಂ ವಿಷ್ಣೋಃ ಕರ್ಮಾಣಿ ಪಶ್ಯತ ಯತೋ ವ್ರತಾನಿ ಪಸ್ಪಶೇ
ಇಂದ್ರಸ್ಯ ಯುಜ್ಯಃ ಸಖಾ "
" ತ್ರೀಣಿ ಪದಾ ವಿಚಕ್ರಮೇ ವಿಷ್ಣುರ್‌ಗೋಪಾ ಅದಾಭ್ಯಃ
ಅತೋ ಧರ್ಮಾಣಿ ಧಾರಯನ್ "
"ತದ್‌ವಿಪ್ರಾಸೋ ವಿಪನ್ಯವೋ ಜಾಗೃವಾಂಸಃ ಸಮಿಂಧತೇ
ವಿಷ್ಣೋರ್‌ಯತ್ ಪರಮಂ ಪದಮ್ "
ಎಂಬ ಶ್ರುತಿಯ ವಚನವ ತಿಳಿಯಿಂ ಭೋ
ವರ್ಮವನೆತ್ತಿ ನುಡಿದಲ್ಲದೆ ಸಿಲ್ಲಿರಿ :
ನಿಮ್ಮ ಕರ್ಮವು ಅತ್ಯತಿಷ್ಠದ್‌ದಶಾಂಗುಲದಿಂದತ್ತತ್ತಲೆ !
ಕೂಡಲ ಸಂಗಮದೇವಾ. ॥ ೫೪೩ ॥

೮೯

ಅಮೃತವತಿ ಸೋಮಶಂಭುವಿಂಗೆ ಹುಟ್ಟಿದಾತ ಇಂದ್ರ;
ಸತ್ಯಋಷಿ ಜ್ಯೇಷ್ಠಾದೇವಿಗೆ ಹುಟ್ಟಿದಾಪ ಬ್ರಹ್ಮ;
ವಸುದೇವ ದೇವಕಿಗೆ ಹುಟ್ಟಿದಾತ ವಿಷ್ಣು;
ನಾಭಿರಾಜ ಮರುತಾದೇವಿಗೆ ಹುಟ್ಟಿದಾತನರುಹ.
ಇವರೆಲ್ಲರೂ ಯೋನಿಜರೆಂಬುವ ತ್ರೈಜಗ ಬಲ್ಲುದು.
ಉತ್ಪತ್ತಿ ಸ್ಥಿತಿ ಪ್ರಳಯಕ್ಕೆ ಹೊಱಗಾದ ಕೂಡಲ ಸಂಗಮದೇವಂಗೆ
ಮಾತಾಪಿತರುಳ್ಳರೆ ಹೇಳಿರೋ ! ॥ ೫೪೪ ॥

೯೦

ಇಬ್ಬರು ಮೂವರು ದೇವರೆಂದು ಉಬ್ಬಿ ಮಾತನಾಡಬೇಡ :
ಒಬ್ಬನೇ ಕಾಣಿರೋ, ಇಬ್ಬರೆಂಬುದು ಹುಸಿ ನೋಡಾ !
ಕೂಡಲ ಸಂಗಮದೇನನಲ್ಲದೆ ಇಲ್ಲವೆಂದಿತ್ತು ವೇದ. ॥ ೫೪೫ ॥

೯೧

ಹುಟ್ಟಿಸುವಾತ ಬ್ರಹ್ಮನೆಂಬರು, ರಕ್ಷಿಸುವಾತ ವಿಷ್ಣುವೆಂಬರು, ನೋಡಾ.
ಬ್ರಹ್ಮ ತನ್ನ ಸಿರವನ್ನೇಕೆ ಹುಟ್ಟಿಸಲಾಱ ?
ವಿಷ್ಣು ತನ್ನ ಮಗನನ್ನೇಕೆ ರಕ್ಷಿಸಲಾಱ ?
ದುಷ್ಟನಿಗ್ರಹ ಶಿಷ್ಟಪರಿಪಾಲಕ ನಮ್ಮ ಕೂಡಲ ಸಂಗಮದೇವ. ॥೫೪೬॥

೨೨

' ಕೇಶವನಲ್ಲದೆ ಅಂತಃಪರದೈವವಿಲ್ಲೆ ' ಎಂದು
ವೇದವ್ಯಾಸಮುನಿ ಭಂಗವಾದುದನಱಿಯಿರೆ ?
'' ಅಪಮೇವ ಜಗತ್‌ಕರ್ತಾ । ಪುನಃ ಕರ್ತಾ ಪುನೇಶ್ವರಃ''
ಎಂದು ವಿಷ್ಣು ಹೇಳಿದ ವಚನವ ಮುಱಿದಿರಲ್ಲಾ !
ಕೂಡಲ ಸಂಗಮದೇವನು ॥ ೨೪೭ ॥
ದಕ್ಷ ಯಜ್ಞವ ಕೆಡಿಸಿದುದ ಮಱಿದಿರಲ್ಲಾ !!

೨೩

ನಾರಾಯಣನೆಂಬವನ ಕಾಣೆ, ನೀರಾಯಣನೆಂಬವನ ಕಾಣೆ !
ಬೊಮ್ಮನೆಂಬವನ ಕಾಣೆ, ಗಿಮ್ಮನೆಂಬವನ ಕಾಣೆ !
ವಿಷವಟ್ಟ ಸುಡುವಲ್ಲಿ ವೀರಭದ್ರ ಕೊಲುವಲ್ಲಿ
ಕೂಡಲ ಸಂಗಯ್ಯಂಗೆ ಶರಣೆಂದು
ಮೊಱೆಯಿಟ್ಟರೆಲ್ಲರೂ. ॥ ೨೪೮ ॥

೨೪

ಅನ್ಯತನ ಕಪಿವಲ್ಲಿ, ವಿಷವಟ್ಟ ಸುಡುವಲ್ಲಿ,
ದೇವರೆಂಬವರಿತ್ತ ಹೋದರೇನೀಂ ಭೋ ?
ಅಂದೊಮ್ಮೆ ಓಡಿಹೋಗಿ ಅತನ ಮೊಱೆಯ ಹೋಗುವಂದು
ದೇವರೆಂಬವರಿತ್ತ ಹೋದರೇನಿಂ ಭೋ ?
ಕೂಡಲ ಸಂಗಯ್ಯ ದೇವರಿಗೆ ದೇವನು;
ನೀವೆಲ್ಲಾ ಆಳೆಂಬುವನಱಿಯಿಂ ಭೋ ! ॥ ೨೪೯ ॥

೨೫

ವಿಷ್ಣು ಬಲ್ಲಿದನೆಂಬೆನೆ ?
ದಶಾವತಾರದಲ್ಲಿ ಭಂಗವಟ್ಟುದಕ್ಕೆ ಕಡೆಯಿಲ್ಲ !
ಬ್ರಹ್ಮ ಬಲ್ಲಿದನೆಂಬೆನೆ ?
ಸಿರಹೋಗಿ ನಾನಾವಿಧಿಯಾದ !

ವೇದ ಬಲ್ಲಿತ್ತೆಂಬೆನೆ ? ನಾನಾಮುಖದಲ್ಲಿ ಸ್ತುತಿಯಿಸಿತ್ತಲ್ಲದೆ
ಲಿಂಗದ ನಿಲುಕಡೆಯ ಕಾಣದು !
ಶಾಸ್ತ್ರ ಬಲ್ಲಿತ್ತೆಂಬೆನೆ ? ಶಬ್ದಕ್ಕೆ !
ಪುರಾಣ ಬಲ್ಲಿತ್ತೆಂಬೆನೆ ? ಪೂರ್ವಕ್ಕೆ !
ಆಗಮ ಬಲ್ಲಿತ್ತೆಂಬೆನೆ ? ವಾಯಹೊಂದಿತ್ತು !
ಇದು ಕಾರಣ, ಕೂಡಲ ಸಂಗಯ್ಯನೇ ನಿತ್ಯ :
ಉಳಿದ ದೈವವೆಲ್ಲಾ ಅನಿತ್ಯ, ಕಾಣಿ, ಭೋ ! || ೫೫೦ ||

೨೬

ಮಜ್ಜಿಯಲಾಗದು ಹರಿಯ, ಮಜ್ಜಿಯಲಾಗದು ಬ್ರಹ್ಮನ !
ಮಜ್ಜಿಯಲಾಗದು ತೆತ್ತೀಸಕೋಟಿ ದೇವರ್ಕಳ !
ನಮ್ಮ ಕೂಡಲ ಸಂಗಮದೇವರ ಮಜ್ಜಿಯಲಿಹುದು ! || ೫೫೧ ||

೨೭

ಬಿದಿರಿಲೆಯ ಮೆಲಿದರೆ ಮೆಲಿದಂತಲ್ಲದೆ,
ರಸವನು ಪಡೆಯಲು ಬಾರದು !
ಮಳಲ ಹೊಸೆದರೆ ಹೊಸೆದಂತಲ್ಲದೆ,
ಸರನಿಯ ಪಡೆಯಲು ಬಾರದು !
ನೀರ ಕಡೆದರೆ ಕಡೆದಂತಲ್ಲದೆ,
ಬೆಣ್ಣೆಯ ಪಡೆಯಲು ಬಾರದು !
ನಮ್ಮ ಕೂಡಲ ಸಂಗಮದೇವನಲ್ಲದೆ,
ಅನ್ಯದೈವಕ್ಕೆಱಗಿದರೆ
ಹೊಳ್ಳಕುಟ್ಟಿ ಕೈ ಹೊಟ್ಟೆಯಾದಂತಾಯಿತ್ತಯ್ಯಾ ! || ೫೫೨ ||

೨೮

ಆಗಳೂ ಲೋಗರ ಮನೆಯ ಬಾಗಿಲ ಕಾಯ್ದುಕೊಂಡಿಪ್ಪವು,
ಕೆಲವು ದೈವಂಗಳು;
ಹೋಗೆಂದರೆ ಹೋಗವು ಕೆಲವು ದೈವಂಗಳು;
ನಾಯಿಂದಲೂ ಕರಕಷ್ಟ ಕೆಲವು ದೈವಂಗಳು.

ಲೋಗರ ಬೇಡಿಕೊಂಡುಂಬ ದೈವಂಗಳು
ತಾವೇನ ಕೊಡುವುವು, ಕೂಡಲ ಸಂಗಮದೇವಾ ? || ೫೫೩ ||

೨೯

ಗಾಡಿಗ ಡಿಂಗು ಗಂಗೆ ಚಿಕ್ಕು ಮುಟ್ಟಿಗೆ ಹಸುರಂಬಲಿ
ಮುಟ್ಟಿಗೆ ಹುರಿಬುತ್ತಿಯ ಬೇಡಿ,
ಮನುಷ್ಯರ ಪಿಡಿದು, ಪೀಡಿಸಿ ತಮ್ಮ ಬಸುರ್ಗೆ ಕಾಣದೆ,
ಈಡಾಡಿದ ಕೂಳಂಬಲಿಯನಾಯ್ದು ಕುಜುಕುವ
ಹೇಸಿ ದೈವಂಗಳ ಬೇಡಿ ಬೇಡಿ ನಿರರ್ಥ ಕೆಡಬೇಡ, ಎಲವೋ,
ಕೂಡಲ ಸಂಗಮದೇವರ ನೆಜಲಿ ನಂಬುವುದೆಲವೋ ! || ೫೫೪ ||

೩೦

ಹಾಳುಮೊರಡಿಗಳಲ್ಲಿ, ಊರ ದಾರಿಗಳಲ್ಲಿ,
ಕೆಜಲಿ ಬಾವಿ ಹೂಗಿಡುಮರಂಗಳಲ್ಲಿ,
ಗ್ರಾಮಮಧ್ಯಗಳಲ್ಲಿ, ಚೌಪಥಪಟ್ಟಣಪ್ರದೇಶದಲ್ಲಿ,
ಹಿರಿಯಾಲದ ಮರದಲ್ಲಿ ಮನೆಯ ಮಾಡಿ,
ಕಜಲಿವೆಮ್ಮೆಯ, ಹಸುಗೂಸು ಬಸುಜಲಿ ಬಾಣತಿ
ಕುಮಾರಿ ಕೊಡಗೂಸೆಂಬವರ ಹಿಡಿದು ತಿಂಬ, ತಿರಿದುಂಬ
ಮಾರಯ್ಯ ಬೀರಯ್ಯ ಕೇಚರಗಾವಿಲ ಅಂತರ ಬೆಂತರ
ಕಾಳಯ್ಯ ಮಾರಯ್ಯ ದೂಳಯ್ಯ ಕೇತಯ್ಯಗಳೆಂಬ
ನೂಜಲಿಮಡಕೆಗೆ
ನಮ್ಮ ಕೂಡಲ ಸಂಗಮದೇವ ಶರಣೆಂಬುದೊಂದು ದಡಿ ಸಾಲದೆ ?
|| ೫೫೫ ||

೩೧

ಅರಗು ತಿಂದು ಕರಗುವ ದೈವವ,
ಉರಿಯ ಕಂಡರೆ ಮುರುಟುವ ದೈವವನೆಂತು ಸರಿಯೆಂಬೆನಯ್ಯಾ ?
ಅವಸರ ಬಂದರೆ ಮಾಜಲಿವ ದೈವವನೆಂತು ಸರಿಯೆಂಬೆನಯ್ಯಾ ?

ಅಂಜಿಕೆಯಾದರೆ ಹೂಳುವ ದೈವವನೆಂತು ಸರಿಯೆಂಬೆನಯ್ಯಾ ?
ಸಹಜಭಾವ ನಿಜೈಕ್ಯ ಕೂಡಲ ಸಂಗಮದೇವನೊಬ್ಬನೇ ದೇವ.
॥ ೫೫೬ ॥

೫೨

ಮಾರಿಕವ್ವೆಯ ನೋಂತು ಕೊರಳಲ್ಲಿ ಕಟ್ಟಿಕೊಂಬರು :
ಸಾಲಬಟ್ಟರೆ ಮಾಜಿಕೊಂಬರಯ್ಯಾ !
ಸಾಲಬಟ್ಟರೆ ಅವಜಿನೊತ್ತೆಯನಿಟ್ಟುಕೊಂಡುಂಬರಯ್ಯಾ !
ಮಾಜಿವೋಗನೊತ್ತೆವೋಗ ನಮ್ಮ ಕೂಡಲ ಸಂಗಮದೇವ. ॥೫೫೭॥

೫೩

ಉಣಲುಡಲು ಮಾರಿಯಲ್ಲದೆ ಕೊಲಲು ಕಾಯಲು ಮಾರಿಯೆ ?
ತನ್ನ ಮಗನ ಜವನೊಯ್ದಲ್ಲಿ ಅದೆತ್ತ ಹೋದಳಾ ಮಾರಿಕವ್ವೆ ?
ಈವಕಾವರೆ ನಮ್ಮ ಕೂಡಲ ಸಂಗಯ್ಯನಲ್ಲದೆ ಮತ್ತೊಂದು ದೈವವಿಲ್ಲಾ
॥ ೫೫೮ ॥

೫೪

ಮೊಜಿನ ಗೋಟಿಗೆ ಬರ್ದ ಕಿಜುಕುಳ ದೈವಕ್ಕೆ
ಕುಜುಯನಿಕ್ಕೆಹೆವೆಂದು ನಲಿನಲಿದಾಡುವರು :
ಕುಜು ಸತ್ತು ಕಾವುದೆ ಹರಮುಳಿದವರ ?
ಕುಜು ಬೇಡ, ಮಜು ಬೇಡ :
ಬಜುಯ ಪತ್ರೆಯ ತಂದು
ಮಜುಯಿದೆ ಪೂಜಿಸು ನಮ್ಮ ಕೂಡಲ ಸಂಗಮದೇವನ. ॥೫೫೯॥

೫೫

ಬನ್ನಿರೆ ಅಕ್ಕಗಳು, ಹೋಗಿರೆ ಆಲದ ಮರಕ್ಕೆ !
ಕಚ್ಚುವುವೆ ನಿಮ್ಮ ಚಿಪ್ಪಿನ ಹಲ್ಲುಗಳು ?
ಹೆಚ್ಚಿಸುವುವೆ ನಿಮ್ಮ ಬಚ್ಚಣಿಕೆಯ ರೂಹುಗಳು ?
ನಮ್ಮ ಕೂಡಲ ಸಂಗಮದೇವನಲ್ಲದೆ
ಪರದೈವಂಗಳು ಮನಕ್ಕೆ ಬಂದುವೆ,
ಬಿಕ್ಕನೆ ಬಿರಿವ ದೈವಂಗಳು ?
॥ ೫೬೦ ॥

೫೬

ಮಡಕೆ ದೈವ, ಮೊಲಿ ದೈವ, ಬೀದಿಯ ಕಲ್ಲು ದೈವ,
ಹಣಿಗೆ ದೈವ, ಬಿಲ್ಲ ನಾರಿ ದೈವ, ಕಾಣಿರೋ,
ಕೊಳಗ ದೈವ, ಗಿಣ್ಣಿಲು ದೈವ, ಕಾಣಿರೋ !
ದೈವ, ದೈವವೆಂದು ಕಾಲಿಡಲಿಂಬಿಲ್ಲಾ !!
ದೈವನೊಬ್ಬನೆ ಕೂಡಲ ಸಂಗಮದೇವ. ॥ ೫೬೧ ॥

೫೭

ರಿಣ ತಪ್ಪಿದ ಹೆಂಡಿರಲ್ಲಿ, ಗುಣ ತಪ್ಪಿದ 'ನಂಟರಲ್ಲಿ,
ಜೀವವಿಲ್ಲದ ದೇಹದಲ್ಲಿ ಫಲವೇನೊ ?
ಆಳ್ದನೊಲ್ಲದ ಆಳಿನಲ್ಲಿ, ಸಿರಿ ತೊಲಗಿದ ಅರಸಿನಲ್ಲಿ,
ವರವಿಲ್ಲದ ದೈವದಲ್ಲಿ ಫಲವೇನೊ ?
ಕಳಿದ ಹೂವಿನಲ್ಲಿ ಕಂಪ, ನುಳಿದ ಸೂಳೆಯಲ್ಲಿ ಪಂಪ,
ಕೊಳಚಿಯ ನೀರಿನಲ್ಲಿ ಗುಂಪನಜಿಸುವಿರಿ, ಮರುಳೇ—
ವರಗುರು ವಿಶ್ವಕ್ಕೆಲ್ಲ ಗಿರಿಜಾಮನೋವಲ್ಲಭ
ಪರಮ ಕಾರಣಿಕ ನಮ್ಮ ಕೂಡಲ ಸಂಗಮದೇವ. ॥ ೫೬೨ ॥

೫೮

ಲಿಂಗಶಿವಾಲಯದ ಮುಂದೆ ಸಿಂಹ ಶೂದ್ರಿಕನಿಲ್ಲದಿಲ್ಲ;
ನಂದಿಕೇಶ್ವರ ಭೃಂಗಿನಾಟ್ಯ ನಮ್ಮ ಲಿಂಗನ ಮುಂದೆ;
ಇದಕ್ಕೆ ದಿಷ್ಟ, ದೀವಿಗೆ ನಮ್ಮ ಲಿಂಗನ ಮುಂದೆ !
ಅನ್ಯದೈವವೆಂಬುದ ತೂಲಿಯೂ ಕಾಣಬಾರದು :
ನೊಸಲ ಕಣ್ಣಭವನೊಬ್ಬನೆ ನಮ್ಮ ಕೂಡಲ ಸಂಗಮದೇವ.
॥ ೫೬೩ ॥

೫೯

ಗುಡಿಯೊಳಗಿರ್ದು ಗುಡಿಯ ನೇಣ ಕೊಯಿದರೆ
ಗುಡಿಯ ದಡಿ ಬಿದ್ದು ಹಲ್ಲು ಹೋಹುದು, ನೋಡಾ !
ಪೊಡವಿಗೀಶ್ವರನ ಗರ್ಭಾಸನದೊಳಗಿರ್ದು

ನುಡಿವರು ಮತ್ತೊಂದು ದೈವವುಂಟೆಂದು :
ತುಡುಗುಣಿ ನಾಯನು ಹಿಡಿತಂದು ಸಾಕಿದನೆ
ತನ್ನೊಡೆಯಂಗೆ ಬಗುಳುವಂತೆ, ಕಾಣಾ,
ಕೂಡಲ ಸಂಗಮದೇವಾ ! ॥ ೫೬೪ ॥

೪೦

ಅಸಮಾಕ್ಷ ಲಿಂಗಕ್ಕೆ ಅನ್ಯದ್ಯೈವವ ಸರಿಯೆಂಬನ ಬಾಯಲ್ಲ
ಮುಸೆದ ಕೂರಲಗನಿಕ್ಕಿದೆ ಮಾಣ್ಬನೆ ?
ಹುಸಿಯಾಗಿ ನುಡಿದವನ ನಾಯಾಗಿ ಬಗುಳಿಸನೆ ?
ಹಿರಿಯರುತ್ತಮರೆನ್ನದವರ ಕುದುರೆಯಾಗಿ ಕಟ್ಟಿಸನೆ ?
ಗುರುಲಘುವೆಂಬವರ ಬಾಯಲ್ಲಿ ವೆಟ್ಟ ಪುಡಿಯ ಹೊಯ್ಯದೆ ಮಾಣ್ಬನೆ ?
ಪರಸ್ತ್ರೀಗಳುಪಿದವರ ಗಾಣದಲ್ಲಿಕ್ಕಿ ಹಿಳಿಯನೆ ?
ಪರಧನಕ್ಕಳಿಪಿದವರ ಹಿಡಿಕಂಡಗೊಯ್ಯನೆ ?
ಕೂಡಲ ಸಂಗಮದೇವಾ, ನಿಮ್ಮ ಹೇಳಿದ ಹೇಳಿಕೆಯಿಂದ
ಪಿಂಬೇರ ಮೈಲಿಗೆಮೇಳವಾಡುತ್ತಿದ್ದ, ಕಾಣಾ, ತ್ರೈಜಗದೊಳಗೆ !
॥ ೫೬೫ ॥

೪೧

ಶಿವಮಯ ವಿಷ್ಣುವಲ್ಲ, ವಿಷ್ಣುಮಯ ಶಿವನಲ್ಲ, ನುಡಿಯದಿರಿಂ ಭೋ !
ನಾರಾಯಣ ಹರನಲ್ಲ : ನುಡಿಯದಿರಿಂ ಭೋ !
ಶಿವನು ವಿಷ್ಣುವಲ್ಲ : ನುಡಿಯದಿರಿಂ ಭೋ !!
ನಮ್ಮ ಕೂಡಲ ಸಂಗಮದೇವನನಜಾಯದ ಸೂನೆಗಾಱರಿಲ್ಲಾ
ನುಡಿಯದಿರಿಂ ಭೋ !!! ॥ ೫೬೬ ॥

೪೨

ಅವಲಕ್ಷಣ ನಾಯನುಡಿಯ ಸಡಗರ
ಜೊವಿಗೆ ಮೃತ್ಯುವಿನ ನುಡಿಗೊಳಗಾಯಿತ್ತು !
ಬೇಡವೋ, ಪರವಾದಿ, ಗಳಹದಿರು;
ಬೇಡವೋ, ದೂಷಕಾ, ಬಗುಳದಿರು !

ಭಕ್ತಿಗೆಯೂ ಬೇಟಕ್ಕೆಯೂ ಜಾತಿಸೂತಕವುಂಟೆ ?
ಪರುಷ ಮುಟ್ಟಲು ಕಬ್ಬುನ ಹೊನ್ನಾಯಿತ್ತು, ಕಾಣಾ.
ನಮ್ಮ ಕೂಡಲ ಸಂಗನ ಶರಣರನವರಿವರೆಂದರೆ
ಕುಂಭಿಯ ಪಾತಕ ನಾಯಕನರಕ ತಪ್ಪದು, ಕಾಣಾ. ॥ ೫೬೭ ॥

೪೩

ವಿಷ್ಣುವ ಪೂಜಿಸಿ ಮುಡುಹ ಸುಡಿಸಿಕೊಂಬುದ ಕಂಡೆ.
ಜಿನ್ನನ ಪೂಜಿಸಿ ಬತ್ತಲೆಯಿಪ್ಪುದ ಕಂಡೆ;
ಮೈಲಾರನ ಪೂಜಿಸಿ ನಾಯಾಗಿ ಬಗುಳುವುದ ಕಂಡೆ,
ನಮ್ಮ ಕೂಡಲ ಸಂಗನ ಶರಣರ ಪೂಜಿಸಿ
ದೇವಾ ಭಕ್ತರೆನಿಸಿಕೊಂಬುದ ಕಂಡೆ. ॥ ೫೬೮ ॥

೪೪

ಬ್ರಾಹ್ಮಣನೆ ದೈವವೆಂದು ನಂಬಿದ ಕಾರಣ
ಗೌತಮಮುನಿಗೆ ಗೋವೇಧೆಯಾಯಿತ್ತು.
ಬ್ರಾಹ್ಮಣನೆ ದೈವವೆಂದು ನಂಬಿದ ಕಾರಣ
ಬಲಿಗೆ ಬಂಧನವಾಯಿತ್ತು.
ಬ್ರಾಹ್ಮಣನೆ ದೈವವೆಂದು ನಂಬಿದ ಕಾರಣ
ಕರ್ಣನ ಕವಚ ಹೋಯಿತ್ತು.
ಬ್ರಾಹ್ಮಣನೆ ದೈವವೆಂದು ನಂಬಿದ ಕಾರಣ
ದಕ್ಷಂಗೆ ಕುಱಿದಲೆಯಾಯಿತ್ತು.
ಬ್ರಾಹ್ಮಣನೆ ದೈವವೆಂದು ನಂಬಿದ ಕಾರಣ
ಪರಶುರಾಮನು ಸಮುದ್ರಕ್ಕೆ ಗುಱಿಯಾದನು.
ಬ್ರಾಹ್ಮಣನೆ ದೈವವೆಂದು ನಂಬಿದ ಕಾರಣ
ನಾಗಾರ್ಜುನನ ತಲೆ ಹೋಯಿತ್ತು.
ದೇವಾ ಭಕ್ತನೆಂದು ನಂಬಿದ ಕಾರಣ
ನಮ್ಮ ಕೂಡಲ ಸಂಗನ ಶರಣರು ಕೈಲಾಸವಾಸಿಗಳಾದರು. ॥ ೫೬೯ ॥

೪೫

ಆದಿ ಪುರಾಣ ಅಸುರರಿಗೆ ಮಾರಿ,
ವೇದಪುರಾಣ ಹೋತಿಂಗೆ ಮಾರಿ.
ರಾಮಪುರಾಣ ರಕ್ಕಸರಿಗೆ ಮಾರಿ,
ಭಾರತ ಪುರಾಣ ಗೋತ್ರಕ್ಕೆ ಮಾರಿ.
ಎಲ್ಲಾ ಪುರಾಣ ಕರ್ಮಕ್ಕೆ ಮೊದಲು :
ನಿಮ್ಮ ಪುರಾಣಕ್ಕೆ ಪ್ರತಿಯಿಲ್ಲಾ,
ಕೂಡಲ ಸಂಗಮದೇವಾ. ॥ ೫೭೦ ॥

೪೬

ನಿಮ್ಮ ವಚನ ಎನ್ನ ಪುಣ್ಯವೆಂಬುದು ಹುಸಿಯಾಯಿತ್ತು, ನೋಡಾ.
ಶಾಸ್ತ್ರದ ವಚನ ಹೋತಿಂಗೆ ಮಾರಿ :
ಎಂತು ನಂಬುವೆನಯ್ಯಾ ?
' ನಾನು ಕೊಲ್ಲೆ, ನೀನು ಕೊಂದಿತ್ತೆ'ಂಬ ಸೂನೆಗಾಡರನೇನಂಬೆ,
ಕೂಡಲ ಸಂಗಮದೇವಾ ? ॥ ೫೭೧ ॥

೪೭

ಮಾತಿನ ಮಾತಿಂಗೆ ನಿನ್ನ ಕೊಂದಹರೆಂದು
ಎಲೆ ಮೋತೇ, ಅಳು, ಕಂಡಾ !
ವೇದವನೋದಿದವರ ಮುಂದೆ ಅಳು, ಕಂಡಾ !
ಶಾಸ್ತ್ರವ ಕೇಳಿದವರ ಮುಂದೆ ಅಳು, ಕಂಡಾ !!
ನೀನತ್ತುದಕ್ಕೆ ತಕ್ಕುದ ಮಾಡುವ ಕೂಡಲ ಸಂಗಮದೇವ ॥ ೫೭೨॥

೪೮

ದಕ್ಷಯಾಗವ ನಡೆಸಲೆಂದು ಅಜಮುಖ್ಯರಾದ ಸುರರೆಲ್ಲಾ
ನೆರದು ಬಂದ ಬಾಯ ನೋಡಾ,
ಬಾಯ ತಪ್ಪಿಸಿ ಉಣಬಂದ ದೈವದ ಬೆಂದ ಬಾಯ ನೋಡಾ !
ಉಣ್ಣದೆ, ಉಡದೆ, ಹೊಗೆಯ ಕೈಯಲಿ ಸತ್ತ ಅಣ್ಣಗಳ ಕೇಡ ನೋಡ,
ಕೂಡಲ ಸಂಗಮದೇವಾ ! ॥ ೫೭೩ ॥

೪೯

ಏನಯ್ಯಾ, ವಿಪ್ರರು ನಡಿಯಿಂದಿ ನಡೆಯರು : ಇದೆಂತಯ್ಯಾ ?
ತಮಗೊಂದು ಬಟ್ಟೆ, ಶಾಸ್ತ್ರಕ್ಕೊಂದು ಬಟ್ಟೆ !
ಕೂಡಲ ಸಂಗಮದೇವಾ, ಮೂರೇ ರ ಒಸಬ್ಬ
ವಿಪ್ರರು ಹುಟ್ಟಿ ಗೋಹತ್ಯಾಂಸಕ್ಕೆ ತಿಂದುವೆಂಬುದ್ಕೆ ಇದೆ ಬೈಪ್ಪ !
|| ೨೭೪ ||

೫೦

ಹೊಲೆಯೊಳಗೆ ಹುಟ್ಟಿ ಚಂಡಾಲನಂತಾದೆ,
ಎಲವೋ, ಮಾತಂಗಿಯ ಮಗ ನೀನು !
ಸತ್ತುದನೆಳೆವನೆತ್ತಣ ಹೊಲೆಯ ?
ಹೊತ್ತು ತಂದು ನೀವು ಕೊಲುವಿರಿ.
ಶಾಸ್ತ್ರವೆಂಬುದು ಹೋತಿಂಗೆ ಮಾರಿ,
ವೇದವೆಂಬುದು ನಿಮಗೆ ತಿಳಿಯದು.
ನಮ್ಮ ಕೂಡಲ ಸಂಗನ ಶರಣರು
ಕರ್ಮವಿರಹಿತರು, ಶರಣನನ್ನಿಹಿತರು, ಲಿಂಗಾವಧಾನಿಗಳಾತ್ಮರು :
ಅವರಿಗೆ ತೋಜಲು ವ್ರತಿಯಿಲ್ಲವೊ ! || ೨೭೫ ||

೫೧

ಇಟ್ಟಿಯ ಹಣ್ಣು ನರಿ ತಿಂದು ಸೃಷ್ಟಿ ತಿರುಗಿತೆಂಬಂತೆ
ಮಟ್ಟಿಯನಿಟ್ಟು ದ್ವಿಜರ ಮಾತದೇಕೆ ?
ಹಗಲುಗಾಣದ ಗೂಗೆ ಇರುಳಾಯಿತ್ತೆಂದರೆ
ಜಗಕ್ಕೆ ಇರುಳಪ್ಪುದೆ, ಮರುಳೆ ||
ಹೋಮದ ನೆವದಲ್ಲಿ ಹೋತನ ತಿಂಬ
ಅನಾಮಿಕರೊಡನಾಡಿ ಗೆಲುವೆನೇನು,
ಕೂಡಲ ಸಂಗಮದೇವಾ ?
|| ೨೭೬ ||

೫೨

ಮೀಂಬುಲಿಗನ ಹಕ್ಕಿಯಂತೆ ನೀರ ತಡಿಯಲ್ಲಿದ್ದು
ಮೂಗ ಹಿಡಿದು ಧ್ಯಾನವ ಮಾಡುವರಯ್ಯಾ.
ಬಿಟ್ಟ ಮುಂಡೆವೆರೆಸಿ ಬಾಯ ಮಿಡುಕಿನುತ
ಕಣ್ಣಮುಚ್ಚಿ ಬೆರಳನೆಣಿಸುವರಯ್ಯಾ—
ನಿಮ್ಮ ಕೈಯಲ್ಲಿ ಕಟ್ಟಿದ ದರ್ಭೆಯ ಹುಲ್ಲು
ಕೂಡಲ ಸಂಗನನಜ್ಞಾಯದೆ ಮೊಜುಕಿಯಿಡುವಂತೆ ! ॥ ೫೨ ॥

೫೩

ಮಾಣದೆ ಅರಳೆಯ ತಿಟ್ಟನೆ ತಿರುಗುವ ಗಾಣದೆತ್ತಿನಂತೆ
ಸೂರ್ಯಬಿಂಬ ಮುಂಬಿಗಾಲಲ್ಲಿರಲು.
ನೀವೆಲ್ಲಾ ಪಾಯಚ್ಚಿ ಕುಡಿದ್ದೀರಿ :
ಮುಂದೆ ಗೂಟ ಹಾಕಿಸ್ಕೊಳ್ಳುವಾಗ ಮುಸ್ಕರಿಸಿಕೊಳ್ಳುವ
ನೀಲಿಯಂಗಿ ಕೆಂಪು ಮೋರಿಯ ಸಂಗನಬಸವ. ॥ ೫೩ ॥

೫೪

ನೀರ ಕಂಡಲ್ಲಿ ಮುಳುಗುವರಯ್ಯಾ.
ಮರನ ಕಂಡಲ್ಲಿ ಸುತ್ತಿಕೊಂಡಿರಯ್ಯಾ !
ಬತ್ತುವ ಜಲವನೊಣಗುವ ಮರವ
ಮುಚ್ಚಿಡುವರು ನಿಮ್ಮ ಶಿಷ್ಟ ಜಂಗಮರು
ಕೂಡಲ ಸಂಗಮದೇವಾ ? ॥ ೫೪ ॥

೫೫

ಕಣ್ಣ ಮುಚ್ಚಿ ಕನ್ನಡಿಯ ತೋಲಿಸುವಂತೆ,
ಇರುಳು ಬೆಳಗಿನ ಸಂಧಿ ಸಂಚಿಯ
ಬೆರಳನೆಣಿಸಿ ಪರಮಾರ್ಥವ ಪಡೆವರೆ ಜೋಡ್ಯವಲ್ಲವೆ ? ಹೇಳಾ.

ಮೂಗ ಮುಚ್ಚಿ ಮುಕ್ತಿಯ ಬಯಸುವ
ನಾಚಿಕೆಯಿಲ್ಲದವರ ನಾನೇನೆಂಬೆ,
ಕೂಡಲ ಸಂಗಮದೇವಾ ? ॥ ೫೮೦ ॥

೫೬

ಬ್ರಹ್ಮಸಭೆ ತೆರೆದಲ್ಲಿ ಬ್ರಹ್ಮವಿತ್ತುಗಳು
ಬ್ರಹ್ಮತತ್ತ್ವವಡೆದು ತಮ್ಮ ವಚನಬ್ರಹ್ಮರೆನಿಸಿಕೊಂಡು
ನೆಮ್ಮುವರು ವಿಷ್ಣುವನು—
ತಮ್ಮದೈವವ ಬಿಡುವುದಾವುದುಚಿತ !
ವಿಷ್ಣು ಶಿವಭಕ್ತನಾಗಿ ನಿಷ್ಠೆಯಿಂದ ಕಣ್ಣನಿತ್ತು
ಹಡೆದನು ಶಿವಭಕ್ತಿಯಿಂದ !
ಕಷ್ಟಜಾತಿ ಜೀವಿಗಳಿಗೆ ಮುಟ್ಟಿಯೆಂತು ಬಂದತ್ತೊ !
ಮುಟ್ಟಿರೊಂದುವನು ಮೂವಿಧಿಬಟ್ಟರೂ !
'ಹುಸಿವನೆ ಹೊಲೆಯ' ನೆಂದು ವಚನವುಂಟು ಲೋಕದಲ್ಲಿ :
ಹುಸಿದಜನ ಸಿರ ಹೋಯಿತ್ತಾದಿಯಲ್ಲಿ !
ಎಸವೋದ ಕಿಱು ಪಶುವನುಸುರಲೀಯದೆ
ವಿಧಾನಿಸಿ ತಿಂಬ ಜನ್ನ ಅದಾವ ಫಲವೊ :
ದಕ್ಷ ಯಾಗವ ಮಾಡಿ ನಿಕ್ಷೇತ್ರನೆರೆದುದಕಟಕಟಾ,
ಕೇಳಿಯೂ ಏಕೆ ಮಾಣರೊ ?
ಮಮಕರ್ತ ಕೂಡಲ ಸಂಗನ ಶರಣರು ಅಕ್ಷಯರಧಿಕರು :
ವಿಪ್ರರು ಕೀಳು ಜಗವೆಲ್ಲಱಿಯಲು ! ॥ ೫೮೧ ॥

೫೭

ಕುಲದಲ್ಲಿ ಹಾರುವನು ಬ್ರಹ್ಮೋತಿಗೆ ಸಾರುವನು :
ಆರೊ ಮಾಡಿದ ಪಾಪಕ್ಕೆ ತಾನೆ ಕೈಯಾನುವನು !
ಸರಿಯೆ ದೇವಭಕ್ತರಿಗಿವನು ?
ಸರಿಯೆ ಲಿಂಗಭಕ್ತರಿಗಿವನು ?

ಬಡಗಿ ಮಾಚಲದೇವಿಯ ಕುಲಜೆಯ ಮಾಡಿಹನೆಂದು
ಹೊನ್ನ ಕಪಿಲೆಯ ರಾವಣಶಾಖದುಚ್ಚಿಷ್ಟದ ಹಾಲಿನಿಂದ
ಕೂಳನಟ್ಟುಂಬವರನೇನೆಂಬೆ,
ಕೂಡಲ ಸಂಗಮದೇವಾ ? ॥ ೫೮ ॥

೫೮

ನರಜನ್ಮದಲ್ಲಿ ಹುಟ್ಟಿ ಲಿಂಗಮುಖವನಱಿಯದೆ
ಉದುಮದ ಸೊಕ್ಕಿ ತಲೆಗೇಱಿತ್ತೆ, ಅಯ್ಯಾ !
' ಜೀವೋ ಜೀವೇನ ಭಕ್ಷ್ಯತೇ ' ಕರ್ಮಕರ್ಮದಲ್ಲಿಪ್ಪೆಯಯ್ಯಾ !
ಅಂದೊಮ್ಮೆ ದಕ್ಷನು ಹೋತನ ಕೊಂದಲ್ಲಿ—
ಸೋಳಿಡಲಿ ಸೋಳಿಡಲಿಕೆ ತಂದಿಕ್ಕೆ ಅಕ್ಕಿತ್ತೆ !
ನಿಮ್ಮ ವೇದಶಾಸ್ತ್ರಂಗಳ ಮೂರುತಿಗೊಂಡಲ್ಲಿ
ಚತುರ್ವೇದಿಗಳಿಗೊಮ್ಮೆ ಅಕ್ಕಿತ್ತೆ ಅಯ್ಯಾ !
ನಮ್ಮ ಕೂಡಲ ಸಂಗನನಱಿಯದ ಕಾರಣ
ನಾಯಕನರಕದಲ್ಲಿಕ್ಕಿತ್ತೆ ಅಯ್ಯಾ ! ॥ ೫೯ ॥

೫೯

ಕಿಚ್ಚು ದೈವವೆಂದು ಹವಿಯನಿಕ್ಕುವ
ಹಾರುವನ ಮನೆಯಲ್ಲಿ ಕಿಚ್ಚಿದ್ದು ಸುಡುವಾಗ,
ಬಚ್ಚಲ ನೀರ ಬೀದಿಯ ದೂಳ ಹೊಯ್ದು ಬೊಬ್ಬಿಟ್ಟಿಜ್ಜರ ಕರೆವರಯ್ಯಾ !
ಕೂಡಲ ಸಂಗಮದೇವಾ,
ವಂದನೆಯ ಮಱೆದು ನಿಂದಿಸುತಿರ್ದರಯ್ಯಾ ! ॥ ೬೦ ॥

೬೦

ವೇದವನೋದಿದ ವಿಪ್ರರು ಹೊನಲಲ್ಲಿ ಹೋಪ ಕೇಡ ನೋಡಿರೇ !
' ಭರ್ಗೋ ದೇವಸ್ಯ ಧೀಮಹಿ ' ಎಂಬರು :
ಒಬ್ಬರಿಗಾಗಿ ವಿಚಾರವಿಲ್ಲ, ನೋಡಿರೆ,
ಕೂಡಲ ಸಂಗಮದೇವಾ. ॥ ೬೧ ॥

೬೧

ಎನಿಸನೋದಿದರೇನು ? ಎನಿಸ ಕೇಳಿದರೇನು ?
ಚತುರ್ವೇದಪಾಠ ತೀವ್ರವಾದರೇನು?
ಲಿಂಗಾರ್ಚನೆಹೀನನಾದರೆ, ಶಿವಶಿವಾ,
ಬ್ರಾಹ್ಮಣನೆಂಬೆನೆ ? ಎನಲಾಗದು.
ಜನ್ಮನಾ ಜಾಯತೇ ಶೂದ್ರಃ ॥ ಕರ್ಮಣಾ ದ್ವಿಜ ಉಚ್ಯತೇ
ಶ್ರುತೇನ ಶ್ರೋತ್ರಿಯಶ್ಚೈವ ॥ ಬ್ರಹ್ಮಂ ಜಾನಾತಿ ಬ್ರಾಹ್ಮಣಃ
ಎಂದುದಾಗಿ, ಬ್ರಹ್ಮನಾಸ್ತಿ ಶ್ವಪಚರಥಮುರೆಂದುದಾಗಿ,
ಇದು ಕಾರಣ, ಕೂಡಲ ಸಂಗಮದೇವಾ
' ವೇದಭಾರಭರಾಕ್ರಾಂತಾ ಬ್ರಾಹ್ಮಣಾ ಗರ್ದಭಾಃ' ಎಂಬೆನು.
॥ ೫೮ ॥

೬೨

ನಿಮ್ಮನಜಿಯದ ಕಾರಣ ಕೈಯಲ್ಲಿ ಹುಲ್ಲು !
ನಿಮಗೆಜಿಗವ ಕಾರಣ ಕೊರಳಲ್ಲಿ ನೇಣು !!
ಹಿಂಡಲೇಕೋ ? ತೊಳೆಯಲೇಕೋ ?
ಮುಳುಗಿ ಮುಳುಗಿ ಮೂಗ ಹಿಡಿಯಲೇಕೋ ?
ಕೂಡಲ ಸಂಗನ ಶರಣರಲ್ಲಿ
ಡೋಹರ ಕಕ್ಕಯ್ಯನಾಗಿ ತೊಜೀಯಲ್ಲಿ ಮಿಂದ ? ॥ ೫೯ ॥

೬೩

ವ್ಯಾಸ ಬೋಯತಿಯ ಮಗ, ಮಾರ್ಕಂಡೇಯ ಮಾತಂಗಿಯ ಮಗ,
ಮಂಡೋದರಿ ಕಪ್ಪೆಯ ಮಗಳು !
ಕುಲವನಜಸದಿರಿಂ ಭೋ, ಕುಲದಿಂದ ಮುನ್ನೇನಾದಿರಿಂ ಭೋ ?
ಸಾಕ್ಷಾತ್ ಜಗಸ್ತ್ರಯ ಕಬ್ಬಿಲ, ವ್ಯಾಸ ಮುಷ್ಟಿಗ,
ಕಶ್ಯಪ ಕಮ್ಮಾರ, ಕೌಂಡಿಲ್ಯನೆಂಬ ಋಷಿ
ಮೂಜಿ ಭುವನವಜೀಯೆ ನಾವಿದ ಕಾಣಿಂ ಭೋ !
ನಮ್ಮ ಕೂಡಲ ಸಂಗನ ವಚನವಿಂತೆಂದುದು :
' ಶ್ವಪಚೋಪಿ.... ' ಯಾವರೇನು, ಶಿವಭಕ್ತನೇ ಕುಲಜನು. ॥೫೯॥

೬೪

ಹೊಲೆಗಂಡಲ್ಲದೆ ಪಿಂಡದ ನೆಲೆಗಾಶ್ರಯವಿಲ್ಲ.
ಜಲ–ಬಿಂದುವಿನ ವ್ಯವಹಾರವೊಂದೇ :
ಆಶೆಯಾಮಿಷರೋಷಹರುಷವಿಷಯಾದಿಗಳೆಲ್ಲಾ ಒಂದೆ.
ಏನನೋದಿ ಏನ ಕೇಳಿ, ಏನು ಫಲ ?
ಕುಲಜನೆಂಬುದಕ್ಕಾವುದು ದೃಷ್ಟ ?
ಸಪ್ತಧಾತು ಸಮಂ ಪಿಂಡಂ । ಸಮುದೋಭವಮೆ ದ್ವಯಂ
ಆತ್ಮಜೀವಸಮಾಯುಕ್ತ । ಪರ್ಣಾನಾ ಈ ಶ್ರಯೋಭವಂ
ಕಾಸಿ ಕಮ್ಮಾಲಿನಾದ, ಬೀಸಿ ಮಡಿವಾಳನಾದ;
ಹಾಸನಿಕ್ಕಿ ಸಾಲಿಗನಾದ; ವೇದನಸೂದ ಬ್ರಾಹ್ಮಣನಾದ !
ಕರ್ಣದಲ್ಲಿ ಜನಿಸಿದವರುಂಟೆ ಜಗದೊಳಗೆ ?
ಇದು ಕಾರಣ, ಕೂಡಲ ಸಂಗಮದೇವಾ,
ಅಂಗಸ್ಥಲವನಱಿದವನೆ ಕುಲಜನು. ॥ ೫೮ ॥

೬೫

ಕೊಲುವನೇ ಮಾದಿಗ, ಹೊಲಸ ತಿಂಬವನೇ ಹೊಲೆಯ !
ಕುಲವೇನೋ, ಅವಂದಿರ ಕುಲವೇನೊ ?
ಸಕಲ ಜೀವಾತ್ಮರಿಗೆ ಲೇಸನೇ ಬಯಸುವ
ನಮ್ಮ ಕೂಡಲ ಸಂಗನ ಶರಣರೇ ಕುಲಜರು. ॥ ೫೯ ॥

೬೬

ಹಾರುವನ ಭಕ್ತಿ ಓಡಿನೊಳಗಗೆಯ ಹೊಯ್ದಂತೆ :
ಕೆಳಯಿಂಕೆ ಬೀಜೂರದು, ಮೇಲೆ ಫಲಪಾಗದು !
ಪ್ರಾಣಲಿಂಗದ ಪ್ರಸಾದವ ಮುಂದಿಟ್ಟುಕೊಂದು
' ಪ್ರಾಣಾಯ ಸ್ವಾಹಾ, ಅಪಾನಾಯ ಸ್ವಾಹಾ, ವ್ಯಾನಾಯ ಸ್ವಾಹಾ
ಉದಾನಾಯ ಸ್ವಾಹಾ, ಸಮಾನಾಯ ಸ್ವಾಹಾ '
ಎಂಬ ಕರ್ಮಿಗಳನೇನೆಂಬೆ, ಕೂಡಲ ಸಂಗಮದೇವಾ ? ॥ ೬೦ ॥

೬೭

' ನಾನು ಭಕ್ತ, ನಾನು ಪ್ರಸಾದಿ ' ಎಂದು
ವಿಪ್ರಕರ್ಮವ ಮಾಡುವೆ, ಕರ್ಮಿ :
ಲಿಂಗದೇವನ ಮುಟ್ಟಿ ಮಜ್ಜನಕ್ಕೆರ್ಜಿಪ ಕೈಯಲು
ವಿಪ್ರನ ಕಾಲ ತೊಳೆವರೆ
ಲಿಂಗೋದಕ ಹೃದಯದಲ್ಲಿ,
ವಿಪ್ರನ ಕಾಲತೊಳೆದ ನೀರು ಮುಂಡೆಯ ಮೇಲೆ !
ಶ್ರೋತ್ರೋತ್ಕಟಮುರಾಚಾರೀ । ಯಜ್ಞಕೂಪಸಘಾತಕಃ
ಉದ್ರಿಕ್ತೈಕವಿಧಿಃ ಶಾಂತೇ । ವಿಪ್ರರೂಪೇಣ ರಾಕ್ಷಸಃ
ಇದು ಕಾರಣ, ಕೂಡಲ ಸಂಗಮದೇವಾ,
ಇಂತಪ್ಪ ಮುರಾಚಾರಿಗಳ ಮುಖವ ನೋಡಲಾಗದು. ॥ ೫೭ ॥

೬೮

ಹೊನ್ನ ನೇಗಿಲಲುತ್ತು ಎಕ್ಕೆಯ ಬೀಜವ ಬಿತ್ತುವರೆ ?
ಕರ್ಪುರದ ಮರನ ಕಡಿದು ಕಳ್ಳಿಗೆ ಬೇಲಿಯನಿಕ್ಕುವರೆ ?
ಶ್ರೀ ಗಂಧದ ಮರನ ಕಡಿದು ಬೇವಿಂಗೆ ಅಡೆಯನಿಕ್ಕುವರೆ ?
ನಮ್ಮ ಕೂಡಲ ಸಂಗನ ಶರಣರಿಗಲ್ಲದೆ
ಬೇಱೆ ಇಚ್ಛಾಭೋಜನವನಿಕ್ಕಿವರೆ,
ಕಿಚ್ಚಿನೊಳಗೆ ಉಚ್ಚೆಯ ಹೊಯಿದು
ಹವಿಯ ಬೇಳ್ದಂತಾಯಿತ್ತು ! ॥ ೫೮ ॥

೬೯

ಜಾತಿವಿಡಿದು ಸೂತಕವನಱಿಸುವೆ :
ಜ್ಯೋತಿವಿಡಿದು ಕತ್ತಲೆಯನಱಿಸುವೆ !
ಇದೋಕೊ ಮರುಳ ಮಾನವಾ ?
ಜಾತಿಯಲ್ಲಿ ಅಧಿಕನೆಂಬೆ :

ವಿಪ್ರಶತಕೋಟಿಗಳಿದ್ದಲ್ಲಿ ಫಲವೇನು ?
' ಭಕ್ತಶಿಖಾಮಣಿ ' ಎಂದುದು ವಚನ.
ನಮ್ಮ ಕೂಡಲ ಸಂಗನ ಶರಣರ ಪಾದಪರುಷವ ನಂಬು,
ಕೆಡಬೇಡಾ ಮಾನವಾ. ॥ ೫೯ ॥

೭೦

ಹೊಲೆಯ ಮಾದಿಗ ಭಕ್ತನಾದರೆ
ಆತನ ಮನೆಯ ಸೊಣಗಂಗೆ
ಪಂಚಮಹಾವಾದ್ಯವಲ್ಲಿ ಸನ್ಮಾನನೆಯ ಮಾಡೆನೆ ?
ನೆಲನನುಗ್ಗಡಿಪೆ ' ಉಘೇ, ಚಾಂಗು ಭಲರೆ ' ಎಂದು !
ಕುಲದಲಧಿಕ ಹಾರುವಂಗೆ ಸಿದ್ದಿಗೆಯ್ಯಿಸಲೆ !
ನಿಮ್ಮ ಶರಣರ ಮಹಿಮೆ ಘನಕ್ಕೆ ಘನ !
ಎಲೆ ಕೂಡಲ ಸಂಗಮದೇವಾ, ನಿಮ್ಮ ನಂಬಿದವ ಹೊಲೆಯ ! ॥೫೯೫ ॥

೭೧

ಕುಜೀವಿಂಡು ಕಬ್ಬಿನ ಉಲಿವ ತೋಂಟವ ಹೊಕ್ಕು
ತೆಜನನಜೀಯದೆ ತನಿರಸದ,
ಹೊಜಗಣೆಲೆಯನೆ ಮೇದುವು !
ನಿಮ್ಮನಜೀವ ಮದಕರಿಯಲ್ಲದೆ
ಕುಜೀ ಬಲ್ಲುದೆ, ಕೂಡಲ ಸಂಗಮದೇವಾ ? ॥ ೫೯೬ ॥

೭೨

ಪ್ರಣವನುಚ್ಚರಿಸುವ ಅಪ್ರಮಾಣಿಕರೆಲ್ಲರೂ
ಪ್ರಣವ ಮಂತ್ರಾರ್ಥವನೋದಿ, ಮಂತ್ರಾರ್ಥವನಜೀಯರು.
' ಪ್ರಣವ ಓಂ ನಮಃಶಿವಾಯ, ಪ್ರಣವ ಓಂ ನಮಃಶಿವಾಯ,
ಪ್ರಣವ ಓಂ ನಮಃಶಿವಾಯ ' ಎಂದುವು ಶ್ರುತಿಗಳೆಲ್ಲಾ;
' ಪ್ರಣವ ಭರ್ಗೋ ದೇವಃ ' ಎಂದುವು ಶ್ರುತಿಗಳೆಲ್ಲಾ.
ಕೂಡಲ ಸಂಗನನಜೀಯದ ದ್ವಿಜರೆಲ್ಲಾ ಭ್ರಮಿತರು ! ॥ ೫೯೭ ॥

೭೩

ವೇದವನೋದಿದರೇನು ? ಶಾಸ್ತ್ರವ ಕೇಳಿದರೇನಯ್ಯಾ ?
ಜಪವ ಮಾಡಿದರೇನು ? ತಪವ ಮಾಡಿದರೇನಯ್ಯಾ ?
ಏನ ಮಾಡಿದರೇನು ನಮ್ಮ ಕೂಡಲ ಸಂಗಯ್ಯನ ಮನದ ಮುಟ್ಟದನ್ನಕ್ಕ ?
|| ೫೯೮ ||

೭೪

ನೀವು ಹಿರಿಯರೆಂಬಿರಿ, ಕರ್ಮಿಗಳು ನೀವು ಕೇಳಿರಿ;
ನಿಮ್ಮ ವೇದಶಾಸ್ತ್ರಂಗಳು ಅರ ಹೊಗಳುತ್ತಿದ್ದಾವ ?
ಓಂ ' ದ್ಯಾವಾ ಭೂಮೀ ಜನಯಂ ಜೇವ ಏಕೋ ಜೇವ '
ಎಂದು ಎಲ್ಲ ಸ್ತ್ರೀಗಳ ಸ್ತಾದುಪ್ತಲಿದ್ದಾವು.
' ವರ್ಣಾನಾಂ ಬ್ರಾಹ್ಮಣೋ ಗುರುಃ ' ಎಂಬುದು ಮನಿ :
ವರ್ಣಾನಾಂ ಗುರು ಸ್ತ್ರೀಯರಲ ಸಂಗನ ಶರಣರು. || ೫೯೯ ||

೭೫

ನಿಜಭಾವ ಲಕ್ಷ್ಮಿಸರಸ್ವತಿಯರ ಬಲೆ ಕೂಡಿವನಾಡಿಸಲಬ್ಯಾಕ ?
ಆ ದೇವನೊಲಿದ ಭಕ್ತಂಗ ಇನ್ನಾವ ಮಂತ್ರವೇಕಯೊ ?
ಕಾಮಧೇನು ಮನೆಯಲಿರಲು ಬಜಾರ ಪಯನನೀಸಲೇಕೆ ?
ಮೋಹವುಳ್ಳ ಕಾವಿನಲ್ಲಿ ಲಜ್ಜೆಯನೇಸಲದೇಕೆಯೊ ?
ಮಹದಾನಿ ಕೂಡಲ ಸಂಗಯ್ಯನೊಲಿದು
ಮಾಯಾ ಮನ್ಮಥಯ್ಯನ ಪಟ್ಟಣಕಂದ.
ವೇದವನೊದಿ ಬರಿದು ಲಿಂಗವನರಿಯಿ ಹೋಯಿರೊ. || ೬೦೦ ||

೭೬

ಲೌಕ್ಯರಿಗಜ್ಞವೆ ವೇದ್ಯಮಾಗದು : ಹೋಗಿ ಭೋ, ಹೋಗಿ ಭೋ !
ಶಿವಭಕ್ತನೇ ಕುಲಜ :
ಕೈವರ್ತಕೇ ನಭ್ಯಸೂಯಾಪಿ ಸೀ ಮಹರ್ಷಂ ವಮಿ ಸುವಾಮುನಿಃ
ತಪಸಾ ಚಾಯಕೇ ಬಿಪ್ರಕುಲೇ ವಸ್ಮಾಚ್ ಚಾತ್ಸೀರಂ ನ ಮೆಯರ್ಷಿತಾ
ಜಾತನ್ನು ಅಜಾಪನ್ನು.
ಕೂಡಲ ಸಂಗನ ಶರಣರು ನಿಸ್ಸೀಮರಯ್ಯಾ. || ೬೦೧ ||

೨೭

ಎಮ್ಮವರು ಅಧಿಕರು, ಎಲ್ಲರಿಂದಲೂ ಅಧಿಕರು;
ಪಾಕವ ಮಾಡುವ ಭಾಂದ ಸೊಪ್ಪಿಗಾನು ಪಡುಗೊಂಬಯ್ಯಾ !
ಕೆರಹಿನಲ್ಲಿ ಮುಚ್ಚುವುದು ಜನ ಆಗಬಹುದಯ್ಯಾ ?
ಎಂದಲ ಸಂಗನಬಸವಾ, ನಿಮ್ಮ ವಚನದಿಂದೆಂದಹುದು :
' ಭುವಿ ನೋಡಿದ ಓಗರ ಲಿಂಗಾರ್ಪಿತವಾಗದು ' ಎಂದು ॥ ೬೦೨ ॥

೨೮

ನಿಮ್ಮ ಶರಣರ ಚಮ್ಮಾವ್ಯಗೆಗೆ ಪೃಥ್ವಿ ಸಮುಬಾರದು---
ಸರಿಯಲ್ಲಾ, ನೋಡಾ, ಕೂಡಲ ಸಂಗನದೇವಾ,
ನಿಮ್ಮ ಶರಣರ ಚಮ್ಮಾವ್ಯಗೆಗೆ ! ॥ ೬೦೩ ॥

೨೯

ದೇವಾ, ನಿಮ್ಮ ಪೂಜಿಸಿ ಚೆನ್ನನ ಕುಲ ಚೆನ್ನಯಿಸ್ತ್ಯದಯ್ಯಾ;
ದೇವಾ, ನಿಮ್ಮ ಪೂಜಿಸಿ ದಾಸನ ಕುಲ ದೇಸೆಪಡೆಯಿಸ್ತ್ತು.
ದೇವಾ, ನಿಮ್ಮಡಿಗೆಜ್ಜಗವ ಮಾಡಿಸಿಟ್ಟ ಸೂಜಿಯ ನಿಮ್ಮಡಿಯಾದ !
ನೀನೊಲಿದ ಕುಲ ಪೃಥ್ವಿ ಪ್ರಸಾದವಾಯಿತ್ತು ಮೇರೆದಪ್ಪಿತ್ತು, ದೇವಾ ?
ಶ್ವಪಚೋಪಿ ಮುನಿಃ ಶ್ರೇಷ್ಠೋ ॥ ಯಸ್ತು ಲಿಂಗಾರ್ಚನೇ ರತಃ
ಲಿಂಗಾರ್ಚನವಿಹೀನೋಪಿ ॥ ಬ್ರಾಹ್ಮಣಃ ಶ್ವಪಚಾಧಮಃ
ಎಂದುದಾಗಿ, ಜಾತಿ-ವಿಜಾತಿಯಾದರೇನು ?
' ಅಜಾತ ಶರಣೆ ' ನ್ನದವನು, ಆತನೆ, ಹೊಲೆಯ !
ಕೂಡಲ ಸಂಗಮದೇವಾ. ॥ ೬೦೪ ॥

೩೦

ಚತುರ್ವೇದಿಯಾದರೇನು ? ಲಿಂಗವಿಲ್ಲದವನೇ ಹೊಲೆಯ !
ಶ್ವಪಚನಾದರೇನು ? ಲಿಂಗವಿದ್ದವನೇ ಮಾದಾಸಿ.
ಆತನ ನುಡಿಗಡಣವೇ ಲೇಸು, ಅತ ಜಗಕ್ಕೆ ಪಾವನ;
ಆತನ ಪ್ರಸಾದವೆನಗಮೃತಸೇವನೆ !

ನ ಮೇ ಪ್ರಿಯಶ್ಚತುರ್ವೇದೀ ॥ ಮದ್‌ಭಕ್ತಃ ಶ್ವಪಚೋಪಿ ವಾ
ತಸ್ಮಾದೇವ ತತೋ ಗ್ರಾಹ್ಯಂ ॥ ಸ ಚ ಪೂಜ್ಯೋ ಯಥಾಹ್ಯಹಂ
ಕೂಡಲ ಸಂಗಮದೇವನನಱಿತು ಪೂಜಿಸಿದಾತ
ಷಡುದರುಶನಕ್ಕಧಿಕ, ಜಗಕ್ಕೆ ಪಾವನ, ನೋಡಾ ! ॥ ೬೦೫ ॥

೮೧

ಭಕ್ತಿಹೀನನ ದಾಸೋಹವ ಸದ್‌ಭಕ್ತರು ಸವಿಯರು :
ಬೇವಿನ ಹಣ್ಣು ಕಾಗೆಗೆ ಇನಿದಲ್ಲದೆ ಕೋಗಿಲೆಗೆ ಮೆಲಬಾರದು.
ಲಿಂಗಸಂಬಂಧವಿಲ್ಲದವರ ನುಡಿ
ಕೂಡಲ ಸಂಗನ ಶರಣರಿಗೆ ಸಮನಿಸದು. ॥ ೬೦೬ ॥

೮೨

ಬಂದು ಬಲ್ಲಹ ಬಿಡಲು ಹೊಲಗೇರಿ ಎಂಬ ಹೆಸರೊಳವೆ ? ಅಯ್ಯಾ !
ಲಿಂಗವಿದ್ದವರ ಮನೆ ಕೈಲಾಸವೆಂದು ನಂಬಬೇಕು.
ಇದಕ್ಕೆ ಪ್ರಮಾಣ :
ಚಾಂಡಾಲವಾಟಕಾಯಾಂ ವಾ । ಶಿವಭಕ್ತಃ ಸ್ಥಿತೋ ಯದಿ
ತಚ್ಛ್ರಾಣಿ ಶಿವಲೋಕಸ್ಯ । ತದ್‌ಗೃಹಂ ಶಿವಮಂದಿರಂ
ಲೋಕದ ಡಂಭಕರ ಮಾತು ಬೇಡಾ,
ಕೂಡಲ ಸಂಗಮನಿದ್ದುದೇ ಕೈಲಾಸ. ॥ ೬೦೭ ॥

೮೩

ಲಿಂಗವಿಲ್ಲದೆ ನಡೆವವರ, ಲಿಂಗವಿಲ್ಲದೆ ನುಡಿವವರ—
ಲಿಂಗವಿಲ್ಲದೆ ಉಗುಳು ನುಂಗಿದರೆ—
ಅಂದಂದಿಂಗೆ ಕಿಲ್ಬಿಷವಯ್ಯಾ !
ಏನೆಂಬೆ ಏನೆಂಬೆನಯ್ಯಾ ?
ಲಿಂಗವಿಲ್ಲದೆ ನಡೆವವರ ಅಂಗ ಲೌಕಿಕ : ಮುಟ್ಟಲಾಗದು :
ಲಿಂಗವಿಲ್ಲದೆ ನುಡಿದ ಶಬ್ದ ಸೂತಕ : ಕೇಳಲಾಗದು !
ಲಿಂಗವಿಲ್ಲದೆ ಗಮನಿಸಿದೊಡೆ ಆ ನಡೆನುಡಿಗೊಮ್ಮೆ ವ್ರತಗೇಡಿ,
ಕೂಡಲ ಸಂಗಮದೇವಾ ! ॥ ೬೦೮ ॥

೪೪

ಹಬ್ಬ ಹತ್ತುನಾಲ್ಕು ತಿಥಿಯಿಂದ ವೆಗ್ಗಳ,
ಗ್ರಹಣ-ಸಂಕ್ರಾಂತಿಯಿಂದ ವೆಗ್ಗಳ,
ಏಕಾದಶಿ-ವ್ಯತೀಪಾತದಿಂದ ವೆಗ್ಗಳ
ಸೂಕ್ಷ್ಮ ಶಿವಪಥವಲ್ಲದವಂಗೆ—
ಹೋಮ-ನೇಮ-ಜಪ-ತಪದಿಂದ ವೆಗ್ಗಳ,
ಕೂಡಲ ಸಂಗಮದೇವಾ, ನಿಮ್ಮ ಮಾಣದೆ ನೆನೆವವಂಗೆ. ॥ ೬೦೯ ॥

೪೫

ಅಶ್ವಮೇಧಯಾಗವಂತಿರಲಿ,ಅಜಪಯುಪದೇಶಸಮಾಧಿಯುಂತಿರಲಿ, ಹೋ!
ಹೋಮ-ನೇಮ-ಗಾಯತ್ರಿಯ ಜಪವಂತಿರಲಿ, ಹೋ !
ಜನಮೋಹನ ಮಂತ್ರವಂತಿರಲಿ, ಹೋ !
ಕೂಡಲ ಸಂಗನ ಶರಣರ ನುಡಿಗಡಣೆ
ಎಲ್ಲಕ್ಕೂ ಅಧಿಕ, ನೋಡಾ ! ॥ ೬೧೦ ॥

೪೬

ವೇದಶಾಸ್ತ್ರದವರ ಹಿರಿಯರೆನ್ನೆ;
ಮಾಯಾಭ್ರಾಂತಿ ಕವಿದ ಗೀತಜ್ಞರ ಹಿರಿಯರೆನ್ನೆ !
ಇವರು ಹಿರಿಯರುಗಳೇ ? ಯಾಗನಟ್ಟುವಿಗಪಾಣರು !
ಇವರಿಂದಧಿಕವ ಸಾಧಿಸುವರೇನು ಕಿಱಿಯರೆ ?
ಇಂತು ವಿದ್ಯೆ ಗುಣ ಜ್ಞಾನ ಧರ್ಮ ಆಚಾರ ಶೀಲಂಗಳ
ನಮ್ಮ ಕೂಡಲ ಸಂಗನ ಶರಣರು
ಸಾಧಿಸಿದ ಸಾಧನೆಯನೇ ಸಾಧಿಸುವುದು. ॥ ೬೧೧ ॥

೪೭

ಹಾರುವರೆಲ್ಲರೂ ನೆರೆದು ಶೂದ್ರನ ಹಾರುವನ ಮಾಡುವಲ್ಲಿ
ನಂದಿಮುಖವಲ್ಲದೆ ಮಾಡಲಾಗದು;
ವಿಭೂತಿಯಲ್ಲದೆ ಮತ್ತೇನನೂ ಮಾಡಲಾಗದು;

'ಭಗೋ೯ದೇವ' ಎಂಬ ಮಂತ್ರವಲ್ಲದೆ ಮತ್ತೇನನೂ ಮಾಡಲಾಗದು !
ನಿಮ್ಮಿಂದ ಕುಲಜರಾಗಿ ಮತ್ತೆ ಅನ್ಯದೈವಕ್ಕೆಱಗುವ
ಜಗದನ್ಯಾಯಿಗಳನೇನೆಂಬೆ, ಕೂಡಲ ಸಂಗಮದೇವಾ ? ॥೬೨॥

೪೮

ದೇವನೊಬ್ಬ, ನಾಮು ಪಲುವು :
ಪರಮಪತಿವ್ರತೆಗೆ ಗಂಡನೊಬ್ಬ;
ಮತ್ತೊಂದಕ್ಕೆಱಗಿದರೆ ಕಿವಿ-ಮೂಗ ಕೊಯ್ವನು !
ಪಲವು ದೈವನ ಎಂಜಲ ತಿಂಬವರನೇನೆಂಬೆ,
ಕೂಡಲ ಸಂಗಮದೇವಾ ? ॥ ೬೩ ॥

೪೯

ಕರ್ತಾರನ ಪೂಜಿಸಿ ಕು[ಷ್ಟಿ]ತ ದೈವಕ್ಕೆಱಗುವರು
ಕತ್ತೆ ಕುದುರೆಗೆ ಹುಟ್ಟದ ವೇಸರನಂತೆ !
ಭಕ್ತರೆಂತೆಂದಿ, ಭೃತ್ಯರೆಂನೆಂಬಿ, ಲಿಂಗಾಂಗವೆಂತೆಂಬೆನವರ ?
ಎರಡುಳ್ಳ ಗ್ರಹಿಣಿಗಳ ಮೆಚ್ಚ
ಕೂಡಲ ಸಂಗಮದೇವ ! ॥ ೬೪ ॥

೫೦

ಕಂಡಕಂಡವರೆಲ್ಲರ ಗಂಡರೆಂಬೆ
ಮುಂಡಯನವರ ಸಜ್ಜನರೆಂದೆನ್ನ ಬಹುದೆ ?
ಲಿಂಗಪ್ರಸಾದವನುಂಡು ಅನ್ಯದೈವಂಗಳ ಕೊಂಡಾಡುವವರ—
ನಮ್ಮ ಕೂಡಲ ಸಂಗಮದೇವನು
ಆ ಗಂಡರಿಗೆ ಮಾಡಿದ ಮೊಳುಗೊಂಡವನು ! ॥ ೬೫ ॥

೫೧

ನಂಬಿದ ಪೆಂಡತಿಗೆ ಗಂಡನೊಬ್ಬ, ಕಾಣಿರೋ :
ನಂಬಬಲ್ಲ ಭಕ್ತಂಗೆ ದೇವನೊಬ್ಬ, ಕಾಣಿರೋ !
ಬೇಡ ! ಬೇಡ ! ಅನ್ಯದೈವದ ಸಂಗ ಹೊಲ್ಲ !

ಬೇಡ ! ಬೇಡ ! ಅನ್ಯದೈವವೆಂಬುದು ಹಾದರ, ಕಾಣಿರೋ !
ಕೂಡಲ ಸಂಗಮದೇವ ಕಂಡರೆ ಮೂಗ ಕೊಯ್ವ, ಕಾಣಿರೋ ! ॥೬೧೬॥

೯೨

ಊಡುವ ಉಡಿಸುವ ಗಂಡನಿದ್ದಂತೆ,
ಜೋಡೆ ! ಮಿಂಡಂಗೆ ಕಣ್ಣು ಚೆಲ್ಲುವಳ
ಕೇಡಿಂಗೆ ಬೆಲಿಗಾದೆ ನಾನು !
ನಮ್ಮ ಕೂಡಲ ಸಂಗಮದೇವನು
ಸಿಂಗಾರದ ಮೂಗ ಬಣ್ಣಿಸಿ ಹಲುದೋಲಿ ಕೊಯ್ವ ! ॥ ೬೧೭ ॥

೯೩

ಅಷ್ಟಮಿ ನವಮಿ ಎಂಬ ಕಲ್ಪಿತವೇಕೊ ಶರಣಂಗೆ ?
ತಪ್ಪಿತ್ತು ಗಣಪದವಿ ! ಲಿಂಗಕ್ಕೆ ದೂರ, ಜಂಗಮಕ್ಕೆ ದೂರ !!
ಒಬ್ಬರಿಗಾಳಾಗಿ ಒಬ್ಬರನೋಲೈಸುವ
ನಿರ್ಬುದ್ಧಿ ಮನುಜರನೇನೆಂಬೆ,
ಕೂಡಲ ಸಂಗಮದೇವಾ ? ॥ ೬೧೮ ॥

೯೪

ಎಲವೊ, ಎಲವೋ, ಪಾಪಕರ್ಮವ ಮಾಡಿದವನೇ,
ಎಲವೊ, ಎಲವೋ, ಬ್ರಹ್ಮಹತ್ಯವ ಮಾಡಿದವನೇ,
ಒಮ್ಮೆ ' ಶರಣೆ ' ನ್ನೆಲವೋ
ಒಮ್ಮೆ ' ಶರಣೆ ' ಎಂದರೆ ಪಾಪಕರ್ಮ ಓಡುವುವು.
ಸರ್ವಪ್ರಾಯಶ್ಚಿತ್ತಕ್ಕೆ ಹೊನ್ನ ಪರ್ವತಂಗಳೈದವು :
ಒರ್ವಂಗೆ ಶರಣೆನ್ನು, ನಮ್ಮ ಕೂಡಲ ಸಂಗಮದೇವಂಗೆ ! ॥೬೧೯॥

೯೫

ಹಲವು ಕೊಂಬಿಂಗೆ ಹಾಯಬೇಡ :
ಬಲ್ಲುಕಾಯಕ್ಕೆ ನೀಡಬೇಡ,
ಲೋಗರಿಗೆಡೆಗೊಟ್ಟು ಭ್ರಮಿತನಾಗಿರಬೇಡ !
ಆಚಾರವೆಂಬುದು ಹಾವಸೆಗಲ್ಲು :

ಭಾವ ತಪ್ಪಿದ ಬಳಿಕ ಏಗೆಯ್ದೊಡಾಗದು.
ಅಂಜದಿರು, ಅಳುಕದಿರು, ಪರದೈವಕ್ಕೆಳಗದಿರು :
ಕೂಡಲ ಸಂಗನ ಕೈಯಲು ಈಸುವುದೆನ್ನ ಭಾರ ! ||೬೦||

೬೬

ದ್ವಿಜರಿಗೆ ಕೊಟ್ಟು ಹಲಬರು ಕೆಟ್ಟರು :
ಉದ್ಧರಿಸುವನೊಬ್ಬ, ಶಿವಶರಣ, ಸಾಲದೆ ?
ನಾರಾಯಣ ವೃದ್ಧ ಬ್ರಾಹ್ಮಣನಾಗಿ ಬಂದು ಬಲಿಯ ಭೂಮಿಯ ಬೇಡಿದ:
ಕೊಟ್ಟ ಬಲಿ ಬಂಧನಕ್ಕೆ ಸಿಕ್ಕಿದ !
ಈಶ ಭಕ್ತನಾಗಿ ಬಂದು ದಾಸನ ವಸ್ತ್ರವ ಬೇಡಿದ :
ಕೊಟ್ಟ ದಾಸ ತವನಿಧಿಯ ಪಡೆದ !
ಕಪಟದಿಂದೆ ನಾರಾಯಣ ಹಾರುವನಾಗಿ ಬಂದು ಕರ್ಣನ ಕವಚವಬೇಡಿದ:
ಕೊಟ್ಟ ಕರ್ಣ ಕಳದಲ್ಲಿ ಮಡಿದ !
ಕಾಮಾರಿ ಜಂಗಮನಾಗಿ ಬಂದು ಸಿರಿಯಾಳನ ಮಗನ ಬೇಡಿದ :
ಕೊಟ್ಟ ಸಿರಿಯಾಳಸೆಟ್ಟಿ ಕಂಚಿಯ ಪುರವ ಕೈಲಾಸಕ್ಕೊಯ್ದ !
ನಾರಾಯಣ ಹಾರುವನಾಗಿ ಬಂದು ನಾಗಾರ್ಜುನನ ಸಿರವ ಬೇಡಿದ :
ಕೊಟ್ಟ ನಾಗಾರ್ಜುನನ ಸಿರ ಹೋಯಿತ್ತು !
ಶಿವನು ಜಂಗಮನಾಗಿ ಬಂದು ಸಿಂಧುಬಲ್ಲಾಳನ ವಧುವ ಬೇಡಿದ :
ಕೊಟ್ಟ ಸಿಂಧುಬಲ್ಲಾಳ ಸ್ವಯ ಲಿಂಗವಾದ !
ಇದು ಕಾರಣ, ಇಲ್ಲಿಯೂ ಲೇಸು, ಅಲ್ಲಿಯೂ ಲೇಸು :
ಕೊಡಿರೇ, ನಮ್ಮ ಕೂಡಲ ಸಂಗನ ಶರಣರಿಗೆ. ॥ ೬೧ ॥

೬೭

ಎಚ್ಚು ಬಾಲಿಯ ಕೊಂದ, ಕಟ್ಟಿದನು ಶರಧಿಯನು;
ಹತ್ತು ತಲೆಯ ರಾವಣನ ಒಂದೆ ಅಂಬಿನಲಿ ಮಡುಹಿದ;
ಛಲದಿಂದ ಲಂಕಾದ್ವೀಪವ ನೆಲವಣ್ಣವ ಮಾಡಿದ;
ಕಲಿ ವಿಭೀಷಣಂಗೆ ಪಟ್ಟವ ಕಟ್ಟಿದ :
ರಾಮನ ತೋಱಾ !

ಮಾಯದ ಸಂಸಾರವ ನಚ್ಚಿ, ವಾಯಕ್ಕೆ ಕೆಟ್ಟು
ಬಲುದೊಲುವೊಗಬೇಡ,
ಕರ್ತು ಕೂಡಲ ಸಂಗಯ್ಯಂಗೆ ಶರಣೆನ್ನಿರಯ್ಯಾ ! ॥ ೬೨ ॥

೯೮

ವಿಪ್ರರ ಕರೆದು ' ನೃಪರುಗಳು ಇಪ್ಪರೆ ತಮ್ಮ ಶಿಶುವಿನೊಡನೆ ' ಂದು
ಬೆಸಗೊಂಡರೆ,
" ಇಪ್ಪರು, ಇಪ್ಪರು, ತಾವು ಬಿತ್ತಿದ ಫಲಂಗಳ
ತಾವು ಉಣ್ಣದವರುಂಟೆ ? "
ಎಂದು ಕಣ್ಣುಕಾಣದೆ ಹೇಳಿದರು, ಅಣ್ಣಗಳು, ಕರ್ಮದ ಬಟ್ಟೆಯನು!
ಅಂತೆಂದ ಮಾತ ಶಿಶು ಕೇಳಿ
ಕೆಟ್ಟೋಡಿ ಬಂದು ಲಿಂಗದ ಹೊಟ್ಟೆಯ ಹೊಗಲು,
ಅಟ್ಟಿ ಬಂದು ಖಂಡೆಯವ ಕಳೆದುಕೊಂಡು ಮಂಡೆಯನೊಡೆಯಲು,
ಮಂಡೆಯೊಡೆದು ಭೂಮಂಡಲವಱಿಯೆ ನಾಲ್ಕು ಪುರವಾಗಲು,
ಘಟಿಸರ್ಪನ ತುಡುಕಿ ನಾಗನಾಥನಾಗಿ
ಇಪ್ಪತ್ತೇಳು ಬಸತಿಯನೊಡೆಯನೆ ?
ಆಗಳಂತೆ, ಎನ್ನ ಮಾಡಿದ ಕರ್ಮ ನಿಮ್ಮ ಕೈಯಲು ಕೆಡಿಸುವರು.
ಮುನ್ನೊಬ್ಬ ಕೆಡಿಸಿಹೆನೆಂದು ಬಂದು ಒಂದು ತುತ್ತನಿಟ್ಟು
ಮರಳಿ ಕೈಯಿಡ ಹೋದರೆ ತುತ್ತು ಹುಳುಗುಪ್ಪೆಯಾಗದೆ ?
ಶಿವಧರ್ಮವ ಕೆಡಿಸಿದವನು ಅಧರ್ಮಕ್ಕಿಳವನು :
ಕೂಡಲ ಸಂಗಮದೇವ ಸಾಕ್ಷಿಯಾಗಿ,
ಮಕರಭೋಜನವಾಗನೆ ವಿನಾಶಕ್ತಿರಾಯನು ? ॥ ೬೩ ॥

೯೯

ಅರಸು ವಿಚಾರ ಸಿರಿಯು ಶೃಂಗಾರ ಸ್ಥಿರವಲ್ಲ, ಮಾನವಾ :
ಕೆಟ್ಟತ್ತು ಕಲ್ಯಾಣ, ಹಾಳಾಯಿತ್ತು, ನೋಡಾ !
ಒಬ್ಬ ಜಂಗಮದಭಿಮಾನದಿಂದ
ಚಾಳುಕ್ಯರಾಯನ ಆಳಿಕೆ ತೆಗೆಯಿತ್ತು,
ಸಂದಿತ್ತು, ಕೂಡಲ ಸಂಗಮದೇವಾ, ನಿಮ್ಮ ಕವಳಿಗೆಗೆ ! ॥ ೬೪ ॥

೧೦೦

ಬೇವಿನ ಬೀಜವ ಬಿತ್ತಿ, ಬೆಲ್ಲದ ಕಟ್ಟೆಯ ಕಟ್ಟಿ,
ಆಕಳ ಹಾಲನೆರೆದು, ಜೇನ ತುಪ್ಪವ ಹೊಯ್ದರೆ,
ಸಿಹಿಯಾಗಬಲ್ಲುದೆ, ಕಹಿಯಹುದಲ್ಲದೆ ?
ಶಿವಭಕ್ತರಲ್ಲದವರ ಕೂಡೆ ನುಡಿಯಲಾಗದು,
ಕೂಡಲ ಸಂಗಮದೇವಾ. ॥ ೬೫ ॥

೧೦೧

ಕರ್ತನನರಿಯದವನು ವಿಪ್ರನಾದರೇನು, ಚತುರ್ವೇದಿಯಾದರೇನು ?
ಭುಕ್ತಿಕಾರಣ ಲೋಕದ ಇಚ್ಛೆಗೆ ನುಡಿದು ನಡೆವರಯ್ಯಾ !
ಭವಿ ಮಾಡಿದ ಪಾಕವ ತಂದು ಲಿಂಗಕರ್ಪಿಸುವ ಕಷ್ಟರ ಕಂಡು
ನಾಚಿತ್ತೆನ್ನ ಮನ !
ಕೂಡಲ ಸಂಗನ ಶರಣರ ಒಕ್ಕುದ ಕೊಂಡು
ಅನ್ಯವನಾಚರಿಸಿದೊಡೆ ತಪ್ಪದು—
ಸೂಕರ ಶುಚಿರ್ಭೂತತೆಯ ಪ್ರಾಣಿಯಂತೆ ! ॥ ೬೬ ॥

೧೦೨

ಉಂಬಲ್ಲಿ ಉಡುವಲ್ಲಿ ಕ್ರೀಯಳಿಯಿತೆಂಬರು :
ಕೊಂಬಲ್ಲಿ ಕೊಡುವಲ್ಲಿ ಕುಲವನಳಿಸುವರು.
ಎಂತಯ್ಯಾ, ಅವರ ಭಕ್ತರೆಂಬೆ ?
ಎಂತಯ್ಯಾ, ಅವರ ಯುಕ್ತರೆಂಬೆ ?
ಕೂಡಲ ಸಂಗಮದೇವ, ಕೇಳಯ್ಯಾ,
ಹೊಲತಿ ಶುದ್ಧನೀರ ಮಿಂದಂತಾಯಿತ್ತಯ್ಯಾ ! ॥ ೬೭ ॥

೧೦೩

ಭಕ್ತರನಲ್ಲದೆ ಒಲ್ಲೆನೆಂದೆಂಬಿರಿ :
ಭಕ್ತರಿಗಲ್ಲದೆ ಕೈಯಾನೆವೆಂಬಿರಿದೇನ ಮಾಡುವಿರಿ ?
ಎಲ್ಲಿಗೊಯ್ವಿರಿ ?
ಪಾವನನವಾದುದನು ಲಿಂಗಕೆ ಮಾಡುವುದೆ ಆಚಾರ.

ವಿಷಯಕ್ಕೆ ಇಕ್ಕಿ, ಅಸುಗತಿಗಿಳಿಯದಿರಿ,
ಕೂಡಲ ಸಂಗನ ಶರಣರ ಒಡವೆಯ ! ॥ ೬೮೮ ॥

೧೦೪

ಮಾರಿ ಮಸಣಿಯೆಂಬುವು ಬೇಱಿಲ್ಲ ಕಾಣಿರೋ !
ಮಾರಿಯೆಂಬುದೇನು ? ಕಂಗಳು ತಪ್ಪಿ ನೋಡಿದರೆ ಮಾರಿ,
ನಾಲಿಗೆ ತಪ್ಪಿ ನುಡಿದರೆ ಮಾರಿ,
ನಮ್ಮ ಕೂಡಲ ಸಂಗಮದೇವರ ನೆನಹ ಮಱೆದರೆ ಮಾರಿ ! ॥ ೬೮೯ ॥

೧೦೫

ಆಯುಧವಿಕ್ಕಿದವಂಗೆ ವೀರದ ಮಾತೇಕೆ ?
ಲಿಂಗವನಂತರಿಸಿದವಂಗೆ ಒಳನುಡಿಯೇಕೆ ?
ಆಯಿದೆ-ಅಣಚಿಯಿಲ್ಲದವಳಿಗೆ ಸೌಭಾಗ್ಯದ ಹೂವಿನ ಬೊಟ್ಟೇಕೆ ?
ಸತ್ಯನಲ್ಲದವಂಗೆ ನಿತ್ಯನೇಮವೇಕೆ ?
ಕರ್ತಾರ, ನಿಮ್ಮ ಒಲವಿಲ್ಲದವಂಗೆ ಶಂಭುವಿನ ಬಂಧುಗಳೇಕೆ ?
ಕೂಡಲ ಸಂಗಮದೇವಯ್ಯಾ,
ನೀವಿಲ್ಲದವಂಗೆ ಶಿವಾಚಾರದ ಮಾತೇಕೆ ? ॥ ೬೯೦ ॥

೧೦೬

ಇರುಳೆಂದೇನೋ ಕುರುಡಂಗೆ, ಹಗಲೆಂದೇನೊ ಕುರುಡಂಗೆ ?
ತಾಳವ ಬಾರಿಸಿದರೇನೊ,
ಪಂಚಮಹಾಶಬ್ದವ ಬಾರಿಸಿದರೇನೋ ಕಿವುಡಂಗೆ—
ಕೂಡಲ ಸಂಗಯ್ಯನ ಪಥವಿನ್ನಾವುದೆಂದಱಿಯದವಂಗೆ? ॥ ೬೯೧ ॥

೧೦೭

ಸಿಂಗದ ನಡು ಮುಱಿಯಲಾ ಸಿಂಗವೇನು ಬಾತೆ ?
ಸುಂಡಿಲು ಮುಱಿದರೆ ಗಜವೇನು ಬಾತೆ ?
ಸಂಗ್ರಾಮದಲ್ಲಿ ವೀರನುಳಿಯಲದೇನು ಬಾತೆ?

ಶೃಂಗಾರದ ಮೂಗು ಹೋದರೆ ಶೃಂಗಾರವೇನು ಬಾತೆ ?
ನಿಜ ತುಂಬಿದ ಭಕ್ತಿ ತುಳುಕಾಡದವರ ಸಂಗವೇನು ಬಾತೆ,
ಕೂಡಲ ಸಂಗಮದೇವಾ ? ॥ ೬೩೨ ॥

೧೦೪

ಮುನ್ನಿನ ಆದ್ಯರ ಪಥಂಗಳು ಇನ್ನಾರಿಗೆಯೂ ಅಳವಡದು, ನೋಡಾ !
ಬಲ್ಲೆನಾಗಿ ಒಲ್ಲೆನು-- ಅವರು ಸಲ್ಲರು ಶಿವಪಥಕ್ಕೆ,
ಒಳ್ಳಿಹ ವೈಲಾರನ ಸಿಂಗಾರದಂತೆ,
ವೇಶಿಯ ಬಾಯಂಜಲ ತಿಂಬ ದಾಸಿಯ ಸಂಸಾರದಂತೆ--
ಕೂಡಲ ಸಂಗನ ಶರಣರನಲ್ಲಾಯದ ಉಳಿದ ಭಂಗಿತರ ! ॥ ೬೩೩ ॥

೧೦೫

ಗೀಜಗನ ಗೂಡು, ಕೋಡಗದಣಲ್ಲಿ ಸಂಚ,
ಬಾದುಮೆಯ ಮದುವೆ, ಬಾವುಲ ಬಿದ್ದಿನಂತೆ,
ಜೂಜುಗಾಱಿನ ಮಾತು, ಬೀದಿಯ ಗುಂಡನ ಸೊಬಗು,
ಓಡಿನೊಳಗಗೆಯ ಹೊಯ್ದಂತೆ, ಕಾಣಿರೋ !
ಶಿವನಾದಿಯಂತವನಲ್ಲಾಯದವನ ಭಕ್ತಿ
ಸುಖಶೋಧನೆಗೆ ಮದ್ದ ಕೊಂಡಂತೆ,
ಕೂಡಲ ಸಂಗಮದೇವಾ ! ॥ ೬೩೪ ॥

೧೦೬

ತೊತ್ತಿನ ಕೊರಳಲ್ಲಿ ಹೊಂಬಿತ್ತಾಳೆಯ ಸಿಂಗಾರವ ಮಾಡಿದಂತೆ.
ಕು[ಚ್ಚಿ]ತರ ಸಂಗ ಸುಸಂಗಿಗೆ ಸಂಗಡವಲ್ಲ !
ಗುರುಗುಂಜಿ ಮಾಣಿಕಕ್ಕೆ ಸರಿಯಪ್ಪುದೆ,
ಕೂಡಲ ಸಂಗಮದೇವಾ ? ॥ ೬೩೫ ॥

೧೦೭

ಕೆಂಚ ಕರಿಕನ ನೆನೆದರೆ ಕರಿಕನಾಗಬಲ್ಲನೆ ?
ಕರಿಕ ಕೆಂಚನ ನೆನೆದರೆ ಕೆಂಚನಾಗಬಲ್ಲನೆ ?

ದರಿದ್ರ ಸಿರಿವಂತನ ನೆನೆದರೆ ಸಿರಿವಂತನಾಗಬಲ್ಲನೆ ?
ಸಿರಿವಂತ ದರಿದ್ರನ ನೆನೆದರೆ ದರಿದ್ರನಾಗಬಲ್ಲನೆ ?
ಮುನ್ನಿನ ಪುರಾತರ ನೆನೆದು ಧನ್ಯನಾದಹೆನೆಂಬ
ಮಾತಿನ ರಂಜಕರನೇನೆಂಬೆ, ಕೂಡಲ ಸಂಗಮದೇವಾ ? ॥ ೬೩೬ ॥

೧೧೨

ಆನೆಯನೇಱಿಕೊಂಡು ಹೋದಿರೆ ನೀವು,
ಕುದುರೆಯನೇಱಿಕೊಂಡು ಹೋದಿರೆ ನೀವು,
ಕುಂಕುಮ ಕಸ್ತೂರಿಯ ಪೂಸಿಕೊಂಡು ಹೋದಿರೆ, ಅಣ್ಣಾ !
ಸತ್ಯದ ನಿಲವನಱಿಯದೆ ಹೋದಿರಲ್ಲಾ !
ಸದ್ಗುಣವೆಂಬ ಫಲವ ಬಿತ್ತಿ ಬೆಳೆಯದೆ ಹೋದಿರಲ್ಲಾ !
ಅಹಂಕಾರವೆಂಬಸದ ಮದಗಜವೇಱಿ
ವಿಧಿಗೆ ಗುಱಿಯಾಗಿ ನೀವು ಹೋದಿರಲ್ಲಾ !
ನಮ್ಮ ಕೂಡಲ ಸಂಗಮದೇವರನಱಿಯದೆ
ನರಕಕ್ಕೆ ಭಾಜನವಾದಿರಲ್ಲಾ ! ॥ ೬೩೭ ॥

೧೧೩

ಇಂದ್ರಿಯನಿಗ್ರಹವ ಮಾಡಿದರೆ ಹೊಂದುವ್ರು ದೋಷಂಗಳು :
ಮುಂದೆ ಬಂದು ಕಾಡುವುವು ಪಂಚೇಂದ್ರಿಯಂಗಳು !
ಸತಿಪತಿರತಿಸುಖವ ಬಿಟ್ಟರೆ ಸಿರಿಯಾಳ-ಚಂಗಳೆಯವರು ?
ಸತಿಪತಿರತಿಸುಖಭೋಗೋಪಭೋಗವಿಳಾಸವ
ಬಿಟ್ಟ [ನೆ] ಸಿಂಧುಬಲ್ಲಾಳನು ?
ನಿಮ್ಮ ಮುಟ್ಟ ಪರಧನ-ಪರಸತಿಯರಿಗೆಳಸಿದರೆ
ನಿಮ್ಮ ಚರಣಕ್ಕೆ ದೂರ, ಕೂಡಲ ಸಂಗಮದೇವಾ ! ॥ ೬೩೮ ॥

೧೧೪

ಲಿಂಗಜಂಗಮ ಒಂದೆ ಎಂದು ನಂಬಿದ ಬಳಿಕ
ಅವರಂಗನೆಯರು ಲಿಂಗದ ರಾಣಿವಾಸ :
ಅಲ್ಲಿಯೂ ಮೇಳ, ಇಲ್ಲಿಯೂ ಮೇಳ,

ಚೌಡೇಶ್ವರಿಯಲ್ಲಿಯೂ ಮೇಳ !
ಮೊಲೆಯುಂಬ ಭಾವ ತಪ್ಪಿ ಅಪ್ಪಿದವರ
ತಲೆಯ ಕೊಂಬ ಕೂಡಲ ಸಂಗಮದೇವ. || ೬೫೯ |

೧೧೫

ಒಡೆಯರು ತಮ್ಮ ಮನೆಗೆ ಒಡಗೊಂಡು ಹೋದರೆ,
ತುಡುಗುಣಿತನದಲ್ಲಿ ಪರವಧುವ ನೋಡುವ ಸರಸ ಬೇಡ,
ಕಾಣಿರಣ್ಣಾ ! ಒಡೆಯನರಸಿಯ ಸರಸಬೇಡ !
ಕೂಳ ಸೊಕ್ಕು ತಲೆಗೇಱಿ ರಾಣಿವಾಸದೊಡನೆ ಸರಸಬೇಡ;
ಕೂಡಲ ಸಂಗಮದೇವ ಕರ ಸಿತಗನಯ್ಯಾ ! || ೬೬೦ |

೧೧೬

ನೋಡಲಾಗದು ನುಡಿಸಲಾಗದು ಪರಸ್ತ್ರೀಯ, ಬೇಡ, ಕಾಣಿರೋ !
ತಗರ ಬೆನ್ನಲಿ ಹರಿವ ಸೊಣಗನಂತೆ, ಬೇಡ, ಕಾಣಿರೊ !
ಒಂದಾಸೆಗೆ ಸಾವಿರ ವರುಷ ನರಕದೊಳಗಿದ್ದುವ
ಕೂಡಲ ಸಂಗಮದೇವ ! || ೬೬೧ |

೧೧೭

ತೊಱೆಯ ಮೀವಣ್ಣಗಳಿರಾ, ತೊಱೆಯ ಮೀವ ಸ್ವಾಮಿಗಳಿರಾ,
ತೊಱೆಯಿಂ ಭೋ, ತೊಱೆಯಿಂ ಭೋ,
ಪರನಾರಿಯ ಸಂಗವ ತೊಱೆಯಿಂ ಭೋ !
ಪರಧನದಾಮಿಷವ ತೊಱೆಯಿಂ ಭೋ !
ಇವ ತೊಱೆಯದೆ ಹೋಗಿ ತೊಱೆಯ ಮಿಂದರೆ,
ಬಜುದೊಱೆ ಹೋಹುದು, ಕೂಡಲ ಸಂಗಮದೇವಾ. || ೬೬೨

೧೧೮

ಸತ್ಯ ಶೌಚ ನಿತ್ಯ ನೇಮವ ತಪ್ಪದೆ ಮಾಡಬಲ್ಲರೆ ಅದು ಲೇಸು,
ಮತ್ಸ್ಯ ಕೂರ್ಮ ಮಂಡೂಕ ಜಲದೊಳಗಿದ್ದಲ್ಲಿ ಫಲವೇನು ?
ಚಿತ್ತಮಂತರ್ಗತಂ ದೃಷ್ಟ್ವಾ । ತೀರ್ಥಸ್ನಾನೇನ ಶುಧ್ಯತೇ ॥
ಶತಕುಂಭಜಲೇ ಶೌಚಂ । ಸುರಾಭಾಂಡಮಿವಾಶುಚಿಃ ॥
ಆಗಡವ ಮಾಡಿ ಮಾಗುಡವ ಮಿಂದರೆ
ತಾ ಕೊಡಬಲ್ಲನೆ ಕೂಡಲ ಸಂಗಮದೇವ ? || ೬೬೩

೧೧೯

ಕುಳ್ಳಿರ್ದಲ್ಲಿ ಲಿಂಗವ ಪೂಜಿಸಿ ಅಲ್ಲದಾಟವನಾಡುವರಯ್ಯಾ :
ಬೆಳ್ಳಿತ್ತಿನ ಮಱೆಯಲ್ಲಿರ್ದು ಹುಲ್ಲಿಗಂಬ ತೊಡುವಂತೆ!
ಕಳ್ಳಹಾದರಿಗರ ಕೈಯಲು, ಪೂಜೆಯಕೊಳ್ಳ
ನಮ್ಮ ಕೂಡಲ ಸಂಗಮದೇವ ! ॥ ೬೪೪ ॥

೧೨೦

ನುಡಿಯಲ್ಲಿ ಎಚ್ಚತ್ತು ನಡೆಯಲ್ಲಿ ತಪ್ಪಿದರೆ
ಹಿಡಿದಿರ್ದ ಲಿಂಗವು ಘಟಸರ್ಪನಂತೆ !
ನುಡಿಯಲು ಬಾರದು, ನಡೆಯಲು ಬಾರದು,
ಲಿಂಗದೇವನೆ ದಿಬ್ಯವೊ, ಅಯ್ಯಾ !
ಬಡವನ ಕೋಪ ಅವುಡಿಗೆ ಮೃತ್ಯುವಾದಂತೆ
ಕಡೆದಾಂಟದು, ಕಾಣಾ, ಕೂಡಲ ಸಂಗಮದೇವಾ. ॥ ೬೪೫ ॥

೧೨೧

ತನುಶುಚಿಯಲ್ಲದವನ ದೇಹಾರವೇಕೆ ?
ದೇವರು ಕೊಡನೆಂಬ ಭ್ರಾಂತದೇಕೆ ?
ಮನಕ್ಕೆ ಮನವೇ ಸಾಕ್ಷಿ; ಸಾಲದೆ, ಲಿಂಗ ತಂದೆ ?
ಹೇಂಗೆ ಮನ ಹಾಂಗೆ ನಿಮ್ಮ ಘನ, ತಪ್ಪದು, ಕೂಡಲ ಸಂಗಮದೇವ.
॥ ೬೪೬ ॥

೧೨೨

ಶರಣರ ನಿಚ್ಚ ನಿಚ್ಚ ಪೂಜಿಸುವಂಗೆ— ಇದಕ್ಕಿದೆ ದೃಷ್ಟ ದೀವಿಗೆ—
ಪಾದೋದಕ ಕೋಶಪಾನವಲ್ಲದೆ ಏನೂ ಇಲ್ಲವಯ್ಯಾ .
ಮಜ್ಜನಕ್ಕೆಱೆವುದು ಲಿಂಗ—
ಅದು ಲಿಂಗ ಕರಸ್ಥಲದ ದಿಬ್ಯ—
ಗುರುವಚನ ಭಾಷಾಪತ್ರ ಶಿವಕರದಲ್ಲಿ !
ಸತ್ಯದಿಂದ ನಡೆವಂಗೆ ನಿತ್ಯನೇಮವಾಗಿ ಸಲಿಸುವನಲ್ಲದೆ,
ಹುಸಿವಂಗೆ ಮಡಿಲ ಕಿಚ್ಚಾಗಿ ಸುಡುವ !
ಲಿಂಗವ ಪೂಜಿಸಿ ಮರಳಿ ಅನ್ಯಕ್ಕೆಱಗಿದಡೆ
ಕೂಡಲ ಸಂಗಮದೇವನವರ ಹಲ್ಲ ಕಳೆವ ! ॥ ೬೪೭ ॥

೧೨೩

ಪಾಪಿಗೆ ಕೋಪಿಗೆ ಭಕ್ತಿಯಾಗೆಂದರಪ್ಪುದೆ ?
ನಾರಿವಾಣವಕ್ಕುವುದೆ ನಾಯಿಗೆ,
ಕೂಡಲ ಸಂಗಮದೇವಾ,
ನಿಮ್ಮ ನಂಬಿಯೂ ನಂಬದ ಡಂಭಕಂಗೆ ? ॥ ೬೪೮ ॥

೧೨೪

ಕೋಪಿ ಮಜ್ಜನಕ್ಕೆಱೆದರೆ ರಕ್ತದ ಧಾರೆ !
ಪಾಪಿ ಹೂವನೇಱಿಸಲು ಮಸೆದಡಾಯುಧದ ಗಾಯ !
ಕೂರ್ಪವರನಾರನೂ ಕಾಣೆನು ಮಾದಾರ ಚೆನ್ನಯ್ಯನಲ್ಲದೆ;
ಕೂರ್ಪವರನಾರನೂ ಕಾಣೆನು ಡೋಹಾರ ಕಕ್ಕಯ್ಯನಲ್ಲದೆ.
[ವ್ಯಾಪತ್ತಿ] ಯುಳ್ಳ ನಮ್ಮ ಮಡಿವಾಳಮಾಚಯ್ಯ
ನಿನ್ನಾ ಪತ್ತಿಗಱಿವರಯ್ಯಾ, ಕೂಡಲ ಸಂಗಯ್ಯಾ ! ॥ ೬೪೯ ॥

೧೨೫

ಸದಾಚಾರ ಸದ್‌ಭಕ್ತಿಯಿಲ್ಲದವರನೊಲ್ಲನಯ್ಯಾ :
ಅವರಾರಾಧನೆ ದಂಡ !
ನಿಚ್ಚ ನಿಚ್ಚ ಪ್ರಾಯಶ್ಚಿತ್ತರನೊಲ್ಲ,
ಕೂಡಲ ಸಂಗಮದೇವ, ಭೂಭಾರಕರ ! ॥ ೬೫೦ ॥

೧೨೬

ನೂಱುನೋದಿ ನೂಱು ಕೇಳಿದರೇನು ?
ಆಸೆ ಹಱಿಯದು, ರೋಷ ಬಿಡದು,
ಮಜ್ಜನಕ್ಕೆಱೆದು ಫಲವೇನು ?
ಮಾತಿನಂತೆ ಮನವಿಲ್ಲದ ಜಾತಿಡೊಂಬರ ನೋಡಿ, ನಗುವ
ನಮ್ಮ ಕೂಡಲ ಸಂಗಮದೇವ. ॥ ೬೫೧ ॥

೧೨೭

ತಂದೆ ಮಕ್ಕಳಿಗೆ ಬುದ್ಧಿಯ ಹೇಳುವಲ್ಲಿ
ತಪ್ಪಿಂಗೆ ಮುನಿವನಲ್ಲದೆ ಪ್ರಾಣಕ್ಕೆ ಮುನಿಯ.

ಲಿಂಗವಂತನು ಲಿಂಗವಂತರಿಗೆ ಬುದ್ಧಿಯ ಹೇಳುವಲ್ಲಿ
ಅವಗುಣಕ್ಕೆ ಮುನಿವನಲ್ಲದೆ ಲಾಂಛನಕ್ಕೆ ಮುನಿಯ.
ಲಿಂಗಭಕ್ತನು ಲಿಂಗಪಥವ ಹೇಳಿದರೆ
ಮಚ್ಚರಿಸುವರ ಮೆಚ್ಚ ಕೂಡಲ ಸಂಗಮದೇವ. ॥ ೬೫೨ ॥

೧೨೮

ಗುರೂಪದೇಶ ಮಂತ್ರವೈದ್ಯ; ಜಂಗಮೋಪದೇಶ ಶಸ್ತ್ರವೈದ್ಯ, ನೋಡಾ :
ಭವರೋಗವ ಗೆಲುವ ಪರಿಯ ನೋಡಾ.
ಕೂಡಲ ಸಂಗನ ಶರಣರ ಅನುಭಾವ
ಮಡಿವಾಳನ ಕಾಯಕದಂತೆ ! ॥ ೬೫೩ ॥

೧೨೯

ಕೇಳಿರೆ, ಕೇಳಿರೆ, ಹಿರಿಯರು ಗುರುವಿನುಪದೇಶವನು:
ಒಂದು ಗೀಜಗನ ಉಪದೇಶದಿಂದ
ಪೌಲಸ್ತ್ಯನಂದು ಹಡೆಯನೆ ದಶಮುಖನ ?
ಶಿರವ ಹಱಿದಿಕ್ಕೆ ಪರಮನಿದ್ದೆಡೆಯು ಕಾಣದೇನಿಳೆಯಲ್ಲಿ ?
ಕರುಳ ತಂತಿಯುಪದೇಶದಿಂದೆ
ಅಸುರನಂದು ಹಡೆಯನೆ ಸುರಪದವ ?
ತರಣಿ ಹರಿಣಿಯುಪದೇಶದಿಂದೆ ಗತಿ ಪಥ ಮುಕ್ತಿಯ ಪಡೆದು
ಬಟ್ಟೆಯ ಹತ್ತನೆ ವಿನಾಶಕ್ತಿರಾಯನು ?
ರಂಭೆಯುಪದೇಶದಿಂದ
ಶಂಭುವಿನೋಲಗವಲ್ಲಿ ಕುಳ್ಳಿರನೆ ಶ್ವೇತನು ?
ನಮ್ಮ ಕೂಡಲ ಸಂಗನ ಶರಣರ ಉಪದೇಶವ ಕೇಳಿದವರಿಗೆ
ದುರಿತ-ಪಾಪಂಗಳು ಬಿಟ್ಟುಹೋಗಿ ಮನನಿರತರಾಗಿಪ್ಪರು ಲಿಂಗದಲ್ಲಿ.
॥ ೬೫೪ ॥

೧೩೦

ಶಿವಚಿಂತೆ ಶಿವಜ್ಞಾನ ಭ್ರಮೆತಿಳಿದವಂಗಲ್ಲದೆ
ಆಚಾರ ಶಿವಾಚಾರ ತಮತಮಗೆ ಸೂಜಿಯೆ,
ಕೂಡಲ ಸಂಗಮದೇವನ ನೆಲೆಗಿ ಪೂಜಿಸಿದವಂಗಗಲ್ಲದೆ ? ॥೬೫೫॥

೧೩೧

ಶ್ವಪಚನಾದರೇನು ? ಲಿಂಗಭಕ್ತನೇ ಕುಲಜನು.
ನಂಬಿ ನಂಬದಿದ್ದರೆ ಸಂದೇಹಿ, ನೋಡಾ !
ಕಟ್ಟಿದರೇನು, ಮುಟ್ಟಿದರೇನು, ಹೂಸಿದರೇನು
ಮನ ಮುಟ್ಟಿದನ್ನಕ್ಕ ?
ಭಾವಶುದ್ಧವಿಲ್ಲದವಂಗೆ ಭಕ್ತಿ ನೆಲೆಗೊಳ್ಳದು,
ಕೂಡಲ ಸಂಗಯ್ಯನೊಲಿದಂಗಲ್ಲದೆ. ॥ ೬೫೬ ॥

೧೩೨

ಅವರ ನಡೆಯೊಂದು ನುಡಿಯೊಂದಾದರೆ
ಶಿವಾಚಾರಕ್ಕವರು ಸಲ್ಲರಯ್ಯಾ :
ಬಲ್ಲನು, ಸಾತ್ವಿಕರಲ್ಲದವರನೊಲ್ಲನು;
ಶಿವಾಚಾರವ ಬಲ್ಲನು, ಅಲ್ಲಿ ನಿಲ್ಲನು,
ಪ್ರಪಂಚಿಯ ಮನವನೊಲ್ಲನು ಕೂಡಲ ಸಂಗನ ದೇವನು. ॥ ೬೫೭ ॥

೧೩೩

ನಿಧಾನವನಱಿಸಿಹೆವೆಂದು ಹೋದರೆ, ವಿಷ್ಣು ಬಪ್ಪುದು ಮಾಣ್ಬುದೆ ?
ಸದಾಶಿವನೆಂದರೆ ಬೆದರಟ್ಟಿ ಸುಡುವುದು ಮಾಣ್ಬುದೆ ?
ಹದುಳಿಗನಾಗಿ ಉಳಿದರೆ ಪದವಿಯನೀವ, ಕಾಣಾ,
ಕೂಡಲ ಸಂಗಮದೇವ. ॥ ೬೫೮ ॥

೧೩೪

ಅಡಿಗಡಿಗೆ ದೇವರಾಣೆ, ಅಡಿಗಡಿಗೆ ಭಕ್ತರಾಣೆ
ಅಡಿಗಡಿಗೆ ಗುರುವಿನಾಣೆ ಎಂಬ ವಚನವೇ ಹೊಲ್ಲ !
ಮುಂದೆ ಶಿವಪಥಕ್ಕೆ ಸಲ್ಲರು !
ಆದಿಯಿಂದ ಬಂದ ವಚನವೆಂದು ಶರಣರ ಕೂಡೆ ಸರಸವಾಡಿದರೆ--
ನಗುತಲಿಱಿದುಕೊಂಡರೆ ಅಲಗು ನೆಡದಿಹುದೆ,
ಕೂಡಲ ಸಂಗಮದೇವಾ ? ॥ ೬೫೯ ॥

೧೩೫

ಅರಗಿನ ಪುತ್ತಳಿಯನುರಿಯ ನಾಲಗೆ ಹೊಯಿದು
ಮಾತಾಡುವ ಸರಸ ಬೇಡ !
ಬೆಣ್ಣೆಯ ಬೆನಕಂಗೆ ಕೆಂಡದುಂಡಲಿಗೆಯ ಮಾಡಿ
ಚಲ್ಲವಾಡಿದರೆ ಹಲ್ಲು ಹೋಹುದು !
ಕೂಡಲ ಸಂಗನ ಶರಣರೊಡನೆ ಸರಸವಾಡಿದರೆ
ಅದು ವಿರಸ ಕಾಣಿರಯ್ಯಾ ! ॥ ೬೬೦ ॥

೧೩೬

ಹಾವಿನ ಹೆಡೆಗಳ ಕೊಂಡು ಕೆನ್ನೆಯ ತುಱಿಸುವಂತೆ,
ಉರಿವ ಕೊಳ್ಳಿಯ ಕೊಂಡು ಮಂಡೆಯ ಸಿಕ್ಕ ಬಿಡಿಸುವಂತೆ,
ಹುಲಿಯ ಮೀಸೆಯ ಹಿಡಿದುಕೊಂಡು
ಒಲಿದುಯ್ಯಲೆಯಾಡುವಂತೆ,
ಕೂಡಲ ಸಂಗನ ಶರಣರೊಡನೆ ಮಱೆದು ಸರಸವಾಡಿದರೆ
ಸುಣ್ಣದ ಕಲ್ಲ ಮಡಿಲಲ್ಲಿ ಕಟ್ಟಿಕೊಂಡು ಮಡುಪ ಬಿದ್ದಂತೆ !
॥ ೬೬೧

೧೩೭

ಉರಿವ ಕೊಳ್ಳಿಯ ಮಂಡೆಯಲಿಕ್ಕಿದೊಡುರಿವುದು ಮಾಣ್ಬುದೆ ?
ಕಲ್ಲ ಗುಗ್ಗರಿಯ ಮೆಲಿದರೆ ಹಲ್ಲು ಹೋಹುದು ಮಾಣ್ಬುದೆ ?
ಶರಣರೊಡನೆ ಸರಸವಾಡಿದರೆ ನರಕ ತಪ್ಪದು, ಕಾಣಾ,
ಕೂಡಲ ಸಂಗಮದೇವಾ ! ॥ ೬೬೨ ॥

೧೩೮

ಕೋಣನ ಹೇಱಿಂಗೆ ಕುನ್ನಿ ಬಸುಗುತ್ತ ಬಡೆವಂತೆ
ತಾವು ನಂಬರು, ನಂಬುವವರ ನಂಬಲೀಯರು;
ತಾವು ಮಾಡರು, ಮಾಡುವವರ ಮಾಡಲೀಯರು !
ಮಾಡುವ ಭಕ್ತರ ಕಂಡು ಸೈರಿಸಲಾಱದವರ,
ಕೂಗಿಡೆ ಕೂಗಿಡೆ, ನರಕದಲ್ಲಿಕ್ಕುವ
ಕೂಡಲ ಸಂಗಮದೇವ ! ॥ ೬೬೩ ॥

೧೫೯

ಚೇಳಿಂಗೆ ಬಸುಱಾಯಿತ್ತೆ ಕಡೆ; ಬಾಳೆಗೆ ಫಲವಾಯಿತ್ತೆ ಕಡೆ, ನೋಡಾ !
ರಣರಂಗದಲ್ಲಿ ಕಾದುವ ಓಲೆಯಕಾಱಿಂಗೆ ಓಸರಿಸಿತ್ತೆ ಕಡೆ !
ಮಾಡುವ ಭಕ್ತಂಗೆ ಮನ ಹೀನವಾದರೆ ಅದೇ ಕಡೆ,
ಕೂಡಲ ಸಂಗಮದೇವಾ ! ॥ ೬೬೪ ॥

೧೬೦

ಹುಲಿಯ ಹಾಲು ಹುಲಿಗಲ್ಲದೆ ಹೋದ ಹುಲ್ಲಿಗೆ ಉಣಸಬಾರದು;
ಕಲಿಯ ಕಾಲ ತೊಡರು ಛಲದಾಳಿಗಲ್ಲದೆ ಇಕ್ಕಬಾರದು;
ಅಳಮನದಾಸೆಯವರ ಮೂಗ ಹಲುದೋಱಿ ಕೊಯ್ವ
ಕೂಡಲ ಸಂಗಮದೇವ. ॥ ೬೬೫ ॥

೧೬೧

" ಅರ್ಥಪ್ರಾಣಾಭಿಮಾನ ನಿಮ್ಮದೆ " ಂಬಿರಿ :
ಒತ್ತಿ ನೋಡಿದರೆ ಮುಟ್ಟಲೀಯಿರಿ;
ಮುಟ್ಟಿ ಬಂದಲ್ಲಿ ಕಠಾರಿಯ ಕಾಳಿಗವ ನಿವಾಡಿಸುವಿರಲ್ಲದೆ,
ಲಿಂಗ-ಜಂಗಮವಂತನಾಗಬಾರದು !
ಕೂಡಲ ಸಂಗಮದೇವಾ, ವೇಷಡಂಭಕರಿಗೆ ಭಕ್ತಿ ಎಂತಪ್ಪುದಯ್ಯಾ ?
॥ ೬೬೬ ॥

೧೬೨

ಅಲಗಲಗು ಮೋಹಿಸಿದಲ್ಲದೆ ಕಲಿತನವ ಕಾಣಬಾರದು.
ನುಡಿದ ನುಡಿ ಜಾಱಿದರೆ ಮನಕ್ಕೆ ಮನ ನಾಚಬೇಕು :
ಶಬ್ದಘಟ್ಟಯತನದಲ್ಲಿ ಎಂತಪ್ಪುದಯ್ಯಾ ಭಕ್ತಿ ?
ಪಾಪಿಯ ಕೂಸನೆತ್ತಿದಂತೆ,
ಕೂಡಲ ಸಂಗಮದೇವರ ಭಕ್ತಿ
ಅಳಮನದವರಿಗೆ ಅಳವಡದಯ್ಯಾ. ॥ ೬೬೭ ॥

೧೪೩

ಹರಬೀಜವಾದರೆ ಹಂದೆ ತಾನಪ್ಪನೆ ?
ಒಜೆಗಟ್ಟಿ ಇಜ್ಜಾಯದವರ ಲೋಕ ಮೆಚ್ಚುವುದೆ ?
ಉಟ್ಟ ಚಲ್ಲಣ ಕೈಯ ಪಟ್ಟಿಯವಿಡಿದು,
ಗರುಡಿಯ ಕಟ್ಟಿ ಶ್ರವವ ಮಾಡುವಂತೆ
ತನ್ನ ತಪ್ಪಿಸಿಕೊಂಡರೆ, ಶಿವ ಮೆಚ್ಚುವನೆ ?
ಅಜ್ಜಾಯದವರಿಗೆ ಒಳ್ಳೆ ಹೆಡೆಯನೆತ್ತಿಯಾಡುವಂತೆ
ಬೊಳ್ಳಗನ ಭಕ್ತಿ, ಕೂಡಲ ಸಂಗಮದೇವಾ ! ॥ ೬೬೮ ॥

೧೪೪

ಮೊನೆ ತಪ್ಪಿದ ಬಳಿಕ ಅಲಗೇನ ಮಾಡುವುದು ?
ವಿಷ ತಪ್ಪಿದ ಬಳಿಕ ಹಾವೇನ ಮಾಡುವುದು ?
ಭಾಷೆ ತಪ್ಪಿದ ಬಳಿಕ ಪ್ರಾಣದಾಸೆಯನು ಹಾರಿದರೆ
ಮೀಸಲ ಸೊಣಗ ಮುಟ್ಟಿದಂತೆ, ಕೂಡಲ ಸಂಗಮದೇವಾ ! ॥೬೬೯॥

೧೪೫

ಶರಣರ ಸಂಬಂಧವನಜ್ಜಾದ ಬಳಿಕ
ಮರಳಿ ಭವಿಯ ಬೆರಸಬಾರದು :
ಬ್ರಹ್ಮಹತ್ಯ, ಬ್ರೂಣಹತ್ಯ, ವೈತರಣಿ, ದುರ್ಗತಿ
ಪಂಚಮಹಾಪಾತಕದಿಂದಧಿಕ, ನೋಡಾ !
ಅಳುಪಿ ಭವಿಯೊಡನುಂಡರೆ ಭಕ್ತನಲ್ಲಾ,
ಕೂಡಲ ಸಂಗಮದೇವಾ. ॥ ೬೭೦ ॥

೧೪೬

ವೀರ ವ್ರತಿ ಭಕ್ತನೆಂದು ಹೊಗಳಿಕೊಂಬಿರಿ, ಕೇಳಿರಯ್ಯಾ :
ವೀರನಾದರೆ ವೈರಿಗಳು ಮೆಚ್ಚಬೇಕು,
ವ್ರತಿಯಾದರೆ ಅಂಗನೆಯರು ಮೆಚ್ಚಬೇಕು,
ಈ ಭಕ್ತನಾದರೆ ಜಂಗಮ ಮೆಚ್ಚಬೇಕು.
ನುಡಿಯೊಳಗೆ ತನ್ನ ಬಗೆಯಿರೆ
ಬೇಡಿದ ಪದವಿಯನೀವ ಕೂಡಲ ಸಂಗಮದೇವಾ. ॥ ೬೭೧ ॥

೧೪೭

ಕಲಿತನ ತನಗುಳ್ಳರೆ ಸೂಜಿ-ಬಾಳು ಮೊದಲಾಗಿ ಕಾದಲೇಬೇಕು.
ಶರಣಪಥ ತನಗುಳ್ಳರೆ ಶಿವಭಕ್ತರ ಮನೆಯ ಶಿವರಸವ
ಪಂಚಾಮೃತವ ಮಾಡಿಕೊಳ್ಳಬೇಕು.
ಭ್ರಾಂತುವಿಡಿದು ಲಿಂಗಕ್ಕೋಗರವನಱಸುವ
ಪಾತಕರ ಮೆಚ್ಚ ಕೂಡಲ ಸಂಗಮದೇವಾ. ॥ ೬೭ ॥

೧೪೮

ಕಟ್ಟ ಬಿಡುವನೆ ಶರಣನು ? ಬಿಟ್ಟು ಹಿಡಿವನೆ ಶರಣನು ?
ನಡೆದು ತಪ್ಪುವನೆ ಶರಣನು ? ನುಡಿದು ಹುಸಿವನೆ ಶರಣನು ?
ಸಹಜ ಸಜ್ಜನಿಕೆ ತಪ್ಪಿದರೆ,
ಕೂಡಲ ಸಂಗಯ್ಯ ಮೂಗ ಹಲುದೋಱಿ ಕೊಯ್ವ ! ॥ ೬೭ ॥

೧೪೯

ಹುಟ್ಟುವಲ್ಲಿ ಭವಿ, ಮರಳಿ ಭಕ್ತನ ಮಾಡಿ, ಪೂರ್ವಾಶ್ರಮವ ಕಳೆದು
ಹೊಂದುವಲ್ಲಿ ಭವಿಯಾಗಿ ಹೋಹರೆ ಮುಟ್ಟಲಾಗದು.
ಅವನ ಮುಟ್ಟಿದವ ಮುನ್ನವೆ ವ್ರತಗೇಡಿ,
ಅವನ ಶ್ರಾದ್ಧಕಾಲವೆ ಶ್ವಾನಮಾಂಸ,
ಕ್ರಿಯಾಕಾರವೆ ಕ್ರಿಮಿಗಳು, ತದ್ದಿನವೆ ಮದ್ಯಮಾಂಸ !
ಇದು ಕಾರಣ, ಕೂಡಲ ಸಂಗಮದೇವಾ,
ಅವನ ಮನೆಯ ವಿಚಾರಿಸದೆ ಹೊಕ್ಕವಂಗೆ ನಾಯಕನರಕ! ॥ ೬೭ ॥

೧೫೦

ಒಡನೆ ಹುಟ್ಟಿದುದಲ್ಲ, ಒಡನೆ ಬೆಳೆದುದಲ್ಲ :
ಎಡೆಯಲಾದ ಒಂದು ಉಡುಗೆಯನುಟ್ಟು,
ಸಡಿಲಿದರೆ ಲಜ್ಜೆ-ನಾಚಿಕೆಯಾಯಿತ್ತೆಂಬ
ನುಡಿ ದಿಟವಾಯಿತ್ತು ಲೌಕಿಕದಲ್ಲಿ !
ಹಡೆದ ಗುರುಕರುಣದೊಡನೆ ಹುಟ್ಟಿದ ನೇಮವನು ಬಿಡದಿರೆಲವೋ;
ಬಿಟ್ಟರೆ ಕಷ್ಟ, ಕೂಡಲ ಸಂಗಮದೇವನಡಸಿ ಕೆಡಹುವ
ನಾಯಕನರಕದಲ್ಲಿ! ॥ ೬೭ ॥

೧೫೧

ಛಲಬೇಕು ಶರಣಂಗೆ ' ಪರಧನವನೊಲ್ಲೆನೆ'ಂಬ
ಛಲಬೇಕು ಶರಣಂಗೆ ' ಪರಸತಿಯನೊಲ್ಲೆನೆ'ಂಬ
ಛಲಬೇಕು ಶರಣಂಗೆ ' ಪರದೈವವನೊಲ್ಲೆನೆ'ಂಬ,
ಛಲಬೇಕು ಶರಣಂಗೆ ' ಲಿಂಗ ಜಂಗಮ ಒಂದೆ ' ಎಂಬ
ಛಲಬೇಕು ಶರಣಂಗೆ ' ಪ್ರಸಾದ ದಿಟವೆ'ಂಬ :
ಛಲವಿಲ್ಲದವರ ಮೆಚ್ಚ ನಮ್ಮ ಕೂಡಲ ಸಂಗಮದೇವ. ॥ ೬೭೬ ॥

೧೫೨

ಜಂಬೂದ್ವೀಪ ನವಖಂಡಪೃಥ್ವಿಯೊಳಗೆ ಕೇಳಿರಯ್ಯಾ
ಎರಡಾಳಿನ ಭಾಷೆಯ—
' ಕೊಲುವೆನೆ 'ಂಬ ಭಾಷೆ ದೇವನದು :
' ಗೆಲುವೆನೆ 'ಂಬ ಭಾಷೆ ಭಕ್ತನದು !
ಸತ್ಯವೆಂಬ ಕೂರಲಗನೆ ಕಳೆದುಕೊಂಡು
ಸದ್‌ಭಕ್ತರು ಗೆದ್ದರು, ಕಾಣಾ, ಕೂಡಲ ಸಂಗಮದೇವಾ ! ॥೬೭೭॥

೧೫೩

ಮುನ್ನಿನ ಕಲಿ ವೀರ ಧೀರರು ಕಾದಿದ ರಣಗಳನು
ಪರಿಪರಿಯಲಿ ಬಣ್ಣಿಸಿ ಹೇಳಬಹುದಲ್ಲದೆ
ಆ ದಳವಿದಿರಾದಲ್ಲಿ ಬಿರಿದ ಪಚಾರಿಸಿ, ಕಾದಿ ತೋಱಿಲು ಬಾರದು.
ಮುನ್ನಿನ ಪುರುಷವ್ರತಿಯರು ಓಲಿಸಿದ ಆಯತವ
ಪರಿಪರಿಯಲು ಬಣ್ಣಿಸಲು ಬಹುದಲ್ಲದೆ
ಪುರುಷನಿರ್ವಾಣಕ್ಕುರಿವಗ್ನಿಯ
ಬಂದು ಹೊಕ್ಕು ತೋಱಿಲು ಬಾರದು.
ಮುನ್ನಿನ ಪುರಾತರೆಲ್ಲರೂ ತನುಮನಧನವನಿತ್ತು
ಮಾಡಿ ನೀಡಿ ಲಿಂಗವ ಕೂಡಿವ ಪರಿಗಳನು
ಅನುಭಾವದಲರ್ಥಯಿಸಿ ಹೇಳಬಹುದಲ್ಲದೆ
ಮಾಡಿ, ನೀಡಿ ತೋಱಿಲು ಬಾರದು.
ಇಂತೀ ಅಱುಬಿರುದಿನ ಬಂಟರು, ಪುರುಷವ್ರತಿಯರು, ಪುರಾತನರು

ಬಜಾಯ ಮಾತನಾಡಿ ಹೊಲಿಗೆ ಮಿಲಿವರಲ್ಲಾ;
ಪರೀಕ್ಷೆಯುಂಟಾಗಿಯಿದ್ದರೆ, ಒಣಗಣವರ ಹೆಸರ ಹಿಡಿದು,
ಪರಿಪರಿಯಲು ಹೊಗಳುವರು.
ಶರೀರ-ಅರ್ಥ-ಪ್ರಾಣ ಗುರು-ಲಿಂಗ-ಜಂಗಮಕ್ಕೆ ಪರೀಕ್ಷೆ ಉಂಟಾಗಿಯೆ
'ಆತ ಮಾಹೇಶ್ವರ ಪುರಾತ–ವಳಿ' ಎಂಬ
ಪರಮಬಂಧುಗಳಾತನ ನೆನೆನೆನೆದು ಬದುಕುವರು.
ಇಂತೀ ಅನುಭಾವದ ಓದಿದ ಅಕ್ಷರಾಭ್ಯಾಸವ
ಸಾಧಿಸಿ ತರ್ಕಿಸಿ ನಿಂದಿಸಲಾಗದು.
ಕೂಡಲ ಸಂಗನ ಶರಣರಿಗಲ್ಲದೆ ಅನುಭಾವವಿಲ್ಲಾ ! ॥ ೬೭೮

೧೫೪

ಕಬ್ಬನ ಹಣಿದವನಾಡುವರಲ್ಲದೆ ಕಾಯದ ಹಣಿದವನಾಡುವರೆ ?
ಮೇಲೊಡ್ಡವಾಯಿತ್ತೆಂದು, ಕೂಡಲ ಸಂಗಮದೇವಾ,
ನೀನಿಕ್ಕಿದ ಜೂಜಿಂಗೆ ಹೊಯಿದು ಗೆದ್ದ ಸಿರಿಯಾಳ ! ॥ ೬೭೯

೧೫೫

ಅರ್ಥಪ್ರಾಣಾಭಿಮಾನವ ಕೊಟ್ಟೆನೆಂಬವರಲ್ಲದೆ
ಕೊಟ್ಟ ಭಕ್ತರನಾರನೂ ಕಂಡುದಿಲ್ಲ.
ದಾಸ ತನ್ನ ವಸ್ತ್ರವ ಕೊಟ್ಟನಲ್ಲದೆ ತನ್ನ ಕೊಟ್ಟುದಿಲ್ಲ;
ಬಲ್ಲಾಳ ತನ್ನ ವಧುವ ಕೊಟ್ಟನಲ್ಲದೆ ತನ್ನ ಕೊಟ್ಟುದಿಲ್ಲ;
ಸಿರಿಯಾಳ ತನ್ನ ಮಗನ ಕೊಟ್ಟನಲ್ಲದೆ ತನ್ನ ಕೊಟ್ಟುದಿಲ್ಲ !
ಇವೆಲ್ಲ ಹೊಲಿಗಣ ಮಾತು :
ಕೂಡಲ ಸಂಗಮದೇವರಲ್ಲಿ ತನ್ನ ಕೊಟ್ಟ ಸಿಂಧುಮರಾಳ ! ॥ ೬೭೦

೧೫೬

ಒಂದು ಮಾತೆನ್ನ ಬಹುದೆ ಶಬ್ದ ಸಾರಾಯವನು ?
ಒಂದು ಮಾತೆನ್ನ ಬಹುದೆ ಶರಣಸಂಬಂಧವನು ?
ಕೂಡಲ ಸಂಗಮದೇವಾ
ನಂಬಿಗೆ 'ಓ' ಎಂದುದನೊಂದು ಮಾತೆನ್ನ ಬಹುದೆ ? ॥ ೬೭೧

೧೫೭

ಭಕ್ತರೆ ಸಮರ್ಥರು; ಅಸಮರ್ಥರೆನಲುಂಟೆ ?
ಚೆನ್ನನೆತ್ತ, ಚೋಳನೆತ್ತ ?
ಚೆನ್ನನೊಡನುಂಡ ಶಿವ, ಅಹಾ ! ಅಯ್ಯಾ !
ಚೆನ್ನ ಚೋಳನ ಮನೆಯ ಕಂಪಣಿಗನಯ್ಯಾ !
ಕೂಡಲ ಸಂಗಮದೇವ ಭಕ್ತಲಂಪಟನಯ್ಯಾ ! ॥ ೬೮೨ ॥

೧೫೮

ನಿಸ್ಸೀಮಗುಗ್ಗುಳವನಿಕ್ಕಿದನೊಬ್ಬ ಶರಣ :
' ಉಘೇ, ಚಾಂಗು ಭಲಾ ' ಎಂಬ ಹೊಗೆ ಗಗನವ ತೀವೆ
ಓಹಿಲನ ಮೆಱೆದ ಸೌರಾಷ್ಟ್ರವೆಂಬ ಮಂಡಲದಲ್ಲಿ
ಕೂಡಲ ಸಂಗಮದೇವ ಭಕ್ತವತ್ಸಲನಾಗಿ. ॥ ೬೮೩ ॥

೧೫೯

ಲಿಂಗವಶದಿಂದ ಬಂದ ನಡೆಗಳು, ಲಿಂಗವಶದಿಂದ ಬಂದ ನುಡಿಗಳು :
ಲಿಂಗವಂತರು ತಾವು ಅಂಜಲೇಕೆ,
ಲಿಂಗವಿರಿಸಿದಂತಿಪ್ಪುದಲ್ಲದೆ—
ಕೂಡಲ ಸಂಗಮದೇವ ಭಕ್ತರಭಿಮಾನ ತನ್ನದೆಂಬನಾಗಿ ! ॥ ೬೮೪ ॥

೧೬೦

ಶಿವಭಕ್ತನಾಗಿ ತನ್ನ ಹಿಡಿದಹೆನೆಂದು ಹೋದರೆ
ನುಗ್ಗುಮಾಡುವ, ನುಸಿಯ ಮಾಡುವ,
ಮಣ್ಣ ಮಾಡುವ, ಮಸಿಯ ಮಾಡುವ :
ಕೂಡಲ ಸಂಗಮದೇವರ ನೆಱೆನಂಬಿದನಾದರೆ
ಕಡೆಗೆ ತನ್ನಂತೆ ಮಾಡುವ. ॥ ೬೮೫ ॥

೧೬೧

ಅರಿವನಯ್ಯಾ ಸಣ್ಣವಹನ್ನಕ್ಕ, ಒರೆವನಯ್ಯಾ ಬಣ್ಣಗಾಣ್ಬನ್ನಕ್ಕ.
ಅರೆದರೆ ಸಣ್ಣವಾಗಿ ಒರೆದರೆ ಬಣ್ಣವಾದರೆ
ಕೂಡಲ ಸಂಗಮದೇವನೊಲಿದು ಸಲಹುವನು. ॥ ೬೮೬ ॥

೧೬೨

ಅಂಜಿದರಾಗದು, ಅಳುಕಿದರಾಗದು, ವಜ್ರಪಂಜರದೊಳಗಿದ್ದರಾಗದು :
ತಪ್ಪದುವೋ ಲಲಾಟಲಿಖಿತ !
ಕಕ್ಕುಲತೆಗೆ ಬಂದರೆ ಆಗದು, ನೋಡಾ !
ಧೃತಿಗಟ್ಟು ಮನ ಧಾತುಗೆಟ್ಟರೆ ಅಪ್ಪುದು ತಪ್ಪದು,
ಕೂಡಲ ಸಂಗಮದೇವಾ. ॥ ೬೮೭ ॥

೧೬೩

ಪುಟ್ಟದ ಬಳಿಕ ಕೊಟ್ಟ ಭೋಗಂಗಳ ತಪ್ಪಿಸಿಹೆನೆಂದರೆ
ತಪ್ಪದು ನೋಡಯ್ಯಾ.
' ಎನಗಿನ್ನೆಂತೊ, ಎನಗಿನ್ನೆಂತೊ, ಎನಗಿನ್ನೆಂತೋ ' ಎಂದೆನಬೇಡ.
" ನಾಭೋಕ್ತಾ ಕ್ರಿಯತೇ ಕರ್ಮ " ಎಂಬ ಶ್ರುತಿ ತಪ್ಪದು,
ಕೂಡಲ ಸಂಗಮದೇವಾ. ॥ ೬೮೮ ॥

೧೬೪

ಅಯುಷ್ಯ ತೀರಿದಲ್ಲದೆ ಮರಣವಿಲ್ಲ :
ಭಾಷೆ ತಪ್ಪಿದಲ್ಲದೆ ದಾರಿದ್ರ್ಯವಿಲ್ಲ.
ಅಂಜಲದೇಕೊ ಲೋಕ ವಿಗುರ್ಬಣೆಗೆ,
ಅಂಜಲದೇಕೊ, ಕೂಡಲ ಸಂಗಮದೇವಾ, ನಿಮ್ಮಾಳಾಗಿ ? ॥ ೬೮೯ ॥

೧೬೫

ಮನಕ್ಕೆ ಮನವೊಂದಾಗಿ, ಧನಕ್ಕೆ ಧನವೊಂದಾಗಿ
ನಚ್ಚಿದ ಮಚ್ಚು ಅಜ್ಜೊತ್ತಿದಂತಿರಬೇಕು.
ಪ್ರಾಣಕ್ಕೆ ಪ್ರಾಣವೊಂದಾಗಿ, ಶುಭಸೂಚನೆಯೊಂದಾಗಿರದ
ನಚ್ಚು ಮಚ್ಚು ಪಾರವೈದುವುದೆ ?
ಸಿರ ಹರಿದರೇನು, ಕರಳು ಕುಪ್ಪಳಿಸಿದರೇನು ?
ಇಂತಪ್ಪ ಸಮಸ್ತವಸ್ತುವೆಲ್ಲವೂ ಹೋದರೇನು ?
ಚಿತ್ತ ಮನ ಬುದ್ಧಿಯೊಂದಾದ ಮಚ್ಚು ಬಿಚ್ಚಿ ಬೇರಾಗದಿದ್ದರೆ
ಮಚ್ಚುವ ನಮ್ಮ ಕೂಡಲ ಸಂಗಮದೇವ. ॥ ೬೯೦ ॥

(೧೭) ಮಾಹೇಶ್ವರನ ಮಾಹೇಶ್ವರ ಸ್ಥಳ

೧

ಎನಿಸೆನಿಸೆಂದೊಡೆ ನಾ ಧೃತಿಗೆಡೆನಯ್ಯಾ;
ಎಲುದೋಲುದರೆ ನರ ಹಲುದರೆ ಕರುಳು ಕುಪ್ಪಳಿಸಿದರೆ
ನಾ ಧೃತಿಗೆಡೆನಯ್ಯಾ.
ಸಿರ ಹಲುದು ಆಟ್ಟಿ ನೆಲಕ್ಕೆ ಬಿದ್ದರೆ
ನಾಲಗೆ ' ಕೂಡಲ ಸಂಗಾ, ಶರಣೆ ' ನ್ನುತ್ತಿದ್ದೀತಯ್ಯಾ ! ॥೧೧॥

೨

ಒಣಗಿಸಿ ಎನ್ನ ಘಣಘಣಲನೆ ಮಾಡಿದರೆಯೂ
ಹರಣವುಳ್ಳನ್ನಕ್ಕ ನಿಮ್ಮ ಚರಣವ ನೆನೆವುದ ಮಾಣೆ, ಮಾಣೆ;
ಶರಣೆಂಬುದ ಮಾಣೆ, ಮಾಣೆ.
ಕೂಡಲ ಸಂಗಮದೇವಯ್ಯಾ, ಎನ್ನ ಪೆಣನ ಮೇಲೆ
ಕಂಚಿಟ್ಟುಂಡರೆಯೂ ಮಾಣೆ, ಮಾಣೆ. ॥ ೧೨ ॥

೩

ಜಾಗ್ರ ಸ್ವಪ್ನ ಸುಷುಪ್ತಿಯಲ್ಲಿ ಮತ್ತೊಂದ ನೆನೆದೊಡೆ ತಲೆದಂಡ, ತಲೆದಂಡ!
ಹುಸಿಯಾದರೆ, ದೇವ, ತಲೆದಂಡ, ತಲೆದಂಡ !
ಕೂಡಲ ಸಂಗಮದೇವಾ, ನೀವಲ್ಲದೆ ಅನ್ಯರ ನೆನೆದೊಡೆ
ತಲೆದಂಡ, ತಲೆದಂಡ ! ॥ ೧೩ ॥

೪

ಸುಖ ಬಂದರೆ ಪುಣ್ಯದ ಫಲವೆನ್ನೆನು,
ದುಃಖ ಬಂದರೆ ಪಾಪದ ಫಲವೆನ್ನೆನು;
ನೀ ಮಾಡಿದೊಡಾಯಿತ್ತೆಂದೆನ್ನೆನು,
ಕರ್ಮಕ್ಕೆ ಕರ್ತೃವೆ ಕಡೆಯೆಂದೆನ್ನೆನು,
ಉದಾಸೀನವಿಡಿದು ಶರಣೆನ್ನೆನು.
ಕೂಡಲ ಸಂಗಮದೇವಾ, ನೀ ಮಾಡಿಸುವೋಪಾದಿ ಎನಗೀ ಪರಿಯಲಿ :
ಸಂಸಾರವ ಸವೆಯೆ ಬಳಸುವೆನು. ॥ ೧೪ ॥

೫

ಕಾಯದ ಕಳವಳಕ್ಕಂಜಿ ' ಕಾಯಯ್ಯಾ ' ಎನ್ನೆನು;
ಜೀವನೋಪಾಯಕ್ಕಂಜಿ, ' ಈಯಯ್ಯಾ ' ಎನ್ನೆನು.
" ಯದ್‌ಭಾವಂ ತದ್‌ಭವತಿ " : ಉರಿ ಬರಲಿ, ಸಿರಿ ಬರಲಿ—
' ಬೇಕು, ಬೇಡೆ ' ನ್ನೆನಯ್ಯಾ.
ಆ ನಿಮ್ಮ ಹಾರೆನು, ಮಾನವರ ಬೇಡೆನು;
ಆಣೆ, ನಿಮ್ಮಾಣೆ, ಕೂಡಲ ಸಂಗಮದೇವಾ. ॥ ೬೯೫ ॥

೬

ನಾಳೆ ಬಪ್ಪುದು ನಮಗಿಂದೆ ಬರಲಿ;
ಇಂದು ಬಪ್ಪುದು ನಮಗೀಗಲೆ ಬರಲಿ;
ಇದಕಾರಂಜುವರು, ಇದಕಾರಳುಕುವರು ?
" ಜಾತಸ್ಯ ಮರಣಂ ಧ್ರುವಂ " ಎಂದುದಾಗಿ,
ನಮ್ಮ ಕೂಡಲ ಸಂಗಮದೇವರು ಬರೆದ ಬರೆಹವ ತಪ್ಪಿಸುವರೆ
ಹರಿಬ್ರಹ್ಮಾದಿಗಳಿಗಳವಲ್ಲಾ ! ॥ ೬೯೬ ॥

೭

ಕಳಹೋದರೆ ಕನ್ನದುಳಿಯ ಹಿಡಿವೆ :
ಬಂದಿವಿಡಿದರೆ ನಿಮ್ಮಿಂದ ಮುಂದೆ ನಡೆವೆ;
ಮನಭೀತಿ–ಮನಶಂಕೆಗೊಂಡೆನಾದರೆ
ನಿಮ್ಮಾಣೆ, ನಿಮ್ಮ ಪುರಾತರಾಣೆ !
ಆಳ್ದರ ನಡೆ ಸದಾಚಾರವೆನ್ನದಿದ್ದರೆ,
ಕಟ್ಟಾಳು ಶಿಷ್ಟತನಕ್ಕೆ ಹೋಹ ಕಷ್ಟವ ನೋಡಾ,
ಕೂಡಲ ಸಂಗಮದೇವಾ. ॥ ೬೯೭ ॥

೮

ಜೋಳವಾಳಿಯಾನಲ್ಲ, ವೇಳೆವಾಳಿಯವ ನಾನಯ್ಯಾ :
ಹಾಳುಗೆಟ್ಟೋಡುವ ಆಳು ನಾನಲ್ಲಯ್ಯಾ;
ಕೇಳು, ಕೂಡಲ ಸಂಗಮದೇವಾ,
ಮರಣವೆ ಮಹಾನವಮಿ ! ॥ ೬೯೮ ॥

೯

ಕರ್ಮವೆಂಬ ಅಂಕದೊಡನೆ ತೊಡರಿದೆ;
ಬಿನ್ನಪವನವಧಾರು, ನಿಮ್ಮಾಳಿನ ಭಾಷೆಯ :
' ಕಡೆಗಳಕ್ಕೆ ನೂಂಕುವೆ, ಕೆಡಹುವೆನ್ಕಂಕವ,
ಕರೆದರೋ ಎನಿಸಿದರೆ ನಿಮ್ಮಾಳಲ್ಲಾ '.
' ಶಿವಶರಣೆ 'ಂಬ ದಂಡೆಯ ಹೂಡಿ
ಗಣಮೇಳಾಪವೆಂಬಲಗಿನಿಂದಿಜ್ಜುವೆ,
ಕೂಡಲ ಸಂಗಮದೇವಾ. || ೬೯ ||

೧೦

ಕಟ್ಟಿದೆ ಒಜ್ಜೆಯ, ಬಿಟ್ಟೆ ಜನ್ನಿಗೆಯರ,
ಮುಟ್ಟಿ ಬಂದಿಜ್ಜಿದರೆ ಓಸರಿಸುವನಲ್ಲ :
ಓಡದಿರು, ಓಡದಿರು !—
ನಿಮ್ಮ ಶರಣರ ಮನೆಯ ಬಿದುರಿನ ಅಂಕಕಾಜಿ—
ಓಡದಿರು ಓಡದಿರು, ಎಲೆ ಎಲೆ ದೇವಾ,
ಎಲೆ ಎಲೆ ಸ್ವಾಮೀ, ಎಲೆ ಎಲೆ ಹಂದೇ !
ಕೂಡಲ ಸಂಗಮದೇವಾ ! || ೭೦೦ ||

೧೧

ಗರುಡಿಯ ಕಟ್ಟಿ, ಅಜವತ್ತುನಾಲ್ಕು ಕೋ' ಭ್ಯಾಸವ ಮಾಡಿದೆನಯ್ಯಾ :
ಇಜ್ಜುವ ಘಾಯ, ಕಂಡೆಯ ಭೇದವಿನ್ನೂ ತಿಳಿಯದು !
ಪ್ರತಿಗರುಡಿಕಾಜಿ ಬಿರುದ ಪಾಡಿಂಗೆ ಒದಗಲು
ವೀರಪಟ್ಟಿಯ ಕಟ್ಟಿ ತಿಗುರನೇಜ್ಜಿಸಿಕೊಂಬೆ.
ಗುರುಕಳನೇಜ್ಜಿ ಕಠಾರಿಯ ಕೊಂಡಲ್ಲಿ ' ಹೋಯಿತ್ತು ಗಳೆ ' ಯೆಂದರೆ–
ಎನ್ನ ನಿನ್ನಲ್ಲಿ ನೋಡು, ಕೂಡಲ ಸಂಗಮದೇವಾ ! || ೭೦೧ ||

೧೨

ಶರಣರೊಡನೆ ಶ್ರವವ ಮಾಡಿ ಮಾಜುಗೋಲ ಬಿಡುವೆನಯ್ಯಾ :
ತಾಗಲಿ, ತಪ್ಪಲಿ ' ಗೆಲವೆನ್ನದೆ 'ಂಬೆನಯ್ಯಾ.
ಕಳನಿಂದ ಕಡೆಗಳಕ್ಕೆ ಓಡುವೆ, ಕೂಡಲ ಸಂಗಯ್ಯಾ || ೭೦೨ ||

೧೩

ಎಲೆ ಗಂಡುಗೂಸೆ ನೀ ಕೇಳಾ, ನಿನಗೊಬ್ಬಗೆಂದುಟ್ಟಿ ಗಂಡುಡುಗೆಯ.
ಮತ್ತೊಮ್ಮೆಯಾನು ಗಂಡಪ್ಪೆನಯ್ಯಾ,
ಮತ್ತೊಮ್ಮೆಯಾನು ಹೆಣ್ಣಪ್ಪೆನಯ್ಯಾ :
ಕೂಡಲ ಸಂಗಮದೇವಾ, ನಿನಗೆ ವೀರನಪ್ಪೆ,
ನಿಮ್ಮ ಶರಣರಿಗೆ ವಧುವಪ್ಪೆ ! ॥ ೭೦೩ ॥

---

(೧೪) ಮಾಹೇಶ್ವರನ ಭಕ್ತಸ್ಥಳ

೧

ಕಟ್ಟುವೆನುಪ್ಪರಗುಡಿಯ ಜಗವಱಿಯೆ;
ಮಾಡುವೆನೆನ್ನ ಕಾಯ ಕೆಡೆವನ್ನಕ್ಕ.
ಬೇಡುವುದೆನ್ನ ತನುಮನಧನವ,
ಬೇಡಲಾಱದ ಹಂದೇ, ನೀ, ಕೇಳಾ :
ಈ ಬಿರುದು ಸಂದಿತ್ತು, ಕೂಡಲ ಸಂಗಮದೇವಾ. ॥೭೦೪ ॥

೨

ಹುಟ್ಟುತ ದ್ರವ್ಯವನಱಿಯದವಂಗೆ ಐಶ್ವರ್ಯವಂತ ಮಗನಾದರೆ
ಲಕ್ಷಸಂಖ್ಯೆಯ ಹಿರಣ್ಯವ ತಂದು ಸಂತೋಷ ಪಡಿಸುವಂತೆ,
ಕಾಳಗದ ಮುಖವಾವುದೆಂದಱಿಯದ ಹಂದೆನೃಪಂಗೆ
ಒಬ್ಬ ಕ್ಷತ್ರಿಯ ಕುಮಾರ ಹುಟ್ಟಿ ಕಿಗ್ಗಡಲ ರಕ್ತದ ಹೊನಲಲಿ
ಕಡಿದು ಮುಳುಗಾಡುವ್ಕೊಳಗುಳವ ಕಂಡು ಪರಿಣಾಮಿಸುಂತೆ,
ಆನು ಪರಿಣಾಮಿಸುವೆನಯ್ಯಾ, ಕೂಡಲ ಸಂಗಮದೇವಾ,
ನೀವು ಬಂದೆನ್ನ ಬೇಡಿದರೆ ! ॥ ೭೦೫ ॥

೩

ಅರ್ಥವನರ್ಥವ ಮಾಡಿ ಕೋಳಾಹಳಂಗೆಯ್ಯುತ್ತಿರಲಿ,
ಹುಟ್ಟಿದ ಮಕ್ಕಳ ನವಖಂಡವ ಮಾಡಿ ಕಡಿಯುತ್ತಿರಲಿ,
ಮುಟ್ಟುವ ಸ್ತ್ರೀಯ ಕಣ್ಣಮುಂದೆ ಅಭಿಮಾನಗೊಂಡು ನೆರೆಯುತ್ತಿರಲಿ.
—ಇಂತೀ ತ್ರಿವಿಧವು ಹೊರಗಣವು—
ಇನ್ನೆನ್ನಂಗದ ಮೇಲೆ ಬರಲಿ, ಹಿಡಿಖಂಡಂಗೊಯ್ಯಲಿ,
ಇಕ್ಕುವ ಸೂಲ ಪ್ರಾಪ್ತಿಸಲಿ,
ಹಾಕೊಂದೆಸೆ ಹನ್ನೊಂದೆಸೆಯಾಗಿ ಮಾಡುತ್ತಿರಲಿ;
ಮತ್ತೆಯೂ ಲಿಂಗಾರಾಧನೆಯ ಮಾಡುವೆ,
ಜಂಗಮಾರಾಧನೆಯ ಮಾಡುವೆ, ಪ್ರಸಾದಕ್ಕೆ ತಪ್ಪೆನು !
ಇಂತಪ್ಪ ಭಾಷೆ ಕಿಂಚಿತ್ತು ಹುಸಿಯಾದರೆ
ನೀನಂದೆ ಮೂಗ:ಕೊಯಿ, ಕೂಡಲ ಸಂಗಮದೇವಾ ! ॥ ೭೦೬ ॥

೪

ತನುವ ಬೇಡಿದಡೀವೆ, ಮನವ ಬೇಡಿದಡೀವೆ,
ಧನವ ಬೇಡಿದಡೀವೆ, ಬೇಡು, ಬೇಡಿಲೆ ಹಂದೇ !
ಕಣ್ಣ ಬೇಡಿದಡೀವೆ, ತಲೆಯ ಬೇಡಿದಡೀವೆ;
ಕೂಡಲ ಸಂಗಮದೇವಾ, ನಿಮಗಿತ್ತು ಶುದ್ಧನಾಗಿಪ್ಪೆ
ನಿಮ್ಮ ಪುರಾತರ ಮನೆಯಲ್ಲಿ. ॥ ೭೦೭ ॥

೫

ನಾನು ಆರಂಭವ ಮಾಡುವೆನಯ್ಯಾ ಗುರುಪೂಜೆಗೆಂದು,
ನಾನು ವಿವಹಾರ ಮಾಡುವೆನಯ್ಯಾ ಲಿಂಗಾರ್ಚನೆಗೆಂದು,
ನಾನು ಪರಸೇವೆಯ ಮಾಡುವೆನಯ್ಯಾ ಜಂಗಮದಾಸೋಹಕ್ಕೆಂದು;
ನಾನಾವಾವ ಕರ್ಮಂಗಳ ಮಾಡಿದರೆಯೂ
ಆ ಕರ್ಮಫಲಭೋಗವ ನೀ ಕೊಡುವೆಯೆಂಬುದ ನಾನು ಬಲ್ಲೆನು.
ನೀ ಕೊಟ್ಟ ದ್ರವ್ಯವ ನಿಮಗಲ್ಲದೆ ಮತ್ತೊಂದ ಕ್ರೀಯ ಮಾಡೆನು;
ನಿಮ್ಮ ಸೊಮ್ಮಿಂಗೆ ಸಲಿಸುವೆನು, ನಿಮ್ಮಾಣೆ,
ಕೂಡಲ ಸಂಗಮದೇವಾ. ॥ ೭೦೮ ॥

೬

ಹೊತ್ತಾಯಿ ಎದ್ದು ಕಣ್ಣ ಹೊಸೆಯುತ್ತ
' ಎನ್ನೊಡಲಿಂಗೆ, ಎನ್ನೊಡವೆಗೆ, ಎನ್ನ ಮಡದಿ-ಮಕ್ಕಳಿಗೆ 'ಂದು
ಕುದಿದೆನಾದರೆ ಎನ್ನ ಮನಕ್ಕೆ ಮನವೇ ಸಾಕ್ಷಿ !
' ಆಸನೇ ಶಯನೇ ಯಾನೇ । ಸಂಪರ್ಕೇ ಸಹಭೋಜನೇ
ಸಂಚರಂತಿ ಮಹಾಘೋರೇ । ನರಕೇ ಕಾಲಮಕ್ಷಯಂ
ಎಂಬ ಶ್ರುತಿಯ ' ಬಸವಣ್ಣನೋದುವನು ' ಎಂಬರು.
' ಭವಿ ಬಿಜ್ಜಳನ ಗದ್ದುಗೆಯ ಕೆಳಗೆ ಕುಳಿದ್ದು
ಓಲೈಸಿಹನೆ 'ಂದು ನುಡಿವರಯ್ಯಾ ಪ್ರಮಥರು.
ಕೊಡುವೆನುತ್ತರವನವರಿಗೆ, ಕೂಡಲ [ಮ್ಮುವೆ] :
ಹೊಲೆಯ ಹೊಲೆಯರ ಮನೆಯ ಹೊಕ್ಕು,
ಸಲೆ ಕೈಕೂಲಿಯ ಮಾಡಿಯಾದರೆಯೂ
ನಿಮ್ಮ ನಿಲವಿಂಗೆ ಕುದಿವೆನಲ್ಲದೆ,
ಎನ್ನೊಡಲವಸರಕ್ಕೆ ಕುದಿದೆನಾದರೆ
ತಲೆ ದಂಡ ! ಕೂಡಲ ಸಂಗಮದೇವಾ. ॥ ೭೦೯ ॥

೭

ದೇವ, ದೇವಾ, ಬಿನ್ನಪವನವಧಾರು :
ವಿಪ್ರ ಮೊದಲು ಅಂತ್ಯಜ ಕಡೆಯಾಗಿ
ಶಿವಭಕ್ತರಾದವರನೆಲ್ಲರನೊಂದೇ ಎಂಬೆ :
ಹಾರುವ ಮೊದಲು ಶ್ವಪಚ ಕಡೆಯಾಗಿ
ಭವಿಯಾದವರನೊಂದೇ ಎಂಬೆ;
ಈ ಹೀಗೆಂದು ನಂಬುವುದೆನ್ನ ಮನವು.
ಈ ನುಡಿದ ನುಡಿಯೊಳಗೆ ಎಳ್ಳ ಮೊನೆಯಷ್ಟು ಸಂದೇಹವುಳ್ಳರೆ,
ಹಲುದೋಯಿ ಮೂಗ ಕೊಯಿ, ಕೂಡಲ ಸಂಗಮದೇವಾ. ॥ ೭೧೦ ॥

೮

ಒಲ್ಲೆನಯ್ಯಾ, ಒಲ್ಲೆನಯ್ಯಾ, ನಿಮ್ಮವರಲ್ಲದವರ,
ಒಲ್ಲೆನಯ್ಯಾ, ಒಲ್ಲೆನಯ್ಯಾ, ಜಗವೆಲ್ಲವಱಿಯಲಿಕೆ,

ಒಲ್ಲೆನಯ್ಯಾ, ಒಲ್ಲೆನಯ್ಯಾ, ನೀ ಮುನಿದರೆ ಮುನಿ,
ಕೂಡಲ ಸಂಗಮದೇವಾ, ನಿಮ್ಮಾಣೆ, ನಿಮ್ಮ ಪ್ರಮಥರಾಣೆ ! ॥೭೧೯॥

೯

ಆದಿಯಲಾಗಲಿ, ವೇದದಲಾಗಲಿ, ಶಾಸ್ತ್ರದಲಾಗಲಿ, ಸಮಯದಲಾಗಲಿ :
' ಎನ್ನವರೆನ್ನವರೆನ್ನವರೆ ' ನ್ನೆನು !
' ಎನ್ನವರೆ 'ಂದರೆ, ಸಂಗಾ, ನಿಮ್ಮಲ್ಲಿಗೆ ದೂರ !
ಎನ್ನವರಾದರಿ ಜನ್ನಕ್ಕೆ ನಡೆವರೆ ?
ಎನ್ನವರಲ್ಲ, ಕೂಡಲ ಸಂಗಾ, ನಿಮ್ಮಾಣೆ ! ॥ ೭೨೦ ॥

೧೦

ಅಣ್ಣ, ತಮ್ಮ, ಹೆತ್ತಣ್ಣ, ಗೋತ್ರವಾದರೇನು,
ಲಿಂಗಸಾಹಿತ್ಯವಿಲ್ಲದವರ ಎನ್ನವರೆನ್ನೆನಯ್ಯಾ.
ನಂಟು-ಭಕ್ತಿ ನಾಯಕನರಕ, ಕೂಡಲ ಸಂಗಮದೇವಾ ! ॥ ೭೨೩ ॥

೧೧

ಒಡೆಯರಿಲ್ಲದ ಮನೆಯ ತುಡುಗುಣಿ ನಾಯಿ ಹೊಗುವಂತೆ
ನೀವಿಲ್ಲದವರ ಮನೆಯ ಹೊಗೆನು, ಸಂಗಯ್ಯಾ.
ಶ್ವಪಚೋಪಿಗಳಾಗಲಿ, ಕೂಡಲ ಸಂಗಯ್ಯಾ,
ನೀವಿದ್ದವನೇ ಕುಲಜನು. ॥ ೭೨೪ ॥

೧೨

ಹೊನ್ನು ಮಣ್ಣು ಮಣ್ಣೆಂಬ ಕರ್ಮದ ಬಲೆಯಲ್ಲಿ ಸಿಲುಕಿ
ವೃಥಾಯ ಒಜ್ಜುದೋಜಿ ಹೋಹ ಕೆಡುಕ ಹಾರುವ ನಾನಲ್ಲ !
ಹಾರುವೆನಯ್ಯಾ ಭಕ್ತರ ಬರವ ಗುಡಿಗಟ್ಟಿ.
ಹಾರುವೆನಯ್ಯಾ ಶರಣರ ಬರವ ಗುಡಿಗಟ್ಟಿ,
ಕೂಡಲ ಸಂಗಮದೇವನು ವಿಪ್ರಕರ್ಮವ ಬಿಡಿಸಿ,
ಅಶುದ್ಧನ ಶುದ್ಧನ ಮಾಡಿದನಾಗಿ ! ॥ ೭೨೫ ॥

೧೩

ವೇದಕ್ಕೆ ಒಜ್ಜೆಯ ಕಟ್ಟುವೆ, ಶಾಸ್ತ್ರಕ್ಕೆ ನಿಗಳವನಿಕ್ಕುವೆ;
ತರ್ಕದ ಬೆನ್ನ ಬಾರನೆತ್ತುವೆ,

ಆಗಮದ ಮೂಗ ಕೊಯಿವೆ, ನೋಡಯ್ಯಾ.
ಮಹಾದಾನಿ, ಕೂಡಲ ಸಂಗಮದೇವಾ,
ಮಾದಾರ ಚೆನ್ನಯ್ಯನ ಮನೆಯ ಮಗ ನಾನಯ್ಯಾ. ॥ ೭೧೬ ॥

೧೪

ಆವ ಕುಲವಾದರೇನು ? ಶಿವಲಿಂಗವಿದ್ದವನೆ ಕುಲಜನು.
ಕುಲವನಱಿಸುವರೆ ಶರಣರಲ್ಲಿ ಜಾತಿಸಂಕರನಾದ ಬಳಿಕ ?

ಶಿವೇ ಜಾತ ಕುಲೇ ಧರ್ಮ: । ಪೂರ್ವಜನ್ಮವಿವರ್ಜಿತಃ
ಉಮಾ ಮಾತಾ ಪಿತಾ ರುದ್ರಃ । ಈಶ್ವರಃ ಕುಲಮೇವ ಚ

ಎಂಬುದಾಗಿ, ಒಕ್ಕುದ ಕೊಂಬಿನವರಲ್ಲಿ, ಕೂಸ ಕೊಡುವೆ,
ಕೂಡಲ ಸಂಗಮದೇವಾ, ನಂಬುವೆ ನಿಮ್ಮ ಶರಣರನು. ॥ ೭೧೭ ॥

೧೫

ಕಳ್ಳ ಬಂದಿಕಾಱಿ, ಹಾವಡಿಗ, ಹಾದರಿಗ,
ಬಂಟನೋಲೆಯಕಾಱನೆಂದೆನಾದರೆ;—
ನೀ ಮುಂತಾಗಿ ಬಂದ ಭಕ್ತರ ನೀಯೆನ್ನದಿದ್ದರೆ,
ಅದೇ ದ್ರೋಹ.
ನಡೆ ನುಡಿ ಹುಸಿಯುಂಟಾದರೆ
ಕೂಡಲ ಸಂಗನ ತೋಱಿದ ಚೆನ್ನಬಸವಣ್ಣನಾಣೆ ! ॥ ೭೧೮ ॥

೧೬

ಎಡದ ಕೈಯಲ್ಲಿ ಕತ್ತಿ, ಒಲದ ಕೈಯಲಿ ಮಾಂಸ
ಬಾಯಲ್ಲಿ ಸುರೆಯ ಗಡಿಗೆ—
ಕೊರಳಲಿ ದೇವರಿರಲಿ, ಅವರ ಲಿಂಗನೆಂಬೆ, ಸಂಗನೆಂಬೆ,
ಕೂಡಲ ಸಂಗಮದೇವಾ, ಅವರ ಮುಖಲಿಂಗಿಗಳೆಂಬೆನು ! ॥೭೧೯॥

೧೭

ಗುಮ್ಮಡಿಯಂತಪ್ಪ ತಾಯಿ ನೋಡೆನಗೆ,
ಕಲಕೇತನಂತಪ್ಪ ತಂದೆ ನೋಡೆನಗೆ,
ಮೋಟನಂತಪ್ಪ ಗಂಡ ನೋಡೆನಗೆ !
ಮರಗಾಲಲಟ್ಟ ಸದೆದು ನೋಡಯ್ಯ :

ಇಂದೆನ್ನ ಒಳತನ ಹೋದರೆ ಹೋಗಲಿ
ಮರಗಾಲ ಬಿಟ್ಟೆನಾದರೆ, ಕೂಡಲ ಸಂಗಾ, ನಿಮ್ಮಾಣೆ ! ॥೭೦॥

೧೫

ತನುವ ಬಂದಲೆವರಯ್ಯಾ ಎನ್ನ, ಮನವ ಬಂದು ನೋಡುವರಯ್ಯಾ,
ಎನ್ನ ಧನವ ಬಂದು ಸೂಜಿಗೊಂಬರಯ್ಯಾ
ಜಂಗಮವನರತ !
ಕೂಡಲ ಸಂಗಮದೇವಾ,
ನಿಮ್ಮ ಬಯ್ಕೆಯ ಭಂಡಾರಕ್ಕೆ ನಾನು ಶುದ್ಧನಯ್ಯಾ. ॥ ೭೧ ॥

೧೬

' ಒಡೆಯರೊಡವೆಯ ಕೊಂಡರೆ ಕಳ್ಳಂಗಳಲಾಯಿತ್ತೆ ' ಂಬ
ಗಾವೆ ಎನಗಿಲ್ಲಯ್ಯಾ.
ಇಂದೆನ್ನ ವಧುವ, ನಾಳೆನ್ನ ಧನವ, ನಾಳಿದ್ದೆನ್ನ ತನುವ ಬೇಡರೇಕಯ್ಯಾ?
ಕೂಡಲ ಸಂಗಮದೇವಾ, ಆನು ಮಾಡಿದುದಲ್ಲದೆ
ಬಯಿಸಿದ ಬಯಿಗ ಸಲುವುದೆ, ಅಯ್ಯಾ ? ॥ ೭೨ ॥

೧೭

ಕಲಿ ಕರುಳ ತಕ್ಕೈರ್ಪಸಿ ಹಜ್ಜೆಯ ಬಲ್ಲನಲ್ಲದೆ---
ಸಾಯ ಕಾದಿಸುವರೆ, ಎಡೆಗೊಳಲಿಕ್ಕುವರೆ
ದಾತಾರನಥೀನವಲ್ಲದೆ---
ಕೂಡಲ ಸಂಗಮದೇವಾ ನೀ ಮಾಡಿದಂತಹುದಯ್ಯಾ.
ತನುಮನಧನದಲ್ಲಿ ನಾನು ಸಂಚನೆಯ ಬಯಿಸಿದರೆಂತಹುದಯ್ಯಾ ?
॥ ೭೩ ॥

೧೮

ಬಾಲಾಭ್ಯಾಸವ ಮಾಡಹೋದರೆ ಎನ್ನ ಸುರಿಗೆ ಎನ್ನನಟ್ಟಿತ್ತು :
ಎಂತಯ್ಯಾ ಕಡಿಯೊಡನೆ ಶ್ರವವ ಮಾಡುವೆನು ?
ರಾಯ ರಾಜಗುರು ಜಗದ ಪುಣ್ಯಾಣಿಯ ತೊಡಕ ಬಿಡಿಸಬಾರದು :
ಸರಿಸದ ಮೇಲೆ ಹಿಡಿಯ ಹೋದರೆ
ಚದುರಂಗದ ಮೇಲೆ ಮಸಿಯ ತೋಜ್ಞಿದ
ಕೂಡಲ ಸಂಗಮದೇವ. ॥೭೪॥

೨೨

ಸಮಚಿತ್ತವೆಂಬ ನೇಮದ ಹಲಗೆಯ ಹಿಡಿದು
ಶಿವಚಿತ್ತವೆಂಬ ಕೂರಲಗ ಕೊಂಡು
ಶರಣಾರ್ಥಿಯೆಂಬ ಶ್ವಪಚ ಕಲಿತರೆ
ಆಳುತನಕ್ಕೆ ದೇಸಿಯಪ್ಪೆ, ನೋಡಾ.
ಮಾಲಿಂಕ ಜಂಗಮ ಮನೆಗೆ ಬಂದಲ್ಲಿ ಇದಿರೆದ್ದು ನಡೆವುದು :
ಕೂಡಲ ಸಂಗಮದೇವನೊಲಿಸುವೊಡಿದು ಚಿಹ್ನ ! ॥ ೨೨ ॥

೨೩

ಅಟ್ಟಾಟಿಕೆಯ ಮಾತನಾಡಲದೇಕೋ ?
ಮುಟ್ಟಿ ಬಂದುದಕ್ಕಂಜಲದೇಕೊ ?
ಕಾದಿದಲ್ಲದೆ ಮಾಣೆನು : ಓಡಿದರೆ ಭಂಗ ಹಿಂಗದಾಗಿ,
ಕೂಡಲ ಸಂಗಮದೇವಾ, ಎನ್ನ ಭಂಗ ನಿಮ್ಮದಾಗಿ ! ॥ ೨೩ ॥

೨೪

ಲಿಂಗಕ್ಕಲ್ಲದೆ ಮಾಡೆನೀ ಮನವನು,
ಜಂಗಮಕ್ಕಲ್ಲದೆ ಮಾಡೆನೀ ಧನವನು,
ಪ್ರಸಾದಕ್ಕಲ್ಲದೆ ಮಾಡೆನೀ ತನುವನು.
' ಲಿಂಗ ಜಂಗಮದ ಪ್ರಸಾದಕ್ಕಲ್ಲದೆ ಬಾಯ್ದೆರೆಯೆನೆ 'ಂಬುದೆನ್ನ ಭಾಷೆ.
ಅನರ್ಪಿತವಾದರೆ ತಪ್ಪೆನ್ನದು,
ಮೂಗ ಕೊಯಿ, ಕೂಡಲ ಸಂಗನುದೇವಾ. ॥ ೨೪ ॥

———

(೧೯) ಮಾಹೇಶ್ವರನ ಪ್ರಸಾದಿಸ್ಥಳ

೧

ಅಂಕ ಕಂಡಾ : ಕೋಲಾಸೆ ಮತ್ತೇಕಯ್ಯಾ ?
ಲಿಂಕ ಕಂಡಾ : ಪ್ರಾಣದಾಸೆ ಮತ್ತೇಕಯ್ಯಾ ?
ಭಕ್ತ ಕಂಡಾ : ತನುಮನಧನದಾಸೆ ಮತ್ತೇಕಯ್ಯಾ ?
ನಿಮ್ಮ ಅಂಕೆಗೆ ಝಂಕೆಗೆ ಶಂಕಿಸಿದೆನಾದರೆ
ಎನ್ನ ಲಿಂಕತನಕ್ಕೆ ಹಾನಿ, ಕೂಡಲ ಸಂಗಮದೇವಾ ! ॥ ೭೭೪ ॥

೨

ನೀನಿರಿಸಿದ ಮನದಲ್ಲಿ ನಾನಂಜೆನಯ್ಯಾ :
ಮನವು ಮಹಾಘನಕ್ಕೆ ಶರಣಗತಿವೊಕ್ಕುದಾಗಿ.
ನೀನಿರಿಸಿದ ಧನದಲ್ಲಿ ನಾನಂಜೆನಯ್ಯ :
ಧನವು ಸತಿ ಸುತ ಮಾತಾಪಿತರಿಗೆ ಪೋಗದಾಗಿ.
ನೀನಿರಿಸಿದ ತನುವಿನಲ್ಲಿ ನಾನಂಜೆನಯ್ಯಾ :
ತನುವು ಸರ್ವಾರ್ಪಿತದಲ್ಲಿ ನಿಯತಪ್ರಸಾದಭೋಗಿಯಾಗಿ.
ಇದು ಕಾರಣ, ವೀರಧೀರಸಮಗ್ರಾಹಕನಾಗಿ,
ನಿಮಗಾನಂಜೆ, ಕೂಡಲ ಸಂಗಮದೇವಾ ! ॥ ೭೭೯ ॥

೩

ಹಲ್ಲು ಹತ್ತಿ ನಾಲಗೆ ಹೊರಳದಿದ್ದಲ್ಲಿ
ಮನವೆರಡಾದರೆ ಆಣೆ, ನಿಮ್ಮಾಣೆ !
ಮಾಡುವ ನೇಮಕ್ಕೆ ಛಲವಿಲ್ಲದಿದ್ದರೆ ಆಣೆ, ನಿಮ್ಮಾಣೆ !
ಕೂಡಲ ಸಂಗಮದೇವ ಎನ್ನ ಮನವನೋಡಲೆಂದಟ್ಟಿದರೆ
ಪ್ರಸಾದವನಲ್ಲದೆ ಕೊಂಡರೆ ಆಣೆ, ನಿಮ್ಮಾಣೆ ! ॥೭೮೦॥

೪

ಹೊಕ್ಕಲ್ಲಿ ಹೊಕ್ಕು ನಿಮ್ಮೊಕ್ಕುದನುಂಬವನ ಕುಲವೇನೊ ?
ದೇವ, ನೀನೊಲಿದವನ, ಸ್ವಾಮೀ, ನೀ ಹಿಡಿದವನ ಕುಲವೇನೋ ?
ಕುಲಕ್ಕೆ ತಿಲಕ ನಮ್ಮ ಮಾದಾರ ಚೆನ್ನಯ್ಯ ನಿಮ್ಮಿಂದಧಿಕ !
ಕೂಡಲ ಸಂಗಮದೇವಾ ॥ ೭೮೧ ॥

೫

ಹುಟ್ಟಿದ ಮಕ್ಕಳೆಲ್ಲಾ ಅರ್ಥಪ್ರಾಣಾಭಿಮಾನಕ್ಕೆ
ಒಡೆಯರಾದ ಪರಿಯ ನೋಡಾ :
ಅಟ್ಟಡಿಗೆಯ ವಿಷವನು ನಿಮಗೆ ಕೊಟ್ಟಲ್ಲದೆ ಉಣ್ಣೆನೆಂಬ ಭಾಷೆ !
ಕೂಡಲ ಸಂಗಮದೇವಯ್ಯಾ, ನಿನಗೆಂದಟ್ಟಡಿಗೆಯ
ನೀಡ ಕಲಿಸಿದಾತ ಕೆಂಬಾವಿಯ ಭೋಗಯ್ಯಾ. ॥ ೭೩೨ ॥

೬

ಅಂಗವ ಮೇಲಣ ಲಿಂಗವ ಹಿಂಗಿ ಬಂದ ಸುಖವನಾರಿಗರ್ಪಿಸುವೆ ?
ಹಿಂಗಲಾಗದು ಭಕ್ತಿಪಥಕ್ಕೆ ಸಲ್ಲದಾಗಿ.
ಕೂಡಲ ಸಂಗಮದೇವರ ಹಿಂಗಿ ನುಂಗಿದುಗುಳು ಕೆಲ್ಬಿಷ ! ॥ ೭೩೩ ॥

೭

ಬತ್ತೀಸಾಯುಧದಲ್ಲಿ ಅಭ್ಯಾಸವ ಮಾಡಿದರೇನು,
ಹಗೆಯ ಕೊಲುವರೆ ಒಂದಲಗು ಸಾಲದೆ ?
ಲಿಂಗವ ಗೆಲುವರೆ ' ಶರಣಸತಿ ಲಿಂಗಪತಿ ' ಎಂಬುದೊಂದಲಗು ಸಾಲದೆ?
ಎನಗೆ ನಿನಗೆ ಜಂಗಮಪ್ರಸಾದವೆಂಬಲಗು ಸಾಲದೆ
ಕೂಡಲ ಸಂಗಮದೇವಾ ?

---

(೨೦) ಮಾಹೇಶ್ವರನ ಪ್ರಾಣಲಿಂಗಸ್ಥಳ

೧

ಕೊಲ್ಲೆನಯ್ಯಾ ಪ್ರಾಣಿಗಳ, ಮೆಲ್ಲೆನಯ್ಯಾ ಬಾಯಿಚ್ಛೆಗೆ,
ಒಲ್ಲೆನಯ್ಯಾ ಪರಸತಿಯರ ಸಂಗವ :
ಬಲ್ಲೆನಯ್ಯಾ ಮುಂದೆ ತೊಡಕುಂಟೆಂಬುದ !
ಬಳ್ಳದ ಬಾಯಂತೆ ಒಂದೇ ಮನವ ಮಾಡಿ
ನಿಲ್ಲೆಂದು ನಿಲ್ಲಿಸಯ್ಯಾ, ಕೂಡಲ ಸಂಗಮದೇವಾ. ॥ ೭೩೪ ॥

೨

ಆನೆ ಅಂಕುಶಕ್ಕಂಜುವುದೆ, ಅಯ್ಯಾ,
ಮಾಣದೆ ಸಿಂಹದ ನಖವೆಂದು ಅಂಜುವುದಲ್ಲದೆ ?
ಆನೀ ಬಿಜ್ಜಳಂಗಂಜುವೆನೆ, ಅಯ್ಯಾ,
ಕೂಡಲ ಸಂಗಮದೇವಾ,
ನೀನು ಸರ್ವಜೀವ ದಯಾಪಾರಿಯಾದ ಕಾರಣ
ನಿನಗಂಜುವೆನಲ್ಲದೆ ? ॥ ೭೩೬ ॥

೩

ಬಂದಹೆನೆಂದು ಬಾರದೆಯಿದ್ದರೆ, ಬಟ್ಟೆಗಳ ನೋಡುತ್ತ ಇದ್ದೇನಯ್ಯಾ.
ಇನ್ನಾರನಟ್ಟುವೆ, ಇನ್ನಾರ ಪಾದವ ಹಿಡಿವೆನಯ್ಯಾ ?
ಕೂಡಲ ಸಂಗಮನ ಶರಣರು ಬಾರದಿದ್ದರೆ
ಅಟ್ಟುವೆನೆನ್ನ ಪ್ರಾಣವನು ! ॥ ೭೩೭ ॥

---

(೨೧) ಮಾಹೇಶ್ವರನ ಶರಣಸ್ಥಳ

೧

ಅರಸನು ಮಂಚಕ್ಕೆ ಬರಿಸಿ ಎನ್ನ ಬೆರಸಿದ ಬಳಿಕ
ಆನಂಜುವಳೆ ? ಆನು ಸಿರಿಯಕ್ಕನೇ :
ಪರುಷ ಮುಟ್ಟಿದ ಬಳಿಕ ಲೋಹವೇ ?
ಕೂಡಲ ಸಂಗಮದೇವ ಎನ್ನನೊಲ್ಲದೊಡಾನು ಬದುಕುವೆನೆ ? ॥ ೭೩೮ ॥

೨

ಎಲ್ಲಿ ಹೊಕ್ಕಲ್ಲಿ ನಿನ್ನ ವಿಕಾರವ ಮಾಣೆ : ಗರುವತನವೆ ?
ದಾಸನ ವಸ್ತ್ರವನುಡುವುದೊಂದು ಗರುವತನವೆ !
ಸಿರಿಯಾಳನ ಮಗನ ಬೇಡುವುದೊಂದು ಗರುವತನವೆ !
ಕೋಡಗವ ಹುಲ್ಲಲಿ ಮುಸುಕಿದಂತೆ
ಕೂಡಲ ಸಂಗಮದೇವಾ, ನಿಮ್ಮ ಪರಿ ! ॥ ೭೩೯ ॥

೩

ಸಿರಿಯಾಳನ ಮಗನ ಬಾಣಸವ ಮಾಡಿಸಿ ಉಣಲೊಲ್ಲದೆ ಕಾಡಿದೆ,
ಜೋಳನ ಮನೆಯಲ್ಲುಣಲೊಲ್ಲದೆ, ಚೆನ್ನನ ಮನೆಯಲುಂಡೆ :
ಒಬ್ಬರಿಗೊಂದು ಪರಿಯು ಮಾಡಿದೆ, ಕೂಡಲ ಸಂಗಮದೇವಾ !
॥ ೭೪೦ ॥

೪

ಒಬ್ಬನ ಮನೆಯಲ್ಲುಂಡು ಹೊತ್ತುಗಳೆವೆ,
ಒಬ್ಬನ ಮನೆಯಲುಡಲೊಂದು ಗಳಿಸಿದೆ :
ಗರ್ವ ಬೇಡ, ಬೇಡ ನಿನಗೆ !
ಚೆನ್ನಯ್ಯನ ಮನೆಯಲ್ಲಂಬಲಿಯನುಂಡು ಬದುಕಿದೆ,
ಗರ್ವ ಬೇಡ, ಬೇಡ !
ಕೂಡಲ ಸಂಗಯ್ಯಾ, ಸಿರಿಯಾಳನಿಂದ ಮಾನಿಸಲೋಕಗಂಡೆ ! ॥೭೪೧॥

೫

ಹರಿಯಜನುನಿಗಳೆಲ್ಲರೂ ನಿಜ, ನಿಮ್ಮ ಬಾಗಿಲ ಕಾಯ್ದಿಹರು :
ಏನು ಕಾರಣ ನೀವು ಬಾಣನ ಬಾಗಿಲ ಕಾಯ್ದಿರಿ ?
ಡಿಂಗರಿಗನ ಮನೆಗೆ ಅಂಗಜಾವಹಕ್ಕೆ ಹೋಗಿದ್ದರೊಳರೆ
ಕೂಡಲ ಸಂಗಮದೇವಾ ? ॥ ೭೪೨ ॥

೬

ಜಗದಗಲ ಮುಗಿಲಗಲ ಮಿಗೆಯಗಲ ನಿಮ್ಮಗಲ :
ಪಾತಳದಿಂದತ್ತತ್ತ ನಿಮ್ಮ ಶ್ರೀಚರಣ,
ಬ್ರಹ್ಮಾಂಡದಿಂದತ್ತತ್ತ ನಿಮ್ಮ ಶ್ರೀಮಕುಟ !
ಅಗಮ್ಯ ಅಗೋಚರ ಅಪ್ರತಿಮ ಲಿಂಗವೆ,
ಕೂಡಲ ಸಂಗಮದೇವಯ್ಯಾ,
ಎನ್ನ ಕರಸ್ಥಳಕ್ಕೆ ಬಂದು ಚುಳುಕಾದಿರಯ್ಯಾ !! ॥ ೭೪೩ ॥

೭

ಗೋತ್ರನಾಮವ ಬೆಸಗೊಂಡರೆ
ಮಾತುನೂಂಕದೆ ಸುಮ್ಮನಿದ್ದಿರಿದೇನಯ್ಯಾ ?
ತಲೆಯ ಕುತ್ತಿ ನೆಲನ ಬರೆಯುತ್ತಿದ್ದಿರಿದೇನಯ್ಯಾ ?
ಗೋತ್ರ ಮಾದಾರ ಚೆನ್ನಯ್ಯ,
ಡೋಹಾರ ಕಕ್ಕಯ್ಯನೆಂಬುದೇನು,
ಕೂಡಲ ಸಂಗಯ್ಯಾ ? || ೭೪೪ ||

೮

ನಿಷ್ಠೆಯಿಂದ ಲಿಂಗವ ಪೂಜಿಸಿ
ಮತ್ತೊಂದು ಪಥವನಱಿಯದ ಶರಣರು
ಸರ್ಪನ ಹೆಡೆಯ ಮಾಣಿಕದಂತಿಪ್ಪರು ಭೂಷಣರಾಗಿ !
ದರ್ಪಣದೊಳಗಣ ಪ್ರತಿಬಿಂಬದಂತೆ ಹಿಂಗದಿಪ್ಪರು,
ಕೂಡಲ ಸಂಗಮದೇವಾ, ನಿಮ್ಮ ಶರಣರು. || ೭೪೫ ||

೯

ಶಿವಲೋಕಕ್ಕೆ ಸರಿ ಬೇಱಿಲ್ಲ ಲೋಕವಿಲ್ಲ;
ಜಗಕ್ಕೆ ಇಕ್ಕಿದೆ ಮುಂಡಿಗೆಯನೆತ್ತಿಕೊಳ್ಳಿ :
' ಕೂಡಲ ಸಂಗಯ್ಯನೊಬ್ಬನೇ ದೈವ ' ವೆಂದು. || ೭೪೬ ||

೧೦

' ಈಶ್ವರಸದ್ಭಾವೇ ಕಿಂ ಪ್ರಮಾಣಂ '
ಎಂಬ ಮೀಮಾಂಸಕನ ಮೂಗಿನ ಕೊನೆಯನು

ವಿಶ್ವತಶ್ಚಕ್ಷುರುತ ವಿಶ್ವತೋ ಮುಖೋ ವಿಶ್ವತೋ ಬಾಹುರುತ
ವಿಶ್ವತಸ್ಪಾತ್ । ಸ ಬಾಹುಭ್ಯಾಂ ಧಮತಿ ಸಂ ಪತತ್ರೈರ್
ದ್ಯಾವಾಭೂಮೀ ಜನಯನ್ ದೇವ ಏಕಃ

ಎಂಬ ಸುರಗಿಯಲಿಱಿದು,
ವೈಶೇಷಿಕ ಎಂಬ ಇಟ್ಟಗೆಯಲೊರಸಿ,
ಕೂಡಲ ಸಂಗಯ್ಯನೆಂಬ ಕನ್ನಡಿಯ ತೋಱುವೆನು ! || ೭೪೭ ||

೧೧

ಪಂಚಬ್ರಹ್ಮವ ಕೆಡಿಸಿತ್ತು; ಪ್ರಣವಮಂತ್ರವನೀಡಾಡಿತ್ತಲ್ಲಾ;
ಕರ್ಮಂಗಳನೆ ಕಳೆಯಿತ್ತು; ಕ್ರೀಗಳನೆ ಮೀಱಿತ್ತಲ್ಲಾ;
ಆಗಮದ ಹಲ್ಲನೆ ಕಳೆಯಿತ್ತು
ಕೂಡಲ ಸಂಗಯ್ಯನ ಭಕ್ತಿಗಜ, ಹೋ ! ॥ ೭೪೮ ॥

೧೨

ವೇದ ನಡನಡುಗಿತ್ತು, ಶಾಸ್ತ್ರವಗಲಿ ಕೆಲಕ್ಕೆ ಸಾರಿದ್ದಿತ್ತಯ್ಯಾ;
ತರ್ಕ ತರ್ಕಿಸಲಱಿಯದೆ ಮೂಗುವಟ್ಟಿದ್ದಿತ್ತಯ್ಯಾ;
ಆಗಮ ಹೆಱಿತೊಲಗಿ ಅಗಲಿ ಇದ್ದಿತ್ತಯ್ಯಾ,
ನಮ್ಮ ಕೂಡಲ ಸಂಗಯ್ಯನು
ಚಿನ್ನಯ್ಯನ ಮನೆಯಲುಂಡ ಕಾರಣ ! ॥ ೭೪೯ ॥

೧೩

ಚಿಕ್ಕಬೊಂದು ಹೊತ್ತಗೆ, ಬೆನಕನ ಕರಡಗೆಯಯ್ಯಾ,
ನೀಡುಂಡುಟಿಗೆ (?) ಗೊರವನಯ್ಯಾ.
ಪುಣ್ಯವೇನಾದರಾಗಲಿ, ಡಕ್ಕೆಯ ಮೇಲೆ ಅಕ್ಕಿಯ ತಳಿದೆನು :
ನಮ್ಮ ಕೂಡಲ ಸಂಗಮದೇವರಲ್ಲದೆ
ಅನ್ಯದೈವವುಂಟೆನ್ನ ದಿರು, ಕಂಡಾ ! ॥ ೭೫೦ ॥

೧೪

ನೀನಲ್ಲದನ್ಯದೈವವುಂಟೆಂಬವನ ಬಾಯ
ಕೆನ್ನೆವಾರೆ ಸೀಳಿದಲ್ಲದೆ ಎನ್ನ ಮುನಿಸು ಹೋಗದಯ್ಯಾ,
ಎನ್ನ ಕೋಪವಡಗದಯ್ಯಾ !
ಎನ್ನ ಬಿನ್ನಪವನವಧರಿಸು, ಕೂಡಲ ಸಂಗಮದೇವಾ. ॥ ೭೫೧ ॥

೧೫

ಆರು ಮುನಿದು ನಮ್ಮನೇನ ಮಾಡುವರು ?
ಊರು ಮುನಿದು ನಮ್ಮನೆಂತು ಮಾಡುವರು ?

ನಮ್ಮ ಕುನ್ನಿಗೆ ಕೂಸ ಕೊಡಬೇಡ;
ನಮ್ಮ ಸೊಣಕಂಗೆ ತಳಿಗೆಯನಿಕ್ಕಬೇಡ !
ಆನೆಯ ಮೇಲೆ ಹೋಹನ ಶ್ವಾನ ಕಚ್ಚಬಲ್ಲುದೆ,
ನಮಗೆ ನಮ್ಮ ಕೂಡಲ ಸಂಗಯ್ಯನುಳ್ಳನ್ನಕ್ಕ ? ॥ ೭೫೨ ॥

೧೬

ನ್ಯಾಯನಿಷ್ಠುರಿ, ದಾಕ್ಷಿಣ್ಯಪರನು ನಾನಲ್ಲ :
ಲೋಕವಿರೋಧಿ, ಶರಣನಾರಿಗಂಜುವನಲ್ಲ
ಕೂಡಲ ಸಂಗಮದೇವರ ರಾಜತೇಜದಲ್ಲಿಪ್ಪನಾಗಿ. ॥ ೭೫೩ ॥

೧೭

ಊರ ಮುಂದೆ ಹಾಲ ಹಳ್ಳ ಹರಿಯುತ್ತಿರಲು,
ಓಜೆಯಾವಿನ ಬೆನ್ನಲ್ಲಿ ಹರಿಯಲದೇಕಯ್ಯಾ ?
ಲಜ್ಜೆಗೆಡಲೇಕೆ ? ನಾಣುಗೆಡಲೇಕೆ ?
ಕೂಡಲ ಸಂಗಮದೇವಯ್ಯನುಳ್ಳನ್ನಕ್ಕ
ಬಿಜ್ಜಳನ ಭಂಡಾರವೆನಗೇಕಯ್ಯಾ ? ॥ ೭೫೪ ॥

೧೮

ಹೋಗಬಿಟ್ಟು, ಮರಳಿ ಹಿಂದ ನೋಡಿ
ಮತ್ತಾಗಬೇಕೆಂಬ ಸಂದೇಹವುಳ್ಳನ್ನಕ್ಕ
ಅದೆ ಪಾರದ್ವಾರ ನಾಯಕನರಕ, ತಪ್ಪದು !
ಅನ್ಯವಧುವೆಂಬುದು ನಿಮ್ಮ ರಾಣಿವಾಸ :
ಇದೆ ದಿಬ್ಯ, ಕೂಡಲ ಸಂಗಮದೇವಾ. ॥ ೭೫೫ ॥

೧೯

ಕಂಡುದಕ್ಕೆಳಸೆನೆನ್ನ ಮನದಲ್ಲಿ, ನೋಡಿ ಸೋಲೆನೆನ್ನ ಕಣ್ಗಳಲ್ಲಿ,
ಆಡಿ ಹುಸಿಯೆನೆನ್ನ ಜಿಹ್ವೆಯಲ್ಲಿ.
ಕೂಡಲ ಸಂಗಮದೇವಾ,
ನಿಮ್ಮ ಶರಣನ ಪರಿ ಇಂತುಟಯ್ಯಾ. ॥ ೭೫೬

೨೦

ಆಪ್ಯಾಯನಕ್ಕೆ ನೀಡುವೆ, ಲಾಂಛನಕ್ಕೆ ಶರಣೆಂಬೆ :
ಲಾಂಛನಕ್ಕೆ ತಕ್ಕ ಆಚರಣೆಯಿಲ್ಲದಿದ್ದರೆ
ಕೂಡಲ ಸಂಗವುದೇವಾ,
ನೀ ಸಾಕ್ಷಿಯಾಗಿ ' ಚಿಃ ' ಎಂಬೆ ! || ೭೫೭ ||

೨೧

ಮಾಡುವ ನೀಡುವ ಭಕ್ತನ ಕಂಡರೆ
ನಿಧಿನಿಧಾನವ ಕಂಡಂತಾಯಿತ್ತು.
ಪಾದೋದಕ-ಪ್ರಸಾದಜೀವಿಯ ಕಂಡರೆ
ಹೋದ ಪ್ರಾಣ ಬಂದಂತಾಯಿತ್ತು.
ಅನ್ಯರ ಮನೆಗೆ ಹೋಗಿ ತನ್ನುದರವ ಹೊರೆಯವ
ಅಚ್ಚ ಶರಣರ ಕಂಡರೆ
ನಿಶ್ಚಯವಾಗಿ ಕೂಡಲ ಸಂಗಯ್ಯನೆಂಬೆನು. || ೭೫೮ ||

೨೨

ಗುರುಭಕ್ತಿಯ ಮಾಡಬಹುದಲ್ಲದೆ
ಲಿಂಗಭಕ್ತಿಯ ಮಾಡಬಾರದು.
ಲಿಂಗಭಕ್ತಿಯ ಮಾಡಬಹುದಲ್ಲದೆ
ಜಂಗಮಭಕ್ತಿಯ ಮಾಡಬಾರದು.
ಜಂಗಮಭಕ್ತಿಯ ಮಾಡಬಹುದಲ್ಲದೆ
ಸಮಯಭಕ್ತಿಯ ಮಾಡಬಾರದು.
ಸಮಯಭಕ್ತಿಯ ಮಾಡಬಹುದಲ್ಲದೆ
ಸಮಯಸಂತೋಷವ ಮಾಡಬಾರದು.
ಇವೆಲ್ಲವ ಮಾಡಬಹುದಲ್ಲದೆ ತನ್ನ ತಾನಱಿಯಬಾರದು !
ತನ್ನ ತಾನಱಿದೆನೆಂಬಹಂಕಾರವುಳ್ಳರೆ ನಿಮ್ಮವರಿಗೆ ದೂರ, ಎಲೆ ದೇವ.
ಅನ್ಯಕ್ಕೆ ಆಸೆಮಾಡಿದೆನಾದರೆ ನಿಮ್ಮಾಣೆ, ನಿಮ್ಮ ಪ್ರಮಥರಾಣೆ !
ಕೂಡಲ ಸಂಗಮದೇವಾ. || ೭೫೯ ||

೨೩

ದಾಸನಂತೆ ತವನಿಧಿಯ ಬೇಡುವನಲ್ಲ;
ಚೋಳನಂತೆ ಹೊನ್ನ ಮಳೆಯ ಕಱೆಸೆಂಬವನಲ್ಲ;
ಅಂಜದಿರು ! ಅಂಜದಿರು ! ಅವರಂದದವ ನಾನಲ್ಲ !
ಎನ್ನ ತಂದೆ, ಕೂಡಲ ಸಂಗಮದೇವಾ,
ಸದ್‌ಭಕ್ತಿಯನೆ ಕರುಣಿಸೆನಗೆ. ॥ ೭೬೦ ॥

೨೪

ಲಿಂಗದಲ್ಲಿ ಸಮ್ಯಕ್ಕರು, ಲಿಂಗದಲ್ಲಿ ಸಮರ್ಥರು,
ಲಿಂಗದಲ್ಲಿ ಸೊಮ್ಮು-ಸಂಬಂಧವಱಿತ ಸ್ವಾಮಿಭೃತ್ಯರೆಲ್ಲರೂ,
ನಿಮ್ಮ ಬೇಡೆ, ಅಂಜದಿರಿ !
ಎನಗೆ ಮರ್ತ್ಯಲೋಕದ ಮಹಾಗಣಂಗಳುಂಟು,
ಇದು ಕಾರಣ, ಕೂಡಲ ಸಂಗಮದೇವರ ಲೋಕವ
ಹಂಚಿಕೊಳ್ಳಿ ನಿಮನಿಮಗೆ ! ॥ ೭೬೧ ॥

———

(೨೨) ಮಾಹೇಶ್ವರನ ಐಕ್ಯಸ್ಥಳ

೧

ಅಂದಂದಿನ ಹೊಂದಿಗೆಯ ಬಿಂದುಮಾತ್ರದಲಾದ
ಅಂದವ ಕೆಡಿಸಲಱಿಯದ ಅಂಧಕರ ನೋಡಾ.
ಸಮರಸವಿಲ್ಲದೆ ನೆರಹಿ ಮಾಡಿ ಭಕ್ತರಾದರೆಂಬವರನೇನೆಂಬೆ ?
ಆಚಾರವಂಚಕರ ಎನಗೆ ತೋಱಿದಿರು,
ಕೂಡಲ ಸಂಗಮದೇವಾ, ನಿಮ್ಮ ಧರ್ಮ ! ॥ ೭೬೨ ॥

೨

ಕಲಿಯ ಕೈಯ ಕೈದುವಿನಂತಿರಬೇಕು, ಅಯ್ಯಾ;
ಎಲುದೋಱಿ ಸರಸವಾಡಿದರೆ ಸೈರಿಸಬೇಕಯ್ಯಾ.
ರಣದಲ್ಲಿ ತಲೆಹಱಿದು ಅಟ್ಟಿ ನೆಲಕ್ಕ ಬಿದ್ದು
ಬೊಬ್ಬಿಡಲದಕ್ಕೆ ಒಲಿವ ಕೂಡಲ ಸಂಗಮದೇವ. ॥ ೭೬೩ ॥

೩

ಆಸೆರೋಷಹರುಷಾದಿಗಳೆಂಬ ಕರಣೇಂದ್ರಿಯವ ಮುಟ್ಟಲೀಯದೆ
ಆಚಾರವ ಶಿವಾಚಾರವ ಮಾಡುವೆ;
ಭಯ ಭಕ್ತಿಯಿಂದ ತೋಱುವೆ ಮನದಲ್ಲಿ ವಂಚನೆಯಿಲ್ಲದೆ;
ಭಾವಶುದ್ಧ ಪೂಜೆಯ ಮಾಡುವೆ,
ಎನ್ನ ಪ್ರಾಣಶಕ್ತಿಯಿಂದ ಕೂಡಲ ಸಂಗಮದೇವರ. ॥ ೭೬೪ ॥

೪

ಪೂರ್ವಬೀಜವಾಯುಪ್ರಾಣಿಯಲ್ಲ,
ಲಿಂಗಪ್ರಾಣಿಯಾ ಶರಣನು.
ಏಕಗ್ರಾಹಿ, ಭಾವಭೇದವಿಲ್ಲವಾಗಿ
ಮನಃಪ್ರವೇಶಿಯಾ ಶರಣನು.
ನಿಮ್ಮುವ ಪೂಜಿಸಿ ತನುಧರ್ಮವ ಮಱೆದು
ನಿಮ್ಮ ಪ್ರತಿಬಿಂಬದಂತಿಪ್ಪ,
ಕೂಡಲ ಸಂಗಮದೇವಾ, ನಿಮ್ಮ ಶರಣನು. ॥ ೭೬೫ ॥

———

ಪ್ರಸಾದಿ ಸ್ಥಲ

(೨೩) ಪ್ರಸಾದಿಯ ಜ್ಞಾನಿಸ್ಥಳ

೧

ಹಸಿವಾಯಿತ್ತೆಂದು ಅರ್ಪಿತವ ಮಾಡುವರಯ್ಯಾ :
ತೃಷೆಯಾಯಿತ್ತೆಂದು ಮಜ್ಜನಕ್ಕೆಱೆವರಯ್ಯಾ :
ಹಸಿವು-ತೃಷೆ-ವಿಷಯಕ್ಕೆ ಬಳಲುವರಯ್ಯಾ !
ಹಸಿವೆಯಾಯಿತ್ತೆಂದು ಅರ್ಪಿತವ ಮಾಡಲಿಲ್ಲ;
ತೃಷೆಯಾಯಿತ್ತೆಂದು ಮಜ್ಜನಕ್ಕೆಱೆಯಲಿಲ್ಲ :
ಇದು ಕಾರಣ, ಕೂಡಲ ಸಂಗನ ಪೂಜಿಸಿ
ಪ್ರಸಾದವ ಹಡೆವರೊಬ್ಬರೂ ಇಲ್ಲಾ ! ॥ ೭೬೬ ॥

೨

ಮುತ್ತು ನೀರಲಿ ಹುಟ್ಟಿ ಮತ್ತೆ ನೀರಪ್ಪುದೆ ?
ಗುರುಕಾರುಣ್ಯವ ಹಡೆದ ಭಕ್ತನು ಹಿಂದಣ ಪೂರ್ವಾಶ್ರಯವ ಬೆರಸಿದರೆ,
ಗುರುದ್ರೋಹ, ಲಿಂಗದ್ರೋಹ, ಜಂಗಮದ್ರೋಹ,
ಆಚಾರದ್ರೋಹ, ಪ್ರಸಾದದ್ರೋಹ !—
ಇಂತೀ ಪಂಚಮಹಾಪಾತಕಂಗಳು
ಭಕ್ತಂಗಲ್ಲದೆ ಭವಿಗೆಲ್ಲಿಯದೊ ?
ಗುರುವಿದು, ಲಿಂಗವಿದು, ಜಂಗಮವಿದು,
ಆಚಾರವಿದು, ಪ್ರಸಾದವಿದೆಂದಱಿಯದಿದ್ದರೆ
ಕುಂಭೀಪಾತಕ ನಾಯಕನರಕ !
ಕೂಡಲ ಸಂಗಮದೇವಾ. ॥ ೭೬೭ ॥

೩

ಸೂಳೆಗೆ ಮೆಚ್ಚಿ ಸೂಳೆಯ ಬಂಟರೆಂಜಲ ತಿಂಬುದೀ ಲೋಕ,
ಅಡಗ ಮೆಚ್ಚಿ ಸೊಣಗನ ಎಂಜಲ ತಿಂಬುದೀ ಲೋಕವೆಲ್ಲ !

ಲಿಂಗವ ಮುಚ್ಚಿ ಜಂಗಮಪ್ರಸಾದವ ಕೊಂಬವರ
ನೋಡಿ ನಗುವವರ ಕುಂಭೀಪಾತಕ ನಾಯಕನರಕದಲ್ಲಿಕ್ಕುವ
ಕೂಡಲ ಸಂಗಮದೇವ ॥ ೭೬೮ ॥

೪

ಹೊಲೆಯುಂಟೆ ಲಿಂಗವಿದ್ದೆಡೆಯಲ್ಲಿ ?
ಕುಲವುಂಟೆ ಜಂಗಮವಿದ್ದೆಡೆಯಲ್ಲಿ ?
ಎಂಜಲುಂಟೆ ಪ್ರಸಾದವಿದ್ದೆಡೆಯಲ್ಲಿ ?
ಅಪವಿತ್ರನುಡಿಯ ನುಡಿವ ಸೂತಕವೇ ಪಾತಕ !
ನಿಷ್ಕಳ, ನಿಜೈಕ್ಯ, ತ್ರಿವಿಧ ನಿರ್ಣಯ,
ಕೂಡಲ ಸಂಗಮದೇವಾ, ನಿಮ್ಮ ಶರಣರಿಗಲ್ಲದಿಲ್ಲಾ. ॥ ೭೬೯ ॥

೫

ಬಾರದು, ಬಾರದು ಭಕ್ತಂಗೆ ಪರಧನ ಪರಸ್ತ್ರೀ.
ಬಾರದು, ಬಾರದು ವಿಷಯಿಗೆ ಪಶುಪತಿಯ ವ್ರತವು.
ಬಾರದು, ಬಾರದು ಭವಭಾರಿಗೆ
ಕೂಡಲ ಸಂಗಮದೇವನ ಒಕ್ಕುದ ಕೊಳ್ಳಬಾರದು ! ॥ ೭೭೦ ॥

೬

ಹುತ್ತದ ಮೇಲಣ ರಜ್ಜು ಮುಟ್ಟಿದರೆಯೂ
ಸಾವರು ಶಂಕಿತರಾದವರು.
ಸರ್ಪದಷ್ಟವಾದರೆಯೂ
ಸಾಯರು ನಿಶ್ಶಂಕಿತರಾದವರು :
ಕೂಡಲ ಸಂಗಮದೇವಯ್ಯಾ,
ಶಂಕಿತಂಗೆ ಪ್ರಸಾದ ಸಿಂಗಿ, ಕಾಳಕೂಟ ವಿಷವು ! ॥ ೭೭೧ ॥

೭

ನಂಬಿದರೆ ಪ್ರಸಾದ : ನಂಬದಿದ್ದರೆ ವಿಷವು.
ತುಡುಕಬಾರದು, ನೋಡಾ, ಲಿಂಗನ ಪ್ರಸಾದ, ಸಂಗನ ಪ್ರಸಾದ !
ಕೂಡಲ ಸಂಗನ ಪ್ರಸಾದ : ಸಿಂಗಿ, ಕಾಳಕೂಟ ವಿಷವು ! ॥೭೭೨॥

೯

ಪಂಡಿತನಾಗಲಿ, ಮೂರ್ಖನಾಗಲಿ, ಸಂಚಿತಕರ್ಮ ಉಂಡಲ್ಲದೆ ಬಿಡದು.
ಪ್ರಾರಬ್ಧಕರ್ಮ ಭೋಗಿಸಿದಲ್ಲದೆ ಹೋಗದೆಂದು
ಶ್ರುತಿ ಸಾಱುತ್ತೈದಾವೆ, ನೋಡಾ,
ತಾನಾವ ಲೋಕದೊಳಗಿದ್ದರೆಯೂ ಬಿಡದು.
ಕರ್ಮಫಲಗೂಡಿ ಕೂಡಲ ಸಂಗನುದೇವಂಗೆ
ಆತ್ಮನೈವೇದ್ಯವ ಮಾಡಿದವನೆ ಧನ್ಯ. ॥ ೭೭೩ ॥

೯

ಒಲ್ಲೆಂಬುದು ವೈರಾಗ್ಯ : ಒಲಿವೆನೆಂಬುದು ಕಾಯಗುಣ.
ಆವ ಪದಾರ್ಥವಾದರೇನು ? ತಾನಿದ್ದೆಡೆಗೆ ಬಂದುದ
ಲಿಂಗಾರ್ಪಿತವ ಮಾಡಿ ಭೋಗಿಸುವುದೆ ಆಚಾರ,
ಕೂಡಲ ಸಂಗಮದೇವನನೊಲಿಸ ಬಂದ
ಪ್ರಸಾದಕಾಯವ ಕೆಡಿಸಲಾಗದು. ॥ ೭೭೪ ॥

೧೦

ಒಪ್ಪವ ನುಡಿವರಯ್ಯಾ ತುಪ್ಪವ ತೊಡೆದಂತೆ !
ಶರಣ ತನ್ನ ಮೇಜೆವನೆ ಬಿನ್ನಾಣಿಯಂತೆ ?
ಕೂಡಲ ಸಂಗನ ಪ್ರಸಾದದಿಂದ ಬದುಕುವನಲ್ಲದೆ ತನ್ನ ಮೆಜೆವನೆ ?
॥ ೭೭೫ ॥

೧೧

ಅರ್ಪಿತ ಅರ್ಪಿತವೆಂದೆನುತಿಹಿರಿ :
ಗುರುವಿಂಗೆ ಕೊಡುವುದು ಅರ್ಪಿತವೆ
ಸವಿಸವಿದು ಕೊಡಬೇಕಲ್ಲದೆ ?
ಅರ್ಪಿತ ಅರ್ಪಿತವೆನುತಿಹಿರಿ :
ಲಿಂಗಕ್ಕೆ ಕೊಡುವುದು ಅರ್ಪಿತವೆ
ಸವಿಸವಿದು ಕೊಡಬೇಕಲ್ಲದೆ ?
ಅರ್ಪಿತ, ಅರ್ಪಿತವೆನುತಿಹರೆಲ್ಲರೂ
ಅರ್ಪಿತದ ಮುಖವನಱಿಯರು, ನೋಡಾ.
ಜಂಗಮಕ್ಕೆ ನೀಡಿ ಜಂಗಮಪ್ರಸಾದವ ಕೊಂಡರೆ
ನಿನಗರ್ಪಿತ, ಕಾಣಾ, ಕೂಡಲ ಸಂಗಮದೇವಾ ! ॥ ೭೭೬ ॥

(೨೪) ಪ್ರಸಾದಿಯ ಪ್ರಸಾದಿಸ್ಥಳ

೧

ಗುರುಲಿಂಗಜಂಗಮದಿಂದೆ ಪಾದೋದಕ ಪ್ರಸಾದವಾಯಿತ್ತು.
ಆ ಭಾವನೆ ಮಹಾನುಭಾವವಾಗಿ
ಎನಗೆ ಮತ್ತೆ ಬೇಱೆ ಪ್ರಸಾದವೆಂಬುದಿಲ್ಲ,
ಕೂಡಲ ಸಂಗಮದೇವಾ. ॥ ೭೭೭ ॥

೨

ದಾಸೋಹವೆಂಬ ಸೋಹೆಗೊಂಡು ಹೋಗಿ
ಗುರುವ ಕಂಡೆ, ಲಿಂಗವ ಕಂಡೆ, ಜಂಗಮವ ಕಂಡೆ, ಪ್ರಸಾದವ ಕಂಡೆ.
ಇಂತೀ ಚತುರ್ವಿಧಸಂಪನ್ನನಾದೆ, ಕಾಣಾ,
ಕೂಡಲ ಸಂಗಮದೇವಾ. ॥ ೭೭೮ ॥

(೨೫) ಪ್ರಸಾದಿಯ ಭಕ್ತಸ್ಥಳ

೧

ಸಜ್ಜನಶರಣರ ಕಂಡು ಎನ್ನ ಮನ ಉಬ್ಬಿತ್ತು ನೋಡಿರಯ್ಯಾ !
ಶ್ರೀಗುರುಪಾದವ ಹಿಡಿದು ಪಾವನನವಾದೆನಯ್ಯಾ.
ಪಾದೋದಕಪ್ರಸಾದದಿಂದ ಭವಗೆಟ್ಟೆನು,
ಕೂಡಲ ಸಂಗಮದೇವಾ. ॥ ೭೭೯ ॥

೨

ಕಿವಿಯ ಸೂತಕ ಹೋಯಿತ್ತು ಸದ್‌ಗುರುವಚನದಿಂದೆ.
ಕಣ್ಗಳ ಸೂತಕ ಹೋಯಿತ್ತು ಸದ್‌ಭಕ್ತರ ಕಂಡೆನಾಗಿ.
ಕಾಯದ ಸೂತಕ ಹೋಯಿತ್ತು ನಿಮ್ಮ ಚರಣವ ಮುಟ್ಟಿದೆನಾಗಿ.
ಬಾಯ ಸೂತಕ ಹೋಯಿತ್ತು ನಿಮ್ಮೊಕ್ಕುದ ಕೊಂಡೆನಾಗಿ.
ನಾನಾಸೂತಕ ಹೋಯಿತ್ತು ನಿಮ್ಮ ಶರಣರನುಭಾವಿಯಾಗಿ.
ಕೂಡಲ ಸಂಗಮದೇವ, ಕೇಳಯ್ಯಾ,
ಎನ್ನ ಮನದ ಸೂತಕ ಹೋಯಿತ್ತು
ನೀವಿಲ್ಲದಿಲ್ಲೆಂದಱಿದೆನಾಗಿ. ॥ ೭೮೦ ॥

೩

ಲಿಂಗಪ್ರಸಾದಿಗಳಲ್ಲದವರ ಸಂಗ
ಭಂಗವೆಂಬುದು ಗುರುವಚನ.
ಲಿಂಗಪ್ರಸಾದಿಗಳಲ್ಲದವರ ಸಂಗ
ಪಂಚಮಹಾಪಾತಕವೆಂದುದು ಲಿಂಗವಚನ :
ಆಸನೇ ಶಯನೇ ಯಾನೇ। ಸಂಪರ್ಕೇ ಸಹಭೋಜನೇ
ಸಂಚರಂತಿ ಮಹಾಘೋರೆ । ನರಕೇ ಕಾಲಮಕ್ಷಯಂ
ಇಂತೆಂದುದಾಗಿ, ಕೂಡಲ ಸಂಗಮದೇವಾ,
ನಿಮ್ಮ ಶರಣರಿಗೆ ಶರಣೆಂದು ಶುದ್ಧನಯ್ಯಾ. ॥ ೭೮ ॥

೪

ಸಯಿದಾನವ ತಂದು ನೀಡುವೆನಲ್ಲದೆ
ಸಂಬಂಧಿ ನಾನಲ್ಲಯ್ಯಾ.
ಕರ್ತಂಗೆ ಭೃತ್ಯಾಚಾರವ ಮಾಡಿ,
ಒಕ್ಕುದ ಕೊಂಡಿಪ್ಪೆನಯ್ಯಾ.
ಭೋಗಾದಿಭೋಗವ ಸಮವಾಗಿ ಭೋಗಿಸಲು
ಅಘೋರನರಕದಲ್ಲಿಕ್ಕುವ
ಕೂಡಲ ಸಂಗಮದೇವ. ॥ ೭೯ ॥

೫

ಶುದ್ಧವ ಗುರುವಿಂಗೆ ಕೊಟ್ಟು ಶುದ್ಧವಾಯಿತ್ತೆಂಬೆನಯ್ಯಾ.
ಸಿದ್ಧವ ಲಿಂಗಕ್ಕೆ ಕೊಟ್ಟು ಸಿದ್ಧವಾಯಿತ್ತೆಂಬೆನಯ್ಯಾ.
ಪ್ರಸಿದ್ಧವ ಜಂಗಮಕ್ಕೆ ಕೂಟ್ಟು ಪ್ರಸಿದ್ಧವಾಯಿತ್ತೆಂಬೆನಯ್ಯಾ.
ಗುರುಲಿಂಗಜಂಗಮವ ಏಕತ್ರಯವಾಗಿ ಕಾಣಲಱಿಯದಿದ್ದರೆ
ಶುದ್ಧಸಿದ್ಧಪ್ರಸಿದ್ಧ ಒಡನೆ ನಗುತ್ತಿದಾವೆ !
ತನುಮನಧನವ ನಿವೇದಿಸಲಱಿಯೆನಾಗಿ
ಕೂಡಲ ಸಂಗಮದೇವ ಒಲಿಯೆಂದೊಡೆಂತೊಲಿವ ? ॥೭೯॥

(೨೬) ಪ್ರಸಾದಿಯ ಮಾಹೇಶ್ವರಸ್ಥಳ

೧

ಒಡಲ ಕಳವಳಕ್ಕೆ ಬಾಯ ಸವಿಗೆ
ಬಯಸಿ ಉಂಡೆನಾದರೆ ನಿಮ್ಮ ತೊತ್ತಿನ ಮಗನಲ್ಲಾ !
ಬೇಡೆ, ಬೇಡೆ, ನಿಮ್ಮ ನಂಬಿದ ಸದ್‌ಭಕ್ತರ;
ಅವರೊಕ್ಕುದ ಉಂಬೆ, ಅವರೆಂದಂತೆ ಎಂಬೆ.
ಎನ್ನೊಡೆಯ ಕೂಡಲ ಸಂಗಮದೇವನೊಲ್ಲದವರ ಹಿಡಿದೆನಾದಡೆ
ನಿಮ್ಮ ಪಾದದಾಣೆ ! ॥ ೭೮೪ ॥

೨

ಲಿಂಗಮುಖದಿಂದ ಬಂದ ಪ್ರಸಾದವಲ್ಲದೆ
ಕೊಂಡೆನಾದರೆ, ನಿಮ್ಮಾಣೆ, ನಿಮ್ಮ ಪ್ರಮಥರಾಣೆ !
ಲಿಂಗಾರ್ಪಿತವಲ್ಲದೆ ಉದಕವ ಮುಕ್ಕುಳಿಸಿದೆನಾದರೆ
ಸಲ್ಲೆನು ನಿಮ್ಮ ಗಣಾಚಾರಕ್ಕಯ್ಯಾ !
ಲಿಂಗಾರ್ಪಿತವಲ್ಲದೆ ಹಲ್ಲುಕಡ್ಡಿಯ ಕೊಂಡರೆ
ಬಲ್ಲೆ ಮುಂದೆ ಭವಸೋರನರಕವೆಂಬುದ !
ನಿಮಗೆತ್ತಿದ ಕರದಲ್ಲಿ ಮತ್ತೊಂದಕ್ಕೆ ಕೈಯಾನೆನು :
ಆಳವಱಿಯದೆ ನುಡಿದೆನು—
ಕಡೆಮುಟ್ಟಿ ಸಲಿಸದಿದ್ದರೆ, ತಲೆದಂಡ !
ಕೂಡಲ ಸಂಗಮದೇವಾ. ॥ ೭೮೫ ॥

(೨೭) ಪ್ರಸಾದಿಯ ಪ್ರಾಣಲಿಂಗಸ್ಥಳ

೧

ಮೌನದಲುಂಬುದು ಆಚಾರವಲ್ಲ; ಲಿಂಗಾರ್ಪಿತವ ಮಾಡಿದ ಬಳಿಕ,
ತುತ್ತಿಗೊಮ್ಮೆ ' ಶಿವಶರಣೆ ' ನ್ನುತ್ತಿರಬೇಕು.
ಕರಣವೃತ್ತಿಗಳಡಗುವುವು, ಕೂಡಲ ಸಂಗನ ನೆನೆಯುತ್ತ ಉಂಡರೆ.
॥ ೭೮೬ ॥

೨

ಕಾಯದ ಕರಣದ ಕೈಯಲ್ಲಿ ಪದಾರ್ಥವ ಹಿಡಿವಲ್ಲಿ
ನಿಮಗೆ ಕೊಡುವ ಭರದ ಭೀತಿಯಿಂದಾನಱಿಯದಿಪ್ಪೆನಾಗಿ
ಎನ್ನ ನೀನಱಿದು ಸಲಹುತ್ತಿಪ್ಪೆಯಯ್ಯಾ.
ಕೂಡಲ ಸಂಗಮದೇವಾ. ॥ ೭೮೭ ॥

೩

ಆಳಿಕಾಱಿನೆನಗೊಬ್ಬ ಮಗ ಹುಟ್ಟಿದನೆಂದು
ಆಳಿಯ ಕೆಡಲೀಸದೆ ನಡೆಸುವ ನಮ್ಮಯ್ಯ.
ಪಂಚಭೂತಕಾಯವ ಭವಿಯೆಂದೆನಲೀಯದೆ
ಪ್ರಸಾದಕಾಯಮಾಡಿ ಸಲಹುವ ನಮ್ಮಯ್ಯ.
ಆಳಿ ಸಾವಲ್ಲಿ ಅವಧಾನಿಯಾಗಿರ್ದರೆ
ಆಳ್ದನು ನಮ್ಮ ಕೂಡಲ ಸಂಗಮದೇವ. ॥ ೭೮೮ ॥

೪

ಶಿವಾಚಾರವೆಂಬುದೊಂದು ಬಾಳ ಬಾಯ ಧಾರೆ :
ಲಿಂಗ ಮೆಚ್ಚಬೇಕು, ಜಂಗಮ ಮೆಚ್ಚಬೇಕು,
ಪ್ರಸಾದ ಮೆಚ್ಚಿ ತನ್ನಲ್ಲಿ ಸ್ವಾಯತವಾಗಿರಬೇಕು !
ಬಿಚ್ಚಿ ಬೇಱಾದರೆ ಮೆಚ್ಚುವನೆ ನಮ್ಮ ಕೂಡಲ ಸಂಗಮದೇವ ? ॥೭೮೯॥

(೨೮) ಪ್ರಸಾದಿಯ ಶರಣಸ್ಥಳ

೧

ತ್ರಿವಿಧಪ್ರಸಾದವೆಂದೆಂಬರು : ಅದೆಂತಹುದೊ ?
ಶುದ್ಧಪ್ರಸಾದ ಲಿಂಗದದು, ಸಿದ್ಧಪ್ರಸಾದ ಜಂಗಮದದು,
ಪ್ರಸಿದ್ಧ ಪ್ರಸಾದ ಗುರುವಿನದದು.
ಇಂತೀ ತ್ರಿವಿಧವೊಂದಾದವರ ತೋಱಾ,
ಕೂಡಲ ಸಂಗಮದೇವಾ. ॥ ೭೯೦ ॥

೨

ಆವಾವ ಭಾವದಲ್ಲಿ ಶಿವನ ನಂಬಿದ ಶರಣರು ಎಂತಿದ್ದರೇನಯ್ಯಾ ?
ಆವಾವ ಭಾವದಲ್ಲಿ ಶಿವನ ನಂಬಿದ ಮಹಿಮರು ಎಂತಿದ್ದರೇನಯ್ಯಾ ?
ಸುಚರಿತ್ರರು ಎಂತಿದ್ದರೇನಯ್ಯಾ ?
ಕೂಡಲ ಸಂಗನ ಶರಣರು, ರಸದ ವಾರುಧಿಗಳು. ಎಂತಿರ್ದರೇನಯ್ಯಾ ?
॥ ೭೯೧ ॥

೩

ಉಱಿ ತಾಗಿದ ಮೃಗವು ಒಂದಡಿಯನಿಡುವುದೆ, ಅಯ್ಯಾ ?
ತನುವ ತಾಗಿದ ಸುಖವು ಅಗಲುವುದೆ ?
ಕೂಡಲ ಸಂಗನ ಶರಣರ ಅನುಭಾವವಱಿದವರ
ಮರಳಿ ಮರ್ತ್ಯರೆನ್ನಬಹುದೆ ? ॥ ೭೯೨ ॥

೪

ನಿಮ್ಮ ಶ್ರೀಪಾದವ ಮುಟ್ಟಿ ಎನ್ನ ಕರ್ಮ ಹಱಿಯಿತ್ತು.
ನಿಮ್ಮ ಪ್ರಸಾದದಿಂದ ನಾನು ಭವಗೆಟ್ಟೆ, ನೋಡಯ್ಯಾ !
ಮನ ಪರುಷ, ದೃಷ್ಟಿ ಪರುಷ, ಭಾವ ಪರುಷ :
ಲಿಂಗಗಣಂಗಳು.
ಕೂಡಲ ಸಂಗಮದೇವಾ, ನಿಮ್ಮ ಶರಣರನುಭಾವದಿಂದ
ನಾನು ಸುಖಿಯಾದೆನು ! ॥ ೭೯೩ ॥

(೨೯) ಪ್ರಸಾದಿಯ ಐಕ್ಯಸ್ಥಳ

೧

ನಡೆ ಚೆನ್ನ, ನುಡಿ ಚೆನ್ನ, ಎಲ್ಲಿ ನೋಡಿದಡೆ ಚೆನ್ನ !
ಪ್ರಮಥರೊಳಗೆ ಚೆನ್ನ, ಪುರಾತರೊಳಗೆ ಚೆನ್ನ !
ಸವಿನೋಡಿ ಅಂಬಲಿಯ, ರುಚಿಯಾಯಿತ್ತೆಂದು,
ಕೂಡಲ ಸಂಗಮದೇವಂಗೆ ಬೇಕೆಂದು ಕೈದೆಗೆದ ನಮ್ಮ ಚೆನ್ನ !!
॥ ೭೯೪ ॥

೨

ಲಿಂಗವಿಕಾರಿಗೆ ಅಂಗವಿಕಾರವೆಂಬುದಿಲ್ಲ,
ಜಂಗಮವಿಕಾರಿಗೆ ಧನವಿಕಾರವೆಂಬುದಿಲ್ಲ;
ಪ್ರಸಾದವಿಕಾರಿಗೆ ಮನವಿಕಾರವೆಂಬುದಿಲ್ಲ.
ಇಂತೀ ತ್ರಿವಿಧಗುಣವನಳಿಯದಾತನು
ಅಚ್ಚಲಿಂಗೈಕ್ಯನು, ಕೂಡಲ ಸಂಗಮದೇವಾ. ॥ ೭೫ ॥

ಪ್ರಾಣಲಿಂಗಿಸ್ಥಳ

(೩೦) ಪ್ರಾಣಲಿಂಗಿಯ ಜ್ಞಾನಿಸ್ಥಳ

೧

ಪ್ರಾಣಲಿಂಗಪ್ರತಿಗ್ರಾಹಕನಾದ ಬಳಿಕ
ಲಿಂಗವಿರಹಿತವಾಗಿ ನಡೆವ ಪರಿಯಿನ್ನೆಂತೊ ?
ಲಿಂಗವಿರಹಿತವಾಗಿ ನುಡಿವ ಪರಿಯಿನ್ನೆಂತೊ ?
ಪಂಚೇಂದ್ರಿಯಸುಖವನು ಲಿಂಗವಿರಹಿತವಾಗಿ ಭುಂಜಿಸಲಾಗದು;
ಲಿಂಗವಿರಹಿತವಾಗಿ ಉಗುಳ ನುಂಗಲಾಗದು :
ಇಂತೆಂದುದು ಕೂಡಲ ಸಂಗನ ವಚನ. ॥ ೭೯ ॥

೨

ಹತ್ತುಸಾವಿರ ಗೀತವ ಹಾಡಿ ಅರ್ಥವಿಟ್ಟಲ್ಲಿ ಫಲವೇನು,
ಮುಟ್ಟುವ ತೆಱನನಱಿಯದನ್ನಕ್ಕ ?
ಕಟ್ಟದರೇನು, ಬಿಟ್ಟರೇನು
ಮನವು ಲಿಂಗದಲ್ಲಿ ಮುಟ್ಟದನ್ನಕ್ಕ ?
ಮಾತಿನ ಮಾತಿನಲೆ ಒಲಿಸಿ ಮಹತ್ತಪ್ಪ ಲಿಂಗವ ಕಂಡಹೆನೆಂಬ
ವಾತಕರ ಮೆಚ್ಚ ನಮ್ಮ ಕೂಡಲ ಸಂಗಮದೇವ. ॥ ೭೯ ॥

೩

ಶ್ವಾನಜ್ಞಾನ ಗಜಜ್ಞಾನ ಕುಕ್ಕುಟಜ್ಞಾನವೆಂಬ
ಜ್ಞಾನತ್ರಯಂಗಳೇನಾದುವು ?
ಕೂಡಲ ಸಂಗಮದೇವಾ, ನಿಮ್ಮನಱಿಯದ ಜ್ಞಾನವೆಲ್ಲಾ ಅಜ್ಞಾನ !
॥ ೭೯ ॥

೪

ಗುರು ತೋಱಿದ ಲಿಂಗವು ಮನಸ್ಥಲವಾಗಿರಲು
ಪವನಭೇದದಿಂದ ಅಱಿದಹೆನೆಂದರೆ, ಅದೆ ದ್ರೋಹ !
ಪಿಡಾ ಪಿಂಗಳಾ ಸುಷುಮ್ನಾನಾಳವಿಡಿದು ಅಱಿದಹೆನೆಂದರೆ
ಕೂಡಲ ಸಂಗಮದೇವ ಮೂಗ ಕೊಯ್ಯದೆ ಮಾಣ್ಬನೆ ? ॥ ೭೯ ॥

೫

ಕಬ್ಬುನ ಪರುಷವೇದಿಯಾದರೇನು,
ಕಬ್ಬುನ ಹೊನ್ನಾಗದೊಡಾ ಪರುಷವದೇಕೊ ?
ಮನೆಯೊಳಗೆ ಕತ್ತಲೆ ಹಲ್ಲಿಯದೊಡಾ ಜ್ಯೋತಿಯದೇಕೊ ?
ಕೂಡಲ ಸಂಗಮದೇವರ ಮನವುಟ್ಟಿ ಪೂಜಿಸಿ
ಕರ್ಮ ಹಲ್ಲಿಯದೊಡಾ ಪೂಜೆಯದೇಕೊ ? ॥ ೮೦೦ ॥

೬

ಅಹಂಕಾರ ಮನವನಿಂಬುಗೊಂಡಲ್ಲಿ
ಲಿಂಗ ತಾನೆಲ್ಲಿ ಬಪ್ಪುದೊ ?
ಅಹಂಕಾರಕ್ಕೆ ಎಡೆಗುಡದೆ ಲಿಂಗತನುವಾಗಿರಬೇಕು.
ಅಹಂಕಾರರಹಿತವಾದಲ್ಲಿ ಸನ್ನಿಹಿತ, ಕಾಣಾ,
ಕೂಡಲ ಸಂಗಮದೇವ. ॥ ೮೦೧ ॥

೭

ನುಡಿದರೆ ಮುತ್ತಿನ ಹಾರದಂತಿರಬೇಕು.
ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು.
ನುಡಿದರೆ ಸ್ಫಟಿಕದ ಸಲಾಕೆಯಂತಿರಬೇಕು.
ನುಡಿದರೆ ಲಿಂಗ ಮುಚ್ಚಿ ' ಅಹುದಹುದೆ ' ನಬೇಕು.
ನುಡಿಯೊಳಗಾಗಿ ನಡೆಯದಿದ್ದರೆ
ಕೂಡಲ ಸಂಗಮದೇವನೆಂತೊಲಿವನಯ್ಯಾ ? ॥ ೮೦೨ ॥

೮

ಮನದ ಕೊನೆಯ ಮೊನೆಯ ಮೇಲೆ
ಮನೆಯ ಮಾಡಿಕೊಂಡಿಪ್ಪನೊಬ್ಬ ದಾಸೋಹಿ.
ಆದಿವಿಡಿದು ಬಂದಾತನೆ ಭಕ್ತ :
ಅನಾದಿವಿಡಿದು ಬಂದಾತನೆ ಜಂಗಮ !
ಆದಿ ಗುರು : ಅನಾದಿ ಶಿಷ್ಯ !
ಈ ಉಭಯ ಕುಳಸ್ಥಳವ ಬಲ್ಲರೆ ಆತ ಲಿಂಗಸಂಬಂಧಿ,
ಕೂಡಲ ಸಂಗಮದೇವಾ. ॥ ೮೦೩ ॥

೯

ಅರಿದರಿದು ! ಸಮಗಾಣಿಸಬಾರದು :
ತ್ರಾಸಿನ ಕಟ್ಟಳೆಯಂತಿನಿತು ವೆಗ್ಗಳವಾದರೆ
ಈಶ್ವರನೊಡೆಯಿಕ್ಕದೆ ಮಾಣುವನೆ ?
ಪಾತ್ರ ಅಪಾತ್ರನೆಂದು ಕಂಡರೆ ಶಿವನೆಂತು ಮೆಚ್ಚುವನು ?
ಜೀವ ಜೀವಾತ್ಮನ ಸರಿಯೆಂದು ಕಂಡರೆ
ಸಮವೇದಿಸದಿಪ್ಪನೆ ಶಿವನು ?
ತನ್ನ ಮನದಲ್ಲಿ ' ಯತ್ರ ಜೀವಸ್ತತ್ರ ಶಿವ ' ನೆಂದು
ಸರ್ವಜೀವದಯಾಪಾರಿಯಾದಲ್ಲಿ ಕೂಡಲ ಸಂಗಮದೇವನು
ಕೈಲಾಸದಿಂದ ಬಂದು ಎತ್ತಿಕೊಳ್ಳದಿಪ್ಪನೆ ? ॥ ೮೦೪ ॥

೧೦

ಸ್ಥಾವರ ಜಂಗಮವೆಂಬುಭಯಪಕ್ಷ ಒಂದೇ :
ಆವ ಮುಖದಲಿ ಬಂದರೂ ತೃಪ್ತಿಯೊಂದೇ;
ಕೂಡಲ ಸಂಗಮದೇವರ ಆಪ್ಯಾಯನವೊಂದೇ. ॥ ೮೦೫ ॥

೧೧

ಮುತ್ತು ಉದಕದಲಾಗದು, ಉದಕ ಮುತ್ತಿನಲಾಗದು :
ತತ್ತ್ವಘಟಿಸಿದ ಸುಮೂಹೂರ್ತದಲ್ಲಲ್ಲದೆ,
ಚಿತ್ತವೇದ್ಯವಾಗದು ಸದ್ಗುರುವಿನ ಕರಣಕ್ಕಲ್ಲದೆ.
ಕರ್ತೃ ಕೂಡಲ ಸಂಗಮದೇವರ ಒಲವಿನ ದಯದ
ಚಿತ್ತವಿಡಿದಂಗಲ್ಲದೆ ಶಿವತತ್ತ್ವ ಸಾಹಿತ್ಯವಾಗದು. ॥ ೮೦೬ ॥

೧೨

ಕಾಯದ ಗಡಣೆ ಕೆಲಬರಿಗುಂಟು,
ಜೀವದ ಗಡಣೆ ಕೆಲಬರಿಗುಂಟು,
ಭಾವದ ಗಡಣೆ ಕೆಲಬರಿಗುಂಟು,
ವಚನದ ಗಡಣೆ ಕೆಲಬರಿಗುಂಟು :
ಪ್ರಾಣಲಿಂಗದ ಗಡಣೆ ಆರಿಗೂ ಇಲ್ಲ,
ಕೂಡಲ ಸಂಗನ ಶರಣರಲ್ಲಿ, ತಂಗಟೂರ ಮಾರಯ್ಯಂಗಲ್ಲದೆ. ॥೮೦೭॥

೧೩

ಚಂದ್ರಕಾಂತದ ಶಿಲೆಯಲ್ಲಿ ಜಲವಿಲ್ಲದನ್ನಕ್ಕ
ಶೈತ್ಯವ ತೋಱುವ ಪರಿಯೆಂತೊ ?
ಸೂರ್ಯಕಾಂತದ ಶಿಲೆಯಲ್ಲಿ ಅಗ್ನಿಯಿಲ್ಲದನ್ನಕ್ಕ
ಉಷ್ಣವ ತೋಱುವ ಪರಿಯೆಂತೊ ?
ಶರಣಂಗೆ ಭಕ್ತಿಕಾಯವಿಲ್ಲದನ್ನಕ್ಕ
ಕೂಡಲ ಸಂಗಯ್ಯನನಱಿವ ಪರಿಯೆಂತೊ ? ॥ ೮೦೮ ॥

೧೪

ಮುನ್ನೂಱಱುವತ್ತು ನಕ್ಷತ್ರಕ್ಕೆ ಬಾಯಿಬಿಟ್ಟುಕೊಂಡಿಪ್ಪುದೆ ಸಿಂಪು ?
ಅದು ಸ್ವಾತಿಗಲ್ಲದೆ ಬಾಯ್ದೆಱೆಯದು, ಕೇಳು, ಕೇಳಾ, ತಂದೇ :
ಎಲ್ಲವಕ್ಕೆ ಬಾಯ ಬಿಟ್ಟರೆ ತಾನೆಲ್ಲಿಯ ಮುತ್ತಪ್ಪುದೊ ?
ಪರಮಂಗಲ್ಲದೆ ಹರುಷತಿಕೆಯಿಲ್ಲೆಂದು
ಕರಣಾದಿಗುಣಂಗಳ ಮಱೆದರು;
ಇದು ಕಾರಣ, ಕೂಡಲ ಸಂಗನ ಶರಣರು ಸಪ್ತವ್ಯಸನಿಗಳಲ್ಲಾಗಿ.
॥ ೮೦೯ ॥

(೩೧) ಪ್ರಾಣಲಿಂಗಿಯ ಪ್ರಾಣಲಿಂಗಿಸ್ಥಳ

೧

ಮೈಗೆ ಕಾಹ ಹೇಳುವರಲ್ಲದೆ ಮನಕ್ಕೆ ಕಾಹ ಹೇಳುವರೆ ?
ಅಣಕದ ಮಿಂಡನ ಹೊಸ ಪರಿಯ ನೋಡಾ :
ಕೂಡಲ ಸಂಗಮದೇವನೆನ್ನ ಮನವ ನಂಬದೆ
ತನ್ನಲ್ಲಿದ್ದ ಲೇಸ ಕಾಹ ಹೇಳಿದನು ! ॥ ೮೧೦ ॥

೨

ಮನವಂಚನೆಯೆ ಅನ್ಯಲಿಂಗಾರ್ಚನೆ;
ಅದು ನಿಜವಲ್ಲ, ನಿಜವಲ್ಲಾ;
ಕೂಡಲ ಸಂಗಮದೇವನು ಮನದಂತರ್ಯಾಮಿ ತಾನಾಗಿ. ॥ ೮೧೧ ॥

೩

ಸರ್ಪನ ಸಂಯೋಗ, ಜ್ಯೋತಿಯ ಪತಂಗನ ಬೆಸನದಂತೆ—
ಮನದ ಮದವಜಿಯದೆ, ನಿಮ್ಮ ಕೃಪೆಯಿಂದೆ ನಿಮ್ಮ ನೆನೆವೆ.
ಎನ್ನ ಭಾವದ ಕೊನೆಯ ಮೊನೆಯ ಮೇಲೆ
ಮನೆಯ ಮಾಡಿಕೊಂಡಿಪ್ಪೆಯಯ್ಯಾ, ಕೂಡಲ ಸಂಗಮದೇವಾ.
ನೀನೆನ್ನ ಪ್ರಾಣನಾಥನಾಗಿ. ॥ ೮೧೨ ॥

೪

ಪೃಥಿವಿಯಪ್ಪು ತೇಜ ವಾಯುವಾಕಾಶ ನಿರಂಜನದೇವಾ
ನಿಮ್ಮ ಮಹಿಮೆಯ ಪ್ರಣವಸ್ವರೂಪಂಗಲ್ಲದೆ
ಕಾಣಲಾರಿಗೆಯೂ ಬಾರದಯ್ಯಾ.
ಜ್ಞಾನಜ್ಯೋತಿಧ್ಯಾನದಿಂದ ನಾಳಶುದ್ಧದ್ವಾರನಾಗಿ
ಆರಾಧಿಸಿ ಕಂಡೆ ನಮ್ಮ ಕೂಡಲ ಸಂಗಮದೇವನ. ॥ ೮೧೩ ॥

೫

ಪಶ್ಚಿಮಪದ್ಮಾಸನದಲ್ಲಿ ಕುಳಿತು ನೆಟ್ಟಿಲುವ ಮುಖದು
ತುಟಿ ಮಿಡುಕದೆ ಅಟ್ಟಿಯಾಡಿತ್ತಲ್ಲಾ !
ಬಿಟ್ಟ ಕಣ್ಣು ಬಿಗಿದ ಹುಬ್ಬು, ಬ್ರಹ್ಮರಂಧ್ರದಲ್ಲಿ,
ಕಟ್ಟುಗುಡಿಯ ಕೂಡಲ ಸಂಗಮದೇವ ಹಿಡಿವಡೆದ ! ॥ ೮೧೪ ॥

೬

ಸುನಾದಬಿಂದುಪ್ರಣವಮಂತ್ರ ಅಗ್ರದ ಕೊನೆಯಲ್ಲಿದುವುದೆ :
' ಸೋಹಂ ಸೋಹಂ ' ಎಂಪೆನುತಿದ್ದಿತ್ತು,
' ಕೋಹಂ ' ಎಂಬುದ ಕಳೆದು ಬ್ರಹ್ಮರಂಧ್ರದೊಳಗೆ;
ಯತೋ ವಾಚೋ ನಿವರ್ತಂತೇ । ಅಪ್ರಾಪ್ಯ ಮನಸಾ ಸಹ ॥
ಆನಂದಂ ಬ್ರಹ್ಮಣೋ ವಿದ್ವಾನ್ । ನ ಬಿಭೇತಿ ಕದಾಚನ ॥
ಇಂತೆಂದುದಾಗಿ,
ಅಗಮ್ಯ ಕೂಡಲ ಸಂಗಮದೇವನಲ್ಲದೆ ಮತ್ತಾರೂ ಇಲ್ಲಾ ! ॥೮೧೫॥

೭

ಬೆಳಗಿನೊಳಗಣ ಬೆಳಗು, ಮಹಾಬೆಳಗು !
ಶಿವ ಶಿವಾ, ಪರಮಾಶ್ರಯವೇ ತಾನಾಗಿ
ಶತಪತ್ರಕಮಳಕರ್ಣಿಕಾಮಧ್ಯೆದಲ್ಲಿ
ಸ್ವತಃ ಸಿದ್ಧನಾಗಿರ್ಪ ನಮ್ಮ ಕೂಡಲ ಸಂಗಮದೇವ. ॥ ೮೬ ॥

೮

ಆಚಾರ ವಿಚಾರವೆಂದಱಿಯದ ಕಾರಣ
ಷಡುದರುಶನಂಗಳೆಲ್ಲಾ ತಮತಮಗೆ ಶರಣೆನ್ನುತ್ತಿದ್ದುವು;
ಮಹತ್ವದ ಸಮಯಾದಿ ಶೈವಂಗಳೆಂಬುವೆಲ್ಲಾ ಶರಣೆನ್ನುತ್ತಿದ್ದುವು !
ನಮ್ಮ ಕೂಡಲ ಸಂಗನ ಶರಣರು ಮಾಡಿದ ವಿನಿಯೋಗ
ಬಹಿರಂಗದಲ್ಲಿ ವರ್ತಿಸುವವರಿಗೆ ಎಲ್ಲಿಯದೊ ? ॥ ೮೭ ॥

೯

ತಮತಮಗೆಲ್ಲ ನೊಸಲ ಕಣ್ಣವರು, ತಮತಮಗೆಲ್ಲ ನಂದಿವಾಹನರು,
ತಮತಮಗೆಲ್ಲಾ ಖಟ್ವಾಂಗಕಪಾಲತ್ರಿಶೂಲಧರರು :
ದೇವರಾರು ಭಕ್ತರಾರು ಹೇಳಿರಯ್ಯಾ !
ಕೂಡಲ ಸಂಗಮದೇವಾ, ನಿಮ್ಮ ಶರಣರು ಸ್ವತಂತ್ರರು :
ಎನ್ನ ಬಚ್ಚಬಱಿಯ ಬಸವನೆನಿಸಯ್ಯಾ. ॥ ೮೮ ॥

೧೦

ಗುರುವಿನಲ್ಲಿ ಸದಾಚಾರ : ಲಿಂಗದಲ್ಲಿ ಅನುದಿನವೇಳೆ.
ಜಂಗಮದಲ್ಲನುಭಾವ, ಸಮಯಾಚಾರ : ಲಿಂಗದಲ್ಲಿ ಅನುದಿನವೇಳೆ.
ಈ ಉಭಯಾಚಾರದಿಂದ ತಿಳಿದ ತಿಳಿವು : ಲಿಂಗದಲ್ಲಿ ಅನುದಿನವೇಳೆ;
ಬೇಱೆ ತೋಱಿಲಿಲ್ಲಾ :
ಲಿಂಗಜಂಗಮದಲ್ಲಿ ಲೀಯವಾದಾಚಾರ ಸಮಯಾಚಾರ.
ಇದು ಕಾರಣ, ಕೂಡಲ ಸಂಗಮದೇವಾ, ಲಿಂಗದಲ್ಲಿ ಅನುದಿನವೇಳೆ !
॥ ೮೯ ॥

೧೧

ಉಳ್ಳವರು ಶಿವಾಲಯವನ್ನ ಮಾಡುವರು :
ನಾನೇನ ಮಾಡುವೆ ? ಬಡವನಯ್ಯಾ.
ಎನ್ನ ಕಾಲೇ ಕಂಭ, ದೇಹವೇ ದೇಗುಲ,
ಸಿರ ಹೊನ್ನ ಕಳಸವಯ್ಯಾ.
ಕೂಡಲ ಸಂಗಮದೇವ, ಕೇಳಯ್ಯಾ :
ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲಾ ! ॥ ೮೨೦ ॥

(೩೨) ಪ್ರಾಣಲಿಂಗಿಯ ಭಕ್ತಸ್ಥಳ

೧

ಅಷ್ಟದಳ ಕಮಳಾತ್ಮದೊಳಗೆ ನೆಟ್ಟನೆ ಮನಃಪ್ರೇರಕನೆಂದು
ನಿಮ್ಮ ನಂಬಿದೆ, ಮತ್ತೊಂದನರಿಯೆ.
ನಿತ್ಯಸ್ವತಂತ್ರನು ನೀನೇ ದೃಷ್ಟ : ಲಿಂಗಜಂಗಮ ಒಂದೆ ಎಂದಿಪ್ಪೆನು,
ಪರಮಪ್ರಭುವೆ, ಕೂಡಲ ಸಂಗಮದೇವಾ. ॥ ೮೨೧ ॥

೨

ನಿನ್ನ ನಾನರಿಯದ ಮುನ್ನ ನೀನೆಲ್ಲಿದ್ದೆ ?
ಎನ್ನೊಳಗಿದ್ದು ನಿನ್ನ ತೋರಿಲಿಕೆ ನೀನೇ ರೂಪಾದೆ.
ಇನ್ನು ಜಂಗಮವೆ ಲಿಂಗವೆಂದು ನಂಬಿದೆ,
ಕೂಡಲ ಸಂಗಮದೇವಾ. ॥ ೮೨೨ ॥

೩

ಗುರು ಮುನಿದರೆ ಒಂದು ದಿನ ತಾಳುವೆ,
ಲಿಂಗ ಮುನಿದರೆ ದಿನವರೆ ತಾಳುವೆ;
ಜಂಗಮ ಮುನಿದರೆ ಕ್ಷಣಮಾತ್ರ ತಾಳಿದೆನಾದರೆ
ಎನ್ನ ಪ್ರಾಣದ ಹೋಕು ! ಕೂಡಲ ಸಂಗಮದೇವಾ. ॥ ೮೨೩ ॥

೪

ಅರಸು ಮುನಿದರೆ ನಾಡೊಳಗಿರಬಾರದಯ್ಯಾ;
ಗಂಡ ಮುನಿದರೆ ಹೆಂಡತಿಗೆ ಇರಬಾರದಯ್ಯಾ.

ಕೂಡಲ ಸಂಗಮದೇವಯ್ಯಾ,
ಜಂಗವು ಮುನಿದರೆ ನಾನೆಂತು ಬದುಕುವೆ? ॥ ೮೩೪ ॥

೫

ರಚ್ಚೆಯ ನೆರವಿಗೆ ನಾಣುನುಡಿಯಿಲ್ಲದಿಹುದೆ ?
ಅದಱಿಂತೆ ಎನಬಹುದೆ ಸಜ್ಜನಸ್ತ್ರೀಯ ?
ಅದಱಿಂತೆ ಎನಬಹುದೆ ಭಕ್ತಿಯ ರತಿಯ ?
ಕರುಳ ಕಲೆ ಪ್ರಕಟಿತವುಂಟೆ, ಕೂಡಲ ಸಂಗಮದೇವಾ ? ॥ ೮೩೫ ॥

೬

ಭೂತವೊಲಿದು ಆತ್ಮನ ಸೋಂಕಿದ ಬಳಿಕ
ಭೂತದ ಗುಣವಲ್ಲದೆ ಆತ್ಮನ ಗುಣವುಂಟೆ ?
ಗುರುಕಾರುಣ್ಯವಾಗಿ ಹಸ್ತಮಸ್ತಕಸಂಯೋಗವಾದ ಬಳಿಕ
ಗುರುಲಿಂಗಜಂಗಮವೆ ಗತಿಯಾಗಿದ್ದೆ, ಕಾಣಾ,
ಕೂಡಲ ಸಂಗಮದೇವಾ. ॥ ೮೩೬ ॥

೭

ಹಸಿವು ತೃಷೆ ನಿದ್ರೆ ವಿಷಯಂಗಳ ಮಱೆದೆ : ನೀವು ಕಾರಣ.
ಕಾಮಕ್ರೋಧಲೋಭಮೋಹಮದಮತ್ಸರಂಗಳ ಮಱೆದೆ: ನೀವು ಕಾರಣ.
ಪಂಚೇಂದ್ರಿಯ, ಸಪ್ತಧಾತು, ಅಷ್ಟಮದಂಗಳ ಮಱೆದೆ : ನೀವು ಕಾರಣ.
ಕೂಡಲ ಸಂಗಮದೇವಯ್ಯಾ,
ನಿಮ್ಮ ಶರಣರಿಗೆ ಆಪ್ಯಾಯನವಾದರೆ ಎನಗೆ ತೃಪ್ತಿಯಾಯಿತ್ತು ! ॥ ೮೩೭ ॥

೮

ತನು ನಿಮ್ಮದೆಂದ ಬಳಿಕ ಎನಗೆ ಬೇಱೆ ಮನವಿಲ್ಲ;
ಧನ ನಿಮ್ಮದೆಂದ ಬಳಿಕ ಎನಗೆ ಬೇಱೆ ಧನವಿಲ್ಲ.
ಇಂತೀ ತ್ರಿವಿಧವೂ ನಿಮ್ಮದೆಂದಜಾದ ಬಳಿಕ
ಎನಗೆ ಬೇಱೆ ವಿಚಾರವುಂಟೆ, ಕೂಡಲ ಸಂಗಮದೇವಾ ? ॥೮೩೮॥

(೩೩) ಪ್ರಾಣಲಿಂಗಿಯ ಮಾಹೇಶ್ವರಸ್ಥಳ

೧

ಆಕಳ ಕಳ್ಳರು ಕೊಂಡೊಯ್ದರೆನ್ನ ದಿರಿಂ ಭೋ ನಿಮ್ಮ ಧರ್ಮ !
ಬೊಬ್ಬಿಡಿದಿರಿಂ ಭೋ, ನಿಮ್ಮ ಧರ್ಮ !
ಆಱಿಡದಿರಿಂ ಭೋ, ನಿಮ್ಮ ಧರ್ಮ !
ಅಲ್ಲಿ ಉಂಬರೆ ಸಂಗ, ಇಲ್ಲಿ ಉಂಬರೆ ಸಂಗ !
ಕೂಡಲ ಸಂಗಮದೇವ ಏಕೋಭಾವ. ॥ ೮೨೯ ॥

೨

ಅರ್ಥಪ್ರಾಣಾಭಿಮಾನವನೊಪ್ಪಿಸಿದಲ್ಲಿ ಭಕ್ತನಪ್ಪನೆ ? ಅಲ್ಲ.
ಆದಿರುದ್ರನ ಮಗಳು ಆದಿಶಕ್ತಿ; ಆದಿಶಕ್ತಿಯ ಮಗ ವಿಷ್ಣು;
ವಿಷ್ಣುವಿನ ಅರ್ಧಾಂಗಿ ಲಕ್ಷ್ಮಿ;
ಈ ತೊತ್ತಿನ ತೊತ್ತಿನ ಪಡಿದೊತ್ತನೊಪ್ಪಿಸಿದಲ್ಲಿ ಭಕ್ತನಪ್ಪನೆ ? ಅಲ್ಲ.
ಎನ್ನ ಮನದೊಡೆಯ ಮಹಾದೇವಾ,
ನಿಮ್ಮ ಮನವ ನಿಮಗೊಪ್ಪಿಸಿ ನಾ ಶುದ್ಧ, ಕಾಣಾ !
ಕೂಡಲ ಸಂಗಮದೇವಾ. ॥ ೮೩೦ ॥

೩

ಮಾಡುವಾತ ನಾನಲ್ಲಯ್ಯಾ; ನೀಡುವಾತ ನಾನಲ್ಲಯ್ಯಾ.
ಬೇಡುವಾತ ನಾನಲ್ಲಯ್ಯಾ, ನಿಮ್ಮ ಕಾರುಣ್ಯವಲ್ಲದೆ, ಎಲೆ ದೇವಾ !
ಮನೆಯ ತೊತ್ತಲಿಸಿದರೆ ಒಡತಿ ಮಾಡಿಕೊಂಬಂತೆ
ನಿನಗೆ ನೀ ಮಾಡಿಕೊ, ಕೂಡಲ ಸಂಗಮದೇವಾ. ॥ ೮೩೧ ॥

೪

ಮುನ್ನಿನ ಜನ್ಮದಲ್ಲಿ ಗುರುಲಿಂಗಜಂಗಮವ ಪೂಜಿಸಲಱಿಯದ ಕಾರಣ
ಬಹುಜನ್ಮಕ್ಕೆ ತಂದಿಕ್ಕಿದೆಯಯ್ಯಾ ಎನ್ನನು.
ಎನಗೆ ಗುರುಪಥವ ತೋಱಿದವರಾರು ?
ಲಿಂಗಪಥವ ತೋಱಿದವರಾರು ?
ಜಂಗಮಪಥವ ತೋಱಿದವರಾರು ?
ಪಾದೋದಕಪ್ರಸಾದವ ತೋಱಿದವರಾರು ?

ತೋಱುವ ಮನವೆ ನೀವೆಂದಱಿದೆ :
ಎನಗಿನ್ನಾವ ಭಯವಿಲ್ಲಾ, ಕೂಡಲ ಸಂಗಮದೇವಾ. ॥ ಲಿಖಿ ॥

(೩೪) ಪ್ರಾಣಲಿಂಗಿಯ ಪ್ರಸಾದಿಸ್ಥಳ

೧

ಜನ್ಮಜನ್ಮಕ್ಕೆ ಹೋಗಲೀಯದೆ, ' ಸೋಹಂ ' ಎಂದೆನಿಸದೆ
' ದಾಸೋಹಂ ' ಎಂದೆನಿಸಯ್ಯಾ.
ಲಿಂಗಜಂಗಮದ ಪ್ರಸಾದದ ನಿಲವ ತೋಱಿ ಬದುಕಿಸಯ್ಯಾ,
ಕೂಡಲ ಸಂಗಮದೇವಾ, ನಿಮ್ಮ ಧರ್ಮ ! ॥ ಲಿಖಿ ॥

೨

ಆಶೆಯಾಮಿಷ ತಾಮಸದಿಂದ ಭವಬಂಧನವಾದುದನಱಿಯಾ;
ತ್ರಿವಿಧ ತ್ರಿವಿಧಾವಸ್ಥೆಯ ಮಱೆಯಾ !
' ಓಂ ನಮಃ ಶಿವಾಯ, ಶರಣೆ 'ಂಬುದ ಬಿಡದೆ ನೆನೆಯಾ, ಮನವೆ !
' ಮಹಂತ ಶಿವಲಿಂಗಸ್ಯ ಮಹಂತೋ ಜಂಗಮಸ್ತಥಾ '
ಕೂಡಲ ಸಂಗನ ಪ್ರಸಾದಸಾನ್ನಿಧ್ಯದಿಂದ
ಭವಜನ್ಮ ಕರ್ಮ ಪಂಚಭೂತಪೂರ್ವನಾಸ್ತಿ. ॥ ಲಿಖಿ ॥

೩

ಬೆಟ್ಟಕ್ಕೆ ಬೆಳ್ಳಾರ ಸುತ್ತಿತ್ತಯ್ಯಾ :
ಪಾಪದ ಒಲೆಯ ತಂದು ಮುಂದೊಡ್ಡಿದರಯ್ಯಾ.
ಬೇಟೆಕಾಱನು ಮೃಗವನಟ್ಟಿ, ಮೃಗ ಗೋರಿಗೊಳಗಾಗದಯ್ಯಾ !
ಹರನೊಡ್ಡಿದ ಬಲೆಯಲ್ಲಿ ಸಿಲುಕಿದ ಮೃಗವು
ಕೂಡಲ ಸಂಗಮಂಗೆ ಓಗರವಾಯಿತ್ತಯ್ಯಾ ! ॥ ಲಿಖಿ ॥

೪

ಪರಿಯಾಣವೆ ಭಾಜನವೆಂಬರು : ಪರಿಯಣ ಭಾಜನವಲ್ಲ :
ಲಿಂಗಕ್ಕೆ ತನ್ನ ಮನವೆ ಭಾಜನ.
ಪ್ರಾಣವನು ಬೀಸರವೋಗದೆ ಮೀಸಲಾಗರ್ಪಿಸ ಬಲ್ಲರೆ
ಕೂಡಿಕೊಂಡಿರ್ಪ ನಮ್ಮ ಕೂಡಲ ಸಂಗಮದೇವ. ॥ ಲಿಖಿ ॥

೫

ಆತ್ಮ ಲಿಂಗ, ಪರಮಾತ್ಮ ಜಂಗಮ;
ತನು ಮಧ್ಯೆ ಪ್ರಸಾದವಾಯಿತ್ತು,
ನಿಶ್ಚಿಂತ ನಿವಾಸವಾಯಿತ್ತು—
ಕೂಡಲ ಸಂಗನ ಶರಣರ ಸಂಗದಿಂದ
ನಿಶ್ಚಿಂತ ನಿವಾಸವಾಯಿತ್ತು ! ॥ ೮೩೭ ॥

೬

ಲೋಹ ಪರುಷವ ಮುಟ್ಟುವುದಲ್ಲದೆ,
ಪರುಷ ಪರುಷವ ಮುಟ್ಟುವುದೆ, ಅಯ್ಯಾ ?
ಅಂಗವಿಡಿದಂಗೆ ಪ್ರಸಾದವಲ್ಲದೆ, ಲಿಂಗವಿಡಿದಂಗೆ ಪ್ರಸಾದವೆಲ್ಲಿಯದೊ ?
' ಅಣೋರಣೀಯಾನ್ ಮಹತೋ ಮಹೀಯಾನ್, '
ಹಿರಿದಕ್ಕೆ ಹಿರಿದು ಕಿಱಿದಕ್ಕೆ ಕಿಱಿದು
ವಾಗ್ಮನಕ್ಕಗೋಚರ—
ಕೂಡಲ ಸಂಗಮದೇವ ಸ್ವರೂವು :
ಪ್ರಸಾದ ನಿರೂಪು, ಲಿಂಗೈಕ್ಯ ! ॥ ೮೩೮ ॥

೭

ಜಂಗಮವೆ ಲಿಂಗವೆನಗೆ, ಜಂಗಮವೆ ಪ್ರಾಣವೆನಗೆ.
ಕೂಡಲ ಸಂಗಮದೇವಯ್ಯಾ, ಎನಗೆಯೂ ನಿನಗೆಯೂ
ಜಂಗಮಪ್ರಸಾದವೇ ಪ್ರಾಣ. ॥ ೮೩೯ ॥

೮

ಅಯ್ಯಾ, ನೀನೆಂದರೆ ಎಂಬೆನು :
" ನಿನ್ನ ಹಂಗೇನು ಹರಿಯೇನು ?
ನಿನ್ನ ಮುಖದಲ್ಲಿ ಒಂದಗುಳು ಸವೆಯದು;
ನಿನ್ನ ಪ್ರಸಾದವ ಕೊಂಡೆನ್ನ ಭವಕ್ಕೆ ಬೀಜವಾಯಿತ್ತು !
ಜಂಗಮವೆ ಲಿಂಗವೆಂದು ಒಕ್ಕುದ ಕೊಂಡರೆ
ಎನ್ನ 'ಭವಂ ನಾಸ್ತಿ'ಯಾಯಿತ್ತು ! ಕೂಡಲ ಸಂಗಮದೇವಾ " ॥೮೪೦॥

೯

ಜ್ಞಾನದ ಬಲದಿಂದ ಅಜ್ಞಾನದ ಕೇಡ ನೋಡಯ್ಯಾ;
ಜ್ಯೋತಿಯ ಬಲದಿಂದ ತಮುಂಧದ ಕೇಡ ನೋಡಯ್ಯಾ;
ಸತ್ಯದ ಬಲದಿಂದ ಅಸತ್ಯದ ಕೇಡ ನೋಡಯ್ಯಾ;
ಪರುಷದ ಬಲದಿಂದ ಅವಲೋಹದ ಕೇಡ ನೋಡಯ್ಯಾ !
ಕೂಡಲ ಸಂಗನ ಶರಣರ ಅನುಭಾವದಿಂದ
ಎನ್ನ ಮನದ ಕೇಡ ನೋಡಯ್ಯಾ ! ॥ ೮೪೧ ॥

೧೦

ಆಚ್ಯರ ವಚನ ಆದ್ಯರಿಗಾಯಿತ್ತು :
ವೇದ್ಯರಿಗಲ್ಲದೆ ಸಾಧ್ಯವಾಗದು.
ಕೂಡಲ ಸಂಗಮದೇವಾ, ನಿಮ್ಮ ಅನುಭಾವದಿಂದ
ಎನ್ನ ' ಭವಂ ನಾಸ್ತಿ ' ಯಾಯಿತ್ತು. ॥ ೮೪೨ ॥

೧೧

ಅಸಂಬಂಧ ಸಂಬಂಧವಾಯಿತ್ತು
ಲಿಂಗಸಾರಾಯರ ಸನುಮತದಿಂದ;
ಉತ್ತಮ ಮಧ್ಯಮವ ಕೆಡಿಸಿತ್ತು
ಏಕೋ ಸತಿಪತಿ ಗುಣದಿಂದ—
ಗುರುವರ ಗುರುವತನವ ಕೂಡಲ ಸಂಗಯ್ಯನನುಭಾವದಿಂದ ॥ ೮೪೩ ॥

(೩೫) ಪ್ರಾಣಲಿಂಗಿಯ ಶರಣಸ್ಥಳ

೧

ಶರಣಸನ್ನಿಹಿತನೈಕ್ಯವಹಲ್ಲಿ ಹರಿ ಬ್ರಹ್ಮಾದಿಗಳು ಮೊದಲಾದ
ತೆತ್ತೀಸಾದಿ ದೇವರ್ಕಳು ' ಉಘೆ, ಉಘೆ ' ಎನುತಿರಲು
' ಐಕ್ಯ ಬಸವಣ್ಣಂಗೆ ಠಾವಾವುದಯ್ಯಾ ? ' ಎಂದೊಡೆ:—
ಅಂಗದ ಕಳೆಯಲ್ಲಿ ಬಲದಲ್ಲಿ ಬ್ರಹ್ಮನ ಸ್ಥಾನ,
ಎಡದಲ್ಲಿ ನಾರಾಯಣನ ಸ್ಥಾನ, ಒಲ್ಲೆನಯ್ಯಾ !

ಕೊರಳು ಗರಳಸ್ಥಾನ, ಬಾಯಿ ಅಪ್ಪುವಿನ ಸ್ಥಾನ,
ನಾಸಿಕ ವಾಯುವಿನ ಸ್ಥಾನ, ಕಣ್ಗಳು ಅಗ್ನಿಸ್ಥಾನ,
ಜೆಡೆ ಗಂಗೆಯ ಸ್ಥಾನ, ನೊಸಲು ಚಂದ್ರನ ಸ್ಥಾನ,
ಹಿಂದು ಸೂರ್ಯನ ಸ್ಥಾನ,
ಚರಣಂಗಳು ಅಷ್ಟದಿಕ್ಪಾಲಕರ ಸ್ಥಾನಂಗಳು,
ಗುಹ್ಯ ಕಾಮನ ಸ್ಥಾನ,
ಹಸ್ತಂಗಳು ಕಪಾಲ ಖಟ್ವಾಂಗ ತ್ರಿಶೂಲ ಡಮರುಗಸ್ಥಾನ,
ದೇಹ ರುಂಡಮಾಲೆಯ ಸ್ಥಾನ, ಕರ್ಣ ನಾಗೇಂದ್ರನ ಸ್ಥಾನ—
ಇಂತೀ ಸ್ಥಾನಂಗಳ ನಾನೊಲ್ಲೆನಯ್ಯಾ !
ಹೃದಯಕಮಳಮಧ್ಯದ ಅಂತರಾಳದ
ಏಕಪೀಠದ ಸಿಂಹಾಸನದ ತೆಱಿಹ ಕೊಡು,
ಕೂಡಲ ಸಂಗಮದೇವಾ ! ॥ ೮೪೪ ॥

೨

ನೀನೊಲಿದರೆ ಒಲಿ; ಒಲ್ಲದಿದ್ದರೆ ಸಮವೇದಿಸಿಕೊಳ್ಳಯ್ಯಾ;
ಲಿಂಗದ ಬೆಳಗನೊಳಕೊಂಡು ಸಮವೇದಿಸಿಕೊಳ್ಳಯ್ಯಾ.
ಕೂಡಲ ಸಂಗಮದೇವನಲ್ಲಿ ತದ್ಗತವಾದೆನಯ್ಯಾ ! ॥ ೮೪೫ ॥

೩

ಮಾಡುವರಿಲ್ಲ, ನೀ ಮಾಡದೆ ನಿಲ ಸಾಲೆ;
ಬೇಡುವರಿಲ್ಲ, ನೀ ಬೇಡದೆ ನಿಲ ಸಾಲೆ;
ಕೂಡುವರಿಲ್ಲ, ನೀ ಕೂಡದೆ ನಿಲ ಸಾಲೆ;
ಕೂಡಲ ಸಂಗಮದೇವ
ತಾನು ತಾನಾಗಿ ನೋಡದೆ ನಿಲ ಸಾಲೆ ! ॥ ೮೪೬ ॥

೪

ಆಲಿಕಲ್ಲ ಹರಳಿನಂತೆ, ಅರಗಿನ ಪುತ್ತಳಿಯಂತೆ
ತನು ಕರಗಿ ನೆರೆವ ಸುಖವ ನಾನೇನೆಂಬೆ ?
ಕಡೆಗೋಡಿವರಿದುವೆನಗಯ್ಯಾ ನಯನದ ಸುಖಜಲಂಗಳು !

ನಮ್ಮ ಕೂಡಲ ಸಂಗಮದೇವರ ಮುಟ್ಟಿ
ನೆರೆವ ಸುಖವ ನಾನಾರಿಗೇನೆಂಬೆ ? ॥ ೪೪೭ ॥

೫

ನಾಲಗೆ ತಾಗಿದ ರುಚಿಗೆ ಮನವೇ ಸಾಕ್ಷಿ, ಸಾಲದೆ, ಅಯ್ಯಾ ?
ಮೂಲೆಗಾಱಿನ ಕೇಳಿ ನನೆ ಅರಳುವುದೆ ?
ಆಗಮವನಿದಿರಿಂಗೆ ತೋಱುವುದು ಆಚಾರವೆ, ಅಯ್ಯಾ ?
ನಮ್ಮ ಕೂಡಲ ಸಂಗನ ಕೂಡಿದ ಕೂಟದ ಕರುಳ ಕಲೆಯನು
ಇದಿರಿಂಗೆ ತೋಱುವುದು ಆಚಾರವೆ, ಅಯ್ಯಾ ? ॥ ೪೪೮ ॥

(೩೫) ಪ್ರಾಣಲಿಂಗಿಯ ಐಕ್ಯಸ್ಥಳ

೧

ಎಲ್ಲರ ಗಂಡರ ಪರಿಯಂತಲ್ಲ ನೋಡವ್ವಾ :
ನಮ್ಮ ನಲ್ಲ ಸುಳಿಯಲಿಲ್ಲ; ಸುಳಿದು ಸಿಂಗಾರವ ಮಾಡಲಿಲ್ಲ !
ಕೂಡಲ ಸಂಗಮದೇವನು ತನ್ನೊಳಗೆ ಬೈಚಿಟ್ಟನಾಗಿ. ॥ ೪೪೯ ॥

೨

ಜ್ಞಾನದ ಗಮನದ ಸಹಜದ ಉದಯದಲ್ಲಿ ಏನೆಂದಱಿಯೆನು;
ಲಿಂಗದ ಬೆಳಗು ಒಳಕೊಂಡುದಾಗಿ ಏನೆಂದಱಿಯೆನು;
ಕೂಡಲ ಸಂಗನ ಧ್ಯಾನದಿಂದ ನಾನೇನಂದಱಿಯೆನು ! ॥ ೪೫೦ ॥

೩

ಕಾಯವೆಂಬ ಘಟಕ್ಕೆ ಚೈತನ್ಯವೆ ಸುಯಿದಾನ,
ಸಮತೆಯೆಂಬ ಜಲ, ಕರಣಾದಿಗಳೆ ಶ್ರವಣ;
ಜ್ಞಾನವೆಂಬಗ್ನಿಯನಿಕ್ಕಿ,
ಮತಿಯೆಂಬ ಸಟ್ಟುಗದಲ್ಲಿ ಘಟ್ಟಿಸಿ ಪಾಕಕ್ಕೆ ತಂದು,
ಭಾವದಲ್ಲಿ ಕುಳ್ಳಿರಿಸಿ, ಪರಿಣಾಮದೋಗರವ ನೀಡಿದರೆ
ಕೂಡಲ ಸಂಗಮದೇವಂಗೆ ಆರೋಗಣೆಯಾಯಿತ್ತು. ॥ ೪೫೧ ॥

೪

ಕಣ್ಗಳು ತುಂಬಿದ ಬಳಿಕ ನೋಡಲಿಲ್ಲ,
ಕಿವಿಗಳು ತುಂಬಿದ ಬಳಿಕ ಕೇಳಲಿಲ್ಲ,
ಕೈಗಳು ತುಂಬಿದ ಬಳಿಕ ಪೂಜಿಸಲಿಲ್ಲ,
ಮನ ತುಂಬಿದ ಬಳಿಕ ನೆನೆಯಲಿಲ್ಲ
ಮಹಂತ ಕೂಡಲ ಸಂಗಮದೇವನ ! ॥ ೮೫ ॥

೫

ಅಡಿಗಡಿಗೆ ಸ್ಥಾನನಿಧಿ, ಅಡಿಗಡಿಗೆ ದಿವ್ಯಕ್ಷೇತ್ರ,
ಅಡಿಗಡಿಗೆ ನಿಧಿಯೂ ನಿಧಾನ, ನೋಡಾ !
ಆತನ ಇರವೆ ವಾರಣಾಸಿ, ಅವಿಮುಕ್ತಿಕ್ಷೇತ್ರ :
ಕೂಡಲ ಸಂಗನ ಶರಣ ಸ್ವತಂತ್ರನಾಗಿ. ॥ ೮೬ ॥

ಶರಣ ಸ್ಥಳ

(೩೬) ಶರಣನ ಜ್ಞಾನಿಸ್ಥಳ

೧

ಧನದಲ್ಲ ಶುಚಿ, ಪ್ರಾಣದಲ್ಲಿ ನಿರ್ಭಯ :
ಇದಾವಂಗಳವಡುವುದಯ್ಯಾ ?
ನಿಧಾನ ತಪ್ಪಿ ಬಂದರೆ ಒಲ್ಲೆನೆಂಬವರಿಲ್ಲ;
ಪ್ರಮಾದವಶದಿಂ ಬಂದರೆ ಹುಸಿಯೆನೆಂಬವರಿಲ್ಲ.
ನಿರಾತಿ-ನಿರ್ಭಯ, ಕೂಡಲ ಸಂಗಮದೇವಾ,
ನೀನೊಲಿದ ಶರಣಂಗಲ್ಲದಿಲ್ಲ ! ॥ ೧೫೫೪ ॥

೨

ಶರಣಸನ್ಮತವಪ್ಪ ನಿಜಗುಣಭರಿತನಪ್ಪಡೆ
ಸತ್ತ್ವರಜ ತಮ ಕ್ರೋಧ ಬಿಡದನ್ನಕ್ಕ,
ಅನುಭಾವವೆಲ್ಲಿಯದೊ—
ಆತ್ಮಸ್ತುತಿ ಪರನಿಂದೆಯ ಬಿಡದನ್ನಕ್ಕ,
ಅರಿಷಡ್‌ವರ್ಗ ದಶವಾಯು ಬೆರಸಿರ್ಪ
ಕಳಂಕವಪ್ಪ ತನು ಬಿಡದನ್ನಕ್ಕ ?
ಸಂಸಾರ ಮಾಣ್ದಲ್ಲದೆ
ಶರಣ ಸಜ್ಜನಿಕೆ, ಸಮಯಾಚಾರ ನಿಜವ್ರತವು
ದುರಾಚಾರಿಗಳಿಗಳವಡದು
ನಮ್ಮ ಕೂಡಲ ಸಂಗನ ಶರಣರಿಗಲ್ಲದೆ. ॥ ೧೫೫೫ ॥

೩

ಹಲಬರ ನುಂಗಿದ ಹಾವಿಂಗೆ ತಲೆ ಬಾಲವಿಲ್ಲ, ನೋಡಾ :
ಕೊಲುವುದು ತ್ರೈಜಗವೆಲ್ಲವ : ತನಗೆ ಬೇಱೆ ಪ್ರಳಯವಿಲ್ಲ;
ನಾಕಡಿಯಸ್ಪಿದವುದು : ಲೋಕದ ಕಡೆಯನೆ ಕಾಣ್ಬುದು;
ಸೂಕ್ಷ್ಮಪಥದಲ್ಲಿ ನಡೆವುದು : ತನಗೆ ಬೇಱೆ ಓಡಲಿಲ್ಲ;
ಅಹಮ್ಮೆಂಬ ಗಾರುಡಿಗನ ನುಂಗಿತ್ತು,
ಕೂಡಲ ಸಂಗನ ಶರಣರಲ್ಲದುಳಿದವರ ! ॥ ೧೫೫೬ ॥

೪

ಆದಿತ್ಯಸೋಮರು ಆಗಿಹೋಗುತ್ತಿದ್ದಹರು;
ಬ್ರಹ್ಮಪ್ರಳಯಕ್ಕೊಳಗಾದ, ಹರಿಸಿಂಹಾಸನವಡಗಿತ್ತು :
ಅಂತೊ ನಾಸ್ತಿ, ಇಂತೊ ನಾಸ್ತಿ !
ಇಂತು ರೋಮಜರೆಂಬರು ಸಿಟ್ಟುಗುಟ್ಟಿ ತರುಮರನಡಿಯಲಿದ್ದರು.
ಮಾರ್ಕಂಡೇಯ ಮಹಾಮುನಿ ಸ್ವೇಚ್ಛಾಮರಣಿಯೆನಿಸಿಕೊಂಡನಲ್ಲದೆ,
ಲಿಂಗದ ನಿಜವನರಿಯನು,
ಇದು ಕಾರಣ, ಕೂಡಲ ಸಂಗಮದೇವಾ,
ನೀವು ಮಾಡಿದ ಬಯಲು ಭಕ್ಷಿಸಿತ್ತು ಅನಂತ ಹಿರಿಯರನು !

॥ ಲಿಂಗ ॥

೫

ಆದಿಯಲ್ಲಿ ಶಿವಬೀಜವಲ್ಲದವರಿಗೆ ವೇದ್ಯವಾಗದು ಶಿವಜ್ಞಾನ;
ಶಿವಭಕ್ತಿ, ಲಿಂಗಸ್ಥಳವಳವಡದು; ಜಂಗಮಸ್ಥಳವಳವಡದು;
ಪಾದೋದಕ ಪ್ರಸಾದಸ್ಥಳವಳವಡದು;
ನರಕದಲ್ಲಿ ಬೀಳುವ ಕರ್ಮಿಗಳಿಗೆ
ಕೂಡಲ ಸಂಗನ ಶರಣರನುಭಾವ ನೆಲೆಗೊಳ್ಳದು. ॥ ಲಿಂಗ ॥

೬

ಮರುಳು ಕಂಡ ಕನಸಿನ ಪರಿಯಂತೆ ಶಿವಾಚಾರ,
ಕರಿಯು ಕನ್ನಡಿಯೊಳಗಡಗಿದಂತಯ್ಯಾ !
ಗುಣಿಯವಗುಣಿಯೊಡನಾಡಿದರೆ
ಅದೆ ಆತನ ಕರ್ಮಫಲ, ನೋಡಾ !
ಕೂಡಲ ಸಂಗನ ಶರಣರ ಅನುಭಾವ
ಭವದುಃಖಿಗಳಿಗೆ ವೇದ್ಯವಾಗದಯ್ಯಾ. ॥ ಲಿಂಗ ॥

೭

